ACC. NO
013
AN 8401
AN 8401

ಶಿವಾನುಭವ ಗ್ರಂಥಮಾಲಾ ನಂ. ೫೧

ಗ್ರಂಥಾಲಯ
ಬಿ. ಎಲ್. ಡಿ. ಇ. ಸಂಸ್ಥೆ
ಕನ್ನಡ ಪುಸ್ತಕಗಳನ್ನು ಪ್ರಕಟಿಸಿ ಪ್ರಚಾರ ಪಡಿಸುವ ಸಂಸ್ಥೆ
ಪ್ರೊ.

ವಚನಶಾಸ್ತ್ರಸಾರ.

ಭಾಗ ೩.

(ವೀರಶೈವಾಚಾರಗಳು.)

ಪೂರ್ವಾರ್ಧ.

VIJAY COLLEGE LIBRARY,
BIJAPUR.

ಸಂಪಾದಕರು
ರಾ॥ ಸಾ॥ ಫ. ಗು. ಹಳಕಟ್ಟಿ,
ಬಿ. ಏ. ಎಲ್. ಎಲ್. ಬಿ.

Q234
33Hal.3-1
8401

ವಿಜಾಪುರ.
೧೯೩೯.

ಬೆಲೆ ೨। ರೂ.

1939

G. R. No. 2380 Sec. No. KB:654
Edn. 1939 Price Rs: 2-4-0.
Rec'd. Date 24-9-'55

ಪ್ರಸ್ತಾವನೆ.

ಈ ಗ್ರಂಥವು ವಚನಶಾಸ್ತ್ರಸಾರದ ೩ನೆಯ ಭಾಗವಿರುತ್ತದೆ. ಇದರ ಮೊದಲನೆಯ ಭಾಗದಲ್ಲಿ ಶಿವಶರಣರ ಧಾರ್ಮಿಕ ಮತ್ತು ಸಾಮಾಜಿಕ ಅಭಿಪ್ರಾಯಗಳು ಸಾಮಾನ್ಯವಾಗಿ ವಿವೇಚಿಸಲ್ಪಟ್ಟಿರುತ್ತವೆ. ಈ ಗ್ರಂಥದ ಎರಡನೆಯ ಭಾಗದಲ್ಲಿ ವೀರಶೈವ ಸಿದ್ಧಾಂತ ವಿಷಯವು ನಿರೂಪಿಸಲ್ಪಟ್ಟಿದ್ದು ಇದರಲ್ಲಿ ಷಟ್‌ಸ್ಥಲ ಮತ್ತು ಏಕೋತ್ತರಶತಸ್ಥಲಗಳ ವಿವರಣೆಗಳು ಮುಖ್ಯವಾಗಿ ಬಂದಿರುತ್ತವೆ. ಈಗಿನ ಗ್ರಂಥವು ೩ನೆಯ ಭಾಗವಾಗಿದ್ದು ಇದರಲ್ಲಿ ವೀರಶೈವಾಚಾರಗಳು ನಿರೂಪಿಸಲ್ಪಟ್ಟಿರುತ್ತವೆ.

ಈಗಿನ ಗ್ರಂಥದಲ್ಲಿ ೪ ಮುಖ್ಯ ವಿಭಾಗಗಳು ಮಾಡಲ್ಪಟ್ಟಿರುತ್ತವೆ. ೧ನೆಯ ವಿಭಾಗದಲ್ಲಿ ಕ್ರಿಯೆಗಳ ಬಗ್ಗೆ ವಚನಕಾರರು ಯಾವ ಅಭಿಪ್ರಾಯಗಳುಳ್ಳವರಿರುವರೆಂಬುದು ಹೇಳಲ್ಪಟ್ಟಿದೆ. ಇದರಲ್ಲಿ ಕ್ರಿಯೆಗಳನ್ನು ಹೇಗೆ ಮಾಡತಕ್ಕದ್ದು, ಕ್ರಿಯಾಜ್ಞಾನಗಳ ಸಂಬಂಧವೇನು, ಕ್ರಿಯೆಗಳ ಮೂಲಕ ಮನುಷ್ಯನಲ್ಲಿ ಯಾವ ರೀತಿಯಿಂದ ಪ್ರಗತಿಯುಂಟಾಗುತ್ತದೆ, ಇವೇ ಮೊದಲಾದ ವಿಷಯಗಳು ನಿರೂಪಿಸಲ್ಪಟ್ಟಿರುತ್ತವೆ.

೨ನೆಯ ವಿಭಾಗದಲ್ಲಿ ವೀರಶೈವಾಚಾರಗಳ ಭೇದಗಳು ವಿವರಿಸಲ್ಪಟ್ಟಿರುತ್ತವೆ. ವೀರಶೈವರು ಇತರ ಮತಸ್ಥರಂತೆ ತಮ್ಮ ಕ್ರಿಯೆಗಳಲ್ಲಿ ಅನೇಕ ದೃಷ್ಟಿಯಿಂದ ವರ್ಗೀಕರಣಗಳನ್ನು ಮಾಡಿರುತ್ತಾರೆ. ಇವುಗಳ ಮೂಲಕ ವೀರಶೈವಮತದ ಸಾರವು ಸಂಕ್ಷಿಪ್ತವಾಗಿ ವ್ಯಕ್ತಮಾಡಲ್ಪಡುವದುಂಟು.

೩ನೆಯ ವಿಭಾಗದಲ್ಲಿ ಅಷ್ಟಾವರಣಗಳ ವಿವೇಚನೆಯು ಇರುತ್ತದೆ. ವೀರಶೈವಾಚಾರಗಳಲ್ಲಿ ಇವು ಅತ್ಯಂತ ಮಹತ್ವವಾದವುಗಳು. ಇವುಗಳ ಬಗ್ಗೆ ವೀರಶೈವ ಗ್ರಂಥಗಳಲ್ಲಿ ಒಂದು ಬಗೆಯ ವಾಙ್ಮಯವೇ ಉಂಟಾಗಿರುತ್ತದೆಂದು ಹೇಳಬಹುದು. ಎಲ್ಲ ಧರ್ಮಗಳಲ್ಲಿ ಅನೇಕ ವಿಧದ ಆಚಾರಗಳು ಇದ್ದು, ಅವುಗಳನ್ನು ಪರಿಪಾಲಿಸುವ ಕಾರ್ಯದಲ್ಲಿ ಅವುಗಳ ಧರ್ಮಾಧಿಕಾರಿಗಳು ಬಹು ದಕ್ಷತೆಯಿಂದ ವರ್ತಿಸುವುದುಂಟು. ಇವು

VIJAY COLLEGE LIBRARY,
BIJAPUR.

VIJAY COLLEGE LIBRARY,
BIJAPUR.

ಉಪಾಸನಾಕಾರ್ಯಗಳೇ ಇರುತ್ತವೆ. ವೀರಶೈವರಲ್ಲಿಯೂ ಕೂಡ ಇಂಥ ಉಪಾಸನೆಗಳುಂಟು. ಆದರೆ ಅವುಗಳನ್ನು ಅವರು ಅಷ್ಟಾವರಣಗಳಿಗೆ ಸಂಬಂಧಿಸಿಕೊಂಡು ಆಚರಿಸುವದುಂಟು. ವೀರಶೈವರಲ್ಲಿ ಯಜ್ಞಾದಿ ಕರ್ಮಗಳೂ ಸಂಧ್ಯಾ ಮೊದಲಾದ ಉಪಾಸನೆಗಳೂ ಇರುವದಿಲ್ಲ. ಇವುಗಳ ಬದಲು ಅವರಲ್ಲಿ ಅಷ್ಟಾವರಣಗಳಿರುತ್ತವೆ. ಇವುಗಳ ಮೂಲಕವಾಗಿಯೇ ಅವರು ಷಟ್‌ಸ್ಥಲಾಚರಣೆಗಳನ್ನು ಪರಿಪಾಲಿಸುತ್ತ ಲಿಂಗಾಂಗ ಸಾಮರಸ್ಯ ಆಥವಾ ಮೋಕ್ಷವನ್ನು ಹೊಂದತಕ್ಕದ್ದು. ಈ ವಿಚಾರಗಳಿರುವದರಿಂದ ವೀರಶೈವರಲ್ಲಿ ಕ್ರಿಯಾಕರ್ಮಗಳ ಸಂಖ್ಯೆಯು ಅತ್ಯಲ್ಪವಾಗಿರುತ್ತದೆ. ಅವರೂ ಅವುಗಳು ಬಹು ಭಾವಗರ್ಭಿತವೂ, ಸಾರಯುಕ್ತವೂ, ಮನುಷ್ಯನ ಗುಣಗಳನ್ನು ವಿಕಾಸಗೊಳಿಸುವ ಉದ್ದೇಶವುಳ್ಳವೂ ಇರುತ್ತವೆಂಬುದು ಅವುಗಳ ವಿವರಣೆಗಳಿಂದ ಕಂಡುಬರುತ್ತದೆ.

ಈ ಅಷ್ಟಾವರಣಗಳು ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ರುದ್ರಾಕ್ಷಿ, ವಿಭೂತಿ, ಮಂತ್ರ, ಇವುಗಳೇ ಇರುತ್ತವೆ.

ಈಗಿನ ಗ್ರಂಥದಲ್ಲಿ ಗುರು ಲಿಂಗ ಜಂಗಮ ಇವುಗಳ ವಿವೇಚನೆಯು ಮಾತ್ರ ಬಂದಿರುತ್ತದೆ. ಅಷ್ಟಾವರಣಗಳಲ್ಲಿ ಇವುಗಳೇ ಮುಖ್ಯವಾದವುಗಳು. ಇವುಗಳ ಮೂಲಕ ಮನುಷ್ಯನು ತನ್ನ ಬಾಹ್ಯ ಕ್ರಿಯೆಗಳನ್ನೂ ಅಂತರಿಂದ್ರಿಯಗಳನ್ನೂ ಹಾಗೆಯೇ ಜ್ಞಾನವನ್ನೂ ವಿಕಾಸಗೊಳಿಸತಕ್ಕುದು. ಈ ವಿಕಾಸವು ಹೇಗೆ ಜರಗುತ್ತದೆಂಬುದನ್ನು ಕುರಿತು ವಚನಕಾರರು ಬಹು ಸ್ವಾರಸ್ಯವಾಗಿ ತಮ್ಮ ವಚನಗಳಲ್ಲಿ ವಿವೇಚಿಸುವದುಂಟು. ಅವುಗಳ ಮುಖ್ಯಾಂಶಗಳು ಮಾತ್ರ ಈ ಗ್ರಂಥದಲ್ಲಿ ವಿವೇಚಿಸಲ್ಪಟ್ಟಿರುತ್ತವೆ.

ಉಳಿದ ಐದು ಆವರಣಗಳಲ್ಲಿ ಒಂದಾದ ಮಂತ್ರದ ಮುಖ್ಯ ಉದ್ದೇಶವು ಮನುಷ್ಯನ ಆಯಾ ಸ್ಥಾನಗಳಲ್ಲಿ ಲೈಂಗಿಕ ಶಕ್ತಿಯನ್ನು ಬೆಳೆಸುವುದೇ ಇರುತ್ತದೆ. ಭಕ್ತನು ಗುರುಲಿಂಗಜಂಗಮತ್ವವನ್ನೂ ಮಂತ್ರವನ್ನೂ ತನ್ನಲ್ಲಿ ಜಾಗ್ರತ ಮಾಡುವ ಕಾರ್ಯಗಳನ್ನು ಪಾದೋದಕ ಪ್ರಸಾದಗಳ ಮೂಲಕ ಜರಗಿಸತಕ್ಕದ್ದು. ವಿಭೂತಿ ರುದ್ರಾಕ್ಷಿಗಳು ಉಪಾಸನೆಗೆ ಮಹತ್ವದ ಸಾಧನೆಗಳಾಗಿರುತ್ತವೆ. ಈ ಐದು ಆವರಣಗಳ ವಿವೇಚನೆಯು ಈ ಗ್ರಂಥದ ಉತ್ತರಾರ್ಧದಲ್ಲಿ ಬರುವುದು.

ಗುರು ಲಿಂಗ ಜಂಗಮದ ವಿವರಣೆಯ ತರುವಾಯ ಶಿವಯೋಗ ವಿಷಯವು ಈ ಗ್ರಂಥದಲ್ಲಿ ಸಂಕ್ಷಿಪ್ತವಾಗಿ ನಿರೂಪಿಸಲ್ಪಟ್ಟಿರುತ್ತದೆ. ಇದರ ಮೂಲಕ ಮನುಷ್ಯನಿಗೆ ಪೂರ್ಣ ವಿಕಾಸಾವಸ್ಥೆಯು ಪ್ರಾಪ್ತವಾಗುತ್ತದೆ. ಇದರಿಂದ ಅವನಲ್ಲಿ ನಿಜಸಮಾಧಿಯೂ ತಲೆದೋರುತ್ತದೆ.

ಈ ಪ್ರಕಾರ ಮನುಷ್ಯನು ಆಚರಿಸುತ್ತ ಹೋದಲ್ಲಿ ಅವನು ಕಡೆಗೆ ಪರಮಾತ್ಮನಲ್ಲಿ ಬೆರೆದು ಬಯಲಾಗುತ್ತಾನೆ. ಇದೇ ಶೂನ್ಯ ಸ್ಥಿತಿಯು ಎಂದು ವಚನಕಾರರು ಹೇಳುತ್ತಾರೆ.

ಈ ಮೇರೆಗೆ ನಾವು ೪ ವಿಭಾಗಗಳನ್ನು ಮಾಡಿ ವೀರಶೈವಾಚಾರ ವಿಷಯವನ್ನು ಈ ಗ್ರಂಥದಲ್ಲಿ ನಿರೂಪಿಸಿದ್ದೇವೆ. ಇದರಲ್ಲಿಯ ವಿವೇಚನೆಗಳು ವಚನಕಾರರ ಉಕ್ತಿಗಳಿಂದಲೇ ಮಾಡಲ್ಪಟ್ಟಿರುತ್ತವೆ. ಈ ಬಗೆಯ ನಿರೂಪಣಾ ಪದ್ಧತಿಯ ಮೂಲಕ ಒಂದು ವಿಷಯದ ವಿವೇಚನೆಯನ್ನು ಕ್ರಮಬದ್ಧವಾಗಿ ಮಾಡುವದು ಬಹಳ ದುಸ್ತರವಾಗುತ್ತದೆ. ಆದರೂ ಶಕ್ಯವಾದಷ್ಟರ ಮಟ್ಟಿಗೆ ವಚನಗಳನ್ನು ಕ್ರಮಗೊಳಿಸಲು ನಾವು ಇದರಲ್ಲಿ ಪ್ರಯತ್ನಿಸಿದ್ದೇವೆ.

ವಚನಕಾರರ ವಿವೇಚನಾಪದ್ಧತಿಯೂ ತತ್ವವಿವೇಚನೆಯೂ ಜನ ಸಾಮಾನ್ಯರಲ್ಲಿ ಇನ್ನೂ ಅಪರಿಚಿತವಾಗಿರುತ್ತವೆ. ಇದರಿಂದ ಈ ಗ್ರಂಥವು ಅನೇಕರಿಗೆ ಸುಬೋಧವಾಗಲಿಕ್ಕಿಲ್ಲ. ಆದರೆ ವಚನಕಾರರ ನಿಜ ತತ್ವಗಳು ಹಿಂದೂ ಧರ್ಮದ ಜ್ಞಾನವಿದ್ದವರಿಗೆ ಹೊಸವಲ್ಲ. ಆದ್ದರಿಂದ ಈ ಗ್ರಂಥವಾದರೂ ವಚನಕಾರರ ಇತರ ಗ್ರಂಥಗಳಂತೆಯೇ ವಾಚಕರ ಆದರಕ್ಕೆ ಪಾತ್ರವಾಗಬಹುದೆಂದು ನಾವು ಎಣಿಸಿದ್ದೇವೆ.

ವಚನಗಳಲ್ಲಿಯ ಉಕ್ತಿಗಳು ಕೈಬರಹದ ಪ್ರತಿಗಳಿಂದ ಎತ್ತಿಬರೆದವುಗಳಾದ್ದರಿಂದ ಅವು ಬಹುಶಃ ಅಶುದ್ಧವಿರುತ್ತವೆ. ಒಮ್ಮೊಮ್ಮೆ ಅವುಗಳ ಅರ್ಥಬೋಧವೂ ಸಹ ಆಗುವದಿಲ್ಲ. ಅವುಗಳಲ್ಲಿ ಉದಹರಿಸಲ್ಪಟ್ಟ ಸಂಸ್ಕೃತ ಶ್ಲೋಕಗಳ ಸ್ಥಿತಿಯಾದರೂ ಹೀಗೆಯೇ ಇರುತ್ತದೆ. ಸದ್ಯ ಸ್ಥಿತಿಯಲ್ಲಿ ಈ ದೋಷಗಳನ್ನು ದೂರಮಾಡುವದು ನಮಗೆ ಅಶಕ್ಯವಾಗಿರುವದರಿಂದ ನಾವು ಬಹಳ ವಿಷಾದಿಸುತ್ತೇವೆ. ಆದರೂ ವಚನಗಳ ಒಟ್ಟಾರ್ಥವು ಬಹುಶಃ ಸ್ಪಷ್ಟವಿರುವದರಿಂದ ವಚನಕಾರರ ವಿಚಾರಗಳಾವವೆಂಬುದನ್ನು ಅವುಗಳಲ್ಲಿ ಸುಲಭವಾಗಿ ಕಂಡುಹಿಡಿಯಬಹುದಾಗಿದೆ. ಈ ದೃಷ್ಟಿಯ

VIJAY COLLEGE LIBRARY,
BIJAPUR.

ನಿಟ್ಟುಕೊಂಡು ವಚನಕಾರರ ಉಕ್ತಿಗಳನ್ನು ವಾಚಕರು ಪರಿಶೀಲಿಸಬೇಕೆಂದು ನಮ್ಮ ನಮ್ರ ವಿಜ್ಞಾಪನೆ ಇದೆ.

ವಚನಕಾರರ ಹೆಸರುಗಳನ್ನು ಅವರ ಮುದ್ರಿಕೆಗಳಿಂದ ಕಂಡುಹಿಡಿಯಲು ಶಕ್ಯವಿರುತ್ತದೆ. ಒಬ್ಬ ವಚನಕಾರನು ಮತ್ತೊಬ್ಬ ವಚನಕಾರನ ಮುದ್ರಿಕೆಯನ್ನು ತನ್ನ ವಚನಗಳಲ್ಲಿ ಉಪಯೋಗಿಸುವದು ಕಂಡುಬರುವದಿಲ್ಲ. ಈ ಮುದ್ರಿಕೆಗಳ ವಿವರಣೆಗಳು ವಚನಶಾಸ್ತ್ರಸಾರ ಭಾಗ ೧ ಈ ಗ್ರಂಥದ ಅಂತ್ಯದಲ್ಲಿ ಕೊಡಲ್ಪಟ್ಟಿರುತ್ತವೆ. ಅವುಗಳನ್ನು ವಾಚಕರು ನೋಡಬೇಕೆಂದು ನಮ್ಮ ವಿನಂತಿ ಇದೆ.

ಈ ಗ್ರಂಥದ ಅಚ್ಚು ಹಾಕುವ ಖರ್ಚನ್ನು ೨೦೦ ಪುಟಗಳ ಮಟ್ಟಿಗೆ ಮುಂಬಯಿ ಸರಕಾರದ ಕನ್ನಡ ಸಂಸ್ಕೃತಿ ಸಂಶೋಧನ ಸಮಿತಿಯವರು ನನಗೆ ಕೊಟ್ಟು ಬಹಳ ಸಹಾಯವಾಡಿದ್ದಾರೆ. ಇದಕ್ಕೋಸ್ಕರ ನಾನು ಅವರಿಗೆ ಬಹಳ ಋಣಿಯಾಗಿದ್ದೇನೆ.

ವಿಜಾಪುರ.
ತಾ೧-೧೦-೧೯೩೯.

ಫ. ಗು. ಹಳಕಟ್ಟಿ.
ಸಂಪಾದಕ.

ಅನುಕ್ರಮಣಿಕೆ.

ಭಾಗ ೧.

ಕ್ರಿಯೆ.

		ಪುಟ.
೧	ಕ್ರಿಯೆಯ ಸಾಮಾನ್ಯ ಸ್ವರೂಪು	೧
೨	ಪುಣ್ಯಪಾಪ	೬
೩	ಸ್ವರ್ಗ ನರಕ	೭
೪	ಕರ್ಮಜ್ಞೇದನ	೮
೫	ಅಂಗಲಿಂಗ	೧೧
೬	ಸತ್ಕರ್ಮಗಳನ್ನು ಮಾಡುವುದು	೧೪
೭	ಕ್ರಿಯೆಗಳಲ್ಲಿ ನಿರ್ಲೇಪನಾಗಿ ಆಚರಿಸುವುದು ...	೧೭
೮	ತನ್ನ ಕ್ರಿಯೆಗಳನ್ನು ತಾನೇ ಮಾಡುವುದು ...	೧೯
೯	ಕ್ರಿಯೆಯಲ್ಲಿ ಪ್ರತಿಫಲವನ್ನಪೇಕ್ಷಿಸಕೂಡದು ...	೨೦
೧೦	ಪರಮಾತ್ಮನಿಗೋಸ್ಕರ ಮಾಡುವುದು ...	೨೨
೧೧	ಸಕಲಪ್ರಾಣಿಗಳಿಗೋಸ್ಕರ ಮಾಡುವುದು ..	೨೪
೧೨	ಪರಮಾತ್ಮನನ್ನು ಧ್ಯಾನಿಸುವುದು	೨೫
೧೩	ಧ್ಯಾನಕ್ರಿಯೆಗಳೆರಡೂ ಇರುವುದು ಅವಶ್ಯವು ...	೨೬
೧೪	ಪರಮಾತ್ಮನಲ್ಲಿ ವಿಶ್ವಾಸವನ್ನಿಟ್ಟು ಮಾಡುವುದು ...	೨೭
೧೫	ಭಾವ ಶುದ್ಧವಾಗಿ ಮಾಡುವುದು	೨೯
೧೬	ಗುರುಲಿಂಗ ಜಂಗಮಕ್ಕೋಸ್ಕರ ಮಾಡುವುದು ...	೩೦
೧೭	ಇಂದ್ರಿಯಗಳನ್ನು ವ್ಯಥೆಗೊಳಿಸಬಾರದು ...	೩೨
೧೮	ಲಿಂಗಭೋಗೋಪಭೋಗಿಯಾಗಿರುವುದು ...	೩೩
೧೯	ಕಾಯಕವನ್ನು ಮಾಡುವುದು	೩೫
೨೦	ದಾಸೋಹ ಭಾವವುಳ್ಳವನಾಗಿ ಮಾಡುವುದು ...	೩೬
೨೧	ಭಿಕ್ಷೆಯನ್ನು ಬೇಡಬಾರದು	೩೮
೨೨	ತಾಮಸ ಶೀಲಗಳನ್ನು ಬಿಡುವುದು	೩೯

೨೩ ಗ್ರಹಬಲವನ್ನು ನೋಡದೆ ಮಾಡುವುದು ೪೧
೨೪ ಹಿಂದಿನವರೇ ಶ್ರೇಷ್ಠರೆಂದು ಭಾವಿಸದಿರು ... ೪೨
೨೫ ಜ್ಞಾನವಿಡಿದು ಆಚರಿಸುವುದು ೪೩
೨೬ ಕ್ರಿಯಾಜ್ಞಾನವಿಡಿದು ಆಚರಿಸುವುದು ೪೪
೨೭ ಅನುಭಾವಿಯಾಗಿ ವರ್ತಿಸುವುದು ೪೦
೨೮ ಶರಣರ ವಚನಾನುಭವದಂತೆ ನಡೆವುದು ... ೪೩
೨೯ ಕ್ರಿಯೆಯಲ್ಲಿ ಪ್ರಗತಿ ೪೫
೩೦ ಪ್ರಗತಿಯನ್ನು ಹೊಂದುತ್ತ ಕ್ರಿಯೆಗಳನ್ನು ಮೀರುವುದು ೪೭
೩೧ ಅಂಗ ಲಿಂಗ ಸಾಮರಸ್ಯವು ೪೮

ಭಾಗ ೨.

ಆಚಾರ ಭೇದಗಳು.

೩೨ ಆಚಾರದ ಮಹತ್ವವು ೬೧
೩೩ ಆಚಾರದ ಪರಿಣಾಮಗಳು ೬೧
೩೪ ೫೦ ತೆರದ ಆಚಾರಗಳು ೬೩
೩೫ ಬಸವಣ್ಣನ ೫೨ ವಿಧದ ಇರವು ೬೫
೩೬ ೩೨ ಕಲೆಗಳು ೬೬
೩೭ ಷಡ್ವಿಧ ವ್ರತಗಳು ೬೭
೩೮ ಸರ್ವಾಚಾರ ಸಂಪತ್ತು ೬೭
೩೯ ಷಟ್‌ಸ್ಥಲಾಚರಣೆಗಳು ೬೯
೪೦ ಪಂಚಾಚಾರ ಸಪ್ತಾಚಾರಗಳು ೭೧
(೧) ಪಂಚಾಚಾರಗಳು ೭೧
(೨) ಸಪ್ತಾಚಾರಗಳು ೭೪
(೩) ಪಂಚಾಚಾರ ಸಪ್ತಾಚಾರ ಇವುಗಳ ಪರಿಣಾಮಗಳು ೭೬

ಭಾಗ ೩.

ಅಷ್ಟಾವರಣಗಳು.

೪೧ ಸಾಮಾನ್ಯ ನಿರೂಪಣೆ
೪೨ ಆಂತರಂಗ ಅಷ್ಟಾವರಣಗಳು ೭೮
... ... ೮೦

೪೩ ಅಷ್ಟಾವರಣಗಳ ಸಾಧನೆ ೮೧
ಸ್ಥೂಲಶರೀರದಲ್ಲಿ ೮೧
ಸೂಕ್ಷ್ಮ ಶರೀರದಲ್ಲಿ ೮೩
ಕಾರಣ ಶರೀರದಲ್ಲಿ ೮೩

ಗುರು.

೪೪ ಗುರುವಿನ ಕಾರ್ಯಗಳು ೮೪
೪೫ ದೀಕ್ಷಾಗುರು ಶಿಕ್ಷಾಗುರು ಜ್ಞಾನಗುರು ... ೮೯
೪೬ ಯೋಗ್ಯ ಗುರುವಿನಿಂದ ದೀಕ್ಷೆಯನ್ನು ಪಡೆಯತಕ್ಕದ್ದು ೯೧
೪೭ ದೀಕ್ಷೆಯ ತತ್ವಗಳು ೯೩
೪೮ ೨೧ ದೀಕ್ಷೆಗಳು ೯೬

(ಅ) ಕ್ರಿಯಾದೀಕ್ಷೆ.

೧ ಆಜ್ಞಾ ದೀಕ್ಷೆ ೯೭
೨ ಉಪಮಾ ದೀಕ್ಷೆ ೯೮
೩ ಸ್ಪಸ್ತಿಕಾರೋಹಣ ದೀಕ್ಷೆ ೯೯
೪ ಕಲಶಾಭಿಷೇಕ ದೀಕ್ಷೆ ೧೦೦
೫ ವಿಭೂತಿಪಟ್ಟ ದೀಕ್ಷೆ ೧೦೦
೬ ಲಿಂಗಾಯತ ದೀಕ್ಷೆ ೧೦೨
೭ ಲಿಂಗಸ್ವಾಯತ ದೀಕ್ಷೆ ೧೦೩

(ಬ) ಮಂತ್ರದೀಕ್ಷೆ.

೧ ಸಮಯ ದೀಕ್ಷೆ ೧೦೪
೨ ನಿಸ್ಸಂಸಾರ ದೀಕ್ಷೆ ೧೦೪
೩ ನಿರ್ವಾಣ ದೀಕ್ಷೆ ೧೦೫
೪ ತತ್ವ ದೀಕ್ಷೆ ೧೦೫
೫ ಅಧ್ಯಾತ್ಮ ದೀಕ್ಷೆ ೧೦೬
೬ ಅನುಗ್ರಹ ದೀಕ್ಷೆ ೧೦೭
೭ ಸತ್ಯಶುದ್ಧ ದೀಕ್ಷೆ ೧೦೮

VIJAY COLLEGE LIBRARY,
BNAFLR.

(೪) ವೇಧಾದೀಕ್ಷೆ.

೧ ಏಕಾಗ್ರಚಿತ್ತ ದೀಕ್ಷೆ ೧೦೯
೨ ದೃಢವ್ರತ ದೀಕ್ಷೆ ೧೦೯
೩ ಪಂಚೇಂದ್ರಿಯಾರ್ಪಿತ ದೀಕ್ಷೆ ೧೧೦
೪ ಅಹಿಂಸಾ ದೀಕ್ಷೆ ೧೧೧
೫ ಲಿಂಗನಿಷ್ಠಾ ದೀಕ್ಷೆ ೧೧೨
೬ ಮನೋರ್ಲಯ ದೀಕ್ಷೆ ೧೧೩
೭ ಸದ್ಯೋನ್ಮುಕ್ತಿ ದೀಕ್ಷೆ ೧೧೩

೪೯ ತಾಮಸದೀಕ್ಷೆಗಳನ್ನು ನಿರಾಕರಿಸುವುದು ... ೧೧೪
೫೦ ದೀಕ್ಷೆಯಾದವನಿಗೆ ಜಾತಿಭೇದವಿಲ್ಲ ೧೧೭
೫೧ ಲಿಂಗ ಹೋದರೆ ಆತ್ಮಘಾತಮಾಡಿಕೊಳ್ಳಬೇಡ ... ೧೧೮
೫೨ ದೀಕ್ಷೆಯಲ್ಲಿ ಅಷ್ಟಾವರಣಗಳೆಲ್ಲವನ್ನೂ ಕೊಡುವುದು ೧೧೯
೫೩ ಲಿಂಗಧಾರಣ ಸ್ಥಾನಗಳು ೧೨೦
೫೪ ಗುರುಶಿಷ್ಯ ಸಂಬಂಧ ೧೨೨
೫೫ ಶಿಷ್ಯೋಪದೇಶ ೧೨೩
೫೬ ಗುರುಶಿಷ್ಯಸಾಮರಸ್ಯವು ೧೨೬

ಲಿಂಗ.

೫೭ ಲಿಂಗದ ಸ್ವರೂಪು ೧೩೧
೫೮ ಲಿಂಗಭಕ್ತರ ಪರಸ್ಪರ ಸಂಬಂಧ ೧೩೩
೫೯ ಲಿಂಗಾಯತ, ಲಿಂಗಸ್ವಾಯತ, ಲಿಂಗಸನ್ನಿಹಿತ ... ೧೩೪
೬೦ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ... ೧೩೪
೬೧ ಲಿಂಗದ ಸ್ಥಾನಗಳು ೧೩೭
ದೇಹದಲ್ಲಿಯ ಚಕ್ರಗಳಲ್ಲಿ ೧೩೭
ಇಷ್ಟಲಿಂಗವಲ್ಲಿ ೧೩೭
೬೨ ಲಿಂಗಪೂಜೆಯ ತತ್ವಗಳು ೧೩೪
೬೩ ಇಷ್ಟಪ್ರಾಣಭಾವಲಿಂಗಗಳ ಪೂಜೆ. ೧೪೦
೬೪ ಪ್ರಾಣಲಿಂಗ ಪೂಜೆ ೧೪೩
೬೫ ಭಾವಲಿಂಗ ಪೂಜೆ ೧೪೫

೬೬ ಇಷ್ಟ ಪ್ರಾಣ ಭಾವಲಿಂಗಗಳಲ್ಲಿ ಇಷ್ಟ ಪ್ರಾಣ ಭಾವಲಿಂಗಗಳ ಪೂಜೆ ೧೪೬
೬೭ ಷಡ್ಲಿಂಗ ಪೂಜೆ ೧೪೬
೬೮ ನವಲಿಂಗ ಪೂಜೆ ೧೪೮
೧ ನೇ ವಚನ ೧೪೮
೨ ನೇ ವಚನ ೧೫೩
೬೯ ಸರ್ವಾಂಗ ಲಿಂಗ ೧೬೨
೭೦ ಷಟ್‌ಸ್ಥಲಯುಕ್ತ ಲಿಂಗಪೂಜಾ ವಿಧಿ ೧೬೭
೧ ನೇ ವಚನ ೧೬೭
೨ ನೇ ವಚನ ೧೬೯
೭೧ ಲಿಂಗಪೂಜೆಯ ವಿಧಾನಗಳ ಸಮಾಲೋಚನೆ ... ೧೭೫
೭೨ ಲಿಂಗಪೂಜೆಯ ವಿಧಾನಗಳ ನಿಜಸ್ವರೂಪು ... ೧೮೦
ಜಪ ೧೮೦
ನಿಯಮಗಳು ೧೮೦
ಆಸನಗಳು ೧೮೧
ಆಹ್ವಾನವಿಸರ್ಜನೆಗಳಿಲ್ಲ ... ೧೮೨
ಲಿಂಗಪೂಜೆಯಲ್ಲಿ ಗುರುಪೂಜೆ, ಲಿಂಗ ಪೂಜೆ, ಜಂಗಮಪೂಜೆ ... ೧೮೨
ಲಿಂಗಪೂಜೆಯಲ್ಲಿ ಸಮರಸ ಭಾವ ... ೧೮೨
೭೩ ಲಿಂಗಾನುಸಂಧಾನ ೧೮೩

ಜಂಗಮ.

೭೪ ಜಂಗಮದ ಲಕ್ಷಣಗಳು ೧೮೮
೭೫ ಭಕ್ತ ಜಂಗಮ ಸಂಬಂಧ ೧೯೧
೭೬ ಗುರು ಜಂಗಮ ಸಂಬಂಧ ೧೯೩
೭೭ ಲಿಂಗ ಜಂಗಮ ಸಂಬಂಧ ೧೯೫
೭೮ ಲಿಂಗ ಜಂಗಮ ಭಕ್ತ ಸಂಬಂಧ ೨೦೦
೭೯ ಲಿಂಗ ಜಂಗಮ ಪ್ರಸಾದ ಸಂಬಂಧ ೨೦೧
೮೦ ಗುರು ಲಿಂಗ ಜಂಗಮ ಸಂಬಂಧ ೨೦೨
೮೧ ಅಷ್ಟಾವರಣಗಳಲ್ಲಿ ಗುರು ಲಿಂಗ ಜಂಗಮವು ... ೨೦೭

VIJAY COLLEGE LIBRARY,
BIJAPUR.

೮೨ ತನಗೂ ಗುರು ಲಿಂಗ ಜಂಗಮಕ್ಕೂ ಇರುವ ಸಂಬಂಧ ೨೦೮
೮೩ ಗುರು ಲಿಂಗ ಜಂಗಮದ ಸಾಧನೆ ೨೧೨
೮೪ ಶುದ್ಧಾಚಾರದಿಂದ ಗುರು ಲಿಂಗ ಜಂಗಮದ ಸಾಧನೆ ೨೧೪
೮೫ ಅರ್ಪಣದಿಂದ ಗುರು ಲಿಂಗ ಜಂಗಮದ ಸಾಧನೆ ... ೨೧೫
೮೬ ಗುರು ಲಿಂಗ ಜಂಗಮದ ಸಾಮರಸ್ಯ ೨೧೭

ಭಾಗ ೪.

ಶಿವಯೋಗ.

೮೭ ಚಕ್ರಗಳಲ್ಲಿ ಲೈಂಗಿಕಶಕ್ತಿಯ ಆವಿರ್ಭಾವ ... ೨೨೩
೮೮ ನಿಜಸಮಾಧಿ ೨೩೧
೮೯ ಬಯಲು ೨೩೪

1939

ವಚನಶಾಸ್ತ್ರಸಾರ

ಭಾಗ ೩.

ಪೂರ್ವಾರ್ಧ.

ಕ್ರಿಯೆ.

ವಚನಕಾರರು ಕ್ರಿಯೆ ಈ ಶಬ್ದಕ್ಕೆ ಪ್ರತಿಯಾಗಿ ಕರ್ಮ, ಆಚಾರ, ಕ್ರಿ, ಮಾಟ, ಈ ಮೊದಲಾದ ಶಬ್ದಗಳನ್ನು ಸಹ ಉಪಯೋಗಿಸುವದುಂಟು. ಇವುಗಳಲ್ಲಿ ಪರಸ್ಪರ ಭಿನ್ನಾರ್ಥಗಳಿರುವದಿಲ್ಲ. ಕೆಳಗಿನ ವಚನಗಳಲ್ಲಿ ವಚನಕಾರರು ಕ್ರಿಯೆ ಇದರ ವಿಷಯವಾಗಿರುವ ತಮ್ಮ ಅಭಿಪ್ರಾಯಗಳನ್ನು ಅನೇಕ ರೀತಿಯಿಂದ ನಿರೂಪಿಸಿದ್ದಾರೆ.

ಕ್ರಿಯೆಯ ಸಾಮಾನ್ಯ ಸ್ವರೂಪ.

ವಿವರಣೆ – ಮನುಷ್ಯನಿಗೆ ಕ್ರಿಯೆಗಳು ಎಂದೂ ತಪ್ಪಲಾರವು. ಅವುಗಳ ಫಲವನ್ನು ಅವನು ಭೋಗಿಸಿಯೇ ತೀರಬೇಕು. ಅವನು ಸರಿಯಾಗಿ ಕ್ರಿಯೆಗಳನ್ನು ಮಾಡಿದ್ದಾದರೆ ಅವನಿಗೆ ಸಾಮರಸ್ಯವು ಅಥವಾ ಮೋಕ್ಷವು ಲಭಿಸುವದು. ಇಲ್ಲದಿದ್ದರೆ ಅವನು ಅನೇಕ ಜನ್ಮಗಳಲ್ಲಿ ತೊಳಲಾಡುತ್ತ ಹೋಗುವನು. ಮನುಷ್ಯನು ಕ್ರಿಯೆಗಳನ್ನು ಮಾಡಲಿಕ್ಕೆ ಸ್ವತಂತ್ರನಿದ್ದಾನೆ. ಆದರೆ ಅವನು ತನ್ನ ಈ ಸ್ವಾತಂತ್ರ್ಯವನ್ನು ಕೆಲವು ನಿಯಮಗಳಿಗನುಸರಿಸಿಯೇ ಉಪಯೋಗಿಸತಕ್ಕದ್ದು. ಪ್ರತಿಯೊಂದಕ್ಕೂ ಸೀಮೆ ಇದೆ. ಹೀಗೆ ವಚನಕಾರರ ಅಭಿಪ್ರಾಯಗಳು ಇವೆ (ವಚನಗಳು ೨, ೪, ೬). ವೀರಶೈವರು ಜಗತ್ತು ಮಾಯೆಯೆಂದು ಭಾವಿಸುವದಿಲ್ಲ. ಅದು ನಿಜವೆಂತಲೇ ಭಾವಿಸುತ್ತಾರೆ. ಇಂಥ ಜಗತ್ತನ್ನು ಮನುಷ್ಯನು ಅತಿಗಳೆಯಬೇಕು. ಇದಕ್ಕೋಸ್ಕರ ಅದರ ಪರಿ

ನಾಮಗಳು ತನಗೆ ತಾಕದಂತೆ ಅವನು ಕ್ರಿಯೆಗಳನ್ನು ಮಾಡತಕ್ಕದ್ದು. ಷಟ್‌ಸ್ಥಲ ಶಾಸ್ತ್ರದ ತತ್ವಗಳಿಗೆ ಅನುಸಾರವಾಗಿ ಅವನು ವರ್ತಿಸಿದಲ್ಲಿ ಈ ಕ್ರಿಯೆಗಳ ಪರಿಣಾಮಗಳು ಅವನಿಗೆ ಅಂಟುವದಿಲ್ಲ. ಪ್ರತಿಯೊಬ್ಬನು ಮಾಡುವ ಕ್ರಿಯೆಗಳ ರೀತಿಗಳು ಬೇರೆ ಬೇರೆಯಾಗಿರುವದರಿಂದ ಮನುಷ್ಯನಲ್ಲಿ ವಿವಿಧತೆಯು ಉತ್ಪನ್ನವಾಗಿದೆ. ಆದರೆ ಅವರೆಲ್ಲರೂ ತಮ್ಮ ಅಂಗಕ್ರಿಗಳನ್ನು ಲಿಂಗಕ್ರಿಗಳನ್ನಾಗಿ ಮಾಡಿ ಷಟ್‌ಸ್ಥಲ, ಅಷ್ಟಾವರಣಗಳ ಪ್ರಕಾರ ವರ್ತಿಸಿ ಲಿಂಗಾಂಗ ಸಾಮರಸ್ಯವನ್ನು ಹೊಂದಬೇಕು. ಈ ವಿಚಾರಗಳನ್ನು ವಚನಕಾರರು ತಮ್ಮ ವಚನಗಳಲ್ಲಿ ಅನೇಕ ವಿಧವಾಗಿ ವಿವರಿಸಿರುತ್ತಾರೆ.

ವಚನಗಳು.

೧. ಮಾಡದೆ ಮೋಕ್ಷವ ಹಡೆದು ಹೋದರೆಂಬ ವಾರ್ತೆಯ ಕೇಳಿ ಹಿರೇನಯ್ಯಾ? ಇಲ್ಲ ಇಲ್ಲವು. ಮಾಡಿದರೆ ಆದು ತಪ್ಪದು. ಮಾಡಲೊಲ್ಲದೆ ಹೋದರೆ ಬರುವದದು ದೂರಾಗದು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೨. ಕಾಣದುದನೆಲ್ಲವ ಕಾಣಲಾರೆನಯ್ಯ! ಕೇಳದುದನೆಲ್ಲವ ಕೇಳಲಾರೆನಯ್ಯಾ! ದ್ರೋಹವಿಲ್ಲ ನಮ್ಮ ಶಿವನಲ್ಲಿ. ಸೀಮೆಯಯ್ಯಾ! ಒಲೆಯ ಮುಂದಿದ್ದು ಮಾಡದ ಕನಸ ಕಾಂಬುವರನೊಲ್ಲನಯ್ಯ ಕೂಡಲಸಂಗಮದೇವಾ.

೩. ಆನೇನು ಮಾಡುವದೆಲ್ಲವನು ನೀನೇ ಅಲ್ಲವೆಂದರೆ ಅದು ಮಾಣಲಿ, ನಿಮ್ಮಾಣತೆ. ಕಾಣಬಾರದ ಘನವ ಕಾಯದಲ್ಲಿ ಧರಿಸಿ, ಹೇಳಬಾರದ ನಿಜವ ಮನದಲ್ಲಿ ನೆಲೆಗೊಳಿಸಿ, ತೋರಬಾರದ ಘನವ ಅರಿವಿನಲ್ಲಿ ಇರಿಸಿ, ಇನ್ನು ನಿಮ್ಮ ಕಾಂಬಂತೆ ಮಾಡಾ ಕಪಿಲಸಿದ್ಧನಾಥಯ್ಯ.

೪. ಸುಖ ಬಂದರೆ ಪುಣ್ಯದ ಫಲವೆನ್ನೆನು. ದುಃಖ ಬಂದರೆ ಪಾಪದ ಫಲವೆನ್ನೆನು. ನೀ ಮಾಡಿದೊಡಾಯಿತ್ತೆಂದೆನ್ನೆನು. ಕರ್ಮಕ್ಕೆ ಕರ್ತುವೇ ಕಡೆ ಎಂದೆನ್ನೆನು. ಉದಾಸೀನವಿಡಿದು ಶರಣೆನ್ನೆನು. ಕೂಡಲಸಂಗಮದೇವ ನೀ ಮಾಡಿದುಪದೇಶವು. ಎನಗೀ ಪರಿಯಲಿ ಸಂಸಾರದ ಸವಿಯ ಬಳಸುವೆನು.

೫. ಮಾಡುವುದಯ್ಯ ಮರುಳುಗೊಂಡಂತೆ. ವರ್ಮವನರಿಯದೆ ಮಾಡುವ ಮಾಟ ಕರ್ಮದ ಬೆಳಸು, ಸುಯಿಧಾನದ ಕೇಡು. ಕೂಡಲಚನ್ನಸಂಗಯ್ಯ, ನಿಮ್ಮ ಶರಣರ ಅನುವನರಿದು ಮಾಡುವ ಮಾಟ ಭವಭಂಗದೋಟ.

೬. ವರ್ಮವಿಡಿದು ಮಾಡುವಂಗೆ ಕರ್ಮವಿಲ್ಲ, ಕವಲು ಇಲ್ಲ. ಒಬ್ಬರ ಕಂಡೊಬ್ಬರು ಹೆಮ್ಮೆಯ ಖ್ಯಾತಿಯ ಬಿಮ್ಮಿಲಿ ಮಾಡುವವನ ವಿಧಿಯ ನೋಡಾ! ಸಜ್ಜನ ಸದಾಚಾರ ಸತ್ಕ್ರಿಯೆವಿಡಿದು ಮಾಡುವ ಭಕ್ತಿಯ ನಿಮಗೆ ಗೈಯ್ದುದನರಿದು, ಈ ಪರಿಯಲ್ಲಿ ಮಾಡುವನು ಕೂಡಲಚನ್ನಸಂಗಯ್ಯ ನಿಮ್ಮ ಶರಣ ಸಂಗನಬಸವಣ್ಣನು.

೭. ಸಂಚಿತಾದಿ ಕರ್ಮತ್ರಯಂಗಳು ಜೀವನಿಗಲ್ಲದೆ ಶಿವಸ್ಪರೂಪನಿಗೆಲ್ಲಿಯದೊ? ಆಡುವ ಗೊಂಬೆಯನು ಆಡಿಸುವಾತಂಗಲ್ಲದೆ ಆಡುವ ಗೊಂಬೆಯಗೆಲ್ಲಿಯದೋ ಸ್ವತಂತ್ರತೆಯು? ಕಪಿಲಸಿದ್ಧಮಲ್ಲಯ್ಯ ಇದರಿರವ ಸ್ವತಂತ್ರನಿಗಲ್ಲದೆ ಅಸ್ವತಂತ್ರನಿಗೆಲ್ಲಿಯದೋ?

೮. 'ಮನೋ ಶಬ್ದ ನಪುಂಸಕ' ಎಂಬ ನ್ಯಾಯಜ್ಞನ ಮಾತು ಪುಸಿಯಲ್ಲ ನೋಡಯ್ಯ. ಶಬ್ದ ನಪುಂಸಕವಾಗಿ ಕಾರ್ಯ ಪುಲ್ಲಿಂಗವಾದರೆ ಆ ಶಬ್ದ ವಾಣಿಗೆ ತಿಳಿಯದೇ ಹೋಯಿತ್ತಯ್ಯ ಕಪಿಲಸಿದ್ಧಮಲ್ಲಯ್ಯ.

೯. ವೃತ್ತಿಕೆಯೊಂದರಲ್ಲಿ ಮಡಿಕೆಗಳು ನೂರಾರು. ಮನ ಒಂದರಲ್ಲಿ ಕ್ರಿಯಾದಿಗಳು ನೂರಾರು. ಜನಕ ಒಬ್ಬನಲ್ಲಿ ಸಂತತಿಗಳು ನೂರಾರು. ಘನಕ್ಕೆ ಘನವಾದ ಚಿನ್ಮಯ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ ಜಗತ್ತುಗಳು ನೂರಾರು.

೧೦. ಕರ್ಮಸಾಕ್ಷಿ ತಾನಾದಲ್ಲಿ ಅಸ್ತಮಾನೋದಯಕ್ಕೆ ಒಳಗಾದನಯ್ಯ ಸೂರ್ಯನು. ಕರ್ಮಸಾಕ್ಷಿ ತಾನಾಗಿ ಆಚರಿಸಿದಲ್ಲಿ ಜನನ ಮರಣಕ್ಕೆ ಒಳಗಾದೆ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೧೧. ಮನ ಬುದ್ಧಿ ಚಿತ್ತ ಅಹಂಕಾರ ಜ್ಞಾನವೆಂಬ ಪಂಚಕರಣಗಳಿರವ ಹೇಳಿಹೆ ಕೇಳಿರಯ್ಯ. ಮನವೆಂಬುದು ಸಂಕಲ್ಪ, ವಿಕಲ್ಪಕ್ಕೊಳಗಾಯಿತ್ತು. ಇಲ್ಲದುದ ಕಲ್ಪಿಸುವದೇ ಸಂಕಲ್ಪ. ಇದ್ದುದ ಅರಿಯದುದೇ ವಿಕಲ್ಪ. ಕಲ್ಪಿಸಿ ರಚಿಸುವದೇ ಬುದ್ಧಿಯಯ್ಯ. ಕಲ್ಪಿಸಿ ಮಾಡು

ವುದದು ಚಿತ್ತವಯ್ಯ. ಮಾಡಿದುದಕ್ಕೆ ನಾನೆಂಬುವುದು ಅಹಂಕಾರವಯ್ಯ. ಮಾಡುವ ನೀಡುವ ಭಾವ ಶಿವಕೃತ್ಯವೆಂದರೆ ಜ್ಞಾನ ವೈರಾಗ್ಯವಯ್ಯ. ಅರಿಯದ ಅರಿವು ಮಹಾಜ್ಞಾನ ಮೋಕ್ಷದ ಇರವು ನೋಡಾ. ಕಪಿಲ ಸಿದ್ಧಮಲ್ಲಿಕಾರ್ಜುನನ ಕೂಡುವುದಕ್ಕೆ ಯೋಗ ನೋಡಾ ಯೋಗಿನಾಥಾ.

೧೨. ಬ್ರಹ್ಮೋಪದೇಶವಾಯಿತ್ತೆಂದು ಬ್ರಹ್ಮದೊಡನೆ ಧಿಕ್ಕರಿಸ ಬೇಡ. ಕಾಲಜ್ಞಾನವಾಯಿತ್ತೆಂದು ಕರ್ಮವ ಹಳಿಯಬೇಡ. ಶಿವಜ್ಞಾನ ದೀಪ್ತಿ ತಲೆದೋರಿತ್ತೆಂದು, ಶಿವಶರಣರೊಡನೆ ಧಿಕ್ಕರಿಸಬೇಡ. ಈ ತ್ರಿವಿಧದುತ್ಪತ್ತಿ ಸಲ್ಲದು. ಈ ವೇಶಿಯ ಮಕ್ಕಳಿಗೆ ನಾನೇನೆಂಬೆನಯ್ಯಾ ಕೂಡಲಚನ್ನಸಂಗಮದೇವಾ?

೧೩. ಯೋಗಿಯ ಹೊಲಬು ಯೋಗಿಯಾದವಂಗಲ್ಲದೆ ಇತರ ನರಂಗೆ ಸಾಧಿಸಬಾರದು ಕೇಳಯ್ಯ! ಧಾತುವಾದವದು ರಸವಾದಿಯಾದವಂಗಲ್ಲದೆ ಇತರ ನರಂಗದು ಸಾಧಿಸಬಾರದು ಕೇಳಯ್ಯ! ನೋಡಿ ಮಾಡುವುದಾದಡೆ ಭವವೆಲ್ಲಿಹುದು, ದಾರಿದ್ರ್ಯವೆಲ್ಲಿಹುದು ಹೇಳಯ್ಯ ಕಪಿಲಸಿದ್ಧಯ್ಯ?

೧೪. ಮಾಟವಿಲ್ಲದ ಕೂಟವದೇಕೋ? ಕೂಟವಿಲ್ಲದ ಮಾಟವದೇಕೋ? ಮಾಟ ಕೂಟವೆರಡರನುವನರಿಯಬೇಕು. ಸಟೆಯಿಲ್ಲದೆ ದಿಟವ ರೂಢಿಸಿ ಸಯವಾಗಬೇಕು. ಮಾಟ ಕೂಟವೆರಡರನುಮತದಿಂದವೇ ಭಕ್ತಿರತಿಯಯ್ಯಾ ಕೂಡಲಚನ್ನಸಂಗಮದೇವಾ.

೧೫. ಮನದಲ್ಲಿದ್ದು ಕಾಯದಲಿಲ್ಲದವ ಶತ ಜನ್ಮಕ್ಕೆ ಮೋಕ್ಷ. ಕಾಯದಲ್ಲಿದ್ದು ಮನದಲಿಲ್ಲದವ ಮೂರು ಜನ್ಮಕ್ಕೆ ಮೋಕ್ಷ. ಕಾಯ ಮನೋಯುಗದಲಿಲ್ಲದವ ಮೋಕ್ಷರೂಪು ನೋಡಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೧೬. ಹುಟ್ಟಿದ ಬಳಿಕ ಕೊಟ್ಟ ಭೋಗಂಗಳ ತಪ್ಪಿಸಿಹೆನೆಂದರೆ, ತಪ್ಪದು ನೋಡಯ್ಯ. ಎನಗಿನ್ನೆಂತೋ, ಎನಗಿನ್ನೆಂತೋ ಎಂದೆನ್ನ ಬೇಡ. "ನಾ ಭುಕ್ತಂ ಕ್ಷೀಯತೆ ಕರ್ಮ" ಎಂಬ ಶ್ರುತಿ ತಪ್ಪದು ಕೂಡಲಸಂಗಮದೇವ.

೧೭. ಅಂಜಿದರಾಗದು. ಅಳುಕಿತರಾಗದು. ವಜ್ರ ಪಂಜರದೊಳಗಿದ್ದರೆ ಆಗದು. ತಪ್ಪದೆಲವೋ ಲಲಾಟ ಲಿಖಿತ. ಕಕ್ಕುಲತೆಬಟ್ಟರೆ

ಆಗದು ನೋಡಾ. ಧೃತಿಗೆಟ್ಟು ಮನ ಧಾತುಗೆಟ್ಟರೆ, ಬಪ್ಪುದು ತಪ್ಪದು ಕೂಡಲಸಂಗಮದೇವಾ.

೧೮. ನಾಳೆ ಬಪ್ಪುದು ನಮಗಿಂದೇ ಬರಲಿ. ಇಂದು ಬಪ್ಪುದು ನಮಗೀಗಲೇ ಬರಲಿ. ಇದಕಾರಂಜುವರು? ಇದಕಾರಳಕುವರು? "ಜಾತಸ್ಯ ಮರಣಂ ಧ್ರುವಂ" ಎಂದುದಾಗಿ ನಮ್ಮ ಕೂಡಲಸಂಗಮದೇವ ಬರೆದ ಬರಹ ತಪ್ಪಿಸುವರೆ, ಹರಿಬ್ರಹ್ಮಾದಿಗಳವಲ್ಲ.

೧೯. ಕಾಯದ ಕಳವಳಕಂಜಿ ಕಾಯಯ್ಯ ಎನ್ನೆನು. ಜೀವ ನೋಪಾಯಕ್ಕಂಜಿ ಈಯಯ್ಯ ಎನ್ನೆನು. ಯದ್ಭಾವಂ ತದ್ಭವತಿ. ಉರಿ ಬರಲಿ, ಸಿರಿ ಬರಲಿ, ಬೇಕು ಬೇಡೆನ್ನೆನು. ಆನು ನಿಮ್ಮ್ಯಹಾರೆನು. ಮಾನವರ ಬೇಡೆನು. ಆಣೆ ನಿಮ್ಮಾಣೆ ಕೂಡಲಸಂಗಮದೇವ.

೨೦. ಆಯುಷ್ಯ ತೀರಿದಲ್ಲದೆ, ಮರಣವಿಲ್ಲ. ಭಾಷೆ ತೀರಿದಲ್ಲದೆ, ದಾರಿದ್ರ್ಯವಿಲ್ಲ. ಅಂಜಲೇಕೋ ಲೋಕವಿಗರ್ಭಣೆಗೆ? ಅಂಜಲೇಕೋ ಕೂಡಲಸಂಗಮದೇವ, ನಿಮ್ಮಾಳಾಗಿ?

೨೧. ಕೋಣನ ಹೇರಿಂಗೆ ಕುನ್ನಿ ಬುಸುಗುತ್ತ ಬಾಲವ ಬಡಿವಂತೆ, ತಾವು ನಂಬರು. ನಂಬುವರನು ನಂಬಲೀಯರು. ತಾವು ಮಾಡರು. ಮಾಡುವರನು ಮಾಡಲೀಯರು. ಮಾಡುವ ಭಕ್ತರ ಕಂಡು ಸೈರಿಸಲಾರದವರ ಕೂಗಿಡೆ ಕೂಗಿಡೆ ನರಕದಲಿಕ್ಕುವ ಕೂಡಲಸಂಗಮದೇವ.

೨೨. ನುಡಿದಿಹೆನೆಂಬೆ. ಉಲುಹಿನ ಗಲಭೆಯ ತೋಟಿ ಬಿಡದು. ಉತ್ತಮ ಮಧ್ಯಮ ಕನಿಷ್ಠ ತಿರುಗಿ ಕಂಡಿಹೆನೆಂಬ ಕಾಲನ ಎಡೆಯಾಟ ಬಿಡದು. ಎನಗೆ ಗರ್ವ ಮೊದಲಾದಲ್ಲಿ ಕರ್ಮ ವೆಗ್ಗಳವಾಯಿತ್ತು. ಉಭಯದ ತೋಟಿಯನಿನ್ನಾರಿಂಗೆ ಹೇಳುವೆ ಕಪಿಲಸಿದ್ಧಮಲ್ಲಿಕಾರ್ಜುನಾ?

೨೩. ಕಾಯ ನಾನೆಂದರೆ ಕರ್ಮಕಾಂಡ. ಸಕಲ ಕ್ರಿಯೆ ಈಶಾರ್ಪಣವೆಂದರೆ ಭಕ್ತಿಕಾಂಡ. ಸಕಲ ಕರ್ಮ ಸಾಕ್ಷಿ ಎಂದರೆ ಜ್ಞಾನಕಾಂಡ. ಕಾಂಡತ್ರಯವಿಲ್ಲದಖಂಡನ ತೋರಾ ಕಪಿಲಸಿದ್ಧಮಲ್ಲಿಕಾರ್ಜುನಾ.

ಪುಣ್ಯ ಪಾಪ.

೨೪. ಪುಣ್ಯ ಪಾಪಂಗಳೆಂಬುವು ತಮ್ಮ ಇಷ್ಟವು ಕಂಡಿರೇ. ಅಯ್ಯ ಎಂದಡೆ ಸ್ವರ್ಗ, ಎಲವೋ ಎಂದಡೆ ನರಕ. ದೇವಭಕ್ತ ಜಯ ಜೀಯ ಎಂಬ ನುಡಿಯೊಳಗೆ ಕೈಲಾಸವೈದದೇ ಕೂಡಲ ಸಂಗವುದೇವಾ?

೨೫. ಪುಣ್ಯ ಪಾಪವೆಂಬುಭಯ ಕರ್ಮವನಾರು ಬಲ್ಲರಯ್ಯ? ಇವನಾರುಂಬರು? ಕಾಯ ತಾನುಂಬರೆ, ಕಾಯ ಮಣ್ಣು. ಜೀವ ತಾನುಂಬರೆ, ಜೀವ ಬಯಲು. ಈಯುಭಯ ನಿರ್ಣಯವ ಕೂಡಲ ಸಂಗವುದೇವ ನಿಮ್ಮ ಶರಣ ಬಲ್ಲ.

೨೬. ಮನದಲ್ಲಿ ಸಂಕಲ್ಪ ವಿಕಲ್ಪಂಗಳು ನೋಡಯ್ಯ! ಮನ ಸಿನ ಕಾರ್ಯವೆ ಪುಣ್ಯ ಪಾಪ ನೋಡಯ್ಯ! 'ಮನೋ ಕಾರ್ಯಂ ಜಗದ್ಭೇದಂ' ಎಂಬುದು ಪುಸಿಯಲ್ಲ ನೋಡಯ್ಯ ಕಪಿಲಸಿದ್ಧಮಲ್ಲಿಕಾ ರ್ಜುನಯ್ಯ.

೨೭. ಮಣ್ಣ ಕೊಟ್ಟು ಪುಣ್ಯವ ಪಡೆವೆನೆಂಬವನ ಭಾಷೆ ಹೊಲ್ಲ. ಮಣ್ಣಿನ ಪುಣ್ಯ ಮುಕ್ಕಣ್ಣನ ಮುಖಕ್ಕೆ ಬಂದಿತ್ತು. ನೀರನೆರೆದು ಪುಣ್ಯವ ಪಡೆವೆನೆಂಬುವರ ಭಾಷೆ ಹೊಲ್ಲ ಹೊಲ್ಲ. ನೀರಿನ ಪುಣ್ಯ ನಿರಂಜನ ಮುಖಕ್ಕೆ ನಿಮಿರಿತ್ತು. ಜ್ಯೋತಿಯ ಬೆಳಗಿ ಪಾಪವ ಕಳೆವೆನೆಂಬುವರ ಭಾಷೆ ಹೊಲ್ಲ ಹೊಲ್ಲ. ದೇವಾಲಯ ಕಟ್ಟಿ ದೇವತ್ವ ಪಡೆವೆನೆಂಬುವರ ಭಾಷೆ ಹೊಲ್ಲ ಹೊಲ್ಲ. ದೇವಾಲಯದ ಪುಣ್ಯ ಅಧೋಮುಖಂಗೆ ಸೇರಿತ್ತು. ಕೊಟ್ಟ ಭಕ್ತರನಾರನು ಕಾಣೆ. ಕೈಕೊಂಡ ಜಂಗಮರನಾರನು ಕಾಣೆ ನೋಡಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೨೮. ಪುಣ್ಯ ಪಾಪಗಳೆಂಬುವದಾರಿಗರಿಕೆಯುಂಟಯ್ಯ? ಪುಣ್ಯವಂತರಲಿ, ಪಾಪವಂತರಲಿ. ಪೂಜಿಸಿ ಪಡೆವುದದು ಪುಸಿಯಲ್ಲ. ಇದು ಕಾಕು ಭಾಷೆ ಎಂದು ಪೂಜಿಸಿದವಗೆ ಸಂಪದಾದಿಶಕ್ತಿ ಮುಕ್ತಿ ಬರುವದೇನಿಲ್ಲ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

ಸ್ವರ್ಗ ನರಕ.

೨೯. ಸ್ವರ್ಗವೆಂದರೆ ಸುಖಕ್ಕೆ ನಾಮ, ನರಕವೆಂದರೆ ಬಾಧೆಗೆ ನಾಮ. ಸುಖವೆಂದರೆ ಪುಣ್ಯ, ನೋವೆಂದರೆ ದುಃಖ. ಸುಖವಿಯೋಗವಾದಲ್ಲಿ ದುಃಖವೆನಿಸಿತ್ತು. ದುಃಖವಿಯೋಗವಾದಲ್ಲಿ ಸುಖವೆನಿಸಿತ್ತು. ಸುಖಾಸುಖವೆಂದರಿಯಬಾರದು. ಮೊದಲು ಹಿಡಿದ ಸಂಗತಿಯಿಂದ ಸುಖ ಸಂಗದಿಂದ ದುಃಖ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೦. ಸುಖಕ್ಕೆ ದೈವವೆಂದು, ದುಃಖಕ್ಕೆ ವಿಧಿಲಿಪಿಯೆಂದು, ಸುಖಕ್ಕೆ ಪುಣ್ಯವೆಂದು, ಸುಖಕ್ಕೆ ಪ್ರಾರಬ್ಧವೆಂದು, ನುಡಿವರಯ್ಯಾ ಸಿದ್ಧಾಂತಿಗಳು. ಸುಖವೇ ದೈವವೆನಲಾಗಿ ಮಾಡುವ ಕ್ರಿಯೆಯಲ್ಲರಿಯ ಬಂದಿತು. ಸುಖವು ದೈವವಲ್ಲ. ದೈವವದು ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಕೂಡುವ ಕೂಟ.

೩೧. ಜಡ, ಅಸತ್ಯ, ದುಃಖ, ಅನಿತ್ಯ, ಖಂಡಿತವೆಂಬೈದು ಲಕ್ಷಣ ಮಾಯಾತ್ಮಕವಯ್ಯ. ಮೃಗದಲಿಲ್ಲದ ಶಶ ವಿಷಾಣಾದಿಕವೇ ಅಸತ್ಯವಯ್ಯ. ಮೂಢಮಯ ಕಲ್ಲು ಮೊದಲಾದವೇ ಜಡದೃಶ್ಯ ನೋಡಯ್ಯ. ರಜೋ ಗುಣಿಯಸಹ್ಯ ವೃತ್ತಿ ದುಃಖ ಕಂಡಯ್ಯ. ತೋರಿ ಕೆಡುವ ದೇಹಾದಿಕವೆ ಅನಿತ್ಯ ಕಂಡಯ್ಯ. ಕಾಲ ಪರಿಚ್ಛೇದಾಧಿಕವೇ ಖಂಡಿತ ನೋಡಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೩೨. ಕೈಲಾಸ ಕೈಲಾಸವೆಂದು ಬಡಿದಾಡುವ ಅಣ್ಣಗಳಿರಾ ಕೇಳಿರಯ್ಯಾ. ಕೈಲಾಸವೆಂಬುದೊಂದು ಭೂಮಿಯೊಳಿರುವ ಹಾಳು ಬೆಟ್ಟ. ಅಲ್ಲಿರುವ ಮುನಿಗಳೆಲ್ಲ ಜೀವಗಳ್ಳರು. ಅಲ್ಲಿರ್ದ ಚಂದ್ರಶೇಖರನು ಬಹು ಎಡ್ಡ. ಇದರಾಡಂಬರವೇಕಯ್ಯ? ಎಮ್ಮ ಪುರಾತರಿಗೆ ಸದಾಚಾರದಿಂದ ವರ್ತಿಸಿ ಲಿಂಗಾಂಗ ಸಾಮರಸ್ಯವ ತಿಳಿದು ನಿಮ್ಮ ಪಾದಪದ್ಮದೊಳು ಬಯಲಾದ ಪದವಿಯೇ ಕೈಲಾಸವಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೩೩. ತಪವ ಮಾಡಿ ಸ್ವರ್ಗವ ಪಡೆದಿಹೆನೆಂಬವನ ಮುಖವನೋಡಲಾಗದು. ಮಾದಿಗ ಡೋಹರ ಶ್ವಪಚನೀಚಗುಣವುಳ್ಳರು ಹೋಹುದೆಲ್ಲ ಸ್ವರ್ಗವೇನಯ್ಯ? ಲಿಂಗದ ಕುರುಹ ತಿಳಿದು ಲಿಂಗ ಗುಣ ನೇತಿಗಳೆದು ಲಿಂಗವಾದುದೇ ಸ್ವರ್ಗ ನೋಡಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

ಕರ್ಮಭೇದನ.

ವಿವರಣೆಃ — ಕರ್ಮಗಳು ಬೆನ್ನು ಬಿಡುವುದಿಲ್ಲ. ಆದರೆ ಮನುಷ್ಯನಿಗೆ ತನ್ನ ವಿಷಯಗಳನ್ನು ಬಿಡಲು ಶಕ್ಯವಿದೆ. ಅವನು ನಿರ್ಮಲಜ್ಞಾನಿಯಾಗಿರ ಬೇಕು. ಶಿವನಿಗರ್ಪಿಸಿ ಭೋಗಿಸಬೇಕು. ಆತ್ಮನೈವೇದ್ಯ ಮಾಡಿ ವರ್ತಿಸ ಬೇಕು. ಷಟ್‌ಸ್ಥಲವಿಡಿದು ಆಚರಿಸಬೇಕು. ಇಂಥ ಆಚರಣೆಗಳಿಂದ ಕರ್ಮಗಳು ಲಯ ಹೊಂದುವವು.

ವಚನಗಳು.

೩೪. ಮುನ್ನ ಉಳ್ಳ ಕರ್ಮ ಬೆನ್ನ ಬಿಡದು ನೋಡಾ. ಜಾತಿ ವಿಜಾತಿಗಳಲ್ಲಿ ತೀವಿ ಭೋಗಕ್ಕೆ ಸಾಧನವಾದ ಪರಿಯ ನೋಡಾ. ಅಲ್ಲಿಯೇ ಮತ್ತೆಮತ್ತೆ ಪಾಪವ ಮಾಡಿ ಸ್ವರ್ಗ ನರಕವನೆಯ್ದುವ ಕರ್ಮಿಗಳು ಕಣ್ಣ ಗೆಟ್ಟು ಮುಂದುಗಾಣದೆ ಪುಣ್ಯಪಾಪವ ಬೆನ್ನಲ್ಲಿ ಕಟ್ಟಿ ರಾಟಳದಂತೆ ತನುವ ತೋರುತ್ತ ಬಿಡುತ್ತ ತಿರುಗುತ್ತಿಹರಲಾ ನಿಜಗುರು ಸ್ವತಂತ್ರಸಿದ್ಧ ಲಿಂಗೇಶ್ವರನನರಿಯದ ಕರ್ಮಿಗಳು ನೋಡಾ.

೩೫. ಸಂಚಿತ ಪ್ರಾರಬ್ಧ ಆಗಾಮಿ ಕರ್ಮಂಗಳು ಬೆನ್ನ ಬಿಡವು ನೋಡಾ. ಆರನಾದರೂ ಮೂಗರ ಮಾಡಿ ಕಾಡಿ ಕೊಲ್ಲುತ್ತಿಹವು ನೋಡಾ. ಹಿಂದೆ ಮಾಡಿದ ಕರ್ಮ ಬಿಡೆಂದರೆ ಬಿಡುವುದೆ? ಮುಂದೆ ಉಂಡಲ್ಲದೆ ತೀರದು. ನಿಜ ಗುರು ಸ್ವತಂತ್ರಸಿದ್ಧಲಿಂಗೇಶ್ವರನು ಕಡೆಗಣ್ಣಿಲಿ ನೋಡುವನ್ನಕ್ಕ ಉಂಡು ತೀರದು ಕರ್ಮ.

೩೬. ಮನೋವಾಕ್ಕಾಯದಿಂದ ಹುಟ್ಟಿದ ಕರ್ಮ ತೊಟ್ಟನೆ ತೊಳ ಲಿಸಿ ಬಳಲಿಸಿದಲ್ಲದೆ ಬಿಡದು. ಕರ್ಮವ ಮೀರಿ ನಡೆವ ಬಲ್ಲಿದರನಾರನೂ ಕಾಣೆ. ಬೊಮ್ಮನಾದಿಗಳೆಲ್ಲ ಕರ್ಮಕ್ಕೀಡಾದರು. ಕರ್ಮವಜಹರಿಗಳ ಬಾರದ ಭವದಲ್ಲಿ ಬರಿಸಿತ್ತು. ಕಾಣದ ದುಃಖವ ಕಾಣಿಸಿತ್ತು. ಇನ್ನುಳಿ ದವರ ಪೇಳಲೇಸುಂಟು? ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಆಧೀನ ವಿಡಿದು ಕಾಣುವ ಕರ್ಮದ ಬಲುಹ ನೋಡಾ.

೩೭. ಪೂರ್ವ ಜನ್ಮದಲ್ಲಿ ಭೋಗಿಸಲ್ಕೆ ಈಡಾಯಿತ್ತು. ಈಗ ಮಾಡಿದ ಕರ್ಮ ಮುಂದಕ್ಕೆ ಬಿತ್ತಿದ ಬೆಳೆಯನುಂಬಂತೆ ಬಪ್ಪುದು

ತಪ್ಪದು. ಈ ಕರ್ಮ ಉಳ್ಳನ್ನಕ್ಕ ಆರಿಂಗಾದರೂ ಬಳಲಿಕೆ ಬಿಡದು. ಕಾಣಾ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.

೩೮. ಶಿವಭಕ್ತ ತತ್ಪರನಾದ ಮಹಿಮನು ವಿಷಯಭ್ರಮೆ ಪುರುಷ ಪ್ರಯತ್ನವನ್ನು ಬಿಟ್ಟಾಗಳೇ ಆಗಾಮಿ ಕರ್ಮ ನಾಶವಾಯಿತ್ತು. ಸಂಚಿತ ಕರ್ಮ ವಿಷಯಾಸಕ್ತಂಗೆ ಪ್ರಾರಬ್ಧವೆನಿಸುವುದು. ಶಿವಧ್ಯಾನೈಕಚಿತ್ತಂಗೆ ಸಂಚಿತ ಕರ್ಮವಿಲ್ಲ. ಆದೇನುಕಾರಣವೆಂದಡೆ, ಶಿವಜ್ಞಾನಾಗ್ನಿಯಿಂದ ಅದು ಬೆಂದುಹೋಹುದಾಗಿ. ಇಚ್ಛಾ ಪ್ರಾರಬ್ಧವೆಂದು ಅನಿಚ್ಛಾ ಪ್ರಾರಬ್ಧ ವೆಂದು ಪ್ರಾರಬ್ಧವೆರಡಾಗಿಹುದು. ಪ್ರಾರಬ್ಧ ಕರ್ಮವು ಭೋಗಾದಿಗಳಿಂದ ಕ್ಷಯ ಹೊಂದುವುದಾಗಿ ಅದು ಭೋಗಿಸದಲ್ಲದೆ ತೀರದು. ಅನಿಚ್ಛಾ ಪ್ರಾರ ಬ್ಧದಿಂದ ಮುಂದೆ ಸುಖವಹುದು. ಇಚ್ಛಾ ಪ್ರಾರಬ್ಧದಿಂದ ದುಃಖವಹು ದಾಗಿ, ಆ ದುಃಖದಿಂದ ಸಂಸಾರವೃಕ್ಷ ಬೇರುವರಿವುದು. ಸಂಸಾರ ವಿರ ಕ್ತಂಗೆ ಹುರಿದ ಬೀಜದಂತೆ ಅಂಕುರನಷ್ಟವಾಗಿಹುದು. ಆ ಶಿವನೊಡನೆ ಕೂಡಿ ಭೋಗಿಸುವನಾಗಿ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನೆಂಬ ನಿಜವನೆಯ್ದುವನು.

೩೯. ನಿಜವನರಿದು ನಿರ್ಮಲಜ್ಞಾನಿಯಾದ ಕರ್ಮರಹಿತ ಶಿವ ಯೋಗಿ ಕರ್ಮಕಾಯನಲ್ಲ, ಕರ್ಮಭೋಗಿಯಲ್ಲ, ಕರ್ಮಾಧೀನನು ತಾ ಮುನ್ನವೇ ಅಲ್ಲ. ಅದೆಂತೆಂದೊಡೆ ಪರಿಪಕ್ವವಾದ ಹಣ್ಣು ರಸ ತುಂಬಿ ತೊಟ್ಟು ಕಳಿದ ಬಳಿಕ ಮರಳಿ ವೃಕ್ಷವನಡರಿ ತೊಟ್ಟು ಹತ್ತುವುದೇ ಹೇಳಾ? ಆಗಾಮಿ ಪರಿಪಕ್ವವಾಗಿ ಸಂಚಿತವಾಯಿತ್ತು. ಸಂಚಿತ ಪರಿಪಕ್ವವಾಗಿ ಪ್ರಾರಬ್ಧವಾಯಿತ್ತು. ಇನ್ನು ಕರ್ಮ ಉಂಟೇ? ಇಲ್ಲವಾಗಿ. ನಿಜ ಗುರು ಸ್ವತಂತ್ರಸಿದ್ಧಲಿಂಗೇಶ್ವನ ಶರಣರು ಕರ್ಮರಹಿತರು.

೪೦. ಕರ್ಮರಹಿತನಾದ ನಿರ್ಮಲನಿತ್ಯಂಗೆ ಮಾಯಾ ಭ್ರಮೆ ಇಲ್ಲ. ಮಾಯಾಭ್ರಮೆ ಇಲ್ಲವಾಗಿ ಮನದ ಸಂಕಲ್ಪವಿಕಲ್ಪವಿಲ್ಲ. ಮನದ ಸಂಕಲ್ಪ ವಿಕಲ್ಪವಿಲ್ಲವಾಗಿ ವಿಷಯಾಭಿಮಾನವಿಲ್ಲ. ವಿಷಯಾಭಿಮಾನ ವಿಲ್ಲವಾಗಿ ಪಂಚೇಂದ್ರಿಯಂಗಳ ವ್ಯಾಪಾರವಿಲ್ಲ. ಇವಿಲ್ಲವಾಗಿ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಶರಣ ನಿರ್ದೇಹಿ.

೪೧. ಪುಣ್ಯ ಪಾಪಂಗಳನರಿಯದ ಮುನ್ನ, ಅನೇಕ ಭವಂಗಳಲ್ಲಿ ನಿಮ್ಮ ನಿಲವನರಿಯದೆ ಕೆಟ್ಟಿನಯ್ಯಾ. ಇನ್ನು ನಿಮ್ಮ ಶರಣುವೊಕ್ಕೆ

ನಾಗಿ, ನಾ ನಿಮ್ಮನೆಂದೂ ಅಗಲದಂತೆ ಮಾಡಾ ಅಯ್ಯಾ, ನಿಮ್ಮ ಧರ್ಮ, ನಿಮ್ಮ ಧರ್ಮ. ನಿಮ್ಮಲ್ಲಿ ಒಂದು ಬೇಡುವೆ. ಎನ್ನ ಕರ್ಮದ ಬಂಧನವ ಬಿಡುವಂತೆ ಮಾಡಾ ಅಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೨. ಗಿರಿ ತರು ಮಹಾ ವಿಪಿನ ಸರೋವರದಲ್ಲಿ ಹಿರಿದುಗ್ರ ತಪವ ಮಾಡುತ್ತ ಪವನಾಹಾರ ಪರ್ಣಾಹಾರ ಜಲಾಹಾರ ಫಲಾಹಾರ ನಿರಾಹಾರದಲ್ಲಿ ಇದ್ದರೇನು? ತನು ಮನ ರೂಪಾದ ಮಾಯೆ ಕಾಡದೆ ಬಿಡುವಳೇ? ತನುವಿನಲ್ಲಿ ವ್ಯಾಪಾರ ಮನದಲ್ಲಿ ವ್ಯಾಕುಳವಾಗಿ ಕಾಡದೇ ಬಿಡುವಳೇ? ಈ ಮಾಯೆಯ ಗೆಲವುದಕ್ಕೊಂದು ಉಪಾಯವ ಕಾಂಬುದು. ಅದೆಂತೆಂದೊಡೆ, ಕಂಗಳ ಕೊನೆಯಲ್ಲಿ ಲಿಂಗದ ನೋಟ, ಮನದ ಕೊನೆಯಲ್ಲಿ ಲಿಂಗದ ನೆನಹು, ಜಿಹ್ವೆಯ ಕೊನೆಯಲ್ಲಿ ಶಿವನ ಮಂತ್ರ, ಭಾವದ ಕೊನೆಯಲ್ಲಿ ಶಿವಾನುಭಾವ ನೆಲೆಗೊಂಡರೆ, ಅಂಗದ ಅವಯವಂಗಳಾಗಿ ನಿಜ ಭ್ರಮರನಂತೆ ತಾನೇ ಶಿವನಹನು. ಇಂತಪ್ಪ ಲಿಂಗಾನುಭಾವಿ ಲಿಂಗಸಂಗಗೆ ಅಂಗವಿಲ್ಲ. ಅಂಗವಿಲ್ಲದ ನಿತ್ಯ ನಿರ್ಮಲಂಗೆ ಮಾಯಾಮಲಿನ ಮುನ್ನವೇ ಹೊದ್ದದಯ್ಯಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

೪೩. ಪಂಡಿತನಾಗಲಿ, ಮೂರ್ಖನಾಗಲಿ, ಸಂಚಿತ ಕರ್ಮ ಉಂಡಲ್ಲದೆ ಬಿಡದು. ಪ್ರಾರಬ್ಧಕರ್ಮ ಭೋಗಿಸಿದಲ್ಲದೆ ಹೋಗದೆಂದು ಶ್ರುತಿ ಸಾರುತ್ತಿದ್ದಾವೆ ನೋಡಾ. ತಾನಾವಾವ ಲೋಕದೊಳಗಿದ್ದಡೆಯೂ, ಬಿಡದು. ಕರ್ಮ ಫಲಗೂಡಿ ಕೂಡಲ ಸಂಗಮದೇವಂಗೆ ಆತ್ಮನೈವೇದ್ಯವ ಮಾಡಿದವನೇ ಧನ್ಯನು.

೪೪. ಲಿಂಗ ಗಂಭೀರ ನಿಸ್ಸಂಗಿಯ ಸಂಗವನೇನೆಂಬೆನಯ್ಯಾ? ಕೂಡಲಸಂಗನ ಶರಣರು ಕಾಯದ ನೆವದಿಂದ ಅರ್ಪಿಸುವ ಬೆಡಗ ನಾನೇನೆಂಬೆ?

೪೫. ತನು ನಿಮ್ಮದೆಂದ ಬಳಿಕ ಎನಗೆ ಬೇರೆ ತನುವಿಲ್ಲ. ಮನ ನಿಮ್ಮದೆಂದ ಬಳಿಕ ಎನಗೆ ಬೇರೆ ಮನವಿಲ್ಲ. ಧನ ನಿಮ್ಮದೆಂದ ಬಳಿಕ ಎನಗೆ ಬೇರೆ ಧನವಿಲ್ಲ. ಇಂತೀ ತ್ರಿವಿಧವು ನಿಮ್ಮದೆಂದ ಬಳಿಕ ಎನಗೆ ಬೇರೆ ವಿಚಾರ ಉಂಟೇ ಕೂಡಲಸಂಗಮದೇವಾ?

೪೬. ತನುವ ಕೊಟ್ಟ ತನು ಬಯಲಾಯಿತ್ತು. ಮನವ ಕೊಟ್ಟ ಮನ ಬಯಲಾಯಿತ್ತು. ಧನವ ಕೊಟ್ಟ ಧನ ಬಯಲಾಯಿತ್ತು. ಇಂತೀ ತ್ರಿವಿಧವನ್ನು ಕೊಟ್ಟ ಕಾರಣ ಕೂಡಲಸಂಗಯ್ಯನಲ್ಲಿ ಬಸವಣ್ಣಂಗೆ ಬಯಲ ಸಮಾಧಿಯಾಯಿತ್ತು.

ಅಂಗಲಿಂಗ.

ವಿವರಣೆ— ಕ್ರಿಯೆಯಲ್ಲಿ ಅಂಗಲಿಂಗಗಳೆರಡೂ ಬೇಕು. ಒಂದನ್ನೊಂದು ಬಿಟ್ಟು ಅವು ವ್ಯವಹರಿಸಲಾರವು. ಅಂಗವನ್ನು ಕುಂದಿಸಿ ಲಿಂಗವನ್ನನುಭವಿಸುವೆವೆಂದು ಅನೇಕರು ಭಾವಿಸುವದುಂಟು. ಆದರೆ ಇದು ತಪ್ಪಾದದ್ದು. ಅಂಗ ಭೋಗವು ಅರ್ಪಿತವಾಗಿ ಆಚರಿಸಿದ ಆಚರಣೆಯೇ ಯುಕ್ತವಾದುದು. ಇದರಿಂದ ಅಂಗಲಿಂಗಗಳು ಪರಸ್ಪರ ಸಮರಸವಾಗುವವು. ಅಂಗದಿಂದಲೇ ಲಿಂಗವನ್ನು ಹೊಂದಬೇಕು.

ವಚನಗಳು.

೪೭. ಅಂಗದಿಂದೆ ಲಿಂಗಸುಖ, ಲಿಂಗದಿಂದೆ ಅಂಗಸುಖ. ಆ ಅಂಗಲಿಂಗ ಸಂಗ ಸುಖದಿಂದೆ ಪರಮ ಸುಖ ದೊರಕೊಂಬುವುದು ನೋಡಾ. ಆ ಅಂಗ ಲಿಂಗ ಸಂಗ ಸಮರಸೈಕ್ಯವನು ಕೂಡಲಚನ್ನಸಂಗ ನಿಮ್ಮ ಶರಣನಾದ ಮಹಾಲಿಂಗೈಕ್ಯ ಬಲ್ಲನಲ್ಲದೆ ಉಳಿದವರೆತ್ತ ಬಲ್ಲರಯ್ಯಾ?

೪೮. ರೂಹಿಲ್ಲದ ನೆಳಲಿಂಗೆ ಮಳಲ ಬೊಂಬೆಯ ಮಾಡಿ, ನಾದ ಬಿಂದುವಿನಲ್ಲಿ ಹುಟ್ಟಿಸಿ, ಆರಿಗೆಯು ವೈದೋರದೆ ಇದ್ದಿತ್ತು. ಶಿವನ ಮಾಯೆಯು ಕಾಯದ ಕಳವಳಕ್ಕೆ ಮುಂದೆ ರೂಪಾಗಿ ತೋರಿತ್ತಲ್ಲದೆ ಬೇರೆ ತೋರಲಿಲ್ಲ. ಅಂಗ ಭೋಗವನೆ ಕುಂದಿಸಿ ಪ್ರಸಾದವನೆ ರುಚಿಸಿಹೆನೆಂಬ ಲಿಂಗವಂತರುಗಳೆಲ್ಲ ಅರಿವೆಣಗಳಾಗಿ ಹೋದರು. ಅಂಗ ಭೋಗವೇ ಲಿಂಗಭೋಗ, ಅಂಗಭೋಗವೇ ಅರ್ಪಿತವಾಗಿ. ಲಿಂಗಕ್ಕೆ

ಬಂದ ರುಚಿ ಜಂಗವುಕ್ಕೆ ಬಾರದೇ? ಜಂಗವುಕ್ಕೆ ಬಂದ ರುಚಿ ಲಿಂಗಕ್ಕೆ ಬಾರದೇ? ಇದು ಕಾರಣ ಕೂಡಲಚನ್ನಸಂಗಯ್ಯ ಪಾಕ ಸಂಬಂಧಿಗೆ ಪ್ರಸಾದ ದೂರ.

೪೯. ಅಂಗಲಿಂಗ ಒಂದೆಂದ ಬಳಿಕ ಅಂಗ ಕೆಟ್ಟು ಲಿಂಗ ಉಳಿಯಿತ್ತು ನೋಡಾ. ಅಂಗ ನಿರ್ವಯಲಾದಲ್ಲಿ ಲಿಂಗ ಭವಿಯಾದುದು ನೋಡಾ. ಅಂಗ ಲಿಂಗ ನಿರ್ವಯಲಲ್ಲಡಗಿಸಬಲ್ಲಡೆ ಭಕ್ತನೆಂಬೆ, ಮಹೇಶನೆಂಬೆ, ಕಪಿಲಸಿದ್ಧಮಲ್ಲಿಕಾರ್ಜುನನವನೇ ಎಂಬೆ ನೋಡಾ.

೫೦. ತನುವಿನೊಳಗಿದ್ದು ತನುವ ಗೆದ್ದಳು. ಮನದೊಳಗಿದ್ದು ಮನವ ಗೆದ್ದಳು. ವಿಷಯದೊಳಗಿದ್ದು ವಿಷಯಂಗಳ ಗೆದ್ದಳು. ಅಂಗ ಸಂಗವ ತೊರೆದು ಭವವ ಗೆದ್ದಳು. ಕೂಡಲಚನ್ನಸಂಗಯ್ಯನ ಹೃದಯ ಕಮಲವ ಬಗಿದು ಹೊಕ್ಕು ನಿಜಪದವನೈದಿದ ಮಹಾದೇವಿಯಕ್ಕನ ಶ್ರೀಪಾದಕ್ಕೆ ನಮೋ ನಮೋ ಎಂಬೆನು.

೫೧. ಚಿರಂಜೀವಿ ಎಂದರೆ ನಿರೋಗಿ. ಚಿರಂಜೀವಿ ಎಂದರೆ ಸಶಕ್ತನು. ಚಿರಂಜೀವಿ ಎಂದರೆ ಬಹು ಕಾಲ ಬದುಕುವವನು. ಚಿರಂಜೀವಿ ಎಂದರೆ ಪ್ರಳಯವ ಮೀರುವವನಲ್ಲ. ದೇಹ ಚಿರಂಜೀವಿಯಾದೊಡೆ, ಕಪಿಲಸಿದ್ಧಮಲ್ಲಿಕಾರ್ಜುನ ಬ್ರಹ್ಮವೆಂಬ ಶಬ್ದ ಬೇರುಂಟೇ?

೫೨. ಕಾಯದಿಂದ ಲಿಂಗದರುಶನ. ಕಾಯದಿಂದ ಜಂಗವದರುಶನ. ಕಾಯದಿಂದ ಪ್ರಸಾದ ಸಂಪತ್ತು. ಕೂಡಲಚನ್ನಸಂಗಯ್ಯ ಈ ಕಾಯದಿಂದ ನಿಮ್ಮುವ ಕಂಡೆನಯ್ಯ.

೫೩. ಬಯಸಿ ಬಂದುದು ಅಂಗ ಭೋಗ. ಬಯಸದೆ ಬಂದುದು ಲಿಂಗಭೋಗ. ಅಂಗಭೋಗವನರ್ಪಿತ. ಲಿಂಗಭೋಗ ಪ್ರಸಾದವಯ್ಯಾ. ಬೇಕೆಂಬುದು ಕಾಯದ ಗುಣ. ಬೇಡೆಂಬುದು ವೈರಾಗ್ಯ. ಬೇಕೆಂಬುವನಲ್ಲ. ಈ ಉಭಯವನತಿಗಳೆದು ಭೋಗಿಸಬಲ್ಲಡೆ, ಕೂಡಲಚನ್ನಸಂಗ ನಿಮ್ಮ ಶರಣನೆಂಬೆನು.

೫೪. ಅಂಗಾಶ್ರಯವಳಿದು ಲಿಂಗಾಶ್ರಯವಾದ ಬಳಿಕ ಆ ಅಂಗಕ್ಕೆ ಲಿಂಗಾಚಾರವಲ್ಲದೆ, ಅಂಗ ಕ್ರಿ ಎಂಬುದನಂಗೈಸರು ನೋಡಾ! ಲಿಂಗದಲ್ಲಿ ನೈಷ್ಠಿಕವಂತನಾದ ಬಳಿಕ ಅನ್ಯ ನಾಮವಿಡಿದು ಬಳಲುವ ಬಳಿಕ ಎಲ್ಲಿಹದೋ? ಅನಾಚಾರವ ಜರಿದು, ಆಚಾರವನರಿದ ಬಳಿಕ ನಮ್ಮ ಕೂಡಲಚನ್ನಸಂಗನ ಶರಣರು ಅನ್ಯವನಾಚರಿಸುವವರಲ್ಲ.

೫೫. ಅಂಗ ಸಂಗಿಯಾದವಂಗೆ, ಲಿಂಗಸಂಗವಿಲ್ಲ. ಲಿಂಗಸಂಗಿಯಾದವಂಗೆ ಅಂಗಸಂಗವಿಲ್ಲ. ಅಂಗಸಂಗವೆಂಬುದೇ ಅನಾಚಾರ, ಲಿಂಗಸಂಗವೆಂಬುದೇ ಸದಾಚಾರ. ಇದು ಕಾರಣವಾಗಿ ಅಂಗಸಂಗವುಂಬಿಟ್ಟು, ಲಿಂಗಸಂಗವಾಗಿರಬೇಕು ನಮ್ಮ ಕೂಡಲಚನ್ನಸಂಗಯ್ಯನಲ್ಲಿ.

೫೬. ಲಿಂಗವ ಪೂಜಿಸಿದವರು ಹಲಬರುಂಟು. ಅಂಗವ ಪೂಜಿಸಿದವರು ಒಬ್ಬರೂ ಇಲ್ಲ. ಕಾಮವ ತೊರೆದವರು ಹಲಬರುಂಟು. ನಿಃಕಾಮವನಳವವರು ಒಬ್ಬರೂ ಇಲ್ಲ ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ.

೫೭. ಏಕೋ ವರ್ಣ ಷಟ್‌ಸ್ಥಲವೆಂದೆಂಬೆನೆ? ಪ್ರಣಮದ ದೃಷ್ಟ ಕಾಣಬಾರದು. ಅಂಗವನು ಲಿಂಗವನು ಮಂತ್ರವನು ಸಂಗ ಸಮರಸವ ಮಾಡಿ ತೋರಿದೊಡೆ, ಒಂದೇ ಎಂಬೆನು. ಅದು ಷಟ್‌ಸ್ಥಲವನೊಡಗೂಡಿದಲ್ಲದೆ ತೋರದಾಗಿ. ಕೂಡಲಚನ್ನಸಂಗಮದೇವಾ, ಈ ನಿರ್ಣಯವನರಿದೊಡೆ, ಅದು ಷಟ್‌ಸ್ಥಲಬ್ರಹ್ಮವೆಂಬೆನಯ್ಯ. ಮತ್ತೆ ಮತ್ತೆಯೂ ನೀವೇ ನೀವೇ ಎಂದು ನೆರೆ ನಂಬುವೆನಯ್ಯಾ.

೫೮. ಅಂಗವೇ ಲಿಂಗವೆಂಬರು. ಲಿಂಗವೇ ಅಂಗವೆಂಬರು. ಅದು ಹುಸಿ. ಇದು ಹುಸಿ. ಅಂಗವೇ ಲಿಂಗವಾದೊಡೆ, ಕಾಯದಲ್ಲಿ ಕಳವಳ ಉಂಟೇ? ಲಿಂಗವೇ ಅಂಗವಾದೊಡೆ ಪ್ರಳಯಕ್ಕೊಳಗಾಗಬಹುದೇ? ಇದು ಕಾರಣವಾಗಿ ಅಂಗ ಲಿಂಗವಲ್ಲ. ಲಿಂಗ ಅಂಗವಲ್ಲ. ಅಂಗ ಲಿಂಗ ಸಂಬಂಧದ ಸಂದಳಿದಲ್ಲಿ ಪ್ರಾಣಲಿಂಗ ಸಂಬಂಧಿ. ಪ್ರಾಣ ನಿಃಪ್ರಾಣವಾದಲ್ಲಿ ಲಿಂಗ ರೂಪಾಗಿ ರೂಪ ನಾಸ್ತಿಯಾದಂದು ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಲಿಂಗ ಸಂಬಂಧಿ.

೫೯. ಅಂಗವೇ ಲಿಂಗ, ಲಿಂಗವೇ ಅಂಗವೆಂದರಿದ ಬಳಿಕ ನಮ್ಮ ಕೂಡಲಚನ್ನಸಂಗಮದೇವರು ಅಲ್ಲಿ ಹಿರಿಹಿಂಗದಿರ್ಪ ಕಾಣಿರೋ.

೬೦. ದೇವಂಗಾಗಲಿ, ಭಕ್ತಂಗಾಗಲಿ, ಲಿಂಗಕ್ಕಾಗಲಿ, ಜಂಗವುಕ್ಕಾಗಲಿ, ಸದಾಚಾರ ಬೇಕಲ್ಲದೆ, ಆ ಸದಾಚಾರವುಳ್ಳವರಿಗೆ, ಅನಾಚಾರ

ಹೊದ್ದಲಾಗದು. ಅನಾಚಾರವೆಂದೊಡೆ ಅನಾಯತ, ಅನಾಯತವೆಂದೊಡೆ ಅನುಸರಣೆ, ಅನುಸರಣೆ ಎಂಬುದೇ ಅಂಗದಿಚ್ಛೆ. ಅಂಗದಿಚ್ಛೆ ಎಂಬುದೇ ಅನಾಚಾರ, ಅನಾಚಾರವೆಂಬುದೇ ಪಂಚಮಹಾಪಾತಕ. ಇದು ಕಾರಣವಾಗಿ, ಕೂಡಲಚನ್ನಸಂಗಯ್ಯನಲ್ಲಿ ಆಚಾರವಂತರೆನಿಸಿಕೊಂಡ ಬಳಿಕ, ಅನಾಚಾರಕ್ಕೆ ಅನುಸರಣೆಯ ಮಾಡಿದರೆ, ಆಚಾರ ಭ್ರಷ್ಟರಿಗೆ ಅನುಸರಿಸಿ ನಡೆದೊಡೆ, ಅಘೋರ ನರಕ ತಪ್ಪದು ನೋಡಿರೇ.

೬೧. ಲಿಂಗದಲ್ಲಿ ಬೆರೆದಲ್ಲಿ, ಬೆರೆದ ಬಳಿಕ, ಅಂಗದಲ್ಲಿ ಬೆರೆಯಲುಂಟೇ ದೇವಾ? ಎಲೇ ಅಲ್ಲಲ್ಲ. ಅಂಗದಲ್ಲಿ ಬೆರೆದ ಬಳಿಕ ಲಿಂಗ ಬೆರೆಯಲುಂಟೇ, ದೇವಾ ಕಪಿಲಸಿದ್ಧಮಲ್ಲಿಕಾರ್ಜುನಾ ನಿಮ್ಮ ಪೂಜಿಸಿದ ಫಲ ಪಕ್ವವಾಗದನ್ನಕ್ಕ?

೬೨. ಎನಗೆ ಗುರುವಿನ ಪ್ರಸಾದ. ನಿನಗೆ ಚನ್ನನ ಪ್ರಸಾದ. ಎನಗೆಯೂ ನಿನಗೆಯೂ ಸಮಯಾಚಾರ ಸರಿ. ಕೂಡಲಸಂಗಮದೇವಾ, ನೀನೆನಗೆ ಚಿಕ್ಕ ತಮ್ಮ.

ಸತ್ಕರ್ಮಗಳನ್ನು ಮಾಡುವುದು.

ವಿವರಣೆ— ಅಂಗವನ್ನು ಬಿಟ್ಟು ಲಿಂಗವಿಲ್ಲ, ಲಿಂಗವನ್ನು ಬಿಟ್ಟು ಅಂಗವಿಲ್ಲ. ಆದುದರಿಂದ ಅಂಗಕ್ಕೆ ಸದಾಚಾರವೇ ಬೇಕು. ಕೇವಲ ದ್ವೈತಾದ್ವೈತ ವಾದಮಾಡಿ ಪ್ರಯೋಜನವಿಲ್ಲ. ಆದರೆ ನಿರ್ಧಾರವಾಗಿ ಸದ್ಭಕ್ತಿ ಸದಾಚಾರದಿಂದ ಮನುಷ್ಯನು ನಡೆಯಬೇಕು. ಹೀಗೆ ನಡೆದಲ್ಲಿಯೇ ನಿಜವಾದ ಕ್ರಿಯೆಯನ್ನು ಮಾಡಿದಂತಾಗುವದು. ಮರ್ತ್ಯ ಲೋಕದಲ್ಲಿ ಹೀಗೆ ಆಚರಿಸುವುದರಿಂದಲೇ ಮುಂದೆ ಶ್ರೇಷ್ಠ ಸ್ಥಿತಿಯನ್ನು ಹೊಂದುವರು. ಇವರಿಗೆ ಭವವೆಂಬುದಿಲ್ಲ.

ವಚನಗಳು.

೬೩. ಆಪ್ಯಾಯನಕ್ಕೆ ನೀಡುವೆ. ಲಾಂಛನಕ್ಕೆ ಶರಣೆಂಬೆ. ಲಾಂಛನಕ್ಕೆ ತಕ್ಕ ಆಚಾರವಿಲ್ಲದಿದ್ದರೆ, ಕೂಡಲಸಂಗಮದೇವ, ನೀ ಸಾಕ್ಷಿಯಾಗಿ ಛೀ ಎಂಬೆ.

೬೪. ನುಡಿಯಬಹುದು ಆದ್ವೈತವನೊಂದು ಕೋಟಿ ವೇಕೆ. ಒನ್ಮೆ ನುಡಿಯಬಹುದೆ ನಿರ್ಧಾರವಾಗಿ ಸದ್ಭಕ್ತಿ ಸದಾಚಾರವನು? ನುಡಿದಂತೆ ನಡೆವ. ನಡೆದಂತೆ ನುಡಿವ. ಸದ್ಭಕ್ತಿಸದಾಚಾರಯುಕ್ತ ಮಹಾತ್ಮರ ಪಾದವ ಹಿಡಿದು ಬದುಕಿಸಯ್ಯ ಪ್ರಭುವೇ ಕಪಿಲಸಿದ್ಧಮಲ್ಲಿಕಾರ್ಜುನಯ್ಯ.

೬೫. ನಿರ್ವಿಷಯಿಯಾಗಬೇಕೆಂದು ಹೇಳುವರಲ್ಲದೆ, ಆದವರನು ಒಬ್ಬರನು ಕಾಣೆ ನೋಡಯ್ಯ. ಆಗುವದೇ ಆಗುವದೇ ಮಾಯಾಂಶಿಕಂಗೆ? ಆಗುವುದು ನಿನ್ನಂಶಿಕಂಗಲ್ಲದೆ ಇನ್ನಾರಿಗಯ್ಯ ಕಪಿಲಸಿದ್ಧಮಲ್ಲಿನಾಥಾ?

೬೬. ದುಷ್ಕರ್ಮಗಳ ಮಾಡುವವರನಂತರುಂಟು. ಸತ್ಕರ್ಮಗಳ ಮಾಡುವವರೊಬ್ಬರು ಇಲ್ಲ ನೋಡಯ್ಯ. ದುಷ್ಕರ್ಮವೆಂದರೆ ವಿಷಯವಾಸನೆ. ಸತ್ಕರ್ಮವೆಂದರೆ ಕಪಿಲಸಿದ್ಧಮಲ್ಲಿಕಾರ್ಜುನನ ಕೂಡುವ ವಾಸನೆ.

೬೭. ಕೃಷಿಯ ಮಾಡಿ ಉಣ್ಣದೆ ಹಸಿವುದಿನ್ನೆಂತೋ, ಇನ್ನೆಂತೋ? ಕರ್ಮಯೋಗವ ಮಾಡದೆ ನಿರ್ಮಲ ಸುಚಿತ್ತವನರಿವ ಪರಿ ಇನ್ನೆಂತೋ? ಬೇಯದ ಅಶನವನುಂಬ ಠಾವಾವುದು ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗಕ್ಕೆ?

೬೮. 'ಗೃಹ ಸ್ನಾನಂ ಕನಿಷ್ಠ ಚ ಕೂಪಸ್ನಾನಂತು ಮಧ್ಯಮಂ ಉತ್ತಮಂ ನದೀ ಸ್ನಾನಂ ಸತ್ಯಂ ಪರ್ವತನಂದನೆ' ಎಂಬುದಂತಿರಲಿ. ಎಮ್ಮ ಮನಸಿನ ಕಲ್ಮಿಷವಳಿದುದೇ ಮಹಾಸ್ನಾನ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೬೯. ಅರವತ್ತೆಂಟು ಸಹಸ್ರ ವಚನಗಳ ಹಾಡಿ ಹಾಡಿ ಸೋತಿತ್ತೆನ್ನ ಮನ ನೋಡಯ್ಯ! ಹಾಡುವುದೊಂದೇ ವಚನ. ನೋಡುವುದೊಂದೇ ವಚನ. ವಿಷಯ ಬಿಟ್ಟು ನಿರ್ವಿಷಯಿಯಾಗುವುದೊಂದೇ ವಚನ ಕಪಿಲಸಿದ್ಧಮಲ್ಲೇಶನಲ್ಲಿ.

೭೦. ವೇದ ವೇದಾಂತವನೋದಿದರೇನು, ಮನಸೂತಕವಳಿಯದನ್ನಕ್ಕ? ಸಿದ್ಧ ಸಿದ್ಧಾಂತವ ಶ್ರಮಬಟ್ಟರೇನು, ಸಾಧಿಸಿ ಕೀರ್ತಿಯ ಹಡೆಯದನ್ನಕ್ಕ? ಇವೆಲ್ಲ ಹೊರಗಣ ಮಾತು. ಮಾತೊಂದೇ. ನಮ್ಮ ಕಪಿಲಸಿದ್ಧಮಲ್ಲೇಶನಲ್ಲಿ ಸದಾಚರಣ ಸನ್ಮಾರ್ಗವಯ್ಯ.

೭೧. ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ. ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ. ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ ಕೂಡಲಸಂಗಮದೇವಾ.

೭೨. ಶಿವಾಚಾರವೆಂಬುದೊಂದು ಬಾಳಬಾಯಿ ಧಾರೆ. ಲಿಂಗ ಮೆಚ್ಚಬೇಕು. ಜಂಗಮ ಮೆಚ್ಚಬೇಕು. ಪ್ರಸಾದ ಮೆಚ್ಚಿ ತನ್ನಲ್ಲಿ ತನ್ನಲ್ಲಿ ಸ್ವಾಯತವಾಗಿರಬೇಕು. ಬಿಚ್ಚಿ ಬೇರಾದರೆ, ಮೆಚ್ಚ ನಮ್ಮ ಕೂಡಲ ಸಂಗಮದೇವ.

೭೩. ಕಲಿ ಕರುಳ ತರ್ಕೈಸಿ, ಹರಿಯಬಲ್ಲನಲ್ಲದೆ, ಸಾಯ ಕಾದಿಸುವರೇ? ಎಡೆಗೋಲನಿಕ್ಕುವರೇ? ದಾತಾರನಧೀನವಲ್ಲದೆ ಕೂಡಲ ಸಂಗಮದೇವ, ನೀ ಮಾಡಿದಂತಹುದಯ್ಯ. ತನು ಮನ ಧನದಲ್ಲಿ ವಂಚನೆಯನು ಬಯಸಿದರೆಂತಹುದಯ್ಯ?

೭೪. ಮಾಡುವ ಭಕ್ತನ ಕಾಯ ಬಾಳೆಯ ಕಂಭದಂತಿರಬೇಕು. ಮೆಲ್ಲಮೆಲ್ಲನೆ ಹೊರೆ ಎತ್ತಿ ನೋಡಿದಡೆ, ಒಳಗೆ ಕೆಚ್ಚಿಲ್ಲದಿರಬೇಕು. ಮೇಲಾದ ಫಲವ ನಮ್ಮವರು ಬೀಜ ಸಹಿತ ನುಂಗಿದರು. ಎನಗಿನ್ನಾವ ಭವವಿಲ್ಲ ಕೂಡಲಸಂಗಮದೇವಾ.

೭೫. ನುಡಿದರೆ ಮುತ್ತಿನ ಹಾರದಂತಿರಬೇಕು. ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು. ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು. ನುಡಿದರೆ ಲಿಂಗ ಮೆಚ್ಚಿ ಅಹುದೆನ್ನಬೇಕು. ನುಡಿಯೊಳಗಾಗಿ ನಡೆಯದಿದ್ದರೆ ಕೂಡಲಸಂಗಮದೇವನೆಂತೊಲಿವನಯ್ಯ?

೭೬. ದೇವಲೋಕ, ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿಭೋ. ಸತ್ಯವ ನುಡಿವುದೇ ದೇವಲೋಕ. ಮಿಥ್ಯವ ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ. ಅನಾಚಾರವೇ ನರಕ. ಕೂಡಲಸಂಗಮದೇವಾ ನೀವೇ ಪ್ರಮಾಣು.

೭೭. ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ, ಇದಾರಿಂಗಳವಡುವುದಯ್ಯಾ? ನಿಧಾನ ತಪ್ಪಿ ಬಂದರೆ, ಒಲ್ಲೆನೆಂಬವರಿಲ್ಲ. ಪ್ರೇಮದ ವಶ ಬಂದರೆ, ಹುಸಿ ಎಂಬುವರಿಲ್ಲ. ನಿರಾಶೆ ನಿರ್ಭಯ ಕೂಡಲಸಂಗಮದೇವ ನೀನೊಲಿದ ಶರಣಂಗಲ್ಲದಿಲ್ಲ.

೭೮. ಹೊನ್ನು ಹೆಣ್ಣು ಮಣ್ಣೆಂಬ ಕರ್ಮದ ಬಲೆಯಲ್ಲಿ ಸಿಲುಕಿ ವ್ಯರ್ಥ ಬರುದೊರೆ ಹೋಹ ಕೆಡುಕ ಹಾರುವ ನಾನಲ್ಲ. ಹಾರುವೆನಯ್ಯ, ಭಕ್ತರ ಬರವ ಗುಡಿಗಟ್ಟಿ. ಹಾರುವೆನಯ್ಯ, ಶರಣರ ಬರವ ಗುಡಿಗಟ್ಟಿ. ಕೂಡಲಸಂಗಮದೇವನು ವಿಪ್ರ ಕರ್ಮವ ಬಿಡಿಸಿ ಅಶುದ್ಧನ ಶುದ್ಧನ ಮಾಡಿದನಾಗಿ.

೭೯. ಆಚಾರ ಸಂಗವೇನೇನ ಮಾಡದಯ್ಯ? ಕೇಡಿ ಕುಂಡಲಿಗನಾಗದೇನಯ್ಯ? ಚಂದನದ ಸನ್ನಿಧಿಯಲ್ಲಿ ಪರಿಮಳ ತಾಗಿ ಬೇವು ಬೊಬ್ಬಿಲಿ ತರಿಯ ಗಂಧಂಗಳಾಗವೆ? ನಮ್ಮ ಕೂಡಲಸಂಗನ ಶರಣರ ಸನ್ನಿಧಿಯಿಂದ ಕರ್ಮ ನಿರ್ಮಳವಾಗದಿಹುದೇ ಅಯ್ಯಾ?

ಕ್ರಿಯೆಗಳಲ್ಲಿ ನಿರ್ದೇಪನಾಗಿ ಆಚರಿಸುವುದು.

೮೦. ಮಾಡುವಂತಿರಬೇಕು, ಮಾಡದಂತಿರಬೇಕು. ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು. ಕೂಡಲಸಂಗಮದೇವರ ನೆನೆವುತ್ತ, ನೆನೆವುತ್ತ, ನೆನೆಯದಂತಿರಬೇಕು.

೮೧. ಕಾಯ ಧರಿಸಿದವ ನವನೀತ ರೋಮದಂತಿರಬೇಕು. ಮುಕುರದಲ್ಲಿಯ ಪ್ರತಿಬಿಂಬದಂತಿರಬೇಕು. ಬೆಟ್ಟದಲ್ಲಿಯ ಕಾಡಗಿಚ್ಚಿನಂತಿರಬೇಕು. ಆಷಾಢದಲ್ಲಿಯ ಚಂಡಮಾರುತನಂತಿರಬೇಕು. ಸರ್ವರಲ್ಲಿ ಸರ್ವರಂತಾಗಿರಬೇಕು ಕಾಣಾ ಕಪಿಲಸಿದ್ಧಮಲ್ಲಿಕಾರ್ಜುನಾ.

೮೨. ಅವಲೋಹವ ಪರುಷ ಮುಟ್ಟಲು ಸುವರ್ಣವಾಗುತ್ತಿದೆ. ಕಬ್ಬಿಣ ಇದ್ದಲಿಯ ಹಾಕಿ ಅಗ್ನಿಯನಿಕ್ಕಿ ಕಾವುಗೊಳಲಾಗಿ, ಕರಗಿ ನೀರಾಗುತ್ತಿದೆ. ಹಾಲಿಗೆ ನೀರ ಹೊಯ್ದರೆ, ಅದು ಏರುವ ಭೇದವನಾರೂ ಅರಿಯರು. ಶರಣರು ತನುವಿಡಿದಿದ್ದರೂ ಇದ್ದವರಲ್ಲ. ಅದು ಹೇಗೆಂದರೆ ಹಿಂದಣ ದೃಷ್ಟದ ಪರಿಯಲ್ಲಿ ಲಿಂಗವ ಹಿಡಿದಂಗಕ್ಕೆ ಬೇರೊಂದು ಸಂಗ ಸುಖ ಉಂಟೇ? ಅದು ಕಾರಣ ಸರ್ವಾಂಗ ಲಿಂಗಿಯಾವ ಶರಣನು ಮುಟ್ಟಿದ, ತಟ್ಟಿದ, ಕೇಳಿದ, ನೋಡಿದ, ನುಡಿದ, ಸೋಂಕಿದ

ನೆನ್ನಬೇಡ. ಅದು ಕಾರಣ ಕಬ್ಬಿಣ ನೀರುಂಡಂತೆ ಅರ್ಪಿತವ ಬಲ್ಲ ಐಕ್ಯಂಗೆ ದ್ವೈತವೆಲ್ಲ ಬಾಯಿ. ಇದರ ಬೇಧವ ನಿಮ್ಮ ಬಸವ ಪ್ರಿಯ ಕೂಡಲ ಚನ್ನಬಸವಣ್ಣನೇ ಬಲ್ಲ.

೮೩. ಮಹಾಘನ ನೆಲೆಗೊಂಡಿಪ್ಪ ಶರಣನ ನೆಲೆ ಎಂತಿಪ್ಪುದೆಂದರೆ, ನೆಲದ ಮರೆಯ ನಿಧಾನದಂತೆ, ತಿಲದ ಮರೆಯ ತೈಲದಂತೆ, ಮುಗಿಲ ಮರೆಯ ಮಿಂಚಿನಂತೆ, ನೀರೊಳಗಣ ಕಿಚ್ಚಿನಂತೆ, ಕಾಷ್ಠದೊಳಗಣ ಅಗ್ನಿಯಂತೆ, ತೃಣದೊಳಗಡಗಿದ ಜೈತನ್ಯದಂತೆ, ಈ ವಿಶ್ವದೊಳು ಇದ್ದು ಇಲ್ಲದಂತಿಪ್ಪ ಮಹಾಘನವ ನಿಮ್ಮ ಶರಣರು ಬಲ್ಲರಲ್ಲದೆ, ಮರ್ತ್ಯದ ಮರಣ ಬಾಧೆಗೊಳಗಾದ ಮನುಜರೆತ್ತ ಬಲ್ಲರು ಬಸವ ಪ್ರಿಯ ಕೂಡಲ ಚನ್ನಬಸವಣ್ಣ?

೮೪. ಲಿಂಗವೇ ಅಂಗವಾಗಿಹನೆಂಬವನ ಭಾವ ಇದರಲ್ಲೇ ನಿಶ್ಚಯ ನೋಡಾ. ನಿಂದೆ ಸ್ತುತಿಗಳು ಬಂದಲ್ಲಿ ಹರ್ಷ ರೋಷಗಳಿಲ್ಲದಿರಬೇಕು. ನೀಚಾನೀಚ ಗುಣವ ನೋಡದೆ ನಮ್ಮ ಭಾಷಾವಂತನಾಗಬೇಕು. ಸರ್ವ ಜೀವಿಗಳ ತನ್ನಂತೆ ತಿಳಿದು ನೋಡಬೇಕು. ಸಂಶಯಾಸಂಶಯವಳಿದು ನಿಶ್ಚಿಂತನಾಗಬೇಕು. ಆಕಾಶದ ಬೆಳಗಿನ ಬೆಳಗು ನೋಡಿ ಬೆಳಗುಮಯನಾಗಬೇಕು ನೋಡಾ, ಎಲೆ ಮನವೇ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ.

೮೫. ಹುತ್ತದ ಮೇಲಣ ಸರ್ಪ ಸತ್ತಿತ್ತೆಂದು ಮುಟ್ಟಿ ಬಾಳ್ದ ಮನುಜರುಂಟೇ? ಒತ್ತಿಗೆ ಬಂದ ವ್ಯಾಘ್ರನನಪ್ಪಿಕೊಂಡ ಮನುಜರುಂಟೇ? ತತ್ಪವ ಬಲ್ಲ ಶರಣರು ಸತ್ತ ಹಾಗೆ ಇದ್ದರೆ, ಇವರು ಕತ್ತೆಯ ಮನುಜರೆಂದು ಮರ್ತ್ಯದವರು ಒತ್ತಿ ನುಡಿದರೆ, ಅವರೆತ್ತ ಬಲ್ಲರೋ? ಅವರ ನುಡಿದವರು ಅತ್ತಲೂ ಇಲ್ಲ, ಇತ್ತಲೂ ಇಲ್ಲ, ನೋಡಾ ಬಸವ ಪ್ರಿಯ ಕೂಡಲಚನ್ನಬಸವಣ್ಣ.

೮೬. ಜಲದಲ್ಲಿಯ ಚಂದ್ರನ ಚಲನೆ ಜಲದಲ್ಲಲ್ಲದೆ ನಿಜ ಚಂದ್ರನಲ್ಲಿಲ್ಲವಯ್ಯ. ಘಟದಲ್ಲಿಯ ಬಿಂದುಗಳು ಘಟದಲ್ಲಲ್ಲದೆ ಬಿಂಬದಲ್ಲಿಲ್ಲ ನೋಡಯ್ಯ. ಜಲದಲ್ಲಿಯ ಚಲನೆ, ಘಟದಲ್ಲಿಯ ಬಿಂಬ ನಿಜವಲ್ಲ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೮೭. ಸುಳಿದೊಡೆ ಒಡಲಿಲ್ಲ, ನಿಂದಡೆ ನೆಳಲಿಲ್ಲ. ನಡೆದಡೆ ಗಮನವಿಲ್ಲ, ನುಡಿದಡೆ ಶಬ್ದವಿಲ್ಲ ದಗ್ಧಪಟ ನ್ಯಾಯದಂತೆ. ಉಂಡಡೆ ಉಪಾಧಿ

ಇಲ್ಲ, ಉಣದಿರ್ದಡೆ ಕಾಂಕ್ಷೆ ಇಲ್ಲ. ಯಥಾ ಲಾಭ ಸಂತುಷ್ಟನಾಗಿ ಸ್ತುತಿ ಇಲ್ಲ ನಿಂದೆ ಇಲ್ಲ ನಂಟರಿಲ್ಲ ಹಗೆ ಇಲ್ಲ ಅರುಹು ಇಲ್ಲ ಮರಹು ಇಲ್ಲ ತಾನೆಂಬ ನೆನಹಿಲ್ಲಾಗಿ. ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು ಲಿಂಗ ಪ್ರಾಣಿಗಳಾಗಿ ಒಡಲ ಮರೆಗೊಂಡು ಎಂತಿರ್ದೊಡಂ ಎಂತು ನಡೆದೊಡಂ ಅಂತೇ ಸಂದಿರ್ದ.

೮೮. ಹರಣವಿದ್ದು ಹರಣವಿಲ್ಲ, ಹರಣ ಲಿಂಗದಲ್ಲಿ ನಿರಿಯಾಣವಾಯಿತ್ತಾಗಿ. ಮನವಿದ್ದು ಮನವಿಲ್ಲ, ಮನವು ಮಹದಲ್ಲಿ ಲೀಯವ ನೆಯ್ದಿತ್ತಾಗಿ. ಜೀವವಿದ್ದು ಜೀವವಿಲ್ಲ, ಜೀವ ಸಜ್ಜೀವವಾಯಿತ್ತಾಗಿ. ಭಾವವಿದ್ದು ಭಾವವಿಲ್ಲ, ಭಾವ ನಿರ್ಭಾವವಾಯಿತ್ತಾಗಿ. ಕರಣಂಗಳಿದ್ದು ಕರಣಂಗಳಿಲ್ಲ, ಕರಣಂಗಳಲ್ಲಿ ಕರಣಂಗಳಾಗಿ. ಇಂತು ಸರ್ವವು ಇದ್ದೂ ಸರ್ವವು ಇಲ್ಲದ ಕಾರಣ, ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು ಉಂಡು ಉಪಾಸಿಗಳು, ಬಳಸಿ ಬ್ರಹ್ಮಚಾರಿಗಳು.

ತನ್ನ ಕ್ರಿಯೆಗಳನ್ನು ತಾನೇ ಮಾಡುವುದು.

೮೯. ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು, ಬೇರೆ ಮತ್ತೊಬ್ಬರ ಕೈಯ್ಯಲು ಮಾಡಿಸಬಹುದೆ? ತನ್ನ ಲಿಂಗಕ್ಕೆ ಮಾಡುವ ನಿತ್ಯ ನೇಮವ ತಾ ಮಾಡಬೇಕಲ್ಲದೆ, ಬೇರೆ ಮತ್ತೊಬ್ಬರ ಕೈಯ್ಯಲು ಮಾಡಿಸಬಹುದೆ? ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವಾ?

೯೦. ಆತನ ಸುಖ ದುಃಖವೀತಗೇನು? ಈತನ ಸುಖ ದುಃಖವಾತಗೇನು? ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ. ನಿಮ್ಮ ನಿಮ್ಮ ಅರುಹ ಸಂತೈಸಿಕೊಳ್ಳಿ. ರಂಭೆ ಎಂದರೆ ನಿನ್ನಂಗನೆಯಾಗಲಿಲ್ಲವು. ಒಂದು ದಿನ ಸ್ವಪ್ನದಲ್ಲಾದರೂ ರತಿಸಲಿಲ್ಲ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೯೧. ಶೀಲವಂತನಾದರೆ ತಾ ಸವೆದು ಶೀಲವ ಮಾಡಬೇಕಯ್ಯ. ತಾನಿರ್ದೆಡೆಯಲ್ಲಿ ಸುಳಿದು ಮಾಡುವ ಶೀಲ ಕೊಟ್ಟು ಪೂಜಿಸುವ ಕೈ

ಕೂಲಿತನವಿಲ್ಲ. ಪೂಜೆಯ ಫಲ ಕೊಡವಾಲ ಕರೆವ ಸುರಭಿಯಂತೆ. ತನ್ನುದರ ನಿಮಿತ್ಯವಿಡಿದು ಶೀಲಬೇಕೆಂಬ ದುಶ್ಶೀಲರ ವೆಚ್ಚವನೇ ಸಕಳೇಶ್ವರಾ?

ಕ್ರಿಯೆಯಲ್ಲಿ ಪ್ರತಿಫಲವನ್ನಪೇಕ್ಷಿಸಕೂಡದು.

೯೨. ಮಾಡುವ ಭಕ್ತನು ನೀನೇ, ಮಾಡಿಸಿಕೊಂಬ ದೇವನು ನೀನೇ, ಎಂದರಿದೆ. ಇದು ಕಾರಣ ಅಖಂಡೇಶ್ವರಾ ನಿಮ್ಮ ಫಲಪದವ ಬೇಡಲಿಲ್ಲ, ನೀವು ಒಲಿದು ಎನಗೆ ಕೊಡಲಿಲ್ಲ.

೯೩. ಕ್ಷೀರಸಾಗರದೊಳಗಿರ್ದ ಹಂಸೆ ಹಾಲ ಬಯಸಲುಂಟೇ? ಪುಷ್ಪದೊಳಗಿರ್ದ ತುಂಬಿ ಪರಿಮಳವನರಸಲುಂಟೇ? ಕಡಲೊಳಗಿರ್ದ ಕಪ್ಪೆ ಜಲವ ಬಯಸಲುಂಟೇ? ಇದೆಂತಯ್ಯ! ತಾ ಲಿಂಗದೊಳಗಿರ್ದು, ಬೇರೆ ಇತರ ಕಾಮ್ಯದೊಳಗಿರ್ಪ ಭ್ರಾಂತರನೇನೆಂಬೆನಯ್ಯ ಗುಹೇಶ್ವರಾ?

೯೪. ಮಾಟ ಕೂಟ ಫಲ ಪ್ರಾಪ್ತಿ ಎಂಬ ಮಾತ ಕೇಳಲಾಗದು. ಶಿವ ಶಿವಾ, ನಿಮ್ಮ ಭಕ್ತರಿಗೆ ಮಾಡಿದೆನೆನ್ನದಿರೆಂದು ಶ್ರೀಗುರುಲಿಂಗವು ಕೃಪೆ ಮಾಡಿದ ಕಾರಣ, ಅಲ್ಲಿ ಮಾಡುವವನು ಮಾಡಿಸಿಕೊಂಬುವವನು ನೀನೇ ಅಯ್ಯ, ಕೂಡಲಸಂಗಮದೇವಾ.

೯೫. ಮಾಡುವಲ್ಲಿ ಎನ್ನ ನಾನರಿದು ಮಾಡಿದೆನಾದಡೆ, ನೀಡುವಲ್ಲಿ ಎನ್ನ ನಾನರಿದು ನೀಡಿದೆನಾದಡೆ, ನೀಡುವಲ್ಲಿ ರುಚಿಗೆ ಮನವೆಳಸಿ ಹಾರೈಸಿದೆನಾದಡೆ, ನಿಮಗಂದೇ ದ್ರೋಹವಯ್ಯ. ಮಾಡುವಲ್ಲಿ, ನೀಡುವಲ್ಲಿ, ಶುದ್ಧನಲ್ಲದಿರ್ದಡೆ, ನೀನಂದೇ ಮೂಗ ಕೊಯ್ಯಿ, ಕೂಡಲಸಂಗಮದೇವಾ.

೯೬. ಮಾಡಿದೆನೆಂಬುದು ಮನದಲ್ಲಿ ಹೊಳೆದರೆ, ಏಡಿಸಿ ಕಾಡಿತ್ತು. ಶಿವನ ಡಂಗುರ. ಮಾಡಿದೆನನ್ನದಿರಾ ಲಿಂಗಕ್ಕೆ. ಮಾಡಿದೆನೆಂಬುದು ಮನದಲ್ಲಿ ಇಲ್ಲದಿರ್ದಡೆ, ಬೇಡಿದ್ದನೀವ ನಮ್ಮ ಕೂಡಲಸಂಗಮದೇವಾ.

೯೭. ಅನ್ನವನಿಕ್ಕಿ, ನನ್ನಿಯ ನುಡಿದು, ಆರವಟಿಗೆಯನಿಕ್ಕಿ, ಕೆರೆಯ ಕಟ್ಟಿಸಿದಡೆ, ಮರಣದಿಂದ ಮೇಲೆ ಸ್ವರ್ಗ ಉಂಟಲ್ಲದೆ, ಶಿವನ ನಿಜವು ಸಾಧ್ಯವಾಗದು. ಗುಹೇಶ್ವರನರಿದ ಶರಣಂಗೆ ಆವ ಫಲವೂ ಇಲ್ಲ.

೯೮ ಅಷ್ಟವಿಧಾರ್ಚನೆ, ಷೋಡಶೋಪಚಾರ, ಆಂದಂದಿನ ಕೃತ್ಯ ಆಂದಂದಿಗೆ ಮಾಡಿ, ನಾನು ಶುದ್ಧನಯ್ಯ, ಹಂಗು ಹರಿ ಇಲ್ಲದ ಕಾರಣ. ಕೂಡಲಸಂಗಮದೇವಾ, ನಿಃಫಲದಾಯಕನಾಗಿ ನಾನು ಮಾಡಿ ಶುದ್ಧನಯ್ಯ.

೯೯. ಮಾಡಿ, ನೀಡಿ, ಹೋಹೆನೆಂಬಾಗ, ಕೈಲಾಸವೇನು ಕೈಕೂಲಿಯೇ? ಮುಂದೊಂದು ಕಲ್ಪಿಸದೆ, ಹಿಂದೊಂದು ಭಾವಿಸದೆ, ಸಲೆ ಸಂದಿದ್ದಾಗಳೇ, ಮಾರಯ್ಯಪ್ರಿಯ ಅಮಳೇಶ್ವರ ಲಿಂಗವಿದ್ದ ಕೈಲಾಸ.

೧೦೦. ಲೋಕ ತನ್ನೊಳಗಾದ ಬಳಿಕ ಲೋಕದ ಸೊಮ್ಮು ತನಗೇಕಯ್ಯ? ಪರುಷ ತಾನಾದ ಬಳಿಕ ಸುವರ್ಣದ ಸೊಮ್ಮು ತನಗೇಕಯ್ಯ? ಧೇನು ತಾನಾದ ಬಳಿಕ ಗೋವಿನ ಸೊಮ್ಮು ತನಗೇಕಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ?

೧೦೧. ಕರ್ತೃಭೃತ್ಯರಾಗಿ ಮಾಡುವ ಮಾಟದಲ್ಲಿ ವಿಚಾರವುಂಟು. ಅದೆಂತೆಂದೊಡೆ ಸಂಸಾರದಿ ಧನವುಳ್ಳೊಡೆ ಜಂಗಮುಲಿಂಗವಹುದು. ಅದಕ್ಕೆ ಮಾಡಿದಲ್ಲಿ ಫಲಪದವುಂಟು. ಆ ಫಲಪದವುಂಟಾದಲ್ಲಿ ಭವವುಂಟು. ಫಲ ಪದವಿಲ್ಲದಲ್ಲಿ ಭವವಿಲ್ಲ. ಮನದಂತೆ ಮಂಗಳವೆಂಬ ಸಟೆಯ ದಿಟವಾಡಿ ಈ ಉಭಯದೊಳಗೆ ಆವುದು ಪ್ರಿಯವಾಗಿ ಮಾಡುವರು ಆ ಹಾಗಿಹರಯ್ಯ ಕೂಡಲಚನ್ನಸಂಗಮದೇವಾ.

೧೦೨. ಗತಿ ಪದ ಮುಕ್ತಿಯ ಬಯಸಿ ಮಾಡುವಾತ ಭಕ್ತನಲ್ಲ. ಗತಿ ಪದ ಮುಕ್ತಿಗೆ ವಿರಹಿತ ಭಕ್ತ. ಹಮ್ಮು ಬಿಮ್ಮು ಗಮನ ನಿರ್ಗಮನ ಸೂತಕ ವಿರಹಿತ ಜಂಗಮ. ಮಾಡುವರೆ ಭಕ್ತ ಮಾಟದೊಳಗಿಲ್ಲದಿರಬೇಕು. ಮಾಡಿಸಿಕೊಂಬುವದರೊಳಗಿಲ್ಲದಿರಬೇಕು. ಜಂಗಮ ಪ್ರಾಣವಿಲ್ಲದ ಭಕ್ತ ಜಂಗಮದ ನುಡಿ ಗಡಣದ ಮೇಳಾಪವದೆಂತಿರಬೇಕಯ್ಯಾ ಎಂದೊಡೆ ಪ್ರಚ್ಛನ್ನವಾಗಿ ಲೋಕಕ್ಕೆ ತೋರಿ ಲೋಕಕ್ಕೆ ಅದೃಶ್ಯನಾಗಿರಬೇಕು. ಜಲಚರಾದಿಗಳ ಪದದಂತೆ, ಶಿಸು ಕಂಡ ಕನಸಿನಂತೆ, ಮೊಲೆಯುಂಡ ರುಚಿಯಂತೆ, ಆಚಾರಸಂಪನ್ನನಾದವನಿಗಿದು ಚಿನ್ಹವು.

ಇಂತಲ್ಲದೆ ಹಗರಣದ ಓಗರ ಹಳಸಿದಂತೆ, ಕುಹಕನ ವಾದ್ಯದಂತೆ, ನಗೆ ಗೆಡೆಯಾಗುತ್ತೈದಾರೆ. ಆ ಭಕ್ತಜಂಗಮದ ಘನವನುಪಮಿಸಬಾರದಯ್ಯ ಕೂಡಲಚನ್ನಸಂಗಮದೇವಾ.

೧೦೩. ಅನ್ನವನಿಕ್ಕಿದೊಡೇನು ? ಪುಣ್ಯವಹುದು. ವಸ್ತ್ರವ ಕೊಟ್ಟಡೇನು ? ಪುಣ್ಯವಹುದು. ಹಣವ ಕೊಟ್ಟಡೇನು ? ಪುಣ್ಯವಹುದು. ಆಯಾಯ ಫಲಪದದ ಸಿರಿ ಸಂಪತ್ತು ಅಹುದಯ್ಯ ಕೂಡಲಚನ್ನಸಂಗಮದೇವಾ.

೧೦೪. ಪಾದಾರ್ಚನೆಯ ಮಾಡುವೆನಯ್ಯಾ ಪಾದೋದಕದ ಹಂಗಿಂಗೆ. ಶರಣಾರ್ಥಿ ಎಂಬೆನಯ್ಯ ಒಕ್ಕುದ ಕೊಂಬ ಹಂಗಿಂಗೆ. ಎಡೆಯಾಟ ಕಡ ಬಡ್ಡಿಯ ಕೊಟ್ಟು ಕೆಟ್ಟಿತ್ತು ನೋಡಾ ಭಕ್ತಿ. ಕೂಡಲಸಂಗನ ಶರಣರ ನಿಲವನರಿಯದೆ ಮುಯ್ಯಿಗೆ ಮುಯ್ಯಾಗಿ ಕೆಟ್ಟಿತ್ತಯ್ಯ ಎನ್ನ ಭಕ್ತಿ.

೧೦೫. ಹವ್ಮಿನ ಭಕ್ತಿ ಕರ್ಮಕ್ಕೆ ಮೊದಲು. ಮರ್ಮವನರಿಯದ ಮಾಟ ಸುಯಿಧಾನದ ಕೇಡು. ಬಂದ ಸಮಯೋಚಿತವನರಿಯದಿದ್ದರೆ, ನಿಂದಿರಲೊಲ್ಲ ಕೂಡಲಸಂಗಮದೇವ.

ಪರಮಾತ್ಮನಿಗೋಸ್ಕರ ಮಾಡುವುದು.

೧೦೬. ಲಿಂಗಕ್ಕೆಂದೇ ನೆನೆವೆ. ಲಿಂಗಕ್ಕೆಂದೇ ಮಾಡುವೆ. ಲಿಂಗಕ್ಕೆಂದೇ ಕೂಡುವೆನು ನಾನಯ್ಯ. ಸಕಲ ಪದಾರ್ಥಂಗಳ ಲಿಂಗಕ್ಕೇದೇ ಭಾವಿಸುವೆ. ಅಂಗಗುಣಂಗಳನರಿಯೆನಯ್ಯ. ಲಿಂಗಕ್ಕೆಂದೇ ಕಾಮಿಸುವೆನು ನಿಃಕಾಮಿಯಾಗಿ. ಎನ್ನ ದೇಹೇಂದ್ರಿಯಮನಪ್ರಾಣಾದಿಗಳು ಲಿಂಗದ ಸತಿಯರಾಗಿ ಲಿಂಗಕ್ಕೆಂದೇ ಬಯಸಿ ಲಿಂಗಪ್ರಾಣಿಗಳಾದ ಕಾರಣ ಲಿಂಗಕ್ಕೆಂದೇ ಕೈಕೊಂಬೆನು. ಅನರ್ಪಿತವನರಿಯೆ ಕೂಡಲಸಂಗಮದೇವಾ.

೧೦೭. ಹೊತ್ತಾರೆ ಎದ್ದು ಕಣ್ಣ ಹೊಸೆವುತ್ತ ಎನ್ನೊಡಲಿಂಗೆ ಎನ್ನ ಮಡದಿಮಕ್ಕಳಿಗೆಂದು ಕುದಿದೆನಾದಡೆ ಎನ್ನ ಮನಕ್ಕೆ ಮನವೇ ಸಾಕ್ಷಿ.

ಕ್ಷ್ಲೋ॥ ಅಶನೇ ಶಯನೇ ಯಾನೇ ಸಂಪರ್ಕೇ ಸಹಭೋಜನೆ। ಸಂಜರಂತಿ ಮಹಾ ಘೋರೇ ನರಕೆ ಕಾಲಮುಕ್ಷಯಂ॥ ಎಂದುದಾಗಿ ಈ ಕೃತಿಯ ಬಸವಣ್ಣನೋದುವನು. ಭವಿಯ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು ಓಲೈಸಿಹನೆಂದು ನುಡಿವರಯ್ಯ ಪ್ರಮಥರು. ಕೊಡುವೆನುತ್ತರವನವರಿಗೆ. ಕೊಡಲಮ್ಮೆನು. ಹೊಲೆಹೊಲೆಯರ ಮನೆಯ ಹೊಕ್ಕಾದರೆಯೂ ಸಲೆ ಕೈಕೂಲಿಯ ಮಾಡಿಯಾದಡೆಯೂ ನಿಮ್ಮ ನಿಲವಿಂಗೆ ಕುದಿವೆನಲ್ಲದೆ ಎನ್ನೊಡಲವಸರಕ್ಕೆ ಕುದಿವೆನಾದಡೆ ತಲೆದಂಡ ತಲೆದಂಡ ಕೂಡಲಸಂಗಮದೇವಯ್ಯ.

೧೦೮. ಹಲವು ಕೊಂಬೆಗೆ ಹಾಯಲು ಬೇಡ. ಬರು ಕಾಯಕೆ ನೀಡಲುಬೇಡ. ಲೋಗರಿಗೆ ಕೊಟ್ಟು, ಭ್ರಮಿತನಾಗಬೇಡ. ಆಚಾರವೆಂಬುದು ಹಾವಸೆಗಲ್ಲು. ಭಾವ ತಪ್ಪಿದ ಬಳಿಕ ಏಗೈದಡಾಗದು. ಅಂಜದಿರು, ಅಳುಕದಿರು, ಪರವೈವಕ್ಕೆರಗದಿರು. ಕೂಡಲಸಂಗನ ಕೈಯ್ಯಲು ಇರಿಸುವುದೆನ್ನ ಭಾರ.

೧೦೯. ಕರ್ಮವೆಂಬ ಅಂಕದೊಡನೆ ತೊಡರಿದೆ. ಬಿನ್ನಪವ ಅವಧಾರು ನಿಮ್ಮಾಳಿನ ಭಾಷೆಯ. ಕಡೆಗಳಕ್ಕೆ ನೂಂಕುವೆ. ಕೆಡಹುವೆನಂಕವ. ಕರೆದಡೋಸರಿಸಿದರೆ ನಿಮ್ಮಾಳಲ್ಲ. ಶಿವಶರಣೆಂಬ ದಂಡೆಯ ಹೂಡಿ ಗಣಮೇಳಾಪವೆಂಬ ಅಲಗಿನಿಂದಿರಿವೆ ಕೂಡಲಸಂಗಮದೇವ.

೧೧೦. ಕಾಯವೆಂಬ ಘಟಕ್ಕೆ ಚೈತನ್ಯವೇ ಸುಯಿಧಾನ. ಸಮತೆ ಎಂಬ ಜಲ. ಕರಣಾದಿಗಳೇ ಶ್ರವಣ. ಜ್ಞಾನಿಯೆಂಬ ಅಗ್ನಿಯನಿಕ್ಕಿ, ಮತಿ ಎಂಬ ಸುಟ್ಟುಗದಲ್ಲಿ ಘಟ್ಟಿಸಿ, ಪಾಕಕ್ಕೆ ತಂದು, ಭಾವದಲ್ಲಿ ಕುಳ್ಳಿರಿಸಿ, ಪರಿಣಾಮದೋಗರವ ನೀಡಿದರೆ, ಕೂಡಲಸಂಗಮದೇವಂಗಾರೋಗಣೆಯಾಯಿತ್ತು.

೧೧೧. ನಡೆ ಚನ್ನ, ನುಡಿ ಚನ್ನ, ಎಲ್ಲಿ ನೋಡಿದಡೆ ಚನ್ನ, ಪ್ರಮಥರೊಳಗೆ ಚನ್ನ, ಪುರಾತರೊಳಗೆ ಚನ್ನ. ಸವಿದು ನೋಡಿ ಅಂಬಲಿ ರುಚಿಯಾಯಿತ್ತೆಂದು ಕೂಡಲಸಂಗಮದೇವಂಗೆ ಬೇಕೆಂದು ಕೈದೆಗೆದ ನಮ್ಮ ಚನ್ನ.

೧೧೨. ಈ ಸತ್ಕ್ರಿಯೆಗೆ ಈ ಫಲ, ಈ ಪುಷ್ಪಕ್ಕೀ ಫಲ, ಎಂಬ ಕೈಕೂಲಿಕಾರರು ಅವರೆಲ್ಲ ಕರ್ಮಿಗಳಯ್ಯ. ಪುಣ್ಯ ಪಾಪವನುಂಬ ಕರ್ಮಿ

ಗಳಯ್ಯ. ಸ್ವರ್ಗ ನರಕವನುಂಬ ಕರ್ಮಿಗಳಯ್ಯ. ಒಡಲೊಡವೆ ಪಡೆದರ್ಥ ಮೃಡದೇವ ಸೊಡ್ಡಳನಿಗೆಂಬಾತ ಬೆಡಗಿನ ಶಿವಸುತ್ರ. ಉಳಿದವರೆಲ್ಲ ಜಗದ ವಿತ್ರರು.

ಸಕಲ ಪ್ರಾಣಿಗಳಿಗೋಸ್ಕರ ಮಾಡುವುದು.

೧೧೩. ಸಕಲ ಪ್ರಾಣಿಗಳಿಗೆ ಲೇಸಾಗಲೆಂದು ಮಜ್ಜನಕ್ಕೆರೆವ ಲಾಂಛನ ಧಾರಿಗಳ ವೇಷಕ್ಕೆ ಶರಣೆಂಬೆನಯ್ಯಾ. ಆ ಲಾಂಛನದ ಹೆಚ್ಚು ಕುಂದನರಸದೆ ಸಕಲ ಪದಾರ್ಥವನು ಗುರುಲಿಂಗ ಜಂಗಮಕ್ಕೆ ಒಪ್ಪಿಸಿ ಸಕಲ ಕೃತ್ಯಂಗಳಿಂದ ನಿಮಗೋಸುಗ ತಹೆನು. ದಯದಿಂದೆ ಮನೆಗೆ ಬಂದಂತೆ ಭಯಭಕ್ತಿಯಿಂದ ಪರಿಣಾಮಿಸಿ ಅವರಿಚ್ಛೆಯನೀವೆನು, ಅತ ನಿರ್ದಲ್ಲಿಗೆ ಹೋಗಿ. ಕೂಡಲಚನ್ನಸಂಗಯ್ಯನಲ್ಲಿ ನಾನು ಇಲ್ಲ ನೀನು ಇಲ್ಲ. ನಾನಿಲ್ಲದ ಮುನ್ನ ನೀನಿರ್ದುದಿಲ್ಲವಯ್ಯಾ.

೧೧೪. ಮಾಡಿದರು ಮಾಡಿದರು ತಮ್ಮ ಹಿತಕ್ಕಲ್ಲದೆ, ಮತ್ತಾರ ಹಿತಕ್ಕಲ್ಲ ನೋಡಯ್ಯ! ನೋಡಿದರು ನೋಡಿದರು ತಮ್ಮ ಹಿತಕ್ಕಲ್ಲದೆ ಮತ್ತಾರ ಹಿತಕ್ಕಲ್ಲ ನೋಡಯ್ಯ! ತನ್ನ ಬಿಟ್ಟನ್ಯ ಹಿತವ ನೋಡಿದರೆ ಕೂಡಿಕ್ಕೊಂಬ ನಮ್ಮ ಕಪಿಲಸಿದ್ಧಮಲ್ಲಯ್ಯ.

೧೧೫. ಮಾಡಿದವನ ಹೆಸರು ಮಣ್ಣಿನಲ್ಲಿ. ಮಣ್ಣು ಮಾಡಿದವನ ಹೆಸರು ಮೂಲೋಕದಲ್ಲಿ. ಮಾಡಿದೆನೆಂಬುದು ಮನದ ಗುಣ. ಮಾಡಿದವನವನಿಗೆಂಬುದು ಮಹಾದೇವ ಕಪಿಲಸಿದ್ಧಮಲ್ಲಿಕಾರ್ಜುನನ ಕೂಡುವ ಗುಣ.

೧೧೬. ಭಕ್ತರಲ್ಲದವರನಾಸೆಗೈದರೆ ಕಕ್ಕುಲಿತೆಯಲ್ಲದೆ ಕಾರ್ಯವಿಲ್ಲ. ಆಸೆಗೈದರೆ ಆಸೆಗೈವುದು ಭಕ್ತರನು. ಆಸೆಗೈದು ಬಂದ ಶಿವಂಗೆ ಸುತನ ಕೊಟ್ಟರು, ಧನವ ಕೊಟ್ಟರು, ಮನವ ಕೊಟ್ಟರು, ಅಸುವ ಕೊಟ್ಟರು. ಶರಣನ ಸರಿ ಆವ ಲೋಕದೊಳಗೂ ಇಲ್ಲ. ಶರಣಭರಿತ ಲಿಂಗವಾಗಿ ಬೇಡಿದ್ದ ಕೊಡುವರಯ್ಯ ಉರಿಲಿಂಗಪೆದ್ದಿ ಪ್ರಿಯವಿಶ್ವೇಶ್ವರಾ.

ಪರಮಾತ್ಮನನ್ನು ಧ್ಯಾನಿಸುವುದು.

೧೧೭. ವಚನದಲ್ಲಿ ನಾಮಾಮೃತ ತುಂಬಿ ನಯನದಲ್ಲಿ ಮೂರುತಿ ತುಂಬಿ ಮನದಲ್ಲಿ ನಿಮ್ಮ ನೆನಹು ತುಂಬಿ ಕಿವಿಯಲ್ಲಿ ನಿಮ್ಮ ಕೀರ್ತಿಯು ತುಂಬಿ ಕೂಡಲಸಂಗಮದೇವಾ ನಿಮ್ಮ ಚರಣ ಕಮಲದೊಳು ಸೊಗದ ಬಂಡನುಂಬ ತುಂಬಿಯಾಗಿರ್ಪೆನು.

೧೧೮. ಹೊರ ಕಣ್ಣು ಮುಚ್ಚಿ ಒಳ ಕಣ್ಣು ತೆರೆದು ಮನದೊಡೆಯ ಬಂದಾನೆಂದು ಕಿವಿಯೊಡ್ಡಿ ಕೇಳುತ್ತಿರ್ದೆನಯ್ಯ. ಅವತ್ತಣಿಂದ ಬಂದು ನಿಜ ರೂಪು ಸುಳಿಯಿತ್ತೆಂದರಿಯೆ. ಪರಮನ ಪ್ರತಿಬಿಂಬ ಹೊಳೆದೊಡೆ ಕಣ್ಣು ತುಂಬ ಕಂಡು, ಕರ ತುಂಬ ಹಿಡಿದು, ಮನ ಮುಟ್ಟಿ ನಿರೆವನು ಕಾಣಾ ಕಪಿಲಸಿದ್ಧಮಲ್ಲಿಕಾರ್ಜುನಾ.

೧೧೯. ನಿಮ್ಮ ನೋಟವನಂತ ಸುಖ. ಕೂಟ ಪರಮ ಸುಖವಯ್ಯ. ಅಷ್ಟಕೋಟಿ ರೋಮಂಗಳಾಗಿ ಕಂಗಳಾಗಿ ನೋಡುತ್ತಿದ್ದೆನು. ಕೂಡಲಸಂಗಮದೇವ, ನಿಮ್ಮ ನೋಡಿ ಮನದಲ್ಲಿ ರತಿ ಹುಟ್ಟಿ ನಿಮಿರ್ದವೆನ್ನ ಕಂಗಳು.

೧೨೦. ಕಾಯಸಂಗ ನಿಸ್ಸಂಗವಾಗಿ, ಇನ್ನಾವ ಸಂಗವನರಿಯೆನಯ್ಯ. ಮಿಗೆ ಒಲಿದೆನಾಗಿ ಅಗಲಲಾರೆನಯ್ಯ. ನಗೆಮೊಗದರಸಾ ಅವಧಾರು. ಕೂಡಲಸಂಗಮದೇವಾ ಬಗಿದು ಹೋಗುವೆನು ನಾ ನಿಮ್ಮ ಮನವ.

೧೨೧. ಜಗವ ಸುತ್ತಿಪ್ಪುದು ಮಾಯೆಯಯ್ಯ. ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯ. ಜಗಕ್ಕೆ ಬಲ್ಲಿದ ನೀನು. ನಿನಗೆ ಬಲ್ಲಿದ ನಾನು ಕಂಡಯ್ಯ. ಜಗವು ನಿನ್ನೊಳಗೆ, ನೀನು ಎನ್ನೊಳಗೆ. ಕರಿಯು ಕನ್ನಡಿಯೊಳಗೆ ಅಡಗಿದಂತೆ ನೀನೆನ್ನೊಳಗಡಗಿದೆ ಕೂಡಲಸಂಗಮದೇವಾ.

೧೨೨. ಸುಚಿತ್ತದಿಂದ ನಿಮ್ಮ ನೆನೆಯಲೊಲ್ಲದೆನ್ನ ಮನ ಎಂತಯ್ಯ? ಎನಗಿನ್ನಾವುದು ಗತಿ ಎಂತಯ್ಯ? ಎನಗಿನ್ನಾವುದು ಮತಿ ಎಂತಯ್ಯ? ಹರಹರಾ ಕೂಡಲಸಂಗಮದೇವಾ, ಮನವ ಸಂತೈಸೆನ್ನ.

ಧ್ಯಾನಕ್ರಿಯೆಗಳಿರಡೂ ಇರುವದು ಅವಶ್ಯವು.

೧೨೩. ದೇವರ ನೆನೆದು ಮುಕ್ತರಾದೆವೆಂಬ ಯುಕ್ತಿ ಶೂನ್ಯರ ಮಾತ ಕೇಳಲಾಗದು. ಅದೇನು ಕಾರಣವೆಂದರೆ, ದೇವರ ನೆನೆದರೆ, ದೇವರುಂಟೀ ದೂರ? ದೂರದಲ್ಲಿದ್ದವರ ನೆನೆವರಲ್ಲದೆ ಸಮೀಪದಲ್ಲಿದ್ದವರನಾರೂ ನೆನೆವರಿಲ್ಲ. ಇದನರಿದು, ನಿನ್ನೊಳಡಗಿ, ನಾ ನಿನ್ನ ನೆನೆಯಲಿಲ್ಲ. ನನ್ನೊಳಡಗಿ ನೀನೆನಗೆ ಮುಕ್ತಿಯನೀಯಲಿಲ್ಲ. ಇದುಕಾರಣ ನಾ ನಿನ್ನ ನೆನೆಯಲಿಲ್ಲ, ಮಹಾಲಿಂಗ ಗಜೇಶ್ವರಾ.

೧೨೪. ಕೆಂಚ ಕರಿಕನ ನೆನೆದರೆ, ಕೆಂಚ ಕರಿಕನಾಗಬಲ್ಲನೇ? ಕರಿಕ ಕೆಂಚನ ನೆನೆದರೆ, ಕೆಂಚನಾಗಬಲ್ಲನೇ? ದರಿದ್ರನು ಸಿರಿವಂತನ ನೆನೆದರೆ ಸಿರಿವಂತನಾಗಬಲ್ಲನೇ? ಸಿರಿವಂತ ದರಿದ್ರನ ನೆನೆದರೆ, ದರಿದ್ರನಾಗಬಲ್ಲನೆ? ಮುಂದಿನ ಪುರಾತನರ ನೆನೆದು ಧನ್ಯನಾದೆನೆಂಬ ಮಾತಿನ ರಂಜಕರನೇನೆಂಬೆ ಕೂಡಲಸಂಗಮದೇವಾ?

೧೨೫. ಬೀಜದೊಳಗಿಹ ವೃಕ್ಷ ಫಲವ ಸವಿಯಬಹುದೇ? ಮಳಿವಸಿಯೊಳಿಪ್ಪ ಹುರಮಂಜಿ ಮುತ್ತುಗಳಂ ಸರಗೊಳಿಸಿ, ಕೊರಳೊಳು ಧರಿಸಬಹುದೇ? ಹಾಲೊಳಗಿರ್ಪ ತುಪ್ಪವು ಅರಸಿದರೆ, ಸಿಕ್ಕುವುದೇ? ಕಬ್ಬಿನೊಳಗಿರ್ಪ ಬೆಲ್ಲವು ಕಣ್ಣಿಗೆ ಕಾಣಿಸುವುದೇ? ತನ್ನೊಳಗಿರ್ಪ ಶಿವ ತತ್ವವು ನೆನೆದಾಕ್ಷಣವೆ ಅನುಭವಕ್ಕೆ ಬರ್ಪುದೇ? ಭಾವಿಸಿ ತಿಳಿದು ಮಥಿಸಿ ಪ್ರಯೋಗಾಂತರದಿಂ ಪ್ರಸನ್ನತ್ವಮಂ ಮಾಡಿಕೊಂಡು ತದನು ಭವ ಸುಖದೊಳೋಲಾಡುವದು ಅತಿ ಚತುರನಾದ ಶಿವಶರಣಂಗಲ್ಲದೆ, ಉಳಿದವರ್ಗುಂಟೇ, ಮಹಾಘನ ದೊಡ್ಡ ದೇಶಿಕಾರ್ಯ ಗುರುಪ್ರಭುವೇ?

೧೨೬. ಶಿವನ ನೆನೆದಡೆ, ಭವ ಹರಿವುದೆಂಬ ವಿವರಗೇಡಿಗಳ ಮಾತ ಕೇಳಲಾಗದು. ಅದೇನು ಕಾರಣವೆಂದಡೆ, ಜ್ಯೋತಿಯ ನೆನೆದರೆ, ಕತ್ತಲೆ ಹರಿವುದೇ? ಮೃಷ್ಟಾನ್ನವ ನೆನೆದರೆ, ಹೊಟ್ಟೆ ತುಂಬುವುದೇ? ರಂಭೆಯ ನೆನೆದರೆ, ಕಾಮದ ಕಳವಳ ಹಿಂಗುವುದೇ? ನೆನೆದಡಾಗದು. ನಿರ್ಧರಿಸಿ ದ್ವಯ ಕುಳವಳಿದು ಬೆರೆಯಬಲ್ಲಡೆ, ಸದ್ಗುರುಸಿದ್ಧ ಸೋಮೇಶ್ವರ ಲಿಂಗವು ತಾನೆ.

೧೨೭. ಅಂತರಂಗದಲ್ಲಿ ಅರಿವಾದಡೇನಯ್ಯ, ಬಹಿರಂಗದಲ್ಲಿ ಕ್ರಿಯಿಲ್ಲದನ್ನಕ್ಕ? ದೇಹವಿಲ್ಲದಿರ್ದಡೆ ಪ್ರಾಣಕ್ಕಾಶ್ರಯ ಉಂಟೇ? ಕನ್ನಡಿಯಿಲ್ಲದಿರ್ದಡೆ ತನ್ನ ಮುಖವ ಕಾಣಬಹುದೇ? ಸಾಕಾರ ನಿರಾಕಾರ ಏಕೋ ದೇವ ನಮ್ಮ ಕೂಡಲಸಂಗಯ್ಯ.

೧೨೮. ಕ್ರಿಯೆ ಇಲ್ಲದ ಭಕ್ತ ಮನುಜ. ಕ್ರಿಯೆ ಇಲ್ಲದ ಜಂಗಮ ರಾಕ್ಷಸ. ಕ್ರಿಯೆ ಇಲ್ಲದ ಪ್ರಸಾದಿ ಯವನ. ಕ್ರಿಯೆ ಇಲ್ಲದ ಶರಣ ಅಜ್ಞಾನಿ. ಕ್ರಿಯೆ ಇಲ್ಲದ ಲಿಂಗೈಕ್ಯ ಜನನಕ್ಕೊಳಗು ನೋಡಾ ಕೂಡಲ ಚನ್ನಸಂಗಮದೇವಾ.

೧೨೯. ಕ್ರಿಯಾ ಮಥನವಿಲ್ಲದೆ ಕಾಣಬಂದುದೇ ಇಕ್ಷುವಿನೊಳಗಣ ಮಧುರ? ಕ್ರಿಯಾ ಮಥನವಿಲ್ಲದೆ ಕಾಣಬಂದುದೇ ತಿಲದೊಳಗಣ ತೈಲ? ಕ್ರಿಯಾ ಮಥನವಿಲ್ಲದೆ ಕಾಣಬಂದುದೇ ಕ್ಷೀರದೊಳಗಣ ತುಪ್ಪ? ಕ್ರಿಯಾ ಮಥನವಿಲ್ಲದೆ ಕಾಣಬಂದುದೇ ಕಾಷ್ಠದೊಳಗಣ ಅಗ್ನಿ? ಇದು ಕಾರಣ ನಮ್ಮ ಗುಹೇಶ್ವರ ಲಿಂಗವ ತನ್ನೊಳರಿದೆನೆಂಬ ಮಹಾಂತಂಗೆ ಸತ್ಕ್ರಿಯಾಚರಣೆಯೇ ಸಾಧನ ಕಾಣೆ ಭೋ.

೧೩೦. ಭೂಪ ಗೋಪನ ನೆನೆದರೆ ಗೋಪನಾಗಬಲ್ಲನೇ? ಆಂದಿನ ಗಣಂಗಳ ಕಂಡು ಇಂದಿನ ಜೀವಿಗಳು ನೆನೆನೆನೆದು ಧನ್ಯರಾದೆವೆಂಬ ಪರಿಯ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

ಪರಮಾತ್ಮನಲ್ಲಿ ವಿಶ್ವಾಸವನ್ನಿಟ್ಟು ಮಾಡುವುದು.

೧೩೧. ಎಲಪೋ, ಎಲಪೋ, ಪಾಪಕರ್ಮವ ಮಾಡಿದವನೇ, ಎಲಪೋ, ಎಲಪೋ, ಬ್ರಹ್ಮಹತ್ಯವ ಮಾಡಿದವನೇ, ಒಮ್ಮೆ ಶರಣೆನ್ನಲಪೋ. ಒಮ್ಮೆ ಶರಣೆಂದಡೆ, ಪಾಪಕರ್ಮ ಓಡುವವು. ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಗಳೇ ಇದ್ದವು. ಓರ್ವಂಗೆ ಶರಣೆನ್ನು ನಮ್ಮ ಕೂಡಲಸಂಗಮದೇವಂಗೆ.

೧೩೨. ಶಿವಭಕ್ತಿ ಎಂಬುದು ಯುಕ್ತಿಯ ಪರಿಯಂತಲ್ಲ. ಮೂಗರು ಕಂಡ ಕನಸಿನಂತಿಪ್ಪುದು ಕಾಣಿರೋ. ಹೇಳಿ ಕೇಳಿ ಮಾಡುವುದು ಯುಕ್ತಿ

ಭಕ್ತಿ. ಸಾಧಕದಿಂದ ಮಾಡುವುದು ಅಭ್ಯಾಸ ಭಕ್ತಿ. ಮನ ಕೂರ್ತು ಮಾಡುವುದು ಮುಕ್ತಿ ಭಕ್ತಿ. ಕೇಡಿಲ್ಲದೆ ಮಾಡುವುದು ನಿತ್ಯಭಕ್ತಿ. ಇದ್ದಂತಿದ್ದು ನಿಜವಪ್ಪದು ನಿಜಭಕ್ತಿ. ಈ ನಿಜಭಕ್ತಿಯಲ್ಲಿ ಭರಿತರು ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು.

೧೩. ನಂಬಿ ಕರೆದಡೆ, 'ಟ' ಎಂಬ ಶಿವನು. ನಂಬದೆ ಕರೆದಡೆ 'ಟ' ಎಂಬನೇ ಶಿವನು? ನಂಬಲರಿಯರು, ನಚ್ಚಲರಿಯರು, ಡಂಭಿನ ಭಕ್ತರು. ನಂಬದೆ ನಚ್ಚದೆ ಕರೆದಡೆ ಶಂಭು ಮೌನದಲ್ಲಿಪ್ಪ ಕೂಡಲಸಂಗಮದೇವ.

೧೪. ಒಲವಿಲ್ಲದ ಪೂಜೆ, ನೇಹವಿಲ್ಲದ ಮಾಟ, ಆ ಪೂಜೆಯು ಆ ಮಾಟವು ಚಿತ್ರದ ರೂಹು ಕಾಣಿರಣ್ಣಾ. ಚಿತ್ರದ ರಬ್ಬು ಕಾಣಿರಣ್ಣಾ. ಕಪ್ಪಿದರೆ ಸುಖವಿಲ್ಲ. ಮೆಲಿದರೆ ಸವಿ ಇಲ್ಲ. ಕೂಡಲಸಂಗಮದೇವ ನಿಜವಿಲ್ಲದವನ ಭಕ್ತಿ.

೧೫. ಪರಮ ಪ್ರಭುವೇ ನೀ ಮುನಿದೆನ್ನ ಮರ್ತ್ಯಲೋಕದೊಳಗಿರಿಸಿದರೆ ಆನು ಸೈರಿಸಿದೆನಯ್ಯ. ಕುಲಮದ ಫಲಮದವಿದೇನಯ್ಯ? ದರುಶನ ಭ್ರಾಂತಿ ಇದೇನಯ್ಯ? ಕ್ರಿಯಾ ಕರ್ಮ ಸೂತಕವಿದೇನಯ್ಯ? ಲಿಂಗಯ್ಯ ನಿಮ್ಮ ನಂಬಿದೆನಯ್ಯ. ಇನ್ನು ಕಲಿಯುಗದಲ್ಲಿ ಬಳಸಿದರೆ ಕೂಡಲಸಂಗಮದೇವಾ ನಿಮ್ಮ ರಾಣಿವಾಸದಾಣೆ.

೧೬. ಕೆರೆಯೊಡೆದಬಳಿಕ ತುಂಬು ತಡೆಯಬಲ್ಲುದೇ? ಒಡೆದ ಮಡಕೆಗೆ ಒತ್ತು ಮಣ್ಣ ಕೊಟ್ಟರೆ ನಿಲ್ಲಬಲ್ಲುದೇ? ಮುತ್ತೊಡೆದರೆ ಹತ್ತಬಲ್ಲುದೇ? ಸುರಚಾಪ ನಿರ್ಧರವಾಗಬಲ್ಲುದೇ? ಚಿತ್ತು ಒಡೆದರೆ ಭಕ್ತಿ ನೆಲೆಗೊಳ್ಳದು. ಭಕ್ತಿ ಬೀಸರವಾದರೆ ಮುಕ್ತಿ ಎಂಬುದು ಎಂದೆಂದಿಗೂ ಇಲ್ಲವಾಗಿ. ಇದುಕಾರಣ ಎನ್ನ ಚಿತ್ತ ಗುಹೇಶ್ವರಲಿಂಗವನಪ್ಪಿ ಉಭಯವಾಗದೆ ಭಕ್ತಿ ಬೀಸರವಿಲ್ಲದೆ ಎನ್ನಿದಿರೊಳಗಿರುವ ಸಂಗನಬಸವಣ್ಣನ ನಿಜ ಚಿದ್ಬೆಳಗಿನೊಳಗೆ ಕೂಡಿ ನಿಲವು ನೆಲಲ ಕೂಡಿ ಬಯಲ ಸೇರಿದಂತೆ ನಿತ್ಯಸಿರ್ಮುಕ್ತನಾದೆನಲ್ಲದೆ ಎಲ್ಲರ ಪರಿಯಂತಲ್ಲ. ಎನ್ನ ಪರಿ ಬೇರೆ ನೋಡಾ ಸಂಗನಬಸವಣ್ಣ.

೧೭. ಸರ್ಪನ ಸಂಯೋಗ, ಜ್ಯೋತಿಯ ಪತಂಗನ ಬೆಸನದಂತೆ, ಮನದ ಮದವರಿಯದೆ, ನಿಮ್ಮ ಕೃಪೆಯಿಂದ ನಿನ್ನ ನೆನೆವೆ. ಎನ್ನ

ಭಾವದ ಕೊನೆಯ ಮೊನೆಯಮೇಲೆ ಮನೆಯ ಮಾಡಿಕೊಂಡಿಪ್ಪೆಯಯ್ಯ, ಕೂಡಲಸಂಗಮದೇವ ನೀನೆನ್ನ ಪ್ರಾಣನಾಥನಾಗಿ.

೧೮. ಮದ್ದು ತಿಂದ ಮನುಜನಂತೆ ವ್ಯರ್ಥ ಹೋಗದಿರಾ ಮನವೇ. ವರ್ಷದಲಾದರೂ ಒಂದು ದಿವಸ ಶಿವರಾತ್ರಿಯ ಮಾಡು ಮನವೇ. ಕಪಿಲಸಿದ್ಧ ಮಲ್ಲೇಶನೆಂಬ ಇಷ್ಟಲಿಂಗಕ್ಕೆ.

ಭಾವಶುದ್ಧವಾಗಿ ಮಾಡುವುದು.

೧೯. ಭೂಮಿ ಒಂದೆಂದಡೆಂಬ ವಚನವಿದೆ. ಹಿಂದೆ ಕಾಯ ಸೊನೆಯಿರತಲ್ಲದೆ ಹಣ್ಣಿನ ರಸ ಚಿನ್ಹದೋರದು. ಕಾಯ ಕರ್ಮವ ಮಾಡಿ ಜೀವ ಜ್ಞಾನವನರಿದು ತ್ರಿವಿಧ ಭಾವ ಶುದ್ಧವಾಗಿಯಲ್ಲದೆ ಕಾಣಲಿಲ್ಲ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವ.

೨೦. ಸತ್ಯವಿಲ್ಲದ ಭಕ್ತಿ ಹತ್ತುಸಾವಿರ ಕಾಲ ಮಾಡಿದಡೇನು? ನಿಷ್ಠೆ ಇಲ್ಲದ ಪೂಜೆಯನೇಸು ಕಾಲ ಮಾಡಿದಡೇನು, ಭಾವ ನೆಲೆಗೊಳ್ಳದನ್ನಕ್ಕರ? ನಿಜವಿಲ್ಲದ ಪ್ರಸಾದವನೇಸು ಕಾಲ ಕೊಂಡಡೇನು? ಅಭ್ಯಾಸವಾಯಿತ್ತಲ್ಲದೆ ಸಹಜವಲ್ಲ ಸಮ್ಮತವಲ್ಲ. ಒಬ್ಬರ ಕಂಡೊಬ್ಬರು ಮಾಡುವರಲ್ಲದೆ ತಮ್ಮ ತಾವು ವಿಚಾರಿಸಿಕೊಳ್ಳಲರಿಯರು. ಇಂತೀ ವಿವರವನರಿಯದ ಅಜ್ಞಾನಿಗಳಿಗೆ ಭಕ್ತಮಹೇಶ್ವರರೆನಲಾಗದಯ್ಯ. ಕೂಡಲಚನ್ನಸಂಗಮದೇವಾ ನೀ ಸಾಕ್ಷಿಯಾಗಿ ಛೀ ಎಂಬೆನು.

೨೧. ಆಗುವದಾದರೆ ನಿನ್ನ ಪೂಜೆಯದೇಕೊ ಲಿಂಗಯ್ಯ? ಯಥಾ ಭಾವಸ್ತಥಾ ದೇವ ಎಂಬ ಭಾವವಿದ್ದಡೆಯಲ್ಲಿ, ಆದಂತೆ ಆಗಲಿ ಹೋದಂತೆ ಹೋಗಲಿ. ನಿಮಗೆ ಪೂಜಿಸಿದವರಿಗೆ ಸಂಪದಾದಿ ಮಹದೈಶ್ವರ್ಯ ತಪ್ಪದು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೨. ಆವಾವ ತ್ರಿಗುಣ ಭೇದದಲ್ಲಿ ವಿಶ್ವಾಸವ ಮಾಡಿದಡೂ ಭಾವ ಶುದ್ಧವಾಗಿರಬೇಕು. ಯೋಗಿಯಾದಲ್ಲಿ ದೇಹ ಧರ್ಮವ ಮರೆದು, ಭೋಗಿಯಾದಲ್ಲಿ ಸಂಚಿತವ ಮರೆದು, ತ್ಯಾಗಿಯಾದಲ್ಲಿ ನೆನಹು ಹಿಂಚು

ಗೊಡುವುದು ಮುಂತಾಗಿರಬೇಕು. ಇಂತೀ ಯೋಗಿ ಭೋಗಿ ತ್ಯಾಗಿ ಇಂತೀ ತ್ರಿವಿಧವನೊಳಕೊಂಡು ವಿರಕ್ತನಾದಲ್ಲಿ ಆತನಡಿಗೆರಗುವೆನೆಂದ ಅಂಬಿಗರ ಚೌಡಯ್ಯ.

೧೪೩. ಭಾವ ಬಲಿದಲ್ಲಿ ಲಿಂಗವನಿಸಿತ್ತು. ಭಾವ ವಿಭಾವವಾದಲ್ಲಿ ಪಾಷಾಣವೆನಿಸಿತ್ತು. ಭಾವ ನಿರ್ಭಾವವಾದಲ್ಲಿ ಏನೆಂದೆನಿಸದು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

ಗುರುಲಿಂಗ ಜಂಗಮಕ್ಕೊೀಸ್ಕರ ಮಾಡುವುದು.

೧೪೪. ನಾನು ಆರಂಭವ ಮಾಡುವೆನಯ್ಯ ಗುರು ಪೂಜೆಗೆಂದು. ನಾನು ವಿವಹಾರವ ಮಾಡುವೆನಯ್ಯ ಲಿಂಗಾರ್ಚನೆಗೆಂದು. ನಾನು ಪರಸೇವೆಯ ಮಾಡುವೆನಯ್ಯ ಜಂಗಮ ದಾಸೋಹಕ್ಕೆಂದು. ನಾನಾ ಪಾವ ಕರ್ಮಂಗಳ ಮಾಡಿದಡೆಯೂ, ಆ ಕರ್ಮ ಫಲ ಭೋಗವ ನೀ ಕೊಡುವೆ ಎಂಬುದ ನಾ ಬಲ್ಲೆನು. ನೀ ಕೊಟ್ಟ ದ್ರವ್ಯವ ನಿಮಗಲ್ಲದೆ, ಮತ್ತೊಂದು ಕ್ರಿಯೆಯ ಮಾಡೆನು. ನಿಮ್ಮ ಸೊಮ್ಮು ನಿಮಗೆ ಸಲ್ಲಿಸುವೆನು ನಿಮ್ಮಾಣೆ ಕೂಡಲಸಂಗಮದೇವ.

೧೪೫. ಕೂಳು ಪ್ರಸಾದವೆಂದು ನುಡಿವ ಜಾಳು ಮಾತ ಕೇಳಿ ಕೂಳಿಂಗೆ ಆಳಾಗಿ ಬೀಳಾದ ಬೇಳುವೆಯಲಾಳಿದ ಗುರುಲಿಂಗ ಜಂಗಮದ ಪ್ರಸಾದದ ನೆನಹು. ಪ್ರಸಾದದಲ್ಲಿ ಪ್ರಸನ್ನನಾದ ಪ್ರಸಾದ ಲಿಂಗವ ಪ್ರಸನ್ನತೆಯ ಪ್ರಸಾದದಿಂದ ಜನಿಸಿದಾತ ಜಂಗಮ. ಆ ಜಂಗಮದ ಮುಖದಿಂದ ತೋರಿತ್ತು ಪ್ರಸಾದ. ಇದುಕಾರಣ ಗುರು ಲಿಂಗ ಜಂಗಮ ಪ್ರಸಾದ ಲಿಂಗಕ್ಕು ಜಂಗಮ ಪ್ರಸಾದ. ಇದನರಿದು ಪ್ರಸಾದವೇ ಪ್ರಾಣವಾಗಿರಬಲ್ಲಡೆ ಸೌರಾಷ್ಟ್ರ ಸೋಮೇಶ್ವರ ಲಿಂಗವೆಂದೆಂಬೆನು.

೧೪೬. ಒಲ್ಲೆನೆಂಬುದು ವೈರಾಗ್ಯ. ಒಲಿವೆನೆಂಬುದು ಕಾಯ ಗುಣ. ಅವ ಪದಾರ್ಥವಾದರೇನು? ತಾನಿದ್ದೆಡೆಗೆ ಬಂದುದ ಲಿಂಗಾರ್ಪಿತವ ಮಾಡಿ ಭೋಗಿಸುವದೇ ಆಚಾರ. ಕೂಡಲಸಂಗಮದೇವನ ನೊಲಿಸ ಬಂದ ಪ್ರಸಾದಕಾಯವ ಕೆಡಿಸಲಾಗದು.

೧೪೭. ಲಿಂಗಕ್ಕೆಂದೇ ನೆನೆವೆ. ಲಿಂಗಕ್ಕೆಂದೇ ಮಾಡುವೆ. ಲಿಂಗಕ್ಕೆಂದೇ ಕೂಡುವೆನು ನಾನಯ್ಯ. ಸಕಲ ಪದಾರ್ಥಂಗಳ ಲಿಂಗಕ್ಕೆಂದೇ ಭಾವಿಸುವೆ. ಅಂಗ ಗುಣಂಗಳನರಿಯೆನಯ್ಯ. ಲಿಂಗಕ್ಕೆಂದೇ ಕಾಮಿಸುವೆನು ನಿಃಕಾಮಿಯಾಗಿ. ಎನ್ನ ದೇಹೇಂದ್ರಿಯ ಮನ ಪ್ರಾಣಾದಿಗಳು ಲಿಂಗದ ಸತಿಯರಾಗಿ ಲಿಂಗಕ್ಕೆಂದೇ ಬಯಸಿ, ಲಿಂಗ ಪ್ರಾಣಿಗಳಾದ ಕಾರಣ, ಲಿಂಗಕ್ಕೆಂದೇ ಕೈಕೊಂಬೆನು. ಅನರ್ಪಿತವನರಿಯೆ ಕೂಡಲ ಸಂಗಮದೇವಾ.

೧೪೮. ತನು ಮನವ ನಿತ್ಯವೆಂಬರು. ತನು ಮನ ನಿತ್ಯವೆಂಬ ಮಾತ ಕೇಳಲಾಗದು. ಅಂಬಲಿಯನಿಕ್ಕುವರೆಲ್ಲರು ಭಕ್ತರೇ? ಕಂಬಳಿಯ ಕೊಟ್ಟವರೆಲ್ಲರು ಭಕ್ತರೇ? ಧರ್ಮಾರ್ಥ ಕಾಮ ಮೋಕ್ಷವೆಂಬ ಚತುರ್ವಿಧ ಪದವಿಗಳಲ್ಲದೆ ಗುರು ಲಿಂಗ ಜಂಗಮಕ್ಕೆ ತನು ಮನ ಧನವನಿತ್ತು ಕೆಂಚಿತ್ತು ಸಂಶಯವಿಲ್ಲದೆ ತನ್ನ ಹರಿಯ ತಾನರಿಯದನ್ನಕ್ಕರ ನಮ್ಮ ಕೂಡಲಚನ್ನಸಂಗಯ್ಯನಲ್ಲಿ ತ್ರಿವಿಧ ವಂಚಕರನೆಂತು ಸದ್ಭಕ್ತನೆಂಬೆನಯ್ಯ? ಎನಲಾಗದು.

೧೪೯. ಮಾಡುವೆನಯ್ಯ ಪೂಜೆಗೆಂದು ದ್ರವ್ಯನಾಶವನು. ನೋಡುವೆನಯ್ಯ ಲಿಂಗ ಸಂಭ್ರಮಕ್ಕೆಂದು ಪೂದೋಟಂಗಳ. ಹಾಡುವೆನಯ್ಯ ನಾಟ್ಯರಚನೆಗೆಂದು ಗಾನವ. ಕೊಡುವೆನಯ್ಯ ಕಪಿಲಸಿದ್ಧಮಲ್ಲಿಕಾರ್ಜುನ ಇಷ್ಟಲಿಂಗದಲ್ಲಿ.

೧೫೦. ಸುಳಿವ ಜಂಗಮವು ಕಾಲಿಲ್ಲದೆ ಸುಳಿಯಬೇಕು. ಮಾಡುವ ಭಕ್ತನು ಕೈಯಿಲ್ಲದೆ ಮಾಡಬೇಕು. ಸುಳಿವ ಜಂಗಮಕ್ಕೆ ಕಾಲಿದ್ದರೇನಯ್ಯ? ಅನ್ಯಗೃಹಕ್ಕೆ ಗಮನಿಸದಿರ್ದೊಡೆ ಸಾಕು. ಮಾಡುವ ಭಕ್ತಂಗೆ ಕೈ ಇರ್ದಡೇನಯ್ಯಾ? ಗುರು ಲಿಂಗ ಜಂಗಮಕ್ಕಲ್ಲದೆ, ಮಾಡದಿರ್ದೊಡೆ ಸಾಕು. ಈ ಸುಯಿಧಾನದ ಹೊಲಬನರಿಯರು. ಧರ್ಮವನಿವರೆತ್ತಬಲ್ಲರೋ? ಭಕ್ತ ಜಂಗಮದ ನಿಲವು ದಾನ ಧರ್ಮದ ಕೂಟವು, ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಏಕಾರ್ಥವು. ಇದೇ ಸರ್ವ ಸಮ್ಮತ ನಿರ್ಣಯವು.

ಇಂದ್ರಿಯಗಳನ್ನು ವ್ಯಥೆಗೊಳಿಸಬಾರದು.

೧೫೧. ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲಡೆ ಕಾಯದ ಸಂಗವೇ ಲೇಸು ಕಂಡಯ್ಯ. ತಾಯಿ ರಕ್ಕಸಿಯಾದಂತೆ ಕಾಯವಿಕಾರವು. ಚನ್ನಮಲ್ಲಿಕಾರ್ಜುನಯ್ಯ ನೀನೊಲಿದವರು ಕಾಯಗೊಂಡಿದ್ದರೆನಬೇಡ.

೧೫೨. ಕೈದುಮೊನೆ ಏರುವುದಕ್ಕೆ ಮುನ್ನವೇ ಕಟ್ಟಬಲ್ಲಡೆ ಕೈದೇನ ಮಾಡುವುದು? ಹಾವು ಬಾಯಿ ಬಿಡುವುದಕ್ಕೆ ಮೊದಲೆ ಹಿಡಿದ ಮತ್ತೆ ವಿಷವೇನ ಮಾಡುವುದು? ಮನವಿಕಾರಿಸುವುದಕ್ಕೆ ಮೊದಲೆ ಮಹದಲ್ಲಿ ನಿಂದ ಮತ್ತೆ ಇಂದ್ರಿಯಂಗಳೇನ ಮಾಡುವವು ಜಾಂಬೇಶ್ವರಾ?

೧೫೩. ಅಂಗವೇ ಭೂಮಿಯಾಗಿ ಲಿಂಗವೇ ಬೆಳೆಯಾಗಿ ವಿಶ್ವಾಸವೆಂಬ ಬಿತ್ತು ಬಲಿದು ಉಂಡು ಸುಖಿಯಾಗಿರಬೇಕೆಂದ ಕಾಮ ಭೀಮ ಜೀವದನಮೊಡೆಯ.

೧೫೪. ಪಂಚೇಂದ್ರಿಯ ಸಪ್ತಧಾತುವನತಿಗಳೆದಲ್ಲಿ ಫಲವೇನು? ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ವಿಷಯನತಿಗಳೆದಲ್ಲಿ ಫಲವೇನು? ಇವೆಲ್ಲವ ಕೊಂದ ಪಾಪ ನಿಮ್ಮ ತಾಗುವುದು ಗುಹೇಶ್ವರಾ.

ವಿಧ್ಯಃ—ಸಕಲ ಕರಣಂಗಳು ಲಿಂಗದಲ್ಲಿ ಅಡಗಿ ಲಿಂಗೈಕ್ಯವಾದಡೆ, ಆದೇ ಲಿಂಗೈಕ್ಯವು. ಅದಲ್ಲದೆ ಕಳೆಯಬಾರದ ಇಂದ್ರಿಯ ವಿಷಯ ಕರಣಾದಿ ವೃತ್ತಿಗಳ ಕಳೆದು ಪಿಡಿದು ನೋಯಿಸಿ ಲಿಂಗವ ಬೆರಸಿಹೆನೆಂದಡೆ ಎಂದೆಂದಿಗೂ ಅಸಾಧ್ಯವೆಂಬುದೀ ವಚನಾರ್ಥ.

೧೫೫. ಭಕ್ತನ ಮನ ಹೆಣ್ಣಿನೊಳಗಾದರೆ ವಿವಾಹವಾಗಿ ಕೂಡುವುದು. ಭಕ್ತನ ಮನ ಮಣ್ಣಿನೊಳಗಾದರೆ ಕೊಂಡು ಆಲಯವ ಮಾಡುವುದು. ಭಕ್ತನ ಮನ ಹೊನ್ನಿನೊಳಗಾದರೆ ಬಳಲಿ ದೊರಕಿಸುವುದು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೧೫೬. ಒಲ್ಲೆನೆಂಬುದು ವೈರಾಗ್ಯ. ಒಲಿವೆನೆಂಬುದು ಕಾಯಗುಣ. ಆವ ಪದಾರ್ಥವಾದರೇನು, ತಾನಿದ್ದೆಡೆಗೆ ಬಂದುದ ಲಿಂಗಾರ್ಪಿತವ ಮಾಡಿ ಭೋಗಿಸುವುದೇ ಸದಾಚಾರ. ಕೂಡಲಸಂಗಮದೇವರ ಒಲಿಸಬಂದ ಪ್ರಸಾದಕಾಯವ ಕೆಡಿಸಲಾಗದು.

೧೫೭. ಅರುಹಿನ ಕರುಹನರಿಯದೆ ತನುವ ಕರಗಿಸಿ, ಮನವ ಬಳಲಿಸಿದಡೇನು ಪ್ರಯೋಜನವು? ಇಂದ್ರಿಯ ನಿಗ್ರಹವ ಮಾಡಿ ವಿಷಯಂಗಳ ಬಂಧಿಸಿ ಆತ್ಮನಿಗೆ ಬಂಧನವ ಮಾಡಿದರೆ, ಆತ್ಮದ್ರೋಹ ಕಾಣಿರೋ. ಹೀಗೆ ಉದ್ದೇಶದಿಂದ ತನುವ ಒಣಗಿಸಿದರೆ ಹಸಿಯ ಮರನ ತಂದು ಬಿಸಿಲಿಗೆ ಹಾಕಿದಂತೆ. ತನುವ ಒಣಗಿಸಿದರೇನಯ್ಯ, ಮನದ ಮಲಿನವು ಹಿಂಗದನ್ನಕ್ಕರ? ಭವ ಹಿಂಗಿತ್ತು ಎಂಬ ಭಂಡರನೇನೆಂಬೆನಯ್ಯ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ?

೧೫೮. ಇಂದ್ರಿಯ ನಿಗ್ರಹ ಮಾಡಿದರೆ, ಹೊಂದುವವು ದೋಷಂಗಳು. ಮುಂದೆ ಬಂದು ಕಾಡುವವು ಪಂಚೇಂದ್ರಿಯಂಗಳು. ಸತಿ ಪತಿ ರತಿ ಸುಖವ ಬಿಟ್ಟರೇ ಸಿರಿಯಾಳ ಚಂಗಳೆಯರು? ಸತಿ ಪತಿ ರತಿ ಸುಖ ಭೋಗೋಪಭೋಗವ ಬಿಟ್ಟರೇ ಸಿಂಧುಬಲ್ಲಾಳನು? ನಿಮ್ಮ ಮುಟ್ಟಿ, ಪರಧನ ಪರಸ್ತ್ರೀಗೆಳಸಿದಡೆ, ನಿಮ್ಮ ಚರಣಕ್ಕೆ ದೂರ ಕೂಡಲಸಂಗಮದೇವಾ.

ಲಿಂಗಭೋಗೋಪಭೋಗಿಯಾಗಿರುವುದು.

೧೫೯. ಕಣ್ಣೊಳಗೆ ಕಣ್ಣಿದ್ದು, ಕಾಣಲರಿಯರಯ್ಯಾ! ಕಿವಿಯೊಳಗೆ ಕಿವಿ ಇರ್ದು ಕೇಳಲರಿಯರಯ್ಯಾ! ಘ್ರಾಣದೊಳಗೆ ಘ್ರಾಣವಿರ್ದು ಘ್ರಾಣಿಸಲರಿಯರಯ್ಯಾ! ಜಿಹ್ವೆಯೊಳಗೆ ಜಿಹ್ವೆ ಇರ್ದು ರುಚಿಸಲರಿಯರಯ್ಯಾ! ತ್ವಕ್ಕಿನೊಳಗೆ ತ್ವಕ್ಕಿರ್ದು ಸ್ಪರ್ಶನವ ಮಾಡಲರಿಯರಯ್ಯಾ! ಪ್ರಾಣದೊಳಗೆ ಪ್ರಾಣವಿರ್ದು ಪ್ರಾಣನ ಪರಿಯನರಿಯರಯ್ಯಾ! ಕಾಯದೊಳಗೆ ಕಾಯವಿರ್ದು ಬಿಡದು, ಬೇರಾಗದು. ಕೂಡಲಚನ್ನಸಂಗಮದೇವಾ, ನೀವಿಕ್ಕಿಹ ಅಣಕದ ತೊಡಕಿನ ಭೇದವ ಭೇದಿಸಬಾರದಯ್ಯಾ.

೧೬೦. ನಡೆವ ನುಡಿವ ಚೈತನ್ಯದ ಒಡಲ ಗುಣವುಳ್ಳನ್ನಕ್ಕರ ಅರಿಗೆಯು ಕಾಣಬಾರದು. ಕೇಳುವ ಶ್ರೋತ್ರ, ನೋಡುವ ನಯನ, ವಾಸಿಸುವ ಘ್ರಾಣ, ರುಚಿಸುವ ಜಿಹ್ವೆ, ಸೋಂಕುವ ತ್ವಕ್ಕು, ಇದಕ್ಕೆ ಸಂಶ

ಯವನಂದು, ನಾ ಕೇಳಿದೆ, ನಾ ನೋಡಿದೆ, ನಾ ವಾಸಿಸಿದೆ, ನಾ ರುಚಿಸಿದೆ, ನಾ ಮುಟ್ಟಿದೆನೆಂಬುದನಳಿದು ಕೇಳುತ್ತ, ನೋಡುತ್ತ, ವಾಸಿಸುತ್ತ, ರುಚಿಸುತ್ತ, ಸೋಂಕಿಸುತ್ತ, ಲಿಂಗಾರ್ಪಿತವ ಮಾಡಿ ಲಿಂಗ ಭೋಗೋಪಭೋಗಿಯಾದ ಪರಮ ಪ್ರಸಾದಿಗೆ ಸರ್ವಾಂಗವು ಶುದ್ಧವಾಯಿತ್ತಯ್ಯಾ. ಕಾಯತ್ರಯಂಗಳ ಜೀವತ್ರಯಂಗಳ ಭಾವತ್ರಯಂಗಳನೊಂದುಮಾಡಿ ಸುಖ ದುಃಖವ ಸಗುಣ ನಿರ್ಗುಣಂಗಳೆಂಬುಭಯ ಲಿಂಗದಲ್ಲೇಕವ ಮಾಡಿ, ಅಹುದಲ್ಲ, ಬೇಕು ಬೇಡೆಂಬ ಸಂಶಯಮುಂ ಕಳೆದು ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಅದಿ ಪುರಾತರೊಳಗಾಗಿ ಈ ಲಿಂಗಾಂಗ ಸಂಗ ಸಮರಸವೆಂಬ ಸಕೀಲದೊಳಿೂಡಗೂಡಿದ ಮಹಾಪ್ರಸಾದಿಯ ಪಥವಿದು.

೧೬೧. ಇಂದ್ರಿಯದ ಬಾಗಿಲಲ್ಲಿ ಮನವಿಪ್ಪುದು. ಮನದ ಮುಂಬಾಗಿಲಲ್ಲಿ ಭೋಗಲಿಂಗವಿದ್ದು, ಸಕಲ ಭೋಗಂಗಳ ಭೋಗಿಸಿ ಪ್ರಸಾದವ ಕರಣಂಗಳಿಗೆ ಕೊಟ್ಟು ಎನ್ನ ಮನವ ತನ್ನತ್ತ ಸೆಳೆದು ಮರಹ ಮಾಣಿಸಿ ಕುರುಹಳಿದ ತೆರಹುಗೊಂಡ ಸೌರಾಷ್ಟ್ರಸೋಮೇಶ್ವಲಿಂಗವ ಬಲ್ಲರೆ ಬಲ್ಲೆ.

೧೬೨. ಕ್ರಿಯೆ ಇಲ್ಲದ ನಿಃಕ್ರಿಯೆಯನೆಂತು ನಡೆಯಬಹುದಯ್ಯಾ? ಸೀಮೆ ಇಲ್ಲದೆ ನಿಸ್ಸೀಮ ನಾನೆಂತಿರಬಹುದಯ್ಯಾ ? ಮೊದಲಿಲ್ಲದ ಲಾಭವನೆಂತನಬಹುದಯ್ಯಾ ? ಹರಿವ ಮನವ ನಿಲ್ಲೆಂದು ನಿಲಿಸಿ ಜಿಹ್ವೆಯ ಜುಂಜುಕತ್ವವ ಕಳೆದು ಲಿಂಗಭೋಗೋಪಭೋಗಿಯಾದಲ್ಲದೆ ಮೆಚ್ಚುವರೇ ನಿಮ್ಮ ಶರಣರು ಕೂಡಲಚನ್ನಸಂಗಮದೇವಾ ?

೧೬೩. ಅಂಗ ಒಂದಾದ ಬಳಿಕ ಲಿಂಗೇಂದ್ರಿಯಂಗಳಾಚರಿಸಲಾಗದು. ಅಂಗೇಂದ್ರಿಯಂಗಳು ಹೋಗಿ ಲಿಂಗೇಂದ್ರಿಯಂಗಳಾಗಿ ಆಚರಿಸುವುದು. 'ಘೃತೋ ಭೂತ್ವಾ ಕಥಂ ಕ್ಷೀರಂ ಭವತ್ಯೇವಂ ವರಾನನೆ' ಎಂಬಾಗವೋಕ್ತಿ ಪುಸಿಯಾಯಿತ್ತೇ ? ಆಗಿ ಆಚರಿಸಿದರೆ ಭವ ಹಿಂಗದು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

ಕಾಯಕವನ್ನು ಮಾಡುವುದು.

೧೬೪. ಒಲ್ಲಿದ ಬಾಣನ ಬಾಗಿಲ ಕಾಯ್ವರವರು ಭೂತಿಗಳೇನಯ್ಯ ? ಅಪ್ಪ ರೇವಣಸಿದ್ಧ ನೀರು ಹೊತ್ತನೆಂಬರು. ನಮ್ಮ ನೀರು ಹೊರುವವರವರು ಕೂಲಿಕಾರರೇನಯ್ಯ ? 'ಸರ್ವೇಷಾಂ ಹೃದಿಸ್ಥ ಚಂದ್ರ ಮೌಲೀ' ಎಂಬ ಶ್ರುತಿವಾಕ್ಯವ ನಂಬು ನಂಬು ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಮುಂದೆ ಎಲೆ ಮನವೆ.

೧೬೫. ಅನ್ಯದೈವವುಳ್ಳ ಭಕ್ತನ ಮನೆಯಾರೋಗಣೆಯು ಅನ್ಯಹಾರವಯ್ಯಾ! ನಂಬಿಗೆ ಇಲ್ಲದ ಭಕ್ತನ ಮನೆಯಾರೋಗಣೆ ಸಂದೇಹದ ಕೂಳು. ಕೊಟ್ಟು ಕೊಂಡು ನೀಡಿ ಮಾಡಿ ಹಮ್ಮು ನುಡಿದ ಭಕ್ತನ ಮನೆಯಾರೋಗಣೆ ಕಾರಿದ ಕೂಳು. ನಿಮ್ಮ ನಂಬಿದ ಸದ್ಭಕ್ತರ ಮನೆಯಾರೋಗಣೆ ಲಿಂಗಾರ್ಪಿತವಯ್ಯಾ. ಅದೆಂತೆಂದೊಡೆ, ಸದಾಚಾರ, ಶಿವಾಚಾರ, ಲಿಂಗಾಚಾರ, ಗಣಾಚಾರ, ಭೃತ್ಯಾಚಾರ, ಸತ್ಕ್ರಿಯಕದಿಂದೆ ಬಂದುದಾಗಿ, ಭಕ್ತಿ ಪದಾರ್ಥವಯ್ಯಾ ಕೂಡಲಚನ್ನಸಂಗಮದೇವಾ.

೧೬೬. ತವನಿಧಿ ಬೆಳೆದವಂಗೆ ಕಣಜದ ಹಂಗುಂಟೇ ? ವಿರಕ್ತಂಗೆ ಆರೈಕೆಗೊಂಬುವರುಂಟೇ ? ಕಾಯಕವ ಮಾಡುವ ಭಕ್ತಂಗೆ ಇನ್ನಾರ ಕಾಡಲೇತಕ್ಕೋ ? ಆ ಗುಣ ಅಮಳೇಶ್ವರಲಿಂಗಕ್ಕೆ ದೂರ.

೧೬೭. ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ ಚಿತ್ತಶುದ್ಧನಾಗಿ ಕಾಯಕವ ಮಾಡುವಲ್ಲಿ ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು, ಮಾರಯ್ಯಪ್ರಿಯ ಅಮಳೇಶ್ವರಲಿಂಗದ ಸೇವೆಯುಳ್ಳನ್ನಕ್ಕರ.

೧೬೮. ಕಾಯಕದಲ್ಲಿ ನಿರುತನಾದಡೆ ಗುರುದರ್ಶನವಾದರೂ ಮರೆಯಬೇಕು. ಲಿಂಗಪೂಜೆಯಾದಡೂ ಮರೆಯಬೇಕು. ಜಂಗಮ ಮುಂದಿದ್ದಡೂ ಹಂಗುಹರಿಯಬೇಕು. ಕಾಯಕವೇ ಕೈಲಾಸವಾದ ಕಾರಣ. ಅಮಳೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು.

೧೬೯. ಕಾಯಕಕಾರದೆ ಮೈಸೊಂಬತನದಿಂದ ಬೇರೆ ಕೂಳ ಗಳಸಲಾರದೆ ಹಸಿದಿಪ್ಪರಯ್ಯ. ಒಡಲು ಸೀರೆಯ ಗಳಿಸಲಾರದೆ ಕಚ್ಚುಟವ

ಕಟ್ಟಿಕೊಂಡಿಪ್ಪರಯ್ಯ. ಮೀಯಲು ಎಣ್ಣೆಯ ಗಳಿಸಲಾರದೆ ಮುಂಡೆ
ಬೋಳಾಗಿಪ್ಪರಯ್ಯ. ದಿಟದಿಂದ ಬಿಡಿಸಲರಿಯದೆ ಸಂಸಾರದ ಶಠೆಯನ್ನ
ಧರಿಸಿಕೊಂಡಿಪ್ಪವಂಗೆ ನಾನಂಜುವೆನಯ್ಯ ಸಕಳೇಶ್ವರಾ.

೧೭೦. ಗುರುವಾದಡೂ ಕಾಯಕದಿಂದವೇ ಜೀವನ್ಮುಕ್ತಿ. ಲಿಂಗ
ವಾದಡೂ ಕಾಯಕದಿಂದವೇ ಶಿಲೆಯ ಕುಲ ಹರಿವುದು. ಜಂಗಮವಾ
ದಡೂ ಕಾಯಕದಿಂದಲೇ ವೇಷದ ಪಾಶವು ಹರಿವುದು. ಇದು ಚನ್ನ
ಬಸವಣ್ಣ ಪ್ರಿಯಚಂದೇಶ್ವರಲಿಂಗದ ಅರಿವು.

೧೭೧. ನೇಮವ ಮಾಡಿಕೊಂಡು ಭಕ್ತರ ಭವನಂಗಳ ಹೊಕ್ಕು
ಕಾಯಕ ಬಿಟ್ಟು ಹೊನ್ನ ಬೇಡಿಹೆನೆಂಬುದು ಕಷ್ಟವಲ್ಲವೇ? ಆ ಗುಣ
ಅಮಳೇಶ್ವರಲಿಂಗಕ್ಕೆ ದೂರ.

ದಾಸೋಹ ಭಾವವುಳ್ಳವನಾಗಿ ಮಾಡುವುದು.

೧೭೨. ಸೋಹಂ ಎಂಬುದದು ಅಂತರಂಗದ ಮದ ನೋಡಯ್ಯ.
ಶಿವೋಹಂ ಎಂಬುದು ಬಹಿರಂಗದ ಮದ ನೋಡಯ್ಯ. ಈ ದ್ವಂದ್ವವ
ನಳಿದು ದಾಸೋಹಂ ಎಂದೆನಿಸಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೧೭೩. ಕೃಷಿ ಕೃತ್ಯ ಆವ ಕಾಯಕದಿಂದಾದೊಡೇನು? ತನು
ಮನ ಬಳಲಿಸಿ ಗಳಿಸಿ ತಂದು, ಗುರು ಲಿಂಗ ಜಂಗಮಕ್ಕೆ ವೆಚ್ಚಿಸಿ ದಾಸೋ
ಹವ ಮಾಡುವ ಪರಮ ಸದ್ಭಕ್ತನ ಪಾದವ ತೋರಯ್ಯಾ ಎನಗೆ. ಅದೆಂ
ತೆಂದೊಡೆ ಆತನ ತನು ಶುದ್ಧ, ಆತನ ಮನ ಶುದ್ಧ, ಆತನ ನಡೆ ಶುದ್ಧ,
ನುಡಿ ಎಲ್ಲ ಪಾವನವು. ಆತಂಗೆ ಉಪದೇಶವ ಮಾಡಿದಾತನೇ ಪರಮ
ಸದ್ಗುರು. ಆಂತಪ್ಪ ಸದ್ಭಕ್ತನ ಮನೆಯು ಕೈಲಾಸವೆಂದು ಹೊಕ್ಕು
ಲಿಂಗಾರ್ಚನೆಯ ಮಾಡುವ ಜಂಗಮವೇ ಜಗತ್ಪಾವನ. ಇಂತಪ್ಪ ಗುರು
ಶಿಷ್ಯ ಜಂಗಮಕ್ಕೆ ನಾನು ನೆರಿ ನಂಬಿ ನವೋ ನವೋ ಎಂಬೆನಯ್ಯ
ಕೂಡಲ ಚನ್ನಸಂಗಮದೇವಾ.

೧೭೪. ಕಾಯಕವೆಂದು ಕಾಯವ ಬಳಲಿಸದೆ ತನು ಕರ
ಗದೆ ಮನ ನೋಯದೆ ಬೇಡಿ ಕಾಡಿ ಮಾಡುವುದು ದಾಸೋಹವೇ?
ಆವ ಕಾಯಕವಾದಡೂ ಪ್ರಾಣವೇ ಕಡೆಯಾಗಿ ಚಿತ್ತ ಶುದ್ಧದಲ್ಲಿ
ಮೆಯ್ಯಾಂತು ಒಂದುದನು ಸರಿಗಂಡು ದೇಹಿಗಳನೆಲ್ಲ ಒಂದೇ ಪ್ರಮಾ
ಣದಲ್ಲಿ ಕಂಡರೆ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ತೃಪ್ತಿ.

೧೭೫. ಭಕ್ತ ಭಕ್ತನ ಮನೆಗೆ ಬಂದರೆ, ಭೃತ್ಯಾಚಾರವ ಮಾಡ
ಬೇಕು. ಕರ್ತನಾಗಿ ಕಾಲ ತೊಳೆಯಿಸಿಕೊಂಡರೆ ಹಿಂದೆ ಮಾಡಿದ ಭಕ್ತಿಗೆ
ಹಾನಿ. ಲಕ್ಷ ಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು
ಸದಾಚಾರ. ಆಲ್ಲಿ ಕೂಡಿ ದಾಸೋಹವ ಮಾಡಿದರೆ ಕೂಡಿಕ್ಕೊಂಬನು
ನಮ್ಮ ಕೂಡಲಸಂಗಯ್ಯ.

೧೭೬. ಜನ್ಮ ಜನ್ಮಕ್ಕೆ ಹೋಗಲೀಯ್ಯದೆ, ಸೋಹಂ ಮೆಂದೆನಿ
ಸದೆ, ದಾಸೋಹಂಮೆಂದೆನಿಸಯ್ಯ. ಲಿಂಗಜಂಗಮದ ಪ್ರಸಾದದ ನಿಲವ
ತೋರಿ ಬದುಕಿಸಯ್ಯ ಕೂಡಲಸಂಗಮದೇವಾ.

೧೭೭. ಮಾಡುವ ದಾಸೋಹ ಕಿಂಕುರ್ವಾಣದಿಂದಾದೊಡೆ, ಆ
ಭಕ್ತನ ಅವಗುಣಂಗಳು ಮುಟ್ಟಲಮ್ಮವು. ಅರ್ಥ ಪ್ರಾಣ ಅಭಿಮಾನ
ವೆಂಬ ತ್ರಿಸ್ಥಾನವ ಶುದ್ಧವ ಮಾಡುವಲ್ಲಿ ನಿರಾಭಾರಿಯು ಮಾಡಿಕೊಂಡಿ
ರ್ಪನು. ನಿರಾಭಾರಿಯೊಳಡಗಿರ್ಪ ನಮ್ಮ ಕೂಡಲಚನ್ನಸಂಗಯ್ಯನು.

೧೭೮. ಕುಂದಿಸಿ ಕುಂದಿಸಿ ಬಂಧಿಸಿ ನೋಯಿಸಿ ಕಂಡಕಂಡವರ
ಬೇಡಿ ತಂದು ಮಾಡಿಹೆನೆಂಬುದು ದಂದುಗದೋಗರ. ಲಿಂಗ ನೈವೇ
ದ್ಯಕ್ಕೆ ಸಲ್ಲದು. ತನು ಕರಗಿ ಮನ ಬಳಲಿ ಬಂದ ತೆರದನುವನರಿದು
ಸಂದಿಲ್ಲದೆ ಸಂಶಯವಿಲ್ಲದೆ ದಾಸೋಹವ ಮಾಡುವುದೇ ಮಾಟ. ಕಾರೆಯ
ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಕ್ಕರ್ಪಿತವಲ್ಲದೆ ದುರಾ
ಸೆಯಿಂ ಬಂದುದು ಅನರ್ಪಿತ. ಇದುಕಾರಣ ಸತ್ಯ ಶುದ್ಧ ಕಾಯಕದ
ನಿತ್ಯ ದ್ರವ್ಯ ಚಂದೇಶ್ವರಲಿಂಗಕ್ಕೆ ನೈವೇದ್ಯ.

೧೭೯. ಹೊನ್ನ ಬಿಟ್ಟು, ಹೆಣ್ಣ ಬಿಟ್ಟು, ಮಣ್ಣ ಬಿಟ್ಟು, ಬ್ರಹ್ಮಚಾ
ರಿಗಳಾಗಬೇಕೆಂದು ಬಣ್ಣವಿಟ್ಟು ನುಡಿವ ಅಣ್ಣಗಳ ಪರಿಯ ನೋಡಿರೇ.
ಹೆಣ್ಣ ಬಿಟ್ಟಡೆಯೂ ಹೊನ್ನ ಬಿಡಿರಿ. ಹೊನ್ನ ಬಿಟ್ಟಡೆಯೂ ಮಣ್ಣ

ಬಿಡಿರಿ. ಒಂದು ಬಿಟ್ಟಡೆಯೂ ಒಂದ ಬಿಡಿರಿ. ಬ್ರಹ್ಮಚಾರಿಗಳಿಂತಪ್ಪಿರಿ ಹೇಳಿರಣ್ಣಾ. ಹೆಣ್ಣ ಬಿಟ್ಟು ಬ್ರಹ್ಮಚಾರಿಗಳಾಗಬೇಕೆಂದು ಅವರೆಂತು ಹೇಳಿದರು? ನೀವೆಂತು ಕೇಳಿದಿರಿ? ಹೆಣ್ಣನು ಹೆಣ್ಣೆಂದರಿವಿರಿ. ಹೊನ್ನನು ಹೊನ್ನೆಂದರಿವಿರಿ. ಮಣ್ಣನು ಮಣ್ಣೆಂದರಿವಿರಿ. ಬ್ರಹ್ಮಚಾರಿಗಳಿಂತಪ್ಪಿರಣ್ಣಾ? ಬಿಟ್ಟಡೆ ಹೆಣ್ಣ ಹೊನ್ನು ಮಣ್ಣ ಈ ಮೂರನು ಹಿಡಿದು ಗುರು ಲಿಂಗ ಜಂಗಮಕ್ಕೆ ಸದ್ಭಕ್ತಿಯಿಂದ ದಾಸೋಹವ ಮಾಡಬಲ್ಲಡೆ ಭವಂ ನಾಸ್ತಿ ತಪ್ಪದು. ಎಲ್ಲಿ ಇದ್ದರೆಯೂ ನೀರತಾವರೆಯಂತಿಪ್ಪರು ಉರಿಲಿಂಗಪೆದ್ದಿ ಪ್ರಿಯವಿಶ್ವೇಶ್ವರಾ ನಿಮ್ಮ ಶರಣರು.

ಭಿಕ್ಷೆಯನ್ನು ಬೇಡಬಾರದು.

೧೪೦. ಮಾಡುವ ನೀಡುವ ಭಕ್ತನ ಕಂಡರೆ, ನಿಧಿನಿಧಾನವ ಕಂಡಂತಾಯಿತ್ತು. ಪಾದೋದಕ ಪ್ರಸಾದ ಜಿಹ್ವೆಯವರ ಕಂಡರೆ, ಹೋದ ಪ್ರಾಣ ಬಂದಂತಾಯಿತ್ತು. ಅನ್ಯರ ಮನೆಗೆ ಹೋಗಿ, ತನ್ನು ದರವ ಹೊರೆಯದ ಅಚ್ಚ ಶರಣರ ಕಂಡರೆ, ನಿಶ್ಚಯವಾಗಿ ಕೂಡಲ ಸಂಗಯ್ಯನೆಂಬೆ.

೧೪೧. ಬೇಡಲಾಗದು ಜಂಗಮ. ಬೇಡಿಸಲಾಗದು ಭಕ್ತ. ಬೇಡಿದವ ನೋಡಿದರೆ ಬೇಡ ಬೇಡ ಭಕ್ತಿಯ ಆಡಂಬರವ ಮೃಡಮೂರ್ತಿ ಕಪಿಲಸಿದ್ಧಮಲ್ಲಿಕಾರ್ಜುನಾ.

೧೪೨. ಬೇಡುವವ ಜಂಗಮವೇ? ಬೇಡಿಸಿಕೊಂಬುವವ ಸದ್ಭಕ್ತನೇ? ಈ ಪರ್ಮವನರಿಯದ ಹಿರಿಯರು ನರಮಾಂಸಭಕ್ಷಕರಯ್ಯ. ತನು ವೆತ್ತಿ ಮನ ಉಬ್ಬಿ ಮಾಡಿದೊಡೆ ಲಿಂಗಾರ್ಪಿತವಾಯಿತ್ತಯ್ಯ. ಮಾಡಿ ಮನವಿಲ್ಲದಿರ್ದೊಡೆ ನೀಡಿ ನಿಜವಿಲ್ಲದಿರ್ದೊಡೆ ಕೊಟ್ಟು ಕುದಿಗೊಂಡೊಡೆ ಮಾಡಿ ನೀಡಿ ಕೊಟ್ಟು ಕೊಂಡುದು ಅನರ್ಪಿತವಾಯಿತ್ತು. ಮಾಡಿದಪ್ಪಿಪ್ಪೆನು ಇಲ್ಲದೆ ಅನರ್ಥವಾಗಿ ಹೋಗಿ ಮುಂದೆ ನರಕವಪ್ಪದು ತಪ್ಪದಯ್ಯಾ. ಇದು ಕಾರಣ ಕೂಡಲಚನ್ನಸಂಗಮದೇವ ಲಕ್ಷಕ್ಕಾದಡೂ ಒಬ್ಬ ಭಕ್ತನುಂಟು. ಕೋಟಿಗಾದಡೆಯೂ ಒಬ್ಬ ಜಂಗಮವಿಲ್ಲ.

೧೪೩. ಅರ್ಥ ಪ್ರಾಣಾಭಿಮಾನ ಹೊಲ್ಲಹದೆಂಬುವರು ಭಕ್ತರಿಗೆ ತಮ್ಮ ಹೊದ್ದಿದ ಮಲಿನವನರಿಯರು. ಬೇಡುವಾತ ಜಂಗಮವಲ್ಲ, ಬೇಡಿಸಿಕೊಂಬಾತ ಭಕ್ತನಲ್ಲ. ಬೇಡದೆ ಆ ಭಕ್ತ ತಾನೆ ಮಾಡಿದ ಮಾಟವ ಪರಿಣಾಮಿಸಬಲ್ಲಡೆ ಆತನೇ ಸದ್ಭಕ್ತನು. ಆ ಭಕ್ತರ ಇಂಗಿತವರಿದು ಅವರ ಮನದಿಚ್ಛೆಯ ಸಲ್ಲಿಸಬಲ್ಲಡೆ ಆತನೇ ಪರಮ ಜಂಗಮ. ಆ ಭಕ್ತನು ನನ್ನದು ನಾನೆಂದು ನುಡಿದೊಡೆ, ನಾಯ ಮಾಂಸ ಸತ್ತ ಹೆಣನ ಮಲವು ನಾಯಡಗು. ಇದನರಿಯದೆ ಓಡಲಾರದ ವೃಗವು ಶ್ವಾನಂಗೆ ಮಾಂಸವನೀವಂತೆ. ಇದು ಕಾರಣವಾಗಿ, ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಬೇಡದೆ ಮಾಡುವ ಭಕ್ತನುಂಟಾದಡೆಯೂ ಬೇಡದೆ ಮಾಡಿಸಿಕೊಂಬ ಜಂಗಮವಪೂರ್ವವಯ್ಯಾ.

೧೪೪. ಬೇಡುವಾತ ಜಂಗಮನಲ್ಲ. ಬೇಡಿಸಿಕೊಂಬಾತ ಭಕ್ತನಲ್ಲ. ಬೇಡದೆ ಆ ಭಕ್ತ ತಾನೆ ಮಾಡಿದ ಮಾಟವ ಪರಿಣಾಮಿಸಬಲ್ಲಡೆ ಜಂಗಮ. ಬೇಡಿಸಿಕೊಳ್ಳದೆ ಆ ಜಂಗಮದ ಇಂಗಿತವನರಿದು ಮಾಡಬಲ್ಲಡೆ ಆತನೇ ಸದ್ಭಕ್ತನು. ಆ ಭಕ್ತನ ಇಂಗಿತವನರಿದು ಅವರ ಮನದಿಚ್ಛೆಯ ಸಲಿಸಬಲ್ಲಡೆ ಆತನೇ ಪರಮ ಜಂಗಮನು. ಆ ಭಕ್ತ ನನ್ನದು ನಾನೆಂದು ನುಡಿದಡೆ ನಾಯ ಮಾಂಸ ಸತ್ತ ಹೆಣನ ಮಲವು. ಇದು ಕಾರಣ ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಬೇಡದೆ ಮಾಡುವ ಭಕ್ತನುಂಟಾದಡೆಯೂ ಬೇಡಿಸಿ ಮಾಡಿಸಿಕೊಂಬುವ ಜಂಗಮವಪೂರ್ವವಯ್ಯಾ.

ತಾಮಸ ಶೀಲಗಳನ್ನು ಬಿಡುವುದು.

೧೪೫. ಶೀಲ ಶೀಲವೆಂದೊಡೇನು? ಭವಿ ನೋಡಿದ ಮಡಕೆಯನು ಕಳೆವುದು ಶೀಲವೇ? ಕೆರೆ ಭಾವಿಯ ಕಳೆವುದು ಶೀಲವೇ? ಒಸರುವ ಉದಕವ ತಾಹುದು ಶೀಲವೇ? ಲಿಂಗಾರ್ಪಿತವ ಮಾಡದ ಪ್ರಸಾದವ ಕೊಂಡೊಡೆ, ಕಿಲ್ಬಿಷ, ಭಾಷೆಗೆ ವ್ರತಗೇಡಿ. ಅಂತಲ್ಲದೆ ಕೊಳದಿರ್ದೊಡೆ ಪ್ರಸಾದದ್ರೋಹಿ. ಇದು ಕಾರಣವಾಗಿ ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಈ ನಿರ್ಣಯವನರಿಯದೆ ಸಂಕಲ್ಪದಿಂದೆ ಕೆಟ್ಟಿತ್ತು ಶೀಲ.

೧೮೬. ಶೀಲವಂತನಾದೊಡೆ ಪ್ರಪಂಚ ನಾಸ್ತಿಯಾಗಿರಬೇಕು. ಸೀಮೆಯಾದೊಡೆ ಪಂಚೇಂದ್ರಿಯಂಗಳು ನಾಸ್ತಿಯಾಗಿರಬೇಕು. ತನ್ನ ಕರ್ತುವಿನಲ್ಲಿ ಸಕಲ ಸಂಶಯ ನಾಸ್ತಿಯಾದ ಶೀಲಕ್ಕೆ ಭವಂ ನಾಸ್ತಿ, ಭವಿ ನಾಸ್ತಿ, ಭ್ರಮೆ ನಾಸ್ತಿ. ಇವು ನಾಸ್ತಿಯಾದಲ್ಲದೆ ನಮ್ಮ ಕೂಡಚನ್ನ ಸಂಗಯ್ಯನಲ್ಲಿ ಶೀಲವಂತನೆನಿಸಬಾರದು. ಈ ವಂಚನೆಯ ಡಂಭಕ ಅಪಸ್ಮಾರಿಗಳಿಗೆಂತಯ್ಯಾ?

೧೮೭. ನದಿಯ ತಟಾಕದಲ್ಲಿ ಕನ್ನವಸಿಕ್ಕಿ ಉದಕವ ತಂದು ಮಜ್ಜನಕ್ಕೆರೆವ ಶೀಲವಂತರು, ಸುಯಿಧಾನಿಗಳಪ್ಪರೇ? ಭವಿಪಾಕ ಪರ ಪಾಕವನೆ ಭುಜಿಸುವ ಉದರ ಪೋಷಕರಿಲ್ಲರು ಶೀಲವಂತರಪ್ಪರೇ? ಅಲ್ಲಲ್ಲವಯ್ಯಾ. ಮತ್ತೆಂತೆಂದೊಡೆ, ಆಶನವರತು ವ್ಯಸನ ಬೆಂದು ಹುಸಿ ಮಸಡಿಸಿ, ಮಹಾಲಿಂಗದ ವಿಷಯದೊಳಗೆ ತಲ್ಲೀಯವಾಗಿ ಸರ್ವಾಂಗವು ಸಮತೆಯಾಗಿರಬಲ್ಲಡೆ, ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಅವ ರಚ್ಚ.ಶೀಲವಂತರೆಂಬೆನು. ಅವರೊಕ್ಕುದ ಕೊಂಡು ಸುಖಿಯಾಗಿಪ್ಪೆನಯ್ಯಾ.

೧೮೮. ಭವಿಗಿಕ್ಕಬಾರದೆಂಬ ಶೀಲ ಸಂಬಂಧಿಗಳು ಮರಳಿ ಇಕ್ಕಿದೊಡೆ, ಭಾಷೆಗೆ ವ್ರತಗೇಡಿ ಎಂಬುವ ಕಾಕು ಹೊಲೆಯರಿರಾ, ನೀವು ಕೇಳಿರೋ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬಾರು ಭವಿಗಳು ತಮ್ಮನಾವರಿಸಿಕೊಂಡಿರಲು, ಮತ್ತೆ ಭವಿಗಿಕ್ಕಬಾರದೆಂಬ ಪರಿ ಎಂತೋ? ಭವಿ ಹಿಂಗಿಯಂಗದ ಭವಿಯ ಕಳೆವುದು ಅಭ್ಯಾಸವ ಲ್ಲದೆ ನಿಜವಲ್ಲ. ಇದು ಕಾರಣ ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಅಂತರಂಗದ ಭವಿಯ ಕಳೆವ ಶೀಲವಂತರಪೂರ್ವವಯ್ಯಾ. ಅಂತ ರಂಗ ಬಹಿರಂಗವ ಕಳೆದು ಗುರುಲಿಂಗಜಂಗಮಕ್ಕೆ ಸಕಲ ಪದಾರ್ಥ ಸಲಿಸಿ ಸಂಶಯವಳಿದಿರಬಲ್ಲಡೆ ಶೀಲವಂತ ಶರಣನೆಂಬೆನಯ್ಯಾ.

೧೮೯. ಭಕ್ತರಾದೆವೆಂದು, ಭವಿಪಾಕವನೊಲ್ಲೆವೆಂಬರಿ. ಭವಿ ಪಾಕವೆಂಬುದೆಂತೆಂದೊಡೆ ಕೇಳಿರೇ. ಅಂಗತ್ರಯದಿಂದೆ ನೋಡಿದಡದು ಭವಿಪಾಕ. ಲಿಂಗತ್ರಯ ನೋಟಕ್ಕದು ಸಲ್ಲದು. ಗುರು ಕಾರುಣ್ಯ ಮುಂಟು. ನಾವು ಸದ್ಭಕ್ತರೆಂಬುವರು ಅವರಿಗೆ ಅಂಗತ್ರಯದ ನೋಟವುಳ್ಳನ್ನಕ್ಕರ ಲಿಂಗತ್ರಯದ ನೋಟವಿನ್ನೆಲ್ಲಿಯದೊ? ಪಂಚಭೂತದ ಕಾಯವ ತಂದು ಸದ್ಭಕ್ತನೆಂದೊಡೆ ಪ್ರಸಾದ ನಾಸ್ತಿ ಎಂದುದು ನಮ್ಮ ಕೂಡಲಚನ್ನಸಂಗಮದೇವರ ವಚನ.

೧೯೦. ಶಿವ ಮಂತ್ರ ಸಂಸ್ಕಾರವಾದಾತನು ತನ್ನ ಲಿಂಗಕ್ಕೆ ಭವಿಗಳನ್ನವ ಮಾಡುವನ್ನಕ್ಕರ, ಭವಿ ವಿಶ್ರವ ಕಳೆದೆನೆಂದೆನ್ನಬಹುದೇ? ಶಿವ ಮಂತ್ರ ಸಂಸ್ಕಾರವುಳ್ಳವನಾಗಿ, ಜಾತಿ ಸೂತಕ, ಜನನ ಸೂತಕ, ಪ್ರೇತ ಸೂತಕ, ಎಂಜಲ ಸೂತಕ, ರಜ ಸೂತಕವೆಂಬ ಪಂಚಸೂತಕವುಳ್ಳ ಮಹಾನುಭಾವಿಗಳು ತಮ್ಮ ಲಿಂಗಕ್ಕೆ ಪದಾರ್ಥ ಮಾಡುವನ್ನಕ್ಕರ ಭವಿ ವಿಶ್ರವ ಕಳೆದೆವೆಂತೆನ್ನಬಹುದೇ ಅಯ್ಯಾ? ತನು ಭವಿಯ ಹಸ್ತದಿಂದೆ ಪಂಚಮಹಾಪಾತಕ. ಮನಭವಿಯ ಹಸ್ತದಿಂದೆ ಅಘೋರ ನರಕ. ಇಂತಪ್ಪ ಭವಿಯನೊಳಗಿಟ್ಟುಕೊಂಡು ಎನಗೆ ಭವಿ ವಿಶ್ರವಿಲ್ಲವೆಂಬ ಲಜ್ಜೆಗೆಟ್ಟ ದುರಾಚಾರಿಗಳ ನಮ್ಮ ಸಜ್ಜನ ಸದ್ಭಕ್ತರು ಮೆಚ್ಚುವರೇ? ಮೆಚ್ಚರಯ್ಯ ಕೂಡಲಚನ್ನಸಂಗಮದೇವಾ.

೧೯೧. ಭವಿ ಎಂದರೆ ಲಿಂಗವಿಲ್ಲದ ಭವಿಯೇ? ಅಲ್ಲಲ್ಲ. ಭವಿ ಎಂದರೆ ವೇದ ವೇದಾಂತವನೋದಿ ಲಿಂಗವ ಧರಿಸಿದವ ಭವಿಯೆ? ಅಲ್ಲಲ್ಲ. ಅಂಗದ ಸ್ಥಿತಿಯನರಿದಡೇನಾಯಿತ್ತು? ಗುಣ ತಿಳಿದು ಲಿಂಗವ ಕೊಡುವ ಗುರುವಿಲ್ಲ. ಬಹಿರಂಗದಲ್ಲಿ ಲಿಂಗ ವಿರಹಿತ, ಅಂತರಂಗದಲ್ಲಿ ಲಿಂಗಲೋಲುಪ್ತ ಹೊಲಬುಳ್ಳವನಾದರೇನು? ಸತ್ಕ್ರಿಯಾ ಸಾಮರಸ್ಯಕ್ಕೆ ಭವಿಯಲ್ಲದೆ ಅನುಭವ ಗೋಷ್ಠಿಗೆ ಭವಿಯೇ? ಅಲ್ಲಲ್ಲ. ಭವಿ ಎಂದರೆ ಮದ್ಯಪಾನ, ಮಾಂಸ ಭಕ್ಷಣ, ಪರಸ್ತ್ರೀ ಸಂಗ, ಪರಧನ ಜೋರತ್ವ, ನಿಜವಸ್ತು ಅಂತರತ್ವವಿದ್ದವನೇ ಭವಿಯಯ್ಯ ಕಪಿಲ ಸಿದ್ಧಮಲ್ಲಿಕಾರ್ಜುನಾ.

ಗ್ರಹಬಲವನ್ನು ನೋಡದೆ ಮಾಡುವುದು.

೧೯೨. ಜ್ಯೋತಿಷ್ಯವದು ಜ್ಯೋತಿಯಂತಯ್ಯ. ಕೂಡುವ ಕಾಲಕ್ಕೆ ಪ್ರಕಾಶಮಯವು. ಕೂಡದ ಕಾಲಕ್ಕೆ ದಗ್ಧಮಯವು. ಇದರಂತುವನರಿದವರ ಕಾಣೆ ಕಪಿಲಸಿದ್ಧಮಲ್ಲಿಕಾರ್ಜುನಾ.

೧೯೩. ಲಗ್ನವೆಲ್ಲಿಯದೋ, ವಿಘ್ನವೆಲ್ಲಿಯದೋ ಸಂಗಯ್ಯ? ದೋಷವೆಲ್ಲಿಯದೋ, ದುರಿತವೆಲ್ಲಿಯದೋ ಸಂಗಯ್ಯ? ನಿಮ್ಮ ಮೂಗದೆ ನೆನೆವಂಗೆ ಭವಕರ್ಮವೆಲ್ಲಿಯದೋ ಕೂಡಲಸಂಗಮದೇವಾ?

೧೯೪. ಶುಭಕ್ಕೆ ವಿಘ್ನವಿಲ್ಲದೆ ಅಶುಭಕ್ಕೆ ವಿಘ್ನವೇ ಅಯ್ಯಾ? ಅಭಿಮಾನಿಗೆ ಅಂಜಿಕೆಯಲ್ಲದೆ ಅಪಮಾನಿಗೆ ಅಂಜಿಕೆಯೇ ಅಯ್ಯ? ಶುಭಾಶುಭ ಶಿವಾರ್ಪಣವೆಂದು ನಂಬು ಮನವೇ ಕಪಿಲಸಿದ್ಧಮಲ್ಲೇಂದ್ರನಾಲಯದಲ್ಲಿ.

೧೯೫. ಲಗ್ನಕ್ಕೆ ವಿಘ್ನಬಾರದೆಂದು ಜ್ಯೋತಿಷ್ಯ ಕೇಳುವ ಅಣ್ಣಗಳಿರಾ ಕೇಳಿರಯ್ಯಾ. ಅಂದೇಕೆ ವೀರಭದ್ರನ ಸತಿಯ ಸೆರಗು ಸುಟ್ಟಿತ್ತು? ಅಂದೇಕೆ ಮಹಾದೇವಿಯರ ಬಲ ಭುಜ ಹಾರಿತ್ತು? ಇಂದೇಕೆ ಎನ್ನ ವಾಮನೇತ್ರ ಜಲಿಸಿತ್ತು ಕಪಿಲಸಿದ್ಧಮಲ್ಲಿಕಾರ್ಜುನಾ?

೧೯೬. ತಿಥಿವಾರವೆಂದರಿಯೆನಯ್ಯ. ಲಗ್ನ ವಿಲಗ್ನವೆಂದರಿಯೆನಯ್ಯ. ಇದನರಿತು ಪದಿನಾರು ವಾರ ಹದಿನೆಂಟು ಕುಲವೆಂದೆಂಬರು. ನಾವಿದನರಿಯೆನಯ್ಯ. ಇರುಳೊಂದು ವಾರು, ಹಗಲೊಂದು ವಾರ, ಭವಿಯೊಂದು ಕುಲ, ಭಕ್ತನೊಂದು ಕುಲ. ನಾವು ಬಲ್ಲುದು ಇದು ತಾನೆ ಬಸವಪ್ರಿಯ ಕೂಡಲಚನ್ನಸಂಗಮದೇವಾ.

೧೯೭. ಅಂದು ಇಂದು ಮತ್ತೊಂದು ಎನಬೇಡ. ದಿನ ಒಂದೇ ಶಿವಶರಣೆಂಬುವಂಗೆ. ದಿನ ಒಂದೇ ಹರಶರಣೆಂಬುವಂಗೆ. ದಿನ ಒಂದೇ ನಮ್ಮ ಕೂಡಲಸಂಗನ ಮಾಣದೆ ನೆನೆಯುವಂಗೆ.

ಹಿಂದಿನವರೇ ಶ್ರೇಷ್ಠರೆಂದು ಭಾವಿಸದಿರು.

೧೯೮. ಅಂದಿನವರು ನಡೆದ ದಾರಿ ಇಂದಿನವರು ನಡೆಯರು, ಇಂದಿನವರು ನಡೆದ ದಾರಿ ಅಂದಿನವರು ಕಾಣರು ಎಂಬರಯ್ಯ. ಅಂದಿಂದು ಎಂಬ ದ್ವಂದ್ವ ಭೇದವನೆಂದೆಂದು ಕಾಣೆ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೧೯೯. ಅಂದಿನ ಶರಣರಿಗೆ ಇಂದಿನ ಶರಣರು ಸರಿಯಲ್ಲವೆಂದು ನುಡಿವ ಸಂದೇಹ ಸೂತಕ ಹೊಲೆಯರ ಮಾತ ಕೇಳಲಾಗದು. ಅದೆಂತೆಂದೊಡೆ, ತಾ ಮೂಕೊರೆಯನೆಂದರಿಯದೆ ಕನ್ನಡಿಗೆ ಮೂಗಿಲ್ಲವೆಂ

ಬಂತೆ ತಾ ಕುಣಿಯಲಾರದೆ ಅಂಕಣ ಡೊಂಕೆಂಬಂತೆ, ತನ್ನ ನಡೆನುಡಿ ಸಿದ್ಧಾಂತವಿಲ್ಲದೆ, ಇತರ ಹಳಿವ ಅಧಮ ಮಾದಿಗರನೇನೆಂಬೆನಯ್ಯ? ಅಷ್ಟಾವರಣ ಪಂಚಾಚಾರವು ಅಂದೊಂದು ಪರಿ ಇಂದೊಂದು ಪರಿಯೇ? ಷಟ್‌ಸ್ಥಲ ಸ್ವಾನುಭವವು ಅಂದೊಂದು ಪರಿ ಇಂದೊಂದು ಪರಿಯೇ? ಭಕ್ತಿ ವಿರಕ್ತಿ ಮುಕ್ತಿ ಉಪರತಿ ಜ್ಞಾನ ವೈರಾಗ್ಯ ಅಂದೊಂದು ಪರಿ ಇಂದೊಂದು ಪರಿಯೇ? ನಡೆ ನುಡಿ ಸಿದ್ಧಾಂತವಾದ ಶರಣನ ಘನವು ಅಂದೊಂದು ಪರಿ ಇಂದೊಂದು ಪರಿಯೇ? ಇಂತೀ ವಿಚಾರವನರಿಯದೆ ಪರಸಮಯುದವನಾದರೂ ಆಗಲಿ, ಶಿವಸಮಯುದವನಾದರೂ ಆಗಲಿ, ಮರ್ಮಗೆಟ್ಟು ನಡೆವ ಕರ್ಮಜೀವಿಗಳ ಬಾಯಲ್ಲಿ ಬಾಲ್ಪಳುಸುರಿಯದೆ ಮಾಣ್ಬವೇ ಹೇಳಾ ಅಖಂಡೇಶ್ವರಾ?

ಜ್ಞಾನವಿಡಿದು ಆಚರಿಸುವುದು.

೨೦೦. ವಿಶ್ವದಲ್ಲಿ ಜ್ಞಾನ ಪ್ರತಿಷ್ಠೆಯ ಮಾಡುತಿಪ್ಪರು. ಗೋವಿನ ದೇಹದಲ್ಲಿ ಘೃತವಿಪ್ಪುದಯ್ಯ; ಆದು ಆ ಗೋವಿಂಗೆ ಪುಷ್ಟಿಯಾಗಲಾರದು. ಆ ಗೋವ ಪೋಷಿಸಿ, ಹಾಲ ಕರೆದು, ಕಾಸಿ, ಹೆಪ್ಪನಿಕ್ಕಿ, ಆ ದಧಿಯ ಮಥನವ ಮಾಡಿ, ಬೆಣ್ಣೆಯ ತೆಗೆದು, ಆ ನವನೀತ ತುಪ್ಪವ ಕಾಸಿ, ಆ ಗೋವಿಗೆ ಕುಡಿಸಲಾಗಿ, ದಿನದಿನಕ್ಕೆ ಪುಷ್ಟಿಯಪ್ಪುದು ತಪ್ಪದಯ್ಯ. ಈ ಪ್ರಕಾರ ಸತ್ಕ್ರಿಯೋಪಚಾರವ ಮಾಡಲಾಗಿ ಜ್ಞಾನವಹುದು. ಜ್ಞಾನವಾಗಲಿಕ್ಕೆ ಸಮ್ಯಜ್ಞಾನವಹುದು. ಸಮ್ಯಜ್ಞಾನವಾಗಿ, ಪ್ರಾಣವೇ ಲಿಂಗವಪ್ಪದು ತಪ್ಪದು. ಸಂದೇಹವಿಲ್ಲವಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

೨೦೧. ಜಗವಾದರಿಸಿದ ಕಣ್ಣು ತನ್ನ ತಗುಳ್ವ ಕಾಯ ಕಾಣದು. ತಿಳಿವ ಅರಿವು ತನ್ನ ತಗುಳ್ವ ಭವದ ಮೊನೆಯ ಕಾಣದು. ವಿವೇಕ ಪರನಾವರೆ ಕಾಣದದು ಕಾಣುವುದು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೦೨. ತಾ ಮುನ್ನೋ, ತನ್ನ ಮನ ಮುನ್ನೋ? ತನ್ನ ಕಾಯ ಮುನ್ನೋ, ತಾ ಮುನ್ನಪೋ ಅಯ್ಯ? ಮುನ್ನೆಂಬಲ್ಲಿ ತಿಳಿಯದೆ

ಹೋಯಿತ್ತು. ಮನ ಮುನ್ನೆಂಬಲ್ಲಿ ಕಾಯಕ್ಕೊಳಗಾಯಿತ್ತು. ಕಾಯ ಮುನ್ನೆಂಬಲ್ಲಿ ಜಡನುಯ ಪ್ರಳಯಕ್ಕೊಳಗಾಯಿತ್ತು. ತಾ ಮುನ್ನಲ್ಲ. ತನ್ನ ಮನ ಮುನ್ನಲ್ಲ. ತಿಳಿದಾಗಲೇ ಮುನ್ನ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೦೩. ಅರಿವೆನೆಂದರೆ 'ಸತ್ಯ ಜ್ಞಾನ ಮನಂತ ಬ್ರಹ್ಮ' ಎಂದು ಶ್ರುತಿ ಸಾರುತ್ತಿದೆ. ಮರೆದೆನಂದರೆ 'ಸಾಕ್ಷಾತ್ಸಚ್ಚಿದಾನಂದ ಭವ' ಎಂದು ಶ್ರುತಿವಲ್ಯೋಪನಿಷದ್ಘೋಷಿಸುತ್ತದೆ. ಅರಿವು ವಸ್ತು ಸ್ವರೂಪ, ಮರಹು ಮಾಯಾಸ್ವರೂಪವೆಂದರಾನು ನಿರ್ಣಯಲ ಸ್ವರೂಪನಾದೆ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೦೪. ಜನನ ಮರಣ ದೇಹ ಧರ್ಮಕ್ಕಲ್ಲದೆ ಜಂಗಮಕ್ಕೆಲ್ಲಿಯದೋ? ಕ್ಷುಧಾ ತೃಷೆ ಪ್ರಾಣಧರ್ಮವಲ್ಲದೆ ಜಂಗಮಕ್ಕೆಲ್ಲಿಯದೋ? ಸುಖ ದುಃಖ ಮನೋಧರ್ಮವಲ್ಲದೆ, ಜಂಗಮಕ್ಕೆಲ್ಲಿಯದೋ? ಜ್ಞಾನಾಜ್ಞಾನಂಗಳು ಮುಮುಕ್ಷುವಿಂಗಲ್ಲದೆ ನಿಮ್ಮಲ್ಲಿ ಸಮರಸವಾದ ಸಚ್ಚಿದಾನಂದ ಶಿವಯೋಗಿ ಜಂಗಮಕ್ಕೆಲ್ಲಿಯದೋ ಕಪಿಲಸಿದ್ಧಮಲ್ಲಿಕಾರ್ಜುನಾ?

೨೦೫. ನಿನ್ನ ದೇಹ ನೋಡುವಡೆ ಪಂಚ ಭೌತಿಕ. ನೀ ನೋಡುವಡೆ ಜೀವಾಂತಿಕ. ನಿನ್ನ ಧನ ನೋಡುವಡೆ ಕುಬೇರನದು. ನಿನ್ನ ಮನ ನೋಡುವಡೆ ವಾಯುವ ಕೂಡಿದ್ದು. ವಿಚಾರಿಸಿ ನೋಡಿದರೆ ಬ್ರಹ್ಮನದು. ನಾ ಮಾಡುವೆನೆಂದಡೆ ಆದು ಆದಿಶಕ್ತಿ ಚೈತನ್ಯ. ನಾ ತಿಳಿದಿಹೆನೆಂದಡೆ ಆದು ಜ್ಞಾನದ ಬಲ. ಆ ಜ್ಞಾನವು ನಾ ಎಂದಡೆ ಇದಿಂಟ್ಟು ತೋರುತ್ತಿದೆ. ತೋರುವ ಆನಂದ ಮೂರ್ತಿ ನಾ ಎಂದಡೆ ಅದು ಸಾಕ್ಷಿಯಾಗಿ ನಿಂದಿತ್ತು. ಸಾಕ್ಷಿ ಎಂಬುದ ತಿಳಿದು ತಿಳಿಯದೆಂಬುದಕ್ಕೆ ಬಯಲಾದ ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನತಂದೆ.

೨೦೬. ಜ್ಞಾನವೆಂದು ವಿವಾದಿಸುವ ಅಣ್ಣಗಳಿರಾ, ಕೇಳಿರಯ್ಯ. ಜ್ಞಾನವೆಂದರೆ ಮಹತ್ವಗಳ ಮಾಡಿ ಮೆರೆದುದು ಜ್ಞಾನವೇ? ಅಲ್ಲಲ್ಲ. ಜ್ಞಾನವೆಂದರೆ ಸ್ವರ್ಗದ ವಾರ್ತೆಯ ಕೇಳಿ ಕೀರ್ತಿಯ ಹಬ್ಬಿದುದು ಜ್ಞಾನವೇ? ಅಲ್ಲಲ್ಲ. ಜ್ಞಾನವೆಂದರೆ ತತ್ಕಾಲಕ್ಕಾಗುವ ಸುಖ ದುಃಖಗಳ ಹೇಳಿದುದು ಜ್ಞಾನವೇ? ಅಲ್ಲಲ್ಲ. ಇವೆಲ್ಲ ಸಾಧನೆಯ ಮಾತು. ಅಘೋರಮುಖದಿಂದ ಹುಟ್ಟಿದ ಮಂತ್ರಗಳೆಲ್ಲ ಜಪಿಸಿದಲ್ಲಿ ಮಹತ್ವಗ

ಳಾದವು. ಸೂಕ್ಷ್ಮ ತಂತ್ರ ಗಣಿಸಿದಲ್ಲಿ ಸ್ವರ್ಗದ ವಾರ್ತೆಯ ಹೇಳಿದನು. ಪ್ರಸಂಗ ಚಿಂತಾಮಣಿಯ ನೋಡಿ ಸುಖದುಃಖಗಳ ಹೇಳಿದನು. ಇವೆಲ್ಲ ಸಾಧನೆಯಯ್ಯ. ನಿನ್ನರಿವು ಕೈಕರಣವಾಗಿರೆ, ದೇಹವಳಿದರೇನು, ದೇಹ ಧರಿಸಿ ಬಂದರೇನು, ಎಲೆ ಅಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ?

೨೦೭. ಸಿಂಹ ಮದಕರಿಯಮೇಲೆ ಹಾರುವುದಲ್ಲದೆ, ಮಹಿಷಿಯ ಮೇಲೆ ಹಾರುವುದೇ ಅಯ್ಯ? ಪಕ್ಷಿ ಆಕಾಶದಲ್ಲಿ ಹಾರುವುದಲ್ಲದೆ ಪಂಜರದಲ್ಲಿ ಹಾರದು ನೋಡಯ್ಯ! ನಮ್ಮ ಕಪಿಲಸಿದ್ಧಮಲ್ಲೇಶನನರಿವವರು ಜ್ಞಾನದಮೇಲೆ ಹಾರುವರಲ್ಲದೆ ಅಜ್ಞಾನದಲ್ಲಿ ಹಾರರು.

೨೦೮. ತಿಳಿ ನೀರೆಂಬೆ, ತಿಳಿ ನೀರೆಂಬೆ. ತಿಳಿ ನೀಯೆಂದು ಒಂದು ದಿನ ಅಂದಿಲ್ಲೆಲೋ ಮಾನವಾ. ಕ್ಷಣಕ್ಕೆ ಕ್ಷಣಕ್ಕೆ ತಿಳಿ ನೀ ಎಂದರೆ ತಳುಕದೆ ತನ್ನ ನಿಜವ ಕೊಡನೇ ಕಪಿಲಸಿದ್ಧಮಲ್ಲೇಂದ್ರಾ?

೨೦೯. ತಿಳಿಯದೆ ಪೂಜಿದರಾಗುವುದೇನೋ ಅಯ್ಯ? ತಿಳಿದು ತಿಳಿದು ಮಾಡಬೇಕು. ಜಂಗಮಾರ್ಚನೆಯ ತಿಳಿದು ತಿಳಿದು ಮಾಡಬೇಕು. ತಿಳಿಯದೆ ಮಾಡಲು ನಿನ್ನ ಸಿದ್ಧಿಗಳಿಗೆ ಸಿದ್ಧರಲ್ಲದೆ ನಿನ್ನಂಗದೊರೆಕೊಂಬ ಪರಿಯ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೧೦. ತೋರಿ ಕೆಡುವ ದೇಹ ನಾನೆಂದು ನಂಬದಿರಾ ಮನವೇ. ತೋರುವ ಅರಿವು ನಾನೆಂದು ನಂಬು ಕಂಡೆಯಾ ಮನವೇ. ತೋರಿ ಕೆಡುವುದು ಮಾಯಾತ್ಮಕವು ಮನವೇ. ತೋರಿ ತೋರುವುದದು ನಿರುಪಾಧಿಕ ನಿಜಾನಂದ ಕಪಿಲಸಿದ್ಧಮಲ್ಲಿಕಾರ್ಜುನ ಕಂಡೆಯಾ ಮನವೇ.

೨೧೧. ಜಲದಲ್ಲಿ ಚಂದ್ರನಿಲ್ಲ, ಜಲವಿಲ್ಲ. ಮಾಯಾತ್ಮಕ ವಸ್ತು ವಿಲ್ಲ. ವಸ್ತುವಾತ್ಮಕ ಮಾಯೆ ಇಲ್ಲ. ಉಪಾಧಿಯಿಂದ ತೋರ್ಪುದುದೆಲ್ಲ ನಿಜವೇ ಅಯ್ಯ? 'ಸ್ಥಾಣುಜೋರ ನ್ಯಾಯ'ದಂತೆ 'ಶುಕ್ತಿರಜತ ನ್ಯಾಯ'ದಂತೆ, 'ರಜ್ಜು ಸರ್ಪ ನ್ಯಾಯ'ದಂಗೆ ಅಧ್ಯಾರೋಪವಾದ ಅವಿದ್ಯೆಯಲ್ಲಿ ಲೇಸುಂಟೇ ಕಪಿಲಸಿದ್ಧಮಲ್ಲಿಕಾರ್ಜುನಾ?

೨೧೨. ಹೇಳಿದ ಬೋಧೆ ಶಿಲಾಲಿಪಿಯಂತಾದರೆ ಶಿಲಾಸದೃಶನೋಡಾ. ಭವಕ್ಕೆ ಹೇಳಿದ ಬೋಧೆ ಜಲಲಿಪಿಯಾದರೆ ಜಲಸದೃಶನೋಡಾ! ಭವಕ್ಕೆ ಹೇಳಿದ ಬೋಧೆ ಗಟ್ಟಿಗೊಂಡರಾಳುವುದೆತ್ತ ನಿನ್ನ ಮಾಯಾ ಜಾಲವನೆಲೆ ಕಪಿಲಸಿದ್ಧಮಲ್ಲಿಕಾರ್ಜುನಾ?

೨೧. ಜೋಧವೆಂದರೆ ಕರ್ಣವನೂದಿ ಮಂತ್ರವ ಹೇಳಿದ್ದ ಜೋಧವೇ? ಅಲ್ಲಲ್ಲ. ಜೋಧವೆಂದರೆ ತನುತ್ರಯ ಸಾಕ್ಷಿ, ನೀನೇ ಪರ ವಸ್ತು ಎಂಬುವದದೇ ನಿಜಜೋಧ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೧. ಬಸವನವ ಎರಡನೆಯ ಶಂಭುವೆನ್ನುವರು. ನಾವು ಮೂರನೆಯ ಶಂಭುವೇನಯ್ಯ? ತನ್ನ ತಾ ತಿಳಿದಲ್ಲಿ ಎರಡನೆಯ ಶಂಭುವೆನಿಸಿದ. ತನ್ನ ತಾ ಮರೆದಲ್ಲಿ ಮಹೀತಳದ ಮಾನವನೆನಿಸಿದ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೨. ಆವ ಜ್ಞಾನಿಯಾದರೇನು ? ದೇಹಾವಸಾನದಲ್ಲಿಯ ಭಾವದಂತೆ ತಪ್ಪಲರಿಯದು ನೋಡಾ! ಆವ ಜ್ಞಾನಿಯಾದರೇನು ನೋಡಾ? ಭಾವವೆಂಬುದು ಜನ್ಮಕ್ಕೆ ಈಡು. ನಿರ್ಭಾವವೆಂಬುದು ಜನ್ಮಕ್ಕೆ ಕಾಡುಗಿಚ್ಚು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೩. ಆಕಾಶದಲ್ಲಿಯ ಮೇಘದಂತೆ, ಜಲದಲ್ಲಿಯ ತೆರೆಯಂತೆ ಬರುತ್ತಿದೆ ನೋಡಾ. ಈ ಘಟ ಬಂದದ್ದರಿಯೆ, ಹೋದದ್ದರಿಯೆ. ನಿಂದ ವಸ್ತುವದು ನಿಜವೆಂದರಿದೆ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೪. ಅರಿದ ಬಳಿಕ ಬ್ರಹ್ಮವೆಂಬುದು ಮೃಗಜಲ ನೋಡಾ. ಅರಿದ ಬಳಿಕ ಬ್ರಹ್ಮವೆಂಬುದು ವಂಧ್ಯಾ ಪುತ್ರ ನೋಡಾ. ಅರಿದ ಬಳಿಕ ಬ್ರಹ್ಮವೆಂಬುದು ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಶಬ್ದಮುಗ್ಧ ನೋಡಾ ಕಲ್ಲಯ್ಯ.

೨೫. ಮನದಲ್ಲಿ ಭೇದವಲ್ಲದೆ ವಸ್ತುವಿನಲ್ಲಿ ಭೇದವಿಲ್ಲವಯ್ಯ! ಕ್ರಿಯಾಕ್ರಿಯೆಯಲ್ಲಿ ಭೇದವಲ್ಲದೆ ಜ್ಞಾನರೂಪದಲ್ಲಿ ಭೇದವೇನಯ್ಯ ಚೈತನ್ಯ ಕಪಿಲಸಿದ್ಧಮಲ್ಲಿಕಾರ್ಜುನಾ ?

೨೬. ತಿಳಿದು ತಿಳಿದು ವಿಷಯಕ್ಕೆ ಮೈಗೊಟ್ಟರೆ ಅನುಭಾವಿಯೇ ಅಯ್ಯ? ಅಳಿದು ಅಳಿದು ಆನಂದಕ್ಕೆ ಮೈಗೊಟ್ಟರೆ ಅಜ್ಞಾನಿಯೇ ಅಯ್ಯ? ತಿಳಿದ ಬಳಿಕ ವಿಷಯಂಗಳಳಿಯಬೇಕು. ಅಳಿದ ಬಳಿಕ ಎಳೆಯ ಚಂದ್ರಧರ ಕಪಿಲಸಿದ್ಧಮಲ್ಲಿಕಾರ್ಜುನನಾಗಲೇಬೇಕು.

೨೭. ಮನವೆಂಬುದು ಬೇರಿಲ್ಲ. ಮಹಾದೇವನ ಮಹಾ ಅರುಹು ನೋಡಾ. ಸಂಕಲ್ಪ ವಿಕಲ್ಪಂಗಳ ಧರಿಸಿದಲ್ಲಿ ಮನವೆನಿಸಿತ್ತು. ಅದು ಅಳಿದಲ್ಲಿ ಮಹಾಜ್ಞಾನವೆನಿಸಿತ್ತು. ಅಳಿದು ಭಾವ ತಲೆದೋರಿದಲ್ಲಿ ಕಪಿಲಸಿದ್ಧಮಲ್ಲಿಕಾರ್ಜುನನೆನಿಸಿತ್ತು.

೨೮. ಜ್ಞಾನವದು ದುರ್ಲಭವಲ್ಲ. ಅದರ ಭಾವ ದುರ್ಲಭವಯ್ಯ. ಭಾವವದು ದುರ್ಲಭವಲ್ಲ. ಅದರ ಏಕತ್ವವದು ದುರ್ಲಭ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೯. ಕೆರೆಯ ನೀರು, ಮರದಲ್ಲಿಯ ಪುಷ್ಪವ ಧರಿಸಿದರೇನು ಅಯ್ಯ? ಆಗುವುದೇ ಆಗುವುದೇ ಲಿಂಗಾರ್ಚನೆ? ನೀರನೆರಿಯಲಿಕ್ಕಾ ತನೇನು ಬಸಿಲಿನಿಂದ ಬಳಲಿವನೇ? ಪುಷ್ಪದಿಂದ ಧರಿಸಲಿಕ್ಕಾತನೇನು ವಿಟರಾಜನೇ? ನಿನ್ನ ಮನವೆಂಬ ನೀರಿಂದ ಜ್ಞಾನವೆಂಬ ಪುಷ್ಪದಿಂದ ಪೂಜಿಸಬಲ್ಲಡೆ ಭಕ್ತನೆಂಜೆ, ಮಹೇಶ್ವರನೆಂಬೆ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೦. ನಿತ್ಯವೆಂದರೆ ಲಿಂಗ, ಅನಿತ್ಯವೆಂದರೆ ಅಂಗ. ನಿತ್ಯವೆಂದರೆ ಜ್ಞಾನ, ಅನಿತ್ಯವೆಂದರೆ ಅಜ್ಞಾನ. ನಿತ್ಯ ಕಾರ್ಯವು ಸತ್ಕರ್ಮ, ಅನಿತ್ಯ ಕಾರ್ಯಗಳೇ ದುರ್ವಿಷಯಗಳು. ವಿಷಯಗಳೇ ನಿತ್ಯಗಳಾಗಲು ಜ್ಞಾನಿ ಎಂದು, ಐಕ್ಯನೆಂದು, ಪ್ರಮಥನೆಂದು, ಕಪಿಲಸಿದ್ಧಮಲ್ಲಿಕಾರ್ಜುನನೆಂದು ಬೇರೆ ಉಂಟೇನೋ ಹಾವಿನಹಾಳ ಕಲ್ಲಯ್ಯ?

೩೧. ಜ್ಞಾನವಿಡಿದು ಆಚರಿಸಿದರಲ್ಲದೆ ಕ್ರಿಯೆವಿಡಿದು ಆಚರಿಸಲಿಲ್ಲವು. ಕ್ರಿಯೆವಿಡಿದು ಆಚರಿಸಿದರು ಜ್ಞಾನವಿಡಿದು ಆಚರಿಸಲಿಲ್ಲವು. ರೂಪುವಿಡಿದು ನಿರೀಕ್ಷಿಸುವರಲ್ಲದೆ ಅರೂಪುವಿಡಿದು ನಿರೀಕ್ಷಿಸರು. ಜ್ಞಾನವಿಡಿದಾಚರಿಸಿದರು ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಚನ್ನಬಸವಣ್ಣನವರು.

೩೨. ಅಂಗವೆಂದರೆ ಅಜ್ಞಾನ. ಲಿಂಗವೆಂದರೆ ಸುಜ್ಞಾನ. ಲಿಂಗವಿಡಿದು ಆಚರಿಸುವರಲ್ಲದೆ ಅಂಗವಿಡಿದು ಆಚರಿಸರು ಬಸವಾದಿ ಪ್ರಮಥರು ಕಪಿಲಸಿದ್ಧಮಲ್ಲಿಕಾರ್ಜುನಾ.

೩೩. ಬಂದ ಮಹೇಶ ಬಂದಂತೆ ಪೋಪನಲ್ಲ ನೋಡಯ್ಯ. ಬಂದ ಬರವು ಭವಕ್ಕೆ ಆಗರ. ನಿಂದ ಬರವು ಜ್ಞಾನಕ್ಕೆ ಆಗರ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

ಕ್ರಿಯಾ ಜ್ಞಾನವಿಡಿದಾಚರಿಸುವುದು.

೨೨೭. ಕ್ರಿವಿಡಿದು ಆಚರಿಸಬೇಕಲ್ಲದೆ ಆಕ್ರಿಯೆಯೊಡನಾಚರಿಸ
ಲಾಗದು. ಜ್ಞಾನವಿಡಿದು ನೋಡಬೇಕಲ್ಲದೆ ದೃಷ್ಟಿವಿಡಿದು ನೋಡ
ಬಾರದು. ಲಿಂಗವಿಡಿದು ಪೂಜಿಸುವುದಲ್ಲದೆ ಅಂಗವಿಡಿದು ಪೂಜಿಸಲಾ
ಗದು ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ.

೨೨೮. ನೆನೆದರಾಗದು ಸಾಧಿಸದನ್ನಕ್ಕ. ಸಾಧಿಸಿದರಾಗದು ತಿಳಿ
ಯದನ್ನಕ್ಕ. ತಿಳಿಯದರಾಗದು ಎಳೆ ಬಾಲಚಂದ್ರಧರ ಕಪಿಲಸಿದ್ಧಮಲ್ಲಿ
ಕಾರ್ಜುನನ ಲೈವಲ್ಯ ಪದವು.

೨೨೯. ಕ್ರಿಯೆ ಅದು ಚನ್ನಬಸವಣ್ಣನ ಎಡಪಾದ. ಜ್ಞಾನ
ವದು ಚನ್ನಬಸವಣ್ಣನ ಬಲಪಾದ. ನಾನು ಅವರ ಚಮ್ಮಾವುಗೆ.
ನೀನು ಅವನ ಮನೆಯ ದಾಸನು ನೋಡಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೨೩೦. ಕ್ರಿಯಾ ಜ್ಞಾನವೆಂಬುದಕ್ಕೆ ಭೇದ ತಿಲಾಂಶವಿಲ್ಲ ನೋಡಾ.
"ದ್ವಂದ್ವೇನ ಭೇದೆ" ಎಂಬ ಅಥರ್ವಣ ಶಾಖೆಯದು ಸರಿಯೇ? ಸೂಕ್ಷ್ಮೈಂ
ದ್ರಿಯ ನಿಗ್ರಹದಲ್ಲಿ ಜ್ಞಾನವೆನಿಸಿತ್ತು. 'ಜ್ಞಾನಂ ವಿನಾ ಕ್ರಿಯಾ ನ ಭಾತಿ
ಕ್ರಿಯಾ ವಿನಾ ನ ಭಾತಿ ತತ್' ಎಲೈ ಕಪಿಲಸಿದ್ಧಮಲ್ಲಿಕಾರ್ಜುನಾ.

೨೩೧. ದೇಹಿ ಎಂಬುದು ಅವಿದ್ಯೆ ಎಂಬುವರು. ಅದೆಂತಯ್ಯ? ದೇಹ ತಾನಿಲ್ಲದಿರೆ ಆಶ್ರಯಿಸುವ ಪರಿ ಎಂತಯ್ಯ? ಅರಿದರೆ ಆಶ್ರಯಿಸ. ಮರೆದರೆ ಆಶ್ರಯಿಸುವ ದೇಹವದು ಜಡ ಸಾಕ್ಷಿ. ಅಜಡವೆಂಬ ಭಾವ ವಜನದಲಲ್ಲದೆ ಅನುಭಾವದಲಿಲ್ಲ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೩೨. ಮಾನವಿಲ್ಲದ ಭೋಜನವದು ಶ್ವಾನನ ಮಾಂಸವಯ್ಯ. ಜ್ಞಾನವಲ್ಲದ ಕ್ರಿಯದು ಸಿದ್ಧಗಳಿಗೀಡವಯ್ಯ. ಧ್ಯಾನವಿಲ್ಲದ ಪೂಜೆ ಯದು ಕಾನನದ ಜ್ಯೋತಿಯಯ್ಯ. ಎಲೆ ಕಪಿಲಸಿದ್ಧಮಲ್ಲಿಕಾರ್ಜುನ ನೀನಿಲ್ಲದ ಭಕ್ತಿಯದು ಚಾಂಡಾಲ ಪಾಕವಯ್ಯ.

೨೩೩. ಕ್ರಿಯೆ ಮರೆದಲ್ಲಿ ಅರಿವು ಹೀನವಾಗಿಪ್ಪುದು. ಅರಿವು ಮರೆ
ದಲ್ಲಿ ಜ್ಞಾನ ಹೀನವಾಗಿಪ್ಪುದು. ಜ್ಞಾನವ ಮರೆದಲ್ಲಿ ಬೆಳಗಿನ ಕಳೆ
ಹೋಯಿತ್ತು. ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವು ಅವರಿಗೆ
ಮರೆಯಾಗಿ ತೊಲಗಿತ್ತು.

೨೩೪. ಜ್ಞಾನದಲ್ಲಿ ಅರಿದರೇನಯ್ಯ, ಸತ್ಕ್ರಿಯಾಚಾರ ಸಂದದನ್ನ
ಕ್ಕರ? ನೆನೆದ ಮಾತ್ರದಲ್ಲಿ ಕಾಂಬುದೇ, ಕಾರ್ಯವಲಲ್ಲದೇ? ಕುರುಡ
ಕಾಣ ಪಥವ. ಹೆಳವ ನಡಿಯಲರಿಯ. ಒಂದಿಲ್ಲದಿದ್ದರೆ ಒಂದಾಗದು.
ಜ್ಞಾನವಿಲ್ಲದ ಕ್ರಿ ಜಡನು. ಕ್ರಿ ಇಲ್ಲದ ಜ್ಞಾನ ಭ್ರಾಂತು. ಇದು ಕಾರಣ
ಸಿದ್ಧಸೋಮನಾಥನಲ್ಲಿ ಎರಡೂ ಬೇಕು.

೨೩೫. ಕಣ್ಣೂ ಕಾಲೂ ಎರಡುಳ್ಳವ ದೂರ ಎಯ್ದುವನಲ್ಲದೆ,
ಕಣ್ಣೂ ಕಾಲೂ ಎರಡರೊಳಗೆ ಒಂದಿಲ್ಲದವನು ದೂರ ಎಯ್ದಲರಿಯ
ನೆಂಬಂತೆ, ಜ್ಞಾನ ರಹಿತವಾಗಿ ಕ್ರಿಯೆಯನೆಷ್ಟು ಮಾಡಿದರೇನು? ಅವನು
ಕಣ್ಣಿಲ್ಲದವನ ನಡೆಯಂತೆ. ಕ್ರಿಯಾ ರಹಿತವಾಗಿ ಜ್ಞಾನಿಯಾದಡೇನು,
ಅದು ಕಾಲಿಲ್ಲದವನ ಇರವಿನಂತೆ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವ
ರನ ನಿಜವ ಬೆರಿಸುವಡೆ, ಜ್ಞಾನವೂ ಕ್ರಿಯೆಯೂ ಎರಡೂ ಬೇಕು.

೨೩೬. ಅಗ್ನಿ ಸುಡಲಲ್ಲದೆ, ಸುಳಿಯಲರಿಯದು. ವಾಯು ಸುಳಿ
ವುದಲ್ಲದೆ, ಸುಡಲರಿಯದು. ಆ ಅಗ್ನಿ ವಾಯುವ ಕೂಡಿದಲ್ಲದೆ, ಅಡಿ
ಇಡಲರಿಯದು. ಈ ಪರಿಯಂತೆ ನರರರಿವರೆ ಕ್ರಿಯಾಜ್ಞಾನಭೇದ ರಾಮ
ನಾಥಾ.

ಅರ್ಥಃ— ಪಾವಕನು ಇದಿರಿಟ್ಟ ತರಗೆಲೆ ಕಾಷ್ಠಂಗಳನು ದಹಿಸ
ಬಲ್ಲುದಲ್ಲದೆ ಮುಂದಕ್ಕೆ ಅಡಿ ಇಡಲರಿಯದು. ಮಾರುತನು ತರಗೆಲೆ
ತೃಣಂಗಳನು ಸ್ವಸ್ಥಾನದಿಂದ ಪರಸ್ಥಾನಕ್ಕೆ ಹಾಕಬಲ್ಲುದಲ್ಲದೆ ದಹಿಸಲ
ರಿಯದೆಲ್ಲವನು. ಆ ಪಾವಕನು ಮರುತ ಸಂಯೋಗದಿಂದಲ್ಲದೆ ಹೆಜ್ಜೆ
ಇಟ್ಟು ಚರಿಸಲರಿಯದು. ಈ ಉಪಮಾನದ ಹಾಗೆ ಬಹಿರಂಗದ ಕ್ರಿಯೆ
ಯಿಂದ ಅಂತರಂಗದ ಜ್ಞಾನ ಪ್ರಭಾವಿಸಿ, ಸರ್ವಾಂಗಗಳ ಪ್ರಪಂಚ ದಹಿಸಿ,
ಉಭಯ ಲಿಂಗ ಸಂಗ ಸಂಬಂಧವ ಮಾಡಿಕೊಂಡು ಜ್ಞಾನ ಕ್ರಿಯಾಯುಕ್ತ
ನಾಗಿ ಆಚರಿಸುವ ವಿಚಾರವ ಪಶು ಪ್ರಾಣಿಗಳು ಅರಿಯರೆಂಬುದರ್ಥ.

೨೩೭. ಕ್ರಿಯೆಯೇ ಜ್ಞಾನ. ಆ ಜ್ಞಾನವೇ ಕ್ರಿಯೆ. ಜ್ಞಾನವೆಂ
ದರೆ ತಿಳಿಯುವುದು. ಕ್ರಿಯೆ ಎಂದರೆ, ತಿಳಿದಂತೆ ಮಾಡುವುದು. ಪರ
ಸ್ತ್ರೀ ಭೋಗಿಸಬಾರದೆಂಬುದೇ ಜ್ಞಾನ. ಅದರಂತೆ ಆಚರಿಸುವುದೇ ಕ್ರಿಯೆ.
ಅಂತು ಆಚರಿಸದಿದ್ದರೆ, ಅದೇ ಅಜ್ಞಾನ ನೋಡಾ ಕೂಡಲಚನ್ನಸಂ
ಗಮದೇವಾ.

೨೫೫. ಕ್ರಿಯೆ ಜಡವೆಂಬರು, ಜ್ಞಾನ ಅಜಡವೆಂಬರು. ಅದೆಂತಯ್ಯ? ನೀತಿಯು ಹೇಳಿದ್ದು ಜಡವೇ? ಕಷ್ಟವಿಲ್ಲದೆ ಬಂದಂತೆ ಬೊಗಳಿ, ಭೋಗಿಸಿ, ಭವಕ್ಕೆ ಹೋಗುವುದು ಅಜಡವೇ? ಕ್ರಿಯಾ ಜ್ಞಾನವೆಂಬ ಉಭಯ ಶಬ್ದದರ್ಥವನರಿಯದೆ, ಕಂಡ ಕಂಡ ಹಾಗೆ ಬೊಗಳುವ ಹೊಲೆ ಮಾದಿಗರನು ಏನೆಂಬೆ ಕೂಡಲಚನ್ನಸಂಗಮದೇವಾ?

೨೫೯. ಕ್ರಿಯೆಯೇ ಅಧಿಕವೆಂಬ ದೊಡ್ಡ ಸಿದ್ಧಾಂತಿಗಳ ಮಾತು ಸೊಗಸದಯ್ಯ ಎನಗೆ. ಅದೇನು ಕಾರಣವೆಂದರೆ, ಆವುದಾನೊಂದು ಪಕ್ಷಿ ಉಭಯ ರೆಕ್ಕೆಯಿಂದ ಗಗನಕ್ಕೆ ಹಾರುವಂತೆ, ಅಂತರಂಗದಲ್ಲಿ ಸವ್ಯಜ್ಞಾನ, ಬಹಿರಂಗದಲ್ಲಿ ಸತ್ಕ್ರಿಯಾ ಸವ್ಯಜ್ಞಾನ ಸಂಪನ್ನರಾದ ಶರಣರ ತೋರಿ, ಬದುಕಿಸಯ್ಯ ಎನ್ನ ಅಖಂಡೇಶ್ವರಾ.

೨೬೦. ಕ್ರಿಯೆ ಇಲ್ಲದ ಜ್ಞಾನ ಪ್ರಯೋಜನವಿಲ್ಲವಯ್ಯ. ಅದು ಹೇಗೆಂದಡೆ, ದೇಹವಿಲ್ಲದ ಪ್ರಾಣಕ್ಕೆ ಆಶ್ರಯ ಉಂಟೇ ಅಯ್ಯಾ? ಆ ಪ್ರಾಣವಿಲ್ಲದೆ ಕಾಯಕ್ಕೆ ಚೈತನ್ಯ ಉಂಟೇ ಅಯ್ಯಾ? ಅದು ಕ್ರಿಯೆ ಇಲ್ಲದೆ ಜ್ಞಾನಕ್ಕೆ ಆಶ್ರಯವಿಲ್ಲ. ಜ್ಞಾನವಿಲ್ಲದೆ ಕ್ರಿಯೆಗೆ ಆಶ್ರಯವಿಲ್ಲ. ಕ್ರಿಯಾ ಜ್ಞಾನ ಪ್ರಕಾಶವಿಲ್ಲದೆ ಲಿಂಗಕ್ಕೆ ಆಶ್ರಯವಿಲ್ಲ. ಇದು ಕಾರಣ ಜ್ಞಾನ ಕ್ರಿಯೋಪಚಾರಂಗಳಿರಬೇಕೆಂದೆನಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

ಅನುಭಾವಿಯಾಗಿ ವರ್ತಿಸುವುದು.

೨೬೧. ಅಯ್ಯ ನಿಮ್ಮ ಅನುಭಾವದಿಂದ ಎನ್ನ ತನುವು ಹಾಳಾಯಿತ್ತಯ್ಯಾ. ನಿಮ್ಮನುಭಾವದಿಂದ ಎನ್ನ ಮನ ಹಾಳಾಯಿತ್ತಯ್ಯಾ. ಅಯ್ಯ ನಿಮ್ಮ ಅನುಭಾವದಿಂದ ಎನ್ನ ಕರ್ಮ ಛೇದನವಾಯಿತ್ತಯ್ಯ. ನಿಮ್ಮವರು ಅಡಿಗಡಿಗೆ ಹೇಳಿ, ಭಕ್ತಿ ಎಂಬ ಒಡವೆಯನು ದಿಟವಾಡಿ ತೋರಿದರು ಕಾಣಾ ಕೂಡಲಸಂಗಮದೇವಾ.

೨೬೨. ಮರುಳ ಕಂಡ ಕನಸಿನ ಪರಿಯಂತೆ. ಶಿವಾಚಾರ ಕರಿಯು ಕನ್ನಡಿಯೊಳಗಡಗಿದಂತಯ್ಯ. ಗುಣಿಯವಗುಣಿಯೊಡನಾಡಿದರೆ, ಅದೇ

ಆತನ ಕರ್ಮದ ಫಲ ನೋಡಾ. ಕೂಡಲಸಂಗಮದೇವನ ಶರಣರನು ಭಾವ ಭವದುಃಖಿಗಳಿಗೆ ವೇದ್ಯವಾಗದು.

೨೬೩. ಆದಿಯಲ್ಲಿ ಶಿವಬೀಜವಲ್ಲದವರಿಗೆ ವೇದ್ಯವಾಗದು. ಶಿವಜ್ಞಾನ, ಶಿವಭಕ್ತಿ, ಲಿಂಗಸ್ಥಲವಳವಡದು. ಜಂಗಮಸ್ಥಲವಳವಡದು. ಪಾದೋದಕ ಪ್ರಸಾದಸ್ಥಲವಳವಡದು. ನರಕದಲ್ಲಿ ಬೀಳುವ ಕರ್ಮಿಗಳಿಗೆ ಕೂಡಲಸಂಗನ ಶರಣರನುಭಾವ ನೆಲೆಗೊಳ್ಳದು.

೨೬೪ ಅಯ್ಯ, ನಿಮ್ಮ ಅನುಭಾವದಿಂದ ಎನ್ನ ತನುವು ಹಾಳಾಯಿತ್ತಯ್ಯಾ? ನಿಮ್ಮನುಭಾವದಿಂದ ಎನ್ನ ಮನ ಹಾಳಾಯಿತ್ತಯ್ಯ? ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ಕರ್ಮ ಛೇದನವಾಯಿತ್ತಯ್ಯ? ನಿಮ್ಮವರು ಅಡಿಗಡಿಗೆ ಹೇಳಿ ಭಕ್ತಿ ಎಂಬ ಒಡವೆಯನು ದಿಟವಾಡಿ ತೋರಿದರು ಕಾಣಾ ಕೂಡಲಸಂಗಮದೇವಾ.

೨೬೫. ಅಯ್ಯಗಳನುಭಾವಕ್ಕಲ್ಲದೆ ನಿನ್ನ ಪಾಪಕ್ಕೆ ಅವರು ಅಯ್ಯಗಳೇ? ಅಯ್ಯಗಳನುಭಾವ, ನಿನ್ನ ಮನೋಭಾವ ಏಕವಾದರೆ ಅಯ್ಯ ತನುವೇರಿತ್ತಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೨೬೬. ಬಂದಲ್ಲುಪಚರಿಸುವದಲ್ಲದೆ ನಿಂದನಿಂದಲ್ಲುಪಚರಿಸುವುದು ಭಕ್ತಿಯ ಕೊಂಕು ನೋಡಯ್ಯ. ಉಪಚಾರಕ್ಕೆ ಬಂದಾತ ಜಂಗಮನಲ್ಲ ನೋಡಯ್ಯ. ಉಪಚರಿಸಿದವ ಭಕ್ತನಲ್ಲ. ಅನುಭವಕ್ಕೆ ಬಂದಿಹನಯ್ಯ ಜಂಗಮ. ಅನುಭವಕ್ಕೆ ಮಾಡುವನಯ್ಯ ಉಪಚಾರವ ಭಕ್ತ ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ.

೨೬೭. ವಚಿಸಿ ಅನುಭಾವಿಯಾಗದವ ಪಿಶಾಚಿಯಯ್ಯ. ವಚಿಸಿ ಅನುಭಾವಿಯಾದವ ಪಂಡಿತನಯ್ಯ. ವಿದ್ಯೆ ಎಂಬುದು ಅಭ್ಯಾಸಿಕನ ಕೈವಶ. ಅವಿದ್ಯೆ ಎಂಬುದು ಸರ್ವರಲ್ಲಿ ವಶ. ವಿದ್ಯೆ ಅವಿದ್ಯೆಯನರಿತು ಜಗದ್ವೇದ್ಯನಾಗಬಲ್ಲರೆ ಮಹಾ ಪಂಡಿತ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೬೮. ಗುರುಮುಖದಿಂದಾಗಲಿ ಶಾಸ್ತ್ರಮುಖದಿಂದಾಗಲಿ ಮತ್ತಾವ ಮುಖದಿಂದಾಗಲಿ ತಿಳಿದನುಭಾವಿಯೇ ಸಂಸ್ಥಾರಿ ನೋಡಾ. ಆತನೇ ಪರಮ ವೀರಶೈವ ನೋಡಾ. ಆತನೇ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ ಕಲ್ಲಯ್ಯ.

೨೪೯. ಗುರುಲಿಂಗ ಜಂಗಮವು ಸನ್ಮತವಾದ ಕ್ರಿಯೆಯನಹು ದಾಗದೆಂಬುವರು. ಸತ್ಕ್ರಿಯೆಯಿಡಿದು ತನುವ ಗಮಿಸುವುದು. ಅರು ಹುವಿಡಿದು, ಮನವ ಗಮಿಸುವುದು. ಸಾಕ್ಷಿ॥ 'ಕ್ರಿಯಾದ್ವೈತ ನ ಕರ್ತವ್ಯಂ। ಭಾವಾದ್ವೈತ ಸಮಾಚರೇತ್। ಕ್ರಿಯಾ ನಿರ್ವಹತೇ ಯಸ್ತು। ಭಾವ ಶುದ್ಧಂತು ಶಾಂಕರೀ' ಎಂದುದಾಗಿ ಅನುಭಾವದಿಂದೆ ಸಕಲೇಂದ್ರಿಯಂ ಗಳು ನಮ್ಮ ಕೂಡಲಚನ್ನಸಂಗಯ್ಯನಲ್ಲಿ ತದ್ರೂಪು.

೨೪೪. ಆದಿಯಲ್ಲಿ ಶಿವಬೀಜವಲ್ಲದವಂಗೆ ವೇದ್ಯವಾಗದು. ಶಿವ ಜ್ಞಾನ, ಶಿವಭಕ್ತಿ, ಲಿಂಗಸ್ಥಲವಳವಡದು, ಜಂಗಮಸ್ಥಲವಳವಡದು, ಪಾದೋದಕ ಪ್ರಸಾದಸ್ಥಲವಳವಡದು, ನರಕದಲ್ಲಿ ಬೀಳುವ ಕರ್ಮಿಗ ಳಿಗೆ ಕೂಡಲಸಂಗನ ಶರಣರನುಭಾವ ನೆಲೆಗೊಳ್ಳದು.

ಶರಣರ ವಚನಾನುಭವದಂತೆ ನಡೆ.

೨೪೫. ನಮ್ಮ ನಡಾವಳಿಗೆ ನಮ್ಮ ಪುರಾತರ ನುಡಿಯೇ ಇಷ್ಟ ವಯ್ಯ. ಸ್ಮೃತಿಗಳು ಸಮುದ್ರವಾಗಲಿ. ಶ್ರುತಿಗಳು ವೈಕುಂಠ ಸೇರಲಿ. ಪುರಾಣಗಳು ಅಗ್ನಿಯ ಸೇರಲಿ. ಆಗಮಗಳು ವಾಯುವ ಹೊಂದಲಿ. ಎಮ್ಮ ನುಡಿ ಕಪಿಲಸಿದ್ಧಮಲ್ಲಿಕಾರ್ಜುನ ಮಹಾಲಿಂಗದ ಹೃದಯದೊಳು ಗ್ರಂಥಿಯಾಗಿರಲಿ.

೨೪೬. ಪುರಾಣವ ಹೇಳಿದವರೆಲ್ಲ ಪುರಾಣಿಕರು ನೋಡಾ. ಭವ ಭವದ ಶಾಸ್ತ್ರವ ಹೇಳಿದವರೆಲ್ಲ ಶಾಸ್ತ್ರಿಗಳು ನೋಡಾ. ವೇದಾಂತವ ಹೇಳಿದವರೆಲ್ಲ ವೇದಾಂತಿಗಳು ನೋಡಾ. ಭವಭವದಲ್ಲಿ ಆದ್ಯರ ವಚ ನವ ಹೇಳಿದವರೆಲ್ಲ ಪುರಾತನರು ನೋಡಾ, ಭವಭವದಲ್ಲಿ ಕಪಿಲಸಿದ್ಧ ಮಲ್ಲಿಕಾರ್ಜುನಾ.

೨೪೭. ಎಲ್ಲ ಪುರಾಣಕ್ಕೆ ಹೆಸರುಂಟು. ನಮ್ಮ ಪುರಾಣಕ್ಕೆ ಹೆಸ ರಿಲ್ಲ ನೋಡಯ್ಯ. ಲಿಂಗದ ಮಹತ್ವ ಹೇಳಿದಲ್ಲಿ ಲಿಂಗ ಪುರಾಣವೆನಿ ಸಿತ್ತು. ಷಣ್ಮುಖನ ಮಹತ್ಮೆ ಹೇಳಿದಲ್ಲಿ ಸ್ಕಂದ ಪುರಾಣವೆನಿಸಿತ್ತು.

೨೪೪. ಕಾಯಾನುಗ್ರಹಭಾವಿಗಳು ಕಾಯದಲ್ಲಿಯೇ ಮುಕ್ತರು. ಜೀವಾನುಗ್ರಹಭಾವಿಗಳು ಜೀವದಲ್ಲಿಯೇ ಮುಕ್ತರು. ಪ್ರಾಣಾನು ಗ್ರಹಭಾವಿಗಳು ಪ್ರಾಣದಲ್ಲಿಯೇ ಮುಕ್ತರು. ಪವನಾನುಗ್ರಹಭಾವಿ ಗಳು ಪವನದಲ್ಲಿಯೇ ಮುಕ್ತರು. ಇಂತಿವರೆಲ್ಲರು ಲಿಂಗಾನುಭಾವಿಗಳೆಂತು ಸರಿ ಎಂಬೆನಯ್ಯ? ಆದಿ ಅನಾದಿಯ ಸಂದಳಿಯಿತ್ತು. ಪ್ರಣವ ಪ್ರಜ್ವಲಿತವಾದ ಕಾಲ ಕರ್ಮವಳಿದು, ಪ್ರಾಣಲಿಂಗವಾಯಿತ್ತು ನೋಡಾ ಕೂಡಲ ಚನ್ನಸಂಗಮದೇವಾ.

೨೪೦. ಭಕ್ತಿಗೆ ಅನುಭಾವವೇ ಬೀಜ ಕಾಣಿರೋ. ಭಕ್ತಿಗೆ ಅನು ಭಾವವೇ ಆಚರಣೆ ಕಾಣಿರೋ. ಭಕ್ತಿಗೆ ಅನುಭಾವವೇ ಸಕಲೈಶ್ವ ರ್ಯದ ಶೃಂಗಾರ ಕಾಣಿರೋ. ವೀರಶೈವಾಚಾರ ಸಂಪನ್ನರೆನಿಸುವ ಪರಮ ಸಭ್ಯಕ್ತನಿಗೆ ಅನುಭಾವವೇ ಅರಿವಿನ ಗೊತ್ತು ಕಾಣಿರೋ. ಅದು ಕಾರಣವಾಗಿ ಅನುಭಾವವಿಲ್ಲದವನ ಭಕ್ತಿ ಎಳತಟಗೊಳಿಸಿತ್ತು. ಅನು ಭಾವವನರಿಯದವ ಕಾಮುಕ ಕಾಣಿರೋ. ಆ ಮಹಾನುಭಾವವ ಮಾಡುವಲ್ಲಿ ಸಕಲ ಸಂಚಲವಳಿದು ವಿನಯವಿಂದೆ ಕೇಳದಿರ್ದೊಡೆ, ನಮ್ಮ ಕೂಡಲಚನ್ನಸಂಗಮದೇವರು ಅಘೋರ ನರಕದಲ್ಲಿಕ್ಕದೆ ಮಾಣ್ಪನೇ?

೨೪೧. ಕರ್ಮಿಯ ಕರ್ಮ ನಿಃಕರ್ಮವಲ್ಲೆಂದು ನಂಬಬಾರದಯ್ಯ. ಮುಮುಕ್ಷುವಿನ ಮೋಕ್ಷ ಮೂರರಲ್ಲೆಂದು ನಂಬಬಾರದಯ್ಯ. ಅಭ್ಯಾ ಸಿಯ ಮೋಕ್ಷ ಜನ್ಮದ್ವಯದಲ್ಲೆಂದು ನಂಬಬಾರದಯ್ಯ. ಅನುಭಾವಿಯ ಜನ್ಮ ಒಂದರಲ್ಲೆಂದು ನಂಬಬಹುದೇ ಅಯ್ಯ? ಆರೂಢನ ಜನ್ಮ ಕಪಿಲಸಿದ್ಧಮಲ್ಲಿಕಾರ್ಜುನನ ಜನ್ಮವೆಂದು ನಂಬಲೇಬೇಕು ಹಾವಿನಹಾಳ ಕಲ್ಲಯ್ಯ.

೨೪೨. ತ್ರಿಕರಣ ಶುದ್ಧವಾಗಿ ಆಚಾರ ಪೂರಿತವಾಗಿ ಅನುಭಾವ ಯುಕ್ತವಾಗಿ ನಿಮ್ಮ ನೆರಿಸಂಬಿ ಮಾಡಿದೊಡೆ ನಿಜಮುಕ್ತಿಯಹುದು. ಅನುಭಾವ ಇಲ್ಲದ ಭಕ್ತಿ ಎಳತಟಗೊಳಿಸುವುದು. ಅತಿ ಚಪಳಿಗನಾದ ಜಂಗಮ, ಸಂಸಾರಿಯಾದ ಭಕ್ತ, ನಿಃಸಂಸಾರಿಯಾದ ವೈರಾಗ್ಯವು, ಸಂಸಾರ ನಿಷ್ಠೆಯು, ಒಂದಾದೊಡೆ ತೆರಹಿಲ್ಲದಿರ್ಪ ನಮ್ಮ ಕೂಡಲ ಚನ್ನಸಂಗಮದೇವಾ.

ವೀರಭದ್ರನ ಮಹತ್ತ್ವ ಹೇಳವಲ್ಲಿ ದಕ್ಷಖಂಡವೆನಿಸಿತ್ತು. ಶಿವನ ಮಹಿಮೆ ಕಾಶೀ ಮಹಿಮೆ ಹೇಳದಲ್ಲಿ ಶಿವಪುರಾಣ ಕಾಶೀಖಂಡವೆನಿಸಿತ್ತು. ಪಾರ್ವತಿಯ ಮಹಾತ್ಮೆ ಹೇಳದಲ್ಲಿ ಕಾಳೀ ಪುರಾಣವೆನಿಸಿತ್ತು. ನಮ್ಮ ಪುರಾಣ ಹೆಸರಿಡಬೇಕೆಂದರೆ, ನಿಃಶಬ್ದ ನಿರವಯಲ ಪುರಾಣ ತಾನೆಯಾಯಿತ್ತು. ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೫. ಸಿದ್ಧಾಂತಿಯ ಜ್ಞಾನ ಸಾಧನೆಯಲ್ಲಿ ಹೋಯಿತ್ತು. ವೇದಾಂತಿಯ ಜ್ಞಾನ ವಾದದಲ್ಲಿ ಹೋಯಿತ್ತು. ಕ್ರಿಯಾವಂತನ ಜ್ಞಾನ ನುಡಿಯಲ್ಲಿ ಹೋಯಿತ್ತು. ವ್ಯವಹಾರಿಕನ ಜ್ಞಾನ ದ್ರವ್ಯಾರ್ಜನೆಯಲ್ಲಿ ಹೋಯಿತ್ತು. ಇವೆಲ್ಲ ಭವಕ್ಕೆ ಕಾರಣವಲ್ಲದೆ ಭವರಹಿತ ಜ್ಞಾನವು ಸಾಧ್ಯವಾಗುವದು ದುರ್ಲಭವಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೨೬. ಓದಿದ ಫಲ ಕೂಚಭಟ್ಟನಂತಾಗಬಾರದು. ಓದಿದ ಫಲ ಪಾರಾಶರನಂತಾಗಬಾರದು. ಓದಿದ ಫಲ ಮಯೂರನಂತಾಗಬಾರದು. ಓದಿದ ಫಲ ನಮ್ಮ ಹಾವಿನಹಾಳ ಕಲ್ಲಯ್ಯನ ಮನೆಯ ಶ್ವಾನನಂತಾಗಬೇಕು ಕಾಣಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೭. ಅವು ಬಯಲಾದಂದಿಂಗೆ ಎಮ್ಮ ಪುರಾಣ ಸಾಗವೇನಯ್ಯ? ಎಮ್ಮ ಪುರಾಣವಾದಂದಿಂಗೆ ಜನರು ನಾಮವ ಹೊತ್ತು ನಡೆಯರೇನಯ್ಯ? ಎಮ್ಮ ಪುರಾಣ ಶಿವಪುರಾಣ. ಎಮಗೆ ಗುರುಲಿಂಗ ಜಂಗಮತ್ರಯವು ಒಂದೇ ಎಂದು ತಿಳಿವ ಅರುಹಿನ ಜ್ಞಾನ ಪುರಾಣ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೮. ಕಲ್ಲುಟಿಗನ ಕೈಯ್ಯಲ್ಲಿ ಕಲ್ಲುಳಿ ಕೊಟ್ಟರೆ ಕೊಟ್ಟಂತಲ್ಲದೆ ಕಲ್ಲು ರೂಪಾಗಿ ಬಾರದಯ್ಯ. ಆದ್ಯರ ವಚನ ಅವಿದ್ಯಾವಂತರ ಜಿಹ್ವೆಯಲ್ಲಿದ್ದರೆ ಇದ್ದಂತೆ ಅಲ್ಲದೆ, ವಿದ್ಯಾಮಯ ಕೀರ್ತಿಯಾಗನಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೨೯. ವ್ಯಾಕರಣವನೋದಿದಲ್ಲಿ ಶಬ್ದ ಶುದ್ಧಿಯಲ್ಲದೆ ಮನ ಶುದ್ಧವಾಗಿ ಜ್ಞಾನ ಶುದ್ಧಿಯಾಗದು. ಛಂದಸ್ಸನು ಸಾಧಿಸಿದಲ್ಲಿ ಕವಿತಾ ಶುದ್ಧಿಯಲ್ಲದೆ ಕವಿತೆಯ ಸಾಧಿಸಿ ವ್ಯಾಸನಂತೆ ಚಿರಂಜೀವಿಯಾಗನು. ಅಷ್ಟಾದಶ ಪುರಾಣವ ಸಾಧಿಸಿದಲ್ಲಿ ವಾಕ್ಶುದ್ಧಿಯಲ್ಲದೆ ಕಪಿಲಸಿದ್ಧಮಲ್ಲಿಕಾರ್ಜುನ ಮಹಾದೇವನ ದೇಹ ಸ್ವಭಾವ ಶುದ್ಧಿಯಾಗದು ನೋಡಾ.

೩೦. ವೇದವನೋದಿ ವೇದಾಧ್ಯಯನವ ಮಾಡಿದರೇನು? ಬ್ರಾಹ್ಮಣನಾಗಬಲ್ಲನೇ? ಬ್ರಹ್ಮನೇತ್ತುಗಳ ಶುಕ್ಲ ಶೋಣಿತದಿಂದ ಜನಿಸಿದರೇನು? ಬ್ರಾಹ್ಮಣನಾಗಬಲ್ಲನೇ? ಯಜನಾದ್ಯಷ್ಟ ಕರ್ಮಂಗಳ ಬಿಡದೆ ಮಾಡಿದರೇನು? ಬ್ರಾಹ್ಮಣನಾಗಬಲ್ಲನೇ? 'ಬ್ರಹ್ಮ ಜಾನಾತಿ ಬ್ರಾಹ್ಮಣ' ಎಂಬ ವೇದ ವಾಕ್ಯವನರಿತು ಬ್ರಹ್ಮಭೂತನಾದಾತನೇ ಬ್ರಾಹ್ಮಣ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೩೧. ಗುಣದಿಂದ ಹಾರುವನಲ್ಲದೆ ಅಗಣಿತ ವಿದ್ಯಾಭ್ಯಾಸದಿಂದ ಹಾರುವನಲ್ಲ ನೋಡಾ. ಹಾರಬೇಕು ಮಲತ್ರಯಂಗಳ. ಹಾರಬೇಕು ಸೃಷ್ಟಿ ಸ್ಥಿತಿ ಲಯವ. ಹಾರಬೇಕು ಸರ್ಪಹಾರ ಕಪಿಲಸಿದ್ಧಮಲ್ಲಿಕಾರ್ಜುನ ಆಹಾರದಲ್ಲಿ.

ಕ್ರಿಯೆಯಲ್ಲಿ ಪ್ರಗತಿ.

೩೨. ಭಕ್ತಸ್ಥಲವಿಡಿದಾಚರಿಸಬೇಕೆಂಬುವನ ಭಾಷೆ ಕಟ್ಟಾಳಿನ ಭಾಷೆ. ಭಕ್ತನಾಗಿ ಭಕ್ತಸ್ಥಲವಾವರಿಸುವದದು ಯೋಗ್ಯವಯ್ಯ. ಭಕ್ತನಾಗಿ ಮಹೇಶಸ್ಥಲ ಅಳವಡಬಾರದೇನಯ್ಯ? ಭಕ್ತನಾಗಿ ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯಸ್ಥಲವಳವಡಬಾರದೇನಯ್ಯ? ಮನೆಯಲ್ಲಿದ್ದ ಪೆತ್ತಗಳು ಮನೆಯ ಮೀರಿ ಮೀರಿ ಹಾರಬಾರದೇನಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೩೩. ಮೆಲ್ಲಮೆಲ್ಲನೆ ಭಕ್ತ, ಮೆಲ್ಲಮೆಲ್ಲನೆ ಮಹೇಶ್ವರ, ಮೆಲ್ಲಮೆಲ್ಲನೆ ಪ್ರಸಾದಿ, ಮೆಲ್ಲಮೆಲ್ಲನೆ ಪ್ರಾಣಲಿಂಗಿ, ಮೆಲ್ಲಮೆಲ್ಲನೆ ಶರಣ, ಮೆಲ್ಲಮೆಲ್ಲನೆ ಐಕ್ಯನಾದೆವೆಂಬರು ನಿಮ್ಮ ಶರಣರು. ತಾವೇನು ಮರು ಜೀವಣಿಯ ಕೊಂಡಿದ್ದರೇ? ಅಮೃತ ಸೇವನೆಯ ಮಾಡಿದ್ದರೇ? ಆವ ಸ್ಥಲದಲ್ಲಿ ನಿಂದಿದ್ದರೂ ಆ ಸ್ಥಲದಲ್ಲಿ ಷಟ್‌ಸ್ಥಲವಾಗದಿದ್ದಡೆ, ಆ ಭಕ್ತನ ಬಾಯಲ್ಲಿ ಹುಡಿಮಣ್ಣ ಹೊಯ್ದು ಹೋಗನೇ ನಮ್ಮ ಕೂಡಲ ಚನ್ನಸಂಗಮದೇವಾ?

೨೬. ಮೆಲ್ಲಮೆಲ್ಲನೆ ಭಕ್ತನೆನಿಸಿಕೊಂಬೆ. ಮೆಲ್ಲಮೆಲ್ಲನೆ ಮಾಹೇಶ್ವರನೆನಿಸಿಕೊಂಬೆ. ಮೆಲ್ಲಮೆಲ್ಲನೆ ಪ್ರಸಾದಿ ಎನಿಸಿಕೊಂಬೆ. ಮೆಲ್ಲಮೆಲ್ಲನೆ ಪ್ರಾಣಲಿಂಗಿ ಎನಿಸಿಕೊಂಬೆ. ಮೆಲ್ಲಮೆಲ್ಲನೆ ಶರಣನೆನಿಸಿಕೊಂಬೆ. ಮೆಲ್ಲಮೆಲ್ಲನೆ ಐಕ್ಯನೆನಿಸಿಕೊಂಬೆ. ಮೆಲ್ಲಮೆಲ್ಲನೆ ಷಟ್‌ಸ್ಥಲವ ಮೀರಿ ನಿರವಯಸ್ಥಲವನೆಯ್ದುವೆನಯ್ಯ ಕೂಡಲಸಂಗಮದೇವಾ.

೨೭. ಕ್ರಿಯೆ ಎಂಬುದು ಪಿಪೀಲಿಕನ ಗುಣ. ಜ್ಞಾನವೆಂಬುದು ವಿಹಂಗನ ಗುಣ. ಮೆಲ್ಲಮೆಲ್ಲನೆ ತಿಳಿದಲ್ಲಿ ಕ್ರಿಯೆ ಎನಿಸಿತ್ತು. ಏಕಕಾಲಕ್ಕೆಳವಟ್ಟಲ್ಲಿ ಕಪಿಲಸಿದ್ಧಮಲ್ಲಿಕಾರ್ಜುನನ ಮನೆ ಸೂರೆಗೊಂಬ ತಸ್ಕರ ಜ್ಞಾನವೆನಿಸಿತ್ತು ಮರುಳ ಶಂಕರಯ್ಯ.

೨೮. ಶ್ರೀಗುರು ಕಾರುಣ್ಯ ಸಂಪಾದನೆಯಾದಲ್ಲಿ ಮಾರ್ಗಕ್ರಿಯೆ, ಮೀರಿದ ಕ್ರಿಯೆ ಸಂಪಾದನೆಯಾದಲ್ಲಿ ಸದ್ಭಕ್ತ, ಸಮರಸಭಕ್ತಿ ಸಂಪಾದನೆಯಾದಲ್ಲಿ ಭಾವ, ನಿರ್ಭಾವ ನಿಷ್ಠೆಯಾದಲ್ಲಿ ಆರ್ಪಿತ, ಏಕಾರ್ಥವಾದಾಗಳೇ ಮಹಸ್ಥಲವೆನಿಸುವದು. ಆ ಸ್ಥಲವನೆ ಅತ್ಯಂತ ಪ್ರೀತಿಯಿಂದೆ ಮಹಾವಿಶೇಷವೆಂದು, ಗಳದಲ್ಲಿ ಧರಿಸುವಡೆ ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಗಳದಲ್ಲಿ ಧರಿಸುವ ಕ್ರಮವು.

೨೯. ಕುಂಡಲಿ ಬಂದು ಕೇಡಿಯನು ಕುಂಡಲಿಯ ಮಾಡಿತ್ತಯ್ಯ. ಅಗ್ನಿ ಬಂದು ಕಾಷ್ಠವ ಅಗ್ನಿಯ ಮಾಡಿತ್ತಯ್ಯ. ಮುಕ್ತೇಶ ಬಂದು ಭಕ್ತನ ಮಹೇಶನ ಮಾಡಿ ಗವಿಸಿದನಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೩೦. ಏನೆಂಬೆ, ಏನೆಂಬೆ ಕೊಟ್ಟ ದೇವರಂದವ ? ಮನದಲ್ಲಿ ಘನಲಿಂಗವಾಯಿತ್ತು. ಧ್ಯಾನದಲ್ಲಿ ಭಾವಲಿಂಗವಾಯಿತ್ತು. ನೇತ್ರದಲ್ಲಿ ಶಿವಲಿಂಗವಾಯಿತ್ತು. ಹೃದಯದಲ್ಲಿ ಮಹಾಲಿಂಗವಾಯಿತ್ತು. ಕರಸ್ಥಲದಲ್ಲಿ ಇಷ್ಟಲಿಂಗವಾಗಿ ಅಳವಟ್ಟಿತ್ತು. ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ ಎಲ್ಲ ಕಡೆಯಲ್ಲಿ ಪರಾತ್ಪರ ವಸ್ತುವಾಗಿ ಚನ್ನಬಸವಣ್ಣನಾಗಿ ನಾನು ಮರೆದೆನಯ್ಯ.

೩೧. ಆಚಾರಲಿಂಗವಿಡಿದು ಅನುಭಾವ ಲಿಂಗಸಿದ್ಧಿ. ಅನುಭಾವ ಲಿಂಗವಿಡಿದು ಮಾರ್ಗಕ್ರಿಲಿಂಗಸಿದ್ಧಿ. ಮಾರ್ಗಕ್ರಿಲಿಂಗವಿಡಿದು ಮೀರಿದ ಕ್ರಿಲಿಂಗಸಿದ್ಧಿ. ಮೀರಿದ ಕ್ರಿಲಿಂಗವಿಡಿದು ಕ್ರಿಯಾನಿಷ್ಪತ್ತಿಲಿಂಗಸಿದ್ಧಿ. ಇದುಕಾರಣ ಕೂಡಲಸಂಗಮದೇವಾ, ಲಿಂಗವಿಡಿದು ಲಿಂಗಸಿದ್ಧಿ.

೩೨. ಭಕ್ತನೆನಿಸುವೆನಯ್ಯ ಮೆಲ್ಲಮೆಲ್ಲನೆ. ಯುಕ್ತನೆನಿಸುವೆನಯ್ಯ ಮೆಲ್ಲಮೆಲ್ಲನೆ. ಸಾರಿ ಶರಣನೆನಿಸುವೆನಯ್ಯ ಮೆಲ್ಲಮೆಲ್ಲನೆ. ಎಡಹುವ ಗುಳಿಗಳ ದಾಂಟಿ ಬರಬರ ಲಿಂಗೈಕ್ಯನೆನಿಸುವೆನಯ್ಯ. ಕೂಡಲಸಂಗಮದೇವಾ ನಿಮ್ಮಿಂದಧಿಕನೆನಿಸುವೆನಯ್ಯ.

೩೩. "ಯಸ್ಯ ಕ್ರೀತಸ್ಯ ಭವತಿ" ಎಂದು ಕಟ್ಟಾಚಾರದಲು ಇದು ಅನು ಅನುಸರಿಸಿಕೊಂಡು ನಡೆವನ್ನಕ್ಕ ಕರ್ಮ ಕಾಂಡಿಯಲ್ಲ. ಉತ್ಪತ್ತಿ ಸ್ಥಿತಿ ಭೋಗ ಭುಕ್ತಿ ಕಾಯವುಳ್ಳನ್ನಕ್ಕ ಭಕ್ತಿಕಾಂಡಿಯಲ್ಲ. ಪರವು ಸಾಧ್ಯವಾಯಿತ್ತೆಂದು ಕ್ರಿಯೆಲ್ಲವ ಮೀರಿ ನಡೆವೆನು, ಪರತತ್ವವನರಿದಿಹೆನು ಎಂಬನ್ನಕ್ಕ ಜ್ಞಾನ ಕಾಂಡಿಯಲ್ಲ. ಇನ್ನು ಕರ್ಮಕಾಂಡಿ, ಭಕ್ತಿಕಾಂಡಿ, ಜ್ಞಾನಕಾಂಡಿ, ಈ ತ್ರಿವಿಧದಲ್ಲಿ ವಂಚಕನಾದರೆ ಈಸು ವಿಧದೊಳಗೆ ಅಂಗವಿಲ್ಲ. ಮೇಲೆ ಸತ್ಪುರುಷರ ಸಂಗವಿಲ್ಲ. ಯುಕ್ತಿ ಇಲ್ಲ. ಎನಗೆ ಭಕ್ತಿ ಎಂತಹುದಯ್ಯ? ಬಲ್ಲವರ ಬೆಸಗೊಂಡರೆ ಎನ್ನ ಬಿಮ್ಮು ಕೆಟ್ಟಪುದೆಂದು, ಮೆಲ್ಲನೆ ಪ್ರಸಂಗದಿಂದ ತಿಳಿದು ನೋಡುವೆ. ಕೂಡಲಸಂಗಮದೇವಾ ಎನ್ನ ಗುಣವ ನೋಡದೆ ಶಿವರಾತ್ರಿಯ ಸಂಕಣ್ಣಗಳಿಗೆ ಕರುಣಿಸಿದಂತೆ ಎನಗೆ ಕೃಪೆಯ ಮಾಡಯ್ಯಾ.

ಪ್ರಗತಿಯನ್ನು ಹೊಂದುತ್ತ ಕ್ರಿಯೆಗಳನ್ನು ಮೀರುವುದು.

೩೪. ಹಸಿವರತಲ್ಲದೆ, ಪ್ರಸಾದಿಯಲ್ಲ. ತೃಷೆಯರತಲ್ಲದೆ ಪಾದೋದಕಿಯಲ್ಲ. ನಿದ್ರೆಯರತಲ್ಲದೆ ಭವ ವೀಹಿತನಲ್ಲ. ಅನಲ ಪವನ ಗುಣವರತಲ್ಲದೆ ಜನನ ಮರಣ ವಿರಹಿತನಲ್ಲ. ಇದುಕಾರಣ ಕೂಡಲಸಂಗಮ್ಯನಲ್ಲಿ ಎಲ್ಲಂಗೆಲ್ಲಿಯದೋ ಲಿಂಗೈಕ್ಯವು ?

೩೫. ಆಹಾರ ನಾಸ್ತಿಯಾದುದೇ ಗುರು. ಗುರು ನಾಸ್ತಿಯಾದುದೇ ಲಿಂಗ. ಕಾಯಗುಣ ನಾಸ್ತಿಯಾದುದೇ ವಿಭೂತಿ. ಕರಣಗುಣ ನಾಸ್ತಿಯಾದುದೇ ರುದ್ರಾಕ್ಷಿ. ಮರಹು ನಾಸ್ತಿಯಾದುದೇ ಮಂತ್ರ. ಇಂತೀ ಪಂಚಾಚಾರ ಪ್ರತಿಷ್ಠೆಯುಳ್ಳವನೇ ನಮ್ಮ ಕೂಡಲಚನ್ನಯ್ಯನಲ್ಲಿ ಸದಾಚಾರ ಸಂಪನ್ನನೆನಿಸುವನು.

೨೭೭. ವೀರನಾದರೆ ಸೈರಿಗಳ ಕಾಟ ಬಹಳವಯ್ಯಾ. ದಾನಶೂರನಾದರೆ ಯಾಚಕರ ಗೋಳು ಬಹಳವಯ್ಯ. ಮೂರರಲ್ಲಿ ನಿಂತರೆ ಷಡಿಪುಯಂಗಳ ಘೋರ ಹೆಚ್ಚಾಯಿತಯ್ಯ. ಅಂಗದಲ್ಲಿ ಲಿಂಗ ಸಂಬಂಧವಾಗಬಾರದು. ಆದ ಬಳಿಕ ವೀರನಾಗಿ ವಿಷಯಗಳಳಿವುದು ಬಹು ಘೋರವು, ಬಹು ಘೋರವು ನೋಡಯ್ಯ ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ.

೨೭೮. ವಿಧಿ ನಿಷೇಧಗಳಿಲ್ಲದವನಾದೆ ನೀ ನೋಡಯ್ಯ. ಜಪತಪವಿಲ್ಲದ ಮಹಾ ಮುನಿ ನೀ ನೋಡಯ್ಯ. ಇಹಪರ ಸುಖದುಃಖಾತೀತನಯ್ಯ ನಿಮ್ಮ ಶರಣ ಕಪಿಲಸಿದ್ಧಮಲ್ಲಿಕಾರ್ಜುನಾ.

೨೭೯. ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ. ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯಾ. ಜಗಕ್ಕೆ ಬಲ್ಲಿದ ನೀನು. ಅನುನಿನಗೆ ಬಲ್ಲಿದನು ಕಾಡಯ್ಯಾ. ಕರಿಯು ಕನ್ನಡಿಯೊಳಗಡಗಿದಂತಯ್ಯಾ. ಎನ್ನೊಳಗೆ ನೀನಡಗಿದೆ ಕೂಡಲಸಂಗಮದೇವಾ.

ಅಂಗಲಿಂಗ ಸಾಮರಸ್ಯವು.

೨೮೦. ಕಾಯ ಮುನ್ನವೋ, ಕಾಯದಲ್ಲಿಪ್ಪ ಮನ ಮುನ್ನವೋ? ಮನ ಮುನ್ನವೋ ಮನದಲ್ಲಿಪ್ಪ ಚೈತನ್ಯ ಮುನ್ನವೋ? ಚೈತನ್ಯ ಮುನ್ನವೋ ಚೈತನ್ಯಾತ್ಮಕ ಮಾಯೆ ಮುನ್ನವೋ? ಅವು ಮುನ್ನವಲ್ಲ, ಮುನ್ನವಲ್ಲ. ನಿನ್ನ ನಿರಾಳನಿಜದ ನಿರ್ವಯಲಿನ ಶೂನ್ಯಾಶೂನ್ಯವೇ ಮುನ್ನ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೮೧. ಮಾರ್ಗ ಕ್ರಿಯಾಸಮಯದಲ್ಲಿ ಶಿವಭಕ್ತಿ ಸಂಪನ್ನನಾಗಿ, ಮೀರಿದ ಕ್ರಿಯಾಸಮಯದಲ್ಲಿ ಶಿವಲಿಂಗ ಸಂಪನ್ನನಾಗಿ ಭಾವ ನೆಲೆಗೊಂಡಲ್ಲಿ ನುನಲಿಂಗ ಸಂಗದಿ ಮನ ಲಿಂಗಲೀಯವಾದಲ್ಲಿ ತೆರಹಿಲ್ಲದೆ ಕುರುಹಳಿದ ಲಿಂಗೈಕ್ಯ, ಸುತ್ತಿರ್ದ ಪ್ರಪಂಚ ಮೆಲ್ಲಮೆಲ್ಲನೆ ಅಚ್ಚಳಿದು ಹಿಂಗಿದವು ಕೂಡಲಚನ್ನಸಂಗಮದೇವಾ ನಿಮ್ಮ ಲಿಂಗೈಕ್ಯಂಗೆ.

೨೮೨. ದೇಹ ನಿರ್ದೇಹಿಗೊಪ್ಪಿಸಿದಲ್ಲಿ ದೇಹ ನಿರ್ದೇಹವಾಯಿತ್ತು. ಮನ ಲಿಂಗಕ್ಕರ್ಪಿಸಿದಲ್ಲಿ ಮನ ಲಿಂಗವಾಗಿ ಮನ ಲಯವಾಯಿತ್ತು.

ಭಾವ ತೃಪ್ತಿಗರ್ಪಿಸಿ ಭಾವ ಬಯಲಾಯಿತ್ತಯ್ಯ. ದೇಹ ಮನ ಭಾವವೆಂಬಲ್ಲಿ ಕಾರಣಕಾಯ ಅಕಾಯವಾಯಿತ್ತು. ಎನ್ನ ದೇಹದ ಸುಖವ ಲಿಂಗ ಭೋಗಿಸುವುದಾಗಿ ಶರಣ ಸತಿ ಲಿಂಗ ಪತಿ ಎಂಬ ಭಾವ ಅಳವಟ್ಟಿತ್ತಯ್ಯ ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ.

೨೮೩. ಅಂಗದಂತೆ ಲಿಂಗ, ಲಿಂಗದಂತೆ ಅಂಗವಾದ ಬಳಿಕ ಅಂಗದಂತೆ ಲಿಂಗೈಕ್ಯ, ಲಿಂಗದಂತೆ ಅಂಗೈಕ್ಯ. ಮನವೇ ಲಿಂಗ ಲಿಂಗವೇ ಮನವಾದಬಳಿಕ ಮಾತು ಮಾತುಗಳಿಲ್ಲ ಹೊಳ್ಳಾದ ಕಾರಣ ಮೇಲೆ ಲಿಂಗೈಕ್ಯ. ಲಿಂಗೈಕ್ಯವೇ ಸ್ವರ ಶಬ್ದ. ಸಂದಣಿಗೆ ಇನ್ನು ತೆರಹುಂಟೇ ಕಪಿಸಿದ್ಧಮಲ್ಲಿನಾಥಯ್ಯಾ?

೨೮೪. ಅಂಗಕ್ಕೆ ಭೋಗವ ಕೊಟ್ಟವರ ನೋಡಿದೆನಲ್ಲದೆ ಲಿಂಗಕ್ಕೆ ಕೊಟ್ಟವರ ನೋಡಲಿಲ್ಲವು. ಲಿಂಗಕ್ಕೆ ಷೋಡಶೋಪಚಾರಂಗಳ ಕೊಟ್ಟವರ ನೋಡಿದೆನಲ್ಲದೆ ಮನವ ಕೊಟ್ಟವರ ನೋಡಲಿಲ್ಲ. ಮನವ ಕೊಟ್ಟವರ ನೋಡಿದೆನಲ್ಲದೆ ಮನ ಲಿಂಗವಾದವರ ನೋಡಲಿಲ್ಲ ಕಪಿಲಸಿದ್ಧಮಲ್ಲಯ್ಯ.

೨೮೫. ಒಂದಾದವಂಗೆ ಬಂದ ಸುಖದುಃಖಂಗಳ ಭಂಗೇನಯ್ಯ? ಒಂದಾದವಂಗೆ ಇಂದುಧರನೊಲವೇನಯ್ಯ? ಒಂದಾದವಂಗೆ ಕನಕಲೋಷ್ಟವೆಂಬುವುದೇನಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ?

೨೮೬. ಕುರುಹಿಲ್ಲ, ಕುರುಹಿಲ್ಲ, ಲಿಂಗವೆಂದೆಂಬರೆ. ತೆರಹಿಲ್ಲ, ತೆರಹಿಲ್ಲ, ಜಂಗಮವೆಂದೆಂಬರೆ. ಇದೇ ನೋಡಾ ಶಿವಾಚಾರ. ಇದೇ ನೋಡಾ ಶಿವದೊಡಕು. 'ಆತ್ಮಾನಾಂ ಪ್ರಕೃತಿ ಸ್ವಭಾವ' ಎಂದುದಾಗಿ, ಮುಟ್ಟಬಾರದ ಠಾವ ಮುಟ್ಟಿಗೊಂಡಿಪ್ಪ ಮುಮು ಕರ್ತು ಕೂಡಲಸಂಗಮದೇವ.

೨೮೭. ಶಿವ ಶಿವಾ, ಮೂರ್ತಿಗೆ ಸತ್ಯ ಶುದ್ಧ ಉಂಟೆಂಬಿರಿ. ಸತ್ಯ ಶುದ್ಧವುಳ್ಳವಂಗೆ ಗುರುವಿಲ್ಲ. ಸತ್ಯ ಶುದ್ಧವುಳ್ಳವಂಗೆ ಲಿಂಗವಿಲ್ಲ. ಸತ್ಯ ಶುದ್ಧವುಳ್ಳವಂಗೆ ಜಂಗಮವಿಲ್ಲ. ಸತ್ಯ ಶುದ್ಧವುಳ್ಳವಂಗೆ ಪ್ರಸಾದವಿಲ್ಲ. ಸತ್ಯ ಶುದ್ಧವುಳ್ಳವಂಗೆ ಗಣತ್ವವಿಲ್ಲ. ಕೇಳಿರೇ, ಸತ್ಯ ಶುದ್ಧ ದೇವರಿಗೆ ಉಪಚಾರ ಉಂಟು. ಸತ್ಯ ಶುದ್ಧ ದೇವರಿಗೆ ಧ್ಯಾನ ಮೌನ ಅನುಷ್ಠಾನ ಉಂಟು. ಸತ್ಯ ಶುದ್ಧ ಉಪದೇಶಕ್ಕೆ ಜಪ ತಪ ಸಂಧ್ಯಾ ಸಮಾಧಿ

ಕೋಮ ನೇಮ ನಿತ್ಯ ಅಷ್ಟವಿಧಾರ್ಚನೆ ಷೋಡಶೋಪಚಾರ ಉಂಟು. ಸತ್ಯ ಶುದ್ಧ ದೇವರಿಗೆ ಉಪಚಾರ ಉಂಟಾದ ಕಾರಣ ಇಂತಪ್ಪ ಸತ್ಯ ಶುದ್ಧ ಗುರುವಿಂಗೆ ಶರಣೆನ್ನೆ. ಇಂತಪ್ಪ ಸತ್ಯ ಶುದ್ಧ ಲಿಂಗಕ್ಕೆ ಶರಣೆನ್ನೆ. ಜಂಗಮಕ್ಕೆ ಶರಣೆನ್ನೆ. ಇಂತಪ್ಪ ಸತ್ಯ ಶುದ್ಧ ಪ್ರಸಾದಕ್ಕೆ ಕೆಯ್ಯಾನೆ. ಇವರೆಲ್ಲರು ಬ್ರಹ್ಮನ ಮಕ್ಕಳು. ಎನಗೆ ಸತ್ಯವೂ ಇಲ್ಲ, ಅಸತ್ಯವೂ ಇಲ್ಲ, ಆವ ಸಹಜವಿಲ್ಲದ ಲಿಂಗೈಕ್ಯ ಕಾಣಾ ಕೂಡಲಸಂಗಮದೇವಾ.

೨೮೮. ಭಿತ್ತಿ ಇಲ್ಲದ ಚಿತ್ತಾರದಂತೆ, ಭಕ್ತಿ ಇಲ್ಲದ ಪ್ರಮಥನಾಗಿ ಎಂದಿಪ್ಪೆನಯ್ಯಾ? ಸತ್ಯವಿಲ್ಲದ ಶರಣನಾಗಿ ಎಂದಿಪ್ಪೆನಯ್ಯಾ? ಗೆರೆ ಇಲ್ಲದ ಕೋಲಲ್ಲಿ ಉದ್ದರೆಯನಿಕ್ಕಿದ ಭಂಡದ ಹರದನಂತಾದೆನಯ್ಯಾ ಕೂಡಲಸಂಗಮದೇವಾ.

೨೮೯. ಮಣ್ಣು ಮಡಿಕೆ ಮಣ್ಣಾಗದು, ಕ್ರಿಯೆಯಳಿದು. ಬೆಣ್ಣೆ ಕರಗಿ ತುಪ್ಪವಾಗಿ, ಮರಳಿ ಬೆಣ್ಣೆಯಾಗದು, ಕ್ರಿಯೆಯಳಿದು. ಹೊನ್ನು ಕಬ್ಬಿಣವಾಗದು ಕ್ರಿಯೆಯಳಿದು. ಮುತ್ತು ನೀರಲ್ಲಿ ಹುಟ್ಟಿ ಮತ್ತೆ ನೀರಾಗದು ಕ್ರಿಯೆಯಳಿದು. ಕೂಡಲಸಂಗನ ಶರಣನಾಗಿ, ಮರಳಿ ಮಾನವನಾಗನು ಕ್ರಿಯೆಯಳಿದು.

ಆಚಾರಭೇದಗಳು.

ವೀರಶೈವರು ಆಚಾರಗಳಿಗೆ ಬಹಳ ಮಹತ್ವವನ್ನು ಕೊಟ್ಟಿದ್ದಾರೆ. ಅವು ಷಟ್‌ಸ್ಥಲ ಶಾಸ್ತ್ರದ ತತ್ವಗಳಿಗನುಸಾರವಾಗಿ ಅನೇಕ ವಿಧವಾಗಿ ವಿಂಗಡಿಸಲ್ಪಟ್ಟಿರುತ್ತವೆ. ಅವು ಈ ಪ್ರಕರಣದಲ್ಲಿ ಹೇಳಲ್ಪಟ್ಟಿವೆ. ಇಲ್ಲಿ ಮೊದಲು ಆಚಾರದ ಮಹತ್ವವು ಸ್ವಲ್ಪದರಲ್ಲಿ ಹೇಳಲ್ಪಟ್ಟಿದ್ದು ಮುಂದೆ ಅದರ ಮುಖ್ಯ ವರ್ಗಗಳು ಕೊಡಲ್ಪಡುವವು.

ಆಚಾರದ ಮಹತ್ವವು.

೧. ಆಚಾರವೇ ಭಕ್ತಂಗೆ ಅಲಂಕಾರವು. ಆಚಾರವೇ ಭಕ್ತಂಗೆ ಸರ್ವಪೂಜ್ಯವು. ಇಂತೀ ಆಚಾರವುಳ್ಳವನೇ ಭಕ್ತನು. ಆಚಾರವುಳ್ಳವನೇ ಯುಕ್ತನು. ಆಚಾರವುಳ್ಳವನೇ ಮುಕ್ತನಯ್ಯ ನಿಜಗುರು ಸ್ವತಂತ್ರ ಸಿದ್ಧ ಲಿಂಗೇಶ್ವರಾ.

೨. ಸದಾಚಾರವನಾಚರಿಸುವ ಸತ್ಕ್ರಿಯಾ ಸಂಪನ್ನಂಗೆ ಸಮ್ಯ ಜ್ಞಾನ ಉದಯವಹುದು. ಆ ಸಮ್ಯ ಜ್ಞಾನೋದಯದಿಂದ ತನ್ನ ತಾನರಿದು ತಾನೇ ಶಿವನಹನಲ್ಲದೆ ತನಗೇನೂ ಇದಿರಿಲ್ಲ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ನಿಜವನೆಯ್ದುವಡೆ ಆಚಾರವೇ ಮುಖ್ಯವಯ್ಯ.

೩. ಆಚಾರವಿಲ್ಲದವರಿಗೆ ಜ್ಞಾನವಿಲ್ಲ. ಜ್ಞಾನವಿಲ್ಲದವರಿಗೆ ಭಾವ ಶುದ್ಧವಿಲ್ಲ. ಭಾವ ಶುದ್ಧವಿಲ್ಲದವರಿಗೆ ಧ್ಯಾನವಿಲ್ಲ. ಧ್ಯಾನವಿಲ್ಲದವರಿಗೆ ಪ್ರಸಾದವಿಲ್ಲ. ಪ್ರಸಾದವಿಲ್ಲದವರಿಗೆ ಮುಕ್ತಿ ಇಲ್ಲ. ಇದು ಕಾರಣ ಆಚಾರ ಜ್ಞಾನ ಭಾವವುಳ್ಳವರಿಗೆ ಪ್ರಸಾದ ಉಂಟು. ಪ್ರಸಾದವುಳ್ಳವರಿಗೆ ಮುಕ್ತಿಯುಂಟು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

ಆಚಾರದ ಪರಿಣಾಮಗಳು.

ವಿವರಣೆ:—ಆಚಾರದ ಮೂಲಕ ಮನುಷ್ಯನಲ್ಲಿಯ ದುರ್ಗುಣಗಳೂ ದೋಷಗಳೂ ದೂರಾಗುತ್ತಿವೆ. ದೂರಾಗುವ ದೋಷಗಳಲ್ಲಿ ಉದಾಹರಣೆಗಾಗಿ ಕೆಲವು ಮಾತ್ರ ಕೆಳಗೆ ಹೇಳಲ್ಪಟ್ಟಿವೆ.

ಷಡೂರ್ಮಿಗಳ ನಾಶ.

೪. ಕ್ಷುತ್ ಪಿಪಾಂಸೆ ಶೋಕ ಮೋಹ ಜರೆ ಮರಣ ಈ ಷಡೂರ್ಮಿಗಳು ಕೆಡುವುದಕ್ಕೊಂದು ವಿವರವ ಹೇಳಹೆ ಕೇಳಿರಯ್ಯ. ಅಂಗದಾಪ್ಯಾಯನವಳದು ಲಿಂಗದಾಪ್ಯಾಯನ ಉಳಿದರೆ ಕ್ಷುತ್ತು ಕೆಟ್ಟುದು. ..... ಲಿಂಗ ಮೋಹಿಯಾಗಿ ದೇಹ ಮೋಹವ ಮರೆದಲ್ಲಿ ಮೋಹ ಕೆಟ್ಟುದು. ಶಿವ ಲಿಂಗದಲ್ಲಿ ಕರಗಿ ಕೊರಗಿ ಸರ್ವ ಕರಣೇಂದ್ರಿಯಂಗಳು ಲಿಂಗದಲ್ಲಿ ಲೀಯ್ಯವಾಗಿ ಶಿಥಿಲತ್ವವನೆಯ್ದಿದಲ್ಲಿ ಜರೆ ಕೆಟ್ಟುದು. ಮಹಾಲಿಂಗದಲ್ಲಿ ತಾನೆಂಬುದುಳಿದು ಲಿಂಗೈಕ್ಯವಾದಲ್ಲಿ ಮರಣ ಕೆಟ್ಟುದು. ಇಂತೀ ಷಡೂರ್ಮಿಗಳನು ಈಪರಿ ಲಿಂಗಾವಧಾನದಲ್ಲಿ ಕೆಡಿಸಿದಾತನೇ ಭಕ್ತ ಕಾಣಾ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.

ಷಡ್ಭಾವಗಳ ನಾಶ.

೫. ಅಸ್ತಿತೆ, ಜಾಯತೆ, ವಿಪರಿಣತೆ, ವಿನರ್ಧತೆ, ಅಪಕ್ಷತೆ, ವಿನಶ್ಯತೆ ಎಂಬ ಷಡ್ಭಾವಂಗಳು ಕೆಡುವುದಕ್ಕೆ ವಿವರವೆಂತೆಂದೊಡೆ, ಶ್ರೀಗುರುವಿನ ಕೃಪಾಗರ್ಭಮಧ್ಯದಲ್ಲಿ ಇದ್ದವ ನಾನಹುದು ಎಂದರಿದಾಗಳೇ ಅಸ್ತಿತೆ ಎಂಬ ವಿಕಾರ ಕೆಟ್ಟಿತ್ತು. ಗುರುಕರುಣದಲ್ಲಿ ಜನಿಸಿದನಾಗಿ ನಾಹಂ ಯೋನಿಜವೆಂದರಿದಾಗಳೇ ಜಾಯತೆ ಎಂಬ ವಿಕಾರ ಕೆಟ್ಟಿತ್ತು. ಗುರುವಿನ ಸದ್ಭಾವಜಾತಲಿಂಗವನಂಗದಲ್ಲಿ ಧರಿಸಿ ಪರಮ ಪರಿಣಾಮದಲ್ಲಿ ಪರಿಣಾಮಿಸುತ್ತಿದ್ದ ಕಾರಣ ವಿಪರಿಣತೆ ಎಂಬ ವಿಕಾರ ಕೆಟ್ಟಿತ್ತು. ..... ದೇಹೇಂದ್ರಿಯಾದಿಗಳೆಲ್ಲ ಲಿಂಗದಲ್ಲಿ ಅಡಗಿ ಶಿಥಿಲಮಯವಾಗಲು ಅಪಕ್ಷತೆ ಎಂಬ ವಿಕಾರ ಕೆಟ್ಟಿತ್ತು. ಲಿಂಗಾಂಗದ ಐಕ್ಯನನರಿದು ಲಿಂಗದಲ್ಲಿ ಲೀಯ್ಯವಾಗಲು ವಿನಶ್ಯತೆ ಎಂಬ ವಿಕಾರ ಕೆಟ್ಟಿತ್ತು. ಇಂತೀ ಲಿಂಗಸಂಗದಿಂದ ಷಡ್ಭಾವವಿಕಾರವಳದು ನಿಮ್ಮ ವಿಕಾರವೆಡೆಗೊಂಡಿತ್ತು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮ ಭಕ್ತಂಗೆ.

ಪಂಚಕೋಶಗಳ ನಾಶ.

೬. ಅನ್ನಮಯ ಪ್ರಾಣಮಯ ಮನೋಮಯ ವಿಜ್ಞಾನಮಯ ಆನಂದಮಯವೆಂಬ ಪಂಚಕೋಶ ಕೆಡುವುದಕ್ಕೆ ವಿವರ. ಸರ್ವಪದಾರ್ಥವನು ಸಾವಧಾನಮುಖದಲ್ಲಿ ಲಿಂಗಾರ್ಪಿತವ ಮಾಡಿ ಲಿಂಗಭೋಗೋಪಭೋಗಿಯಾದಲ್ಲಿ ಅನ್ನಮಯ ಕೋಶ ಕೆಟ್ಟಿತ್ತು. ಪ್ರಾಣಮಯ

ಲಿಂಗಾಂಗವಾಗಿ ಲಿಂಗಪ್ರಾಣಿಯಾದಲ್ಲಿ ಪ್ರಾಣಮಯ ಕೋಶ ಕೆಟ್ಟಿತ್ತು. ಮನೋಮಧ್ಯದಲ್ಲಿ ಲಿಂಗದ ನೆನಹು ನೆಲೆಗೊಂಡು ಮನವೇ ಲಿಂಗವಾದಲ್ಲಿ ಮನೋಮಯ ಕೋಶ ಕೆಟ್ಟಿತ್ತು. ಸುಜ್ಞಾನ ಪರಿಪೂರ್ಣವಾಗಿ ಜ್ಞಾನ ಜ್ಞೇಯಗಳೆರಡು ಒಂದಾದಲ್ಲಿ ವಿಜ್ಞಾನಮಯ ಕೋಶ ಕೆಟ್ಟಿತ್ತು. ಪರಮಾನಂದ ಪದದಲ್ಲಿ ಓಲಾಡುತ್ತ ಆ ಶಿವಾನಂದದಲ್ಲಿ ಇರಲಿಕ್ಕಾಗಿ ಆನಂದಮಯ ಕೋಶ ಕೆಟ್ಟಿತ್ತು. ಇಂತೀ ಪಂಚಕೋಶದ ಪ್ರಕೃತಿಗುಣ ಕೆಟ್ಟು ಲಿಂಗಗುಣ ನಿಂದುದು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮ ನಿಜಶರಣಂಗೆ.

---

(೧) ೫೦ ತೆರದ ಆಚಾರಗಳು.

೭. ಆಚಾರವೆಂಬುದು ಕೂರಲಗು. ತಪ್ಪಿ ಬಂದರೆ ಪ್ರಾಣವ ತಗಲುವದು. ಅದುಕಾರಣ ಅರಿದರಿದು ಆಚರಿಸಬೇಕು. ಆಚಾರ ವಿಚಾರ ಉಭಯದ ವಿಚಾರವ ನೋಡದೆ ಶಿವದೀಕ್ಷೆಯ ಮಾಡಲಾಗದು. ಅದೆಂತೆಂದೊಡೆ —

ಪರರ ಹೆಣ್ಣಿಂಗೆ ಕಣ್ಣಿಡದಿಹುದೇ ೧ನೇ ಆಚಾರ. ಪರರ ದ್ರವ್ಯವ ಅಪಹಾರ ಮಾಡದಿಹುದೇ ೨ ನೇ ಆಚಾರ. ಸುಳ್ಳಾಡದಿಹುದೇ ೩ ನೇ ಆಚಾರ. ವಿಶ್ವಾಸ ಘಾತವ ಮಾಡದಿಹುದೇ ೪ ನೇ ಆಚಾರ. ಪ್ರಾಣ ಹಿಂಸೆಯ ಮಾಡದಿಹುದೇ ೫ ನೇ ಆಚಾರ. ಸಕಲ ಶಿವಗಣಂಗೆ ಸಂತೋಷಮುಂ ಪುಟ್ಟಿಸುವದೇ ೬ ನೇ ಆಚಾರ. ಸ್ವೀಕರಿಸುವ ನೇಮವಂ ಪ್ರಾಣಾಂತ್ಯವಾಗಿ ಬಿಡೆನೆಂಬುದೇ ೭ ನೇ ಆಚಾರ. ಷಟ್‌ಸ್ಥಲದವರ ಧಿಕ್ಕರಿಸುವ ಜನರ ಸೀಳುವೆನೆಂಬುವ ವ್ರತವೇ ೮ನೇ ಆಚಾರ. ಕೇಡು ಜನರ ಸಹವಾಸ ಮಾಡದಿಹುದೇ ೯ ನೇ ಆಚಾರ. ಸಜ್ಜನಸಂಗತಿಯ ಬಿಡದಿಹುದೇ ೧೦ನೇ ಆಚಾರ. ಅನ್ಯ ದೇವತಾಭಜನೆಗೆ ವಿಮುಖನಾಗುವುದೇ ೧೧ನೇ ಆಚಾರ. ಶಿವನೇ ಸರ್ವದೇವಶಿಖಾಮಣಿ ಎಂದು ಮನದಲ್ಲಿ ಅಚ್ಚೊತ್ತಿರ್ಪುದೇ ೧೨ನೇ ಆಚಾರ. ಶಿವನಿಗೆ ಶಿವಗಣಂಗಳಿಗೆ ಭೇದ ಮಾಡದಿಹುದೇ ೧೩ ನೇ ಆಚಾರ. ಸಕಲ ಜೀವಿಗಳಿಗೆ ಹಿತವ ಬಯಸುವುದೇ ೧೪ನೇ ಆಚಾರ. ಸರ್ವರಿಗೆ ಹಿತವ ಮಾಡುವುದೇ ೧೫ ನೇ ಆಚಾರ.

ಕಡ್ಡಿಯ ಲಿಂಗಕ್ಕೆ ತೋರಿ ದಂತಧಾವನೆ ಮಾಡುವುದೇ ೧೬ ನೇ ಆಚಾರ. ಸರ್ವಾವಯವ ಸ್ವಚ್ಛವಾಗಿ ಪ್ರಕ್ಷಾಳಿಸುವುದೇ ೧೭ನೇ ಆಚಾರ. ಲಿಂಗ ಮುದ್ರೆ ಇಲ್ಲದ ಗುಡಿಯಲ್ಲಿ ಪಾಕವ ಮಾಡದಿಹುದೇ ೧೮ನೇ ಆಚಾರ. ಪ್ರಣವ ಮುದ್ರೆ ಇಲ್ಲದ ವಸ್ತ್ರವ ಹೊದೆಯದಿಹುದೇ ೧೯ ನೇ ಆಚಾರ. ಹುಟ್ಟಿದ ಶಿಶುವಿಗೆ ಲಿಂಗಧಾರಣವ ಮಾಡದೆ ತಾಯ ಮೊಲೆಹಾಲು ಜೇನುತುಪ್ಪ ಮುಟ್ಟಿಸದಿಹುದೇ ೨೦ ನೇ ಆಚಾರ. ಆಡಿದ ಭಾಷೆಯಂ ಕಡೆಸೂರೈಸುವುದೇ ೨೧ ನೇ ಆಚಾರ. ಸತ್ಯವನ್ನು ನುಡಿದು ತಪ್ಪದಿಹುದೇ ೨೨ ನೇ ಆಚಾರ. ತುರುಗಳಂ ಕಟ್ಟಿ ರಕ್ಷಿಸುವುದೇ ೨೩ ನೇ ಆಚಾರ. ತುರುಗಳಿಗೆ ಲಿಂಗಮುದ್ರೆಯನಿಕ್ಕಿ ಹಾಲು ಕರೆವುದೇ ೨೪ನೇ ಆಚಾರ. ಮಂತ್ರ ಸಹಿತ ಗೋಮಯಮಂ ಹಿಡಿದು ಮಂತ್ರಸಹಿತ ಪ್ರಟವಿಕ್ಕಿ ಭಸ್ಮದ ರಾಶಿಯಂ ಮಾಡುವುದೇ ೨೫ ನೇ ಆಚಾರ. ಆ ಭಸ್ಮದ ರಾಶಿಯಂ ಪಾದೋದಕ ದೊಡನೆ ಉಂಡಿಯಂ ಕಟ್ಟುವುದೇ ೨೬ ನೇ ಆಚಾರ. ವಿಧಿಯುರಿತು ಸ್ನಾನವಂತು ರುದ್ರಾಕ್ಷಿಗಳಂ ಧರಿಸುವುದೇ ೨೭ ನೇ ಆಚಾರ. ಶಿವಾನುಭವ ಶಾಸ್ತ್ರವಂ ವಿಚಾರಿಸುವುದೇ ೨೮ ನೇ ಆಚಾರ. ಮನವ ನೋಯಿಸಿ ಮಾತನಾಡದಿಹುದೇ ೨೯ ನೇ ಆಚಾರ. ಲಿಂಗದ ಕಲೆಯುರಿತು ಲಿಂಗವ ಪೂಜಿಸುವುದೇ ೩೦ ನೇ ಆಚಾರ. ಗುರುಮುಖದಿಂ ತಾನಾರು ತನ್ನ ನಿಜವೇನೆಂದು ಪೆಸಗೊಳ್ಳುವುದೇ ೩೧ ನೇ ಆಚಾರ. ಷಡ್ವರ್ಗಂಗಳಂ ಮೆಟ್ಟಿ ಷಟ್‌ಸ್ಥಲವನಿಂಬುಗೊಂಡುದೇ ೩೨ ನೇ ಆಚಾರ. ಅವಿಚ್ಛಿನ್ನವಾಗಿ ಅಂಗತ್ರಯದಲ್ಲಿ ಮನ ಓಕರಿಸಿಕೊಂಡುದೇ ೩೩. ನೇ ಆಚಾರ. ಲಿಂಗದಲ್ಲಿ ಸಿಲೆಯ ಭಾವವನರಸದಿಹುದೇ ೩೪ ನೇ ಆಚಾರ. ಜಂಗಮದಲ್ಲಿ ಕುಲವನರಸದಿಹುದೇ ೩೫ ನೇ ಆಚಾರ. ವಿಭೂತಿಯಲ್ಲಿ ಭೇದವ ಪಾಣ್ಬದಿಹುದೇ ೩೬ನೇ ಆಚಾರ. ರುದ್ರಾಕ್ಷಿಯ ಶುದ್ಧವ ಮಾಡಿ ಮಣಿಗಳ ಅರಸುವುದೇ ೩೭ ನೇ ಆಚಾರ. ಪಾದೋದಕದಲ್ಲಿ ಉಚ್ಛಿಷ್ಟವಳಿದುದೇ ೩೮ ನೇ ಆಚಾರ. ಪ್ರಸಾದದಲ್ಲಿ ರುಚಿಯ ನೋಡದಿಹುದೇ ೩೯ ನೇ ಆಚಾರ. ಮಂತ್ರದಲ್ಲಿ ಕುತ್ಸಿತ ಕಲ್ಪನೆಯ ಮಾಡದಿಹುದೇ ೪೦ ನೇ ಆಚಾರ. ಲಿಂಗಾರ್ಚನೆ ವಿರಹಿತ ಭೋಜನ ಮಾಡದಿಹುದೇ ೪೧ನೇ ಆಚಾರ ಐಕ್ಯರಂ ಸಮಾಧಿಗೊಳಿಸಿ ತಾನು ಲಿಂಗಪೂಜೆಯ ಮಾಡುವುದೇ ೪೨ ನೇ ಆಚಾರ. ಲಿಂಗದ್ರೋಹಮುಂ ಕೇಳಿ ತಾನು ಪ್ರಾಣ ಬಿಡುವುದೇ ೪೩ನೇ ಆಚಾರ. ಜಂಗಮದ್ರೋಹಮುಂ ಕೇಳಿ ತಾನು ಐಕ್ಯನಾಗುವದೇ ೪೪ ನೇ ಆಚಾರ. ಲಿಂಗದ್ರೋಹಮುಂ ಮಾಡಿದವನ ಪ್ರಾಣವಂ

ಭೇದಿಸುವುದೇ ೪೫ನೇ ಆಚಾರ. ಜಂಗಮ ದ್ರೋಹ ಮಾಡಿದವನ ಶಿರವನೀಡಾಡುವುದೇ ೪೬ನೇ ಆಚಾರ. ಅಷ್ಟಾವರಣವ ಸಂಗವ ಮಾಡುವ ಭೇದವಂ ತಿಳಿಯುವುದೇ ೪೭ನೇ ಆಚಾರ. ತಾನಾರು ಲಿಂಗವಾರು ಎಂಬ ಭೇದವು ತಿಲ ಮಾತ್ರವಿಲ್ಲದಿಹುದೆ ೪೮ನೇ ಆಚಾರ. ತನ್ನ ನಿಜ ವಿಚಾರವಂ ತಾ ಮರೆಯದೆ ಷಟ್‌ಸ್ಥಲವವರಿಗೆ ಅರುಹಿ ತನ್ನಂತೆ ಮಾಡುವುದೇ ೪೯ನೇ ಆಚಾರ. ಇಂತಿಷ್ಟು ಆಚಾರಂಗಳ ಕಡೆ ಮುಟ್ಟಿಸುವುದೇ ಕೂಡಲಚನ್ನಸಂಗಮದೇವರಲ್ಲಿ೫೦ನೇ ಆಚಾರ ನೋಡಾ ಸಿದ್ಧರಾಮಯ್ಯ.

೮. ಒಂದನೇ ಆಚಾರದಿಂದ ಶೀಲವಂತನಾಗುವನು. ೨ನೇ ಆಚಾರದಿಂದ ಧನವಂತನಾಗುವನು. ೩ನೇ ಆಚಾರದಿಂದ ಕೀರ್ತಿವಂತನಾಗುವನು. ೪ನೇ ಆಚಾರದಿಂದ ವಿಶ್ವಾಸವಂತನಾಗುವನು. ೫ನೇ ಆಚಾರದಿಂದ ಸತ್ಪುರುಷನಾಗುವನು. ೬ನೇ ಆಚಾರದಿಂದ ಭಕ್ತಿವಂತನೆನಿಸುವನು. ೭ನೇ ಆಚಾರದಿಂದ ವೀರಶೈವನೆನಿಸುವನು. ೮ನೇ ಆಚಾರದಿಂದ ವೀರ ಮಾಹೇಶ್ವರನೆನಿಸುವನು. ೯ನೇ ಆಚಾರದಿಂದ ಸಾತ್ವಿಕನೆನಿಸುವನು. ೧೦ನೇ ಆಚಾರದಿಂದ ವಿವೇಕಿ ಎನಿಸುವನು. ೧೧ನೇ ಆಚಾರದಿಂದ ವೀರವ್ರತಿ ಎನಿಸುವನು. ೧೨ನೇ ಆಚಾರದಿಂದ ವೀರ ಭಕ್ತನೆನಿಸುವನು. ೧೩ನೇ ಆಚಾರದಿಂದ ಶರಣನೆನಿಸುವನು. ೧೪ನೇ ಆಚಾರದಿಂದ ಸದಾಚಾರಿ ಎನಿಸುವನು. ಇನ್ನು ಮೇಲೆ ಹೇಳಿದ ೫೦ ಆಚಾರವುಳ್ಳವನೇ ಪ್ರಮಥನೆನಿಸುವನು, ಪುರಾತನರ ಲಲಾಟ ಲಲಾಮನೆನಿಸುವನು, ಕೂಡಲ ಚನ್ನಸಂಗಯ್ಯ ನಿಮ್ಮಡಿ ಮುಮ್ಮಡಿ ಸಹಸ್ರಮಡಿ ಮಹಿಮನೆನಿಸುವನು ಕೇಳು ಸಿದ್ಧರಾಮಯ್ಯ,

---

(೨) ಬಸವಣ್ಣನ ೫೨ ವಿಧದ ಇರವು.

೯. ಗುರುಕಾರುಣ್ಯವೇದ್ಯನು, ವಿಭೂತಿ ರುದ್ರಾಕ್ಷಿ ಧಾರಕನು, ಪಂಚಾಕ್ಷರೀ ಭಾಷಾ ಸಮೇತನು, ಲಿಂಗಾಂಗ ಸಂಬಂಧಿ, ನಿತ್ಯ ಲಿಂಗಾರ್ಚಕನು, ಅರ್ಪಿತದಲ್ಲಿ ಅವಧಾನಿ, ಪಾದೋದಕ ಪ್ರಸಾದ ಗ್ರಾಹಕನು, ಭಕ್ತಿಸಂಪನ್ನನು, ಏಕಲಿಂಗ ನಿಷ್ಠಾಪರನು, ಚರಲಿಂಗ ಲೋಲುಪ್ತನು ಶರಣ ಸಂಗಮೇಶ್ವರನು, ತ್ರಿವಿಧದಲ್ಲಿ ಆಯತನು, ತ್ರಿಕರಣ ಶುದ್ಧನು,

ತ್ರಿವಿಧ ಲಿಂಗಾಂಗ ಸಂಬಂಧಿ, ಅನ್ಯದೈವ ಸ್ಮರಣೆಯ ಹೊದ್ದ, ಭವಿ
ಸಂಗವ ಮಾಡನು, ಭವಿಪಾಕವ ಕೊಳ್ಳನು, ಪರಸತಿಯ ಬೆರಸನು,
ಪರಧನವನೊಲ್ಲನು, ಪರ ನಿಂದೆಯ ನಾಡ, ಅನೃತವ ನುಡಿಯ,
ಹಿಂಸೆಯ ಮಾಡನು, ತಾಮಸ ಭಕ್ತ ಸಂಗವಮಾಡನು, ಅರ್ಥ,
ಪ್ರಾಣ, ಅಭಿಮಾನ ಮುಂತಾಗಿ ಗುರುಲಿಂಗ ಜಂಗಮಕ್ಕೆ ಅರ್ಪಿಸಿ
ಪ್ರಸಾದ ಮುಂತಾಗಿ ಭೋಗಿಸುವ, ಜಂಗಮ ನಿಂದೆಯ ಸೈರಿಸ,
ಪ್ರಸಾದ ನಿಂದೆಯ ಕೇಳ, ಅನ್ಯರನಾಸೆಗೆಯ್ಯ, ಪಾತ್ರಾಪಾತ್ರವನರಿ
ದೀವ, ಚತುರ್ವಿಧ ಪದವಿಯ ಹಾರ, ಅರಿಷಡ್ವರ್ಗಕ್ಕೆ ಅಳುಕ, ಕುಲಾದಿ
ಮದಂಗಳ ಬಗೆಗೊಳ್ಳ, ದ್ವೈತಾದ್ವೈತವನೊಲ್ಲ, ಸಂಕಲ್ಪವಿಕಲ್ಪವ ಮಾಡು
ವನಲ್ಲ, ಕಾಲೋಚಿತವ ಬಲ್ಲ, ಕ್ರಮಯುಕ್ತನಾಗಿಹ, ಷಟ್‌ಸ್ಥಲಭರಿತ,
ಸರ್ವಾಂಗಲಿಂಗಿ, ದಾಸೋಹ ಸಂಪನ್ನನಯ್ಯ ಇಂತೀ ಐವತ್ತೆರಡು
ವಿಧದಲ್ಲಿ ನಿಪುಣನಾಗಿ ಮೆರೆವ ನಮ್ಮ ಬಸವಣ್ಣನು. ಆ ಬಸವಣ್ಣನ
ಪಾದಕ್ಕೆ ನಾನು ಅಹೋರಾತ್ರಿಯಲ್ಲಿ ನಮೋ ನಮೋ ಎನುತಿರ್ದೆನು
ಕಾಣಾ ಚನ್ನಮಲ್ಲಿಕಾರ್ಜುನಾ ೧

---

(೩) ೫೨ ಕಲೆಗಳು.

೧೦. ಅಯ್ಯಾ ಸದಾಚಾರ, ಸದ್ಭಕ್ತಿ, ಸಮ್ಯಜ್ಞಾನ, ಸತ್ಕ್ರಿಯೆ,
ಸದ್ವರ್ತನೆ, ಸಗುಣ, ನಿರ್ಗುಣ, ನಿಜಗುಣ, ಸಚ್ಚರಿತ, ಸದ್ಭಾವ,
ಅಕ್ರೋಧ, ಸತ್ಯವಚನ, ಕ್ಷಮೆ, ದಮೆ, ಭವಿಭಕ್ತಭೇದ, ಸತ್ಪಾತ್ರದ
ವ್ಯಾಪ್ತಿ, ಗೌರವಬುದ್ಧಿ, ಲಿಂಗಲೀಯ, ಜಂಗಮಾನುಭಾವ, ದಶ
ವಿಧಪಾದೋದಕ, ಏಕಾದಶ ಪ್ರಸಾದ, ಷೋಡಶ ಭಕ್ತಿನಿರ್ವಾಹ, ತ್ರಿವಿಧ
ಷಡ್ವಿಧ ನವವಿಧ ಲಿಂಗಾರ್ಚನೆ, ತ್ರಿವಿಧ ಷಡ್ವಿಧ ನವವಿಧ ಜಪ,
ತ್ರಿವಿಧ ಷಡ್ವಿಧ ನವವಿಧ ಲಿಂಗಾರ್ಪಿತ, ಚಿದ್ಭೂತಿ ಸ್ನಾನ ಧೂಳನ
ಧಾರಣ, ಸರ್ವಾಂಗದಲ್ಲಿ ಚಿದ್ರುದ್ರಾಕ್ಷಿ ಧಾರಣ, ತಾ ಮಾಡುವ ಸತ್ಯ
ಕಾಯಕ, ತಾ ಬೇಡುವ ಸದ್ಭಕ್ತಿ ಭಿಕ್ಷ, ತಾ ಕೊಟ್ಟು ಕೊಂಬುವ
ಭೇದ, ತಾನಾಚರಿಸುವ ಸತ್ಯ ನಡೆ ನುಡಿ, ತಾ ನಿಂದ ನಿರ್ವಾಣಪದ,
ಇಂತೀ ಮೂವತ್ತೆರಡು ಕಲೆಗಳ ಸದ್ಗುರು ಮುಖದಿಂದರಿದ ಬಸವ

---

೦ ಟೀಪು:— ಇದರಲ್ಲಿ ಕಾಣಿಸಿದ ಪ್ರತಿಯೊಂದು ಭಾಗದಲ್ಲಿಯು ಉಪ
ಭಾಗಗಳನ್ನೂ ಕೂಡ ಎಣಿಕೆ ಮಾಡತಕ್ಕದ್ದು.

ಮೊವಲಾದ ಸಮಸ್ತ ಪ್ರಮಥಗಣಂಗಳಿಲ್ಲ ನಿರಾಭಾರಿ ವೀರಶೈವ ಸನ್ಮಾ
ರ್ಗವಿಡಿದು ಆಚರಿಸಿದರು ನೋಡಾ. ಇಂತು ಪ್ರಮಥಗಣಂಗಳಾಚರಿಸಿದ
ಸತ್ಯ ಸನ್ಮಾರ್ಗವನರಿಯದ ಮೂಢ ಆಧಮುರನೆಂತು ಶಿವಭಕ್ತ ಶಿವ
ಜಂಗಮವೆಂಬೆನಯ್ಯ ಚನ್ನಮಲ್ಲಿಕಾರ್ಜುನಾ.

---

(೪) ಷಡ್ವಿಧವ್ರತಗಳು.

೧೧. ಭಕ್ತಂಗೆ ವ್ರತವಾರರಲ್ಲಿ ತದ್ಗತವಾಗಿಹುದೇ ಭಕ್ತಿ. ಅದೆಂ
ತೆಂದೊಡೆ:— ಗುರುವನೇ ಶಿವನೆಂದರಿದು ಗುರುವಾಜ್ಞೆಯ ಪಾಲಿಸು
ವುದೇ ಗುರುವ್ರತ. ಗುರುಮುಖದಲ್ಲಿ ಬಂದ ಲಿಂಗ ಪೂಜೆಯಲ್ಲಿ ನಿಯ
ತಾತ್ಮನಾಗಿ ಭಕ್ತಿ ಭಾವ ಸಮೇತವಾದುದು ಲಿಂಗವ್ರತ. ಜಂಗಮವೇ
ಮಹಾಲಿಂಗವೆಂದರಿದು ಪೂಜಾದಿ ಕ್ರಿಯೆಯಿಂದ ಆತ್ಮಾರ್ಪಣಮಾಡುವುದೇ
ಚರವ್ರತ. ಗುರುಲಿಂಗಜಂಗಮದ ಪ್ರಸಾದ ಸೇವನಾನುಭಾವವೇ ಪ್ರಸಾದ
ವ್ರತ. ಲೋಕಪಾವನವಾದ ಶ್ರೀಗುರುಪಾದಾಂಬುಜ ಸ್ನಾನಪಾನಾದಿಗ
ಳಿಂದ ಆಚರಿಸುವದೇ ಪಾದೋದಕವ್ರತ. ಗುರುಲಿಂಗಜಂಗಮದ ಪಾದೋ
ದಕ ಪ್ರಸಾದದಲ್ಲಿ ತಲ್ಲೀಯ್ಯವಾದ ಭಕ್ತಿಯೇ ಭಾಕ್ತಿಕವ್ರತ. ಇಂತೀ
ಷಡ್ವಿಧವ್ರತವನರಿದು ಆಚರಿಸುತಿರ್ಪಾತನೇ ಸದ್ಭಕ್ತನಯ್ಯ ನಿಜಗುರು
ಸ್ವತಂತ್ರ ಸಿದ್ಧಲಿಂಗೇಶ್ವರಾ.

---

(೫) ಸರ್ವಾಚಾರಸಂಪತ್ತು.

೧೨. ಜೀವನ ಬಾಗಿಲಲ್ಲಿ ಭ್ರಮೆಯ ತಡೆದು, ಆತ್ಮನ ಬಾಗಿ
ಲಲ್ಲಿ ಪ್ರಕೃತಿಯ ತಡೆದು, ಪರಮನ ಬಾಗಿಲಲ್ಲಿ ಚಿತ್ತವ ತಡೆದು ಮಿಕ್ಕಾದ
ವಾಯುಗಳ ದೆಸೆಯಿಂದ ಇಂದ್ರಿಯಂಗಳ ತಿಳಿದು, ಇಂತೀ ಜೀವ
ಆತ್ಮ ಪರಮ ತ್ರಿವಿಧ ಗುಣಂಗಳು ತಲೆದೋರದೆ, ಕರ್ಮೇಂದ್ರಿಯ
ಭಾವೇಂದ್ರಿಯ ಜ್ಞಾನೇಂದ್ರಿಯ ಇಂತೀ ತ್ರಿವಿಧವ ಸ್ವಾನುಭಾವದಲ್ಲಿ ಅಡಿಗಿ,

ಓಂಕಾರದ ಉಲುಹು ನಷ್ಟವಾಗಿ, ಷಡಕ್ಷರ ಪಂಚಾಕ್ಷರ ಮೂಲದ ಉಭಯದ ಮೊಳೆ ಮುರಿದು, ಐವತ್ತೊಂದು ಭೇದದ ಸೂತಕದ ಸುಳು ಹಡಗಿ, ಹಿಂದುಮುಂದಣ ಎಚ್ಚರಿಕೆ ಅಳವಟ್ಟಪ್ಪುದು ಕೂಡಲಸಂಗಮ ದೇವರಲ್ಲಿ ಬಸವಣ್ಣನ ಮುಂದಣ ಎಚ್ಚರಿಕೆಗುಂದದಂತೆ ಉಗ್ಘಡಿಸು ತ್ತಿರ್ದೆನು.

ಅರ್ಥಃ— ಜೀವಾತ್ಮನಲ್ಲಿ ಇಷ್ಟಲಿಂಗ ಸಂಬಂಧವ ಮಾಡಿಕೊಂಡು ಆಚರಿಸುವ ಸಕ್ರಿಯಾಮಾರ್ಗದಿಂದ ಜೀವಭಾವ ಭ್ರಾಂತನು ನಿಲಿಸಿ, ಅಂತರಾತ್ಮನಲ್ಲಿ ಪ್ರಾಣಲಿಂಗ ಸಂಬಂಧವ ಮಾಡಿಕೊಂಡು ಆಚರಿಸುವ ಸುಜ್ಞಾನ ಮಾರ್ಗದಿಂದ ಮನೋ ಪ್ರಪಂಚ ಬೇರ್ಪಡಿಸಿ, ಉಳಿದ ದಶ ವಾಯುಗಳೆಲ್ಲವು ಷಡಕ್ಷರೀ ಮಂತ್ರದಲ್ಲಡಗಿ ನಿವೃತ್ತಿಯಾಗಿರುವುದರಿಂದ, ಷಡಿಂದ್ರಿಯಗಳಲ್ಲಿ ಷಡ್ವಿಧಲಿಂಗ ಸಂಬಂಧವ ಮಾಡಿಕೊಂಡು ಆಚರಿ ಸುವ ಆಚರಣೆಯನಂದು, ಆತ್ಮತ್ರಯಂಗಳ ವರ್ತನೆಯ ಕುರುಹುಗಾ ಡಿಸದೆ ಜೀವಾತ್ಮ ಸಂಬಂಧವಾದ ಕರ್ಮೇಂದ್ರಿಯಂಗಳು ಅಂತರಾತ್ಮ ಸಂಬಂಧವಾದ ಜ್ಞಾನೇಂದ್ರಿಯಂಗಳು, ಪರಮಾತ್ಮ ಸಂಬಂಧವಾದ ಕರ ಣಂಗಳು ಈ ಹದಿನೈದು ತತ್ವಂಗಳ ಸ್ವಾನುಭಾವ ಜ್ಞಾನವನುಳ್ಳ ತ್ರಿವಿಧ ಲಿಂಗದಲ್ಲಿ ನಿಷ್ಪತ್ತಿಯಾಗಿ, ಶಿವೋಹಂ, ಶಿವೋಹಂ ಎಂಬ ಪ್ರಣವ ನಾದ ಘೋಷವು ನಿಷ್ಪತ್ತಿಯಾಗಿ, ಮೂಲ ಪಂಚಾಕ್ಷರೀ ಸ್ವರೂಪ ವಾದ ಪ್ರಾಣಲಿಂಗವು, ಓಂಕಾರ ಪ್ರಣವ ಸ್ವರೂಪವಾದ ಭಾವಲಿಂಗವು ಅಂಗತ್ರಯಂಗಳು ಲಿಂಗತ್ರಯಂಗಳೆಂಬ ಜ್ಞಾನದ ಮೊಳಕೆಯು ನಷ್ಟ ವಾಗಿ, ಆಂಗತ್ರಯ ಲಿಂಗತ್ರಯಂಗಳು ಜ್ಞಾನದ ಪರಾಂಬರಿಕೆಯಿಂದ ಆ ಆಂಗತ್ರಯ ಲಿಂಗತ್ರಯಂಗಳತ್ತ ಅಭಿಮುಖವಾಗಲಾಗಿ, ತ್ರಿವಿಧ ಲಿಂಗವೇ ಷಡ್ವಿಧಲಿಂಗವಾಗಿ, ಷಡಾಧಾರ ಚಕ್ರಂಗಳಲ್ಲಿ ಸಂಬಂಧವಾಗಲು, ಆ ಷಟ್‌ಚಕ್ರದ ದಳಂಗಳಲ್ಲಿ ಸಂಬಂಧವಾದ ಐವತ್ತೊಂದಕ್ಷರವು ಚಕ್ರ ವರ್ಣ ದಳ ಅಧಿದೇವತೆ ಅವಸ್ಥೆಗಳೆಲ್ಲರ ಭಿನ್ನವರ್ತನೆ ನಷ್ಟವಾಗಿ ಅಸೆ ಲ್ಲವು ಷಡ್ವಿಧ ಲಿಂಗಕ್ಕೆ ಪೂಜೋಪಕರಣಂಗಳಾಗಿ ಅಳವಟ್ಟಪ್ಪುವೆಂದು ಬೋಧಿಸುತ್ತಿರ್ದನು. ಪರಶಿವಲಿಂಗದಲ್ಲಿ ಇಷ್ಟಲಿಂಗದ ಮುಂದಣ ಎಚ್ಚ ರಿಕೆಯೇ ಕ್ರಿ ಇಷ್ಟ ಲಿಂಗಸಂಬಂಧವಾದ ಕ್ರಿಯೆ ಬಿಡಬೇಡ ಎಂದು ಬೋಧಿಸುತ್ತಿರ್ದನೆಂಬುದರ್ಥ.

---

(೬) ಷಟ್‌ಸ್ಥಲಾಚರಣೆಗಳು.

(೧೩) ಆಯ್ಯಾ ಕೇಳಾ ಪ್ರಮಥಗಣಂಗಳೆಲ್ಲ ಷಡ್ವಿಧಭಕ್ತಿ ಎಂಬ ಪರಮಾಮೃತವ ಸೇವಿಸಿ ನಿಷ್ಪತ್ತಿ ಮಾರ್ಗದಲ್ಲಿ ಅರಿವೈರಿಂಗಳ ಸಂಗವ ತ್ಯಜಿಸಿ ನಿವೃತ್ತಿ ಮಾರ್ಗದಲ್ಲಿ ಚರಿಸುವ ಷಡ್ಗುಣಗಳ ಸಂಗವ ಸಾಧಿಸಿ, ಜಂಗಮದ ಆಚಾರ ವಿಚಾರವ ತಿಳಿದು, ಷಟ್‌ಸ್ಥಲ ಮಾರ್ಗದಲ್ಲಿ ನಿಂದು, ಭಕ್ತಿ ಜ್ಞಾನ ವೈರಾಗ್ಯದಲ್ಲಾಚರಿಸಿದ ವಿಚಾರವೆಂತೆಂದೊಡೆ, ಅನಾದಿ ನಿರಂಜನ ಅಕಾಯ ಚಿಂತ್ಯ ನಿರಾಲಂಬ ಪರಶಿವ ಮೂರ್ತಿ ಸಾಕ್ಷಾತ್ ಶ್ರೀ ಗುರುದೇವನಿಂದ ಏಕವಿಂಶತಿ ವೇಧಾದೀಕ್ಷೆ, ಮಂತ್ರದೀಕ್ಷೆ, ಕ್ರಿಯಾ ದೀಕ್ಷೆಯ ಪಡೆದು ತನ್ನ ತಾನರ್ಚಿಸಿ, ಆ ಶ್ರೀಗುರುದೇವನ ಲಿಂಗಜಂಗ ಮದ ಲೀಲೆ ಹೇಗುಂಟೋ ಹಾಗೆ ಭಕ್ತಿಯ ಮಾಡಿ, ಆ ಶ್ರೀಗುರು ಲಿಂಗ ಜಂಗಮದ ಅಂತಃಕರಣವೆಂಬ ಪರಮಾಮೃತ ಸುಧೆಯೊಳಗೆ ಲೋಲುಪ್ತರಾಗಿ ನಿರವಯ ಸಮಾಧಿಯಲ್ಲಿ ಬಯಲಾದರು ನೋಡಾ. ಅದರ ವಿಚಾರವೆಂತೆಂದೊಡೆಃ—

ಭಕ್ತಸ್ಥಲಕ್ಕೆ ಕಾರಣವಾದ ಬಸವಣ್ಣಂಗೆ ಲಾಂಛನಂಗಳ ನೋಡಿ ತನು ಮನ ಧನವನೊಪ್ಪಿಸಿ ಶರಣೆಂದರಯ್ಯ.

ಮಹೇಶ್ವರಸ್ಥಲಕ್ಕೆ ಕಾರಣವಾದ ಮಡಿವಾಳ ದೇಶಿಕೇಂದ್ರಂಗೆ ಲಿಂಗ ಲಾಂಛನ ವಿಭೂತಿ ರುದ್ರಾಕ್ಷಿ ಪಂಚಾಚಾರವ ನೋಡಿ, ತನು ಮನ ಧನವನೊಪ್ಪಿಸಿ ಶರಣೆಂದರಯ್ಯ.

ಪ್ರಸಾದಿಯಸ್ಥಲಕ್ಕೆ ಕಾರಣವಾದ ಮರುಳ ಶಂಕರದೇವಂಗೆ ಲಿಂಗ ಲಾಂಛನ ವಿಭೂತಿ ರುದ್ರಾಕ್ಷಿ ಮಂತ್ರ ಪಂಚಾಚಾರದಾಚರಣೆ ಸಪ್ತಾ ಚಾರದ ಸಂಬಂಧನ ನಡೆ ನುಡಿಯ ವಿಚಾರಿಸಿ ತನು ಮನ ಧನವ ನೊಪ್ಪಿಸಿ ಶರಣೆಂದರಯ್ಯ.

ಪ್ರಾಣಲಿಂಗಿಸ್ಥಲಕ್ಕೆ ಕಾರಣವಾದ ಸಿದ್ಧರಾಮೇಶ್ವರಂಗೆ ಲಿಂಗಲಾಂ ಛನ ಶ್ರೀ ವಿಭೂತಿ ರುದ್ರಾಕ್ಷಿ ಮಂತ್ರ ದ್ವಾದಶಾಚಾರ ಮೊದಲಾದ ಸರ್ವಾಚಾರ ಸಂಪತ್ತಿನಾಚರಣೆಯ ಸರ್ವಾಂಗದಲ್ಲಿ ನ್ಯೂನವಿಲ್ಲದೆ ನಡೆ ನುಡಿಗಳು ಹೊದ್ದದೆ ನಿರಾಭಾರಿ ವೀರಶೈವತ್ವವ ನೋಡಿ ಇದೇ ಪರ ವಸ್ತುವೆಂದು ತನು ಮನ ಧನವನೊಪ್ಪಿಸಿ ಶರಣೆಂದರಯ್ಯ.

ಶರಣಸ್ಥಲಕ್ಕೆ ಕಾರಣವಾದ ಚನ್ನಬಸವರಾಜೇಂದ್ರಂಗೆ ಇಂತು ಚತುರ್ವಿಧ ಮೂರ್ತಿಗಳು ವಿಚಾರಿಸಿ ಆಚರಣೆಯ ನೋಡಿ ಗುರು ಸೂತ್ರ ಗೊತ್ರ ಸಂಪದ ದೀಕ್ಷೆಯ ವಿಚಾರಿಸಿ, ಲಿಂಗಾಂಗ ಷಟ್‌ಸ್ಥಾನಂಗಳ ನೋಡಿ, ಗುರುಮಾರ್ಗಾಚಾರ ನಡೆನುಡಿಗಳ ವಿಚಾರಿಸಿ ಸ್ವಾನುಭಾವ ಸಕೀಲದ ಗೊತ್ತು ತಿಳಿದು ಲಾಂಛನವ ನೋಡಿ ಮನ್ನಿಸಿ ತನು ಮನ ಧನವನೊಪ್ಪಿಸಿ ಶರಣೆಂದರಯ್ಯ.

ಐಕ್ಯಸ್ಥಲಕ್ಕೆ ಕಾರಣವಾದ ಅಜಗಣ್ಣಗಳಿಗೆ ಬಸವ ಮಡಿವಾಳ ಮರುಳು ಶಂಕರ ಸಿದ್ಧರಾಮ ಚನ್ನಬಸವ ಮೊದಲಾದ ಮಹಾಗಣಂಗಳು ಅರ್ಥಿ ಉತ್ಸಾಹದಿಂದ ಭಕ್ತಿಯ ಮಾಡಿದ ಜಂಗಮವೇ ನನಗೆ ಮಹಾಪ್ರಸಾದವೆಂದು ಅವರಡಿಗಳಿಗೆ ವಂದಿಸಿ ತನು ಮನ ಧನವ ನೊಪ್ಪಿಸಿ ಶರಣೆಂದರಯ್ಯ.

ನಿರವಯಸ್ಥಲಕ್ಕೆ ಕಾರಣವಾದ ಪ್ರಭುದೇವಗೆ ಆವ ಮತವೆಂದು ನೋಡದೆ ಬಾಲಬ್ರಹ್ಮಿ, ಬಳಸಿಬ್ರಹ್ಮಿ ಎಂಬ ಸಂಸಾರ ಸಂಕಲ್ಪ ಸೂತಕವನೆಣಿಸದೆ, ಸರ್ವಾಂಗದವಯವಗಳ ನೋಡಿ, ಸರ್ವಸಂಗ ಪರಿತ್ಯಾಗತ್ವದಿಂದ ದ್ವಾದಶ ಮಲಂಗಳ ತ್ಯಜಿಸಿ, ಭಕ್ತಿ ಜ್ಞಾನ ವೈರಾಗ್ಯದಿಂದ ಸಮಸ್ತವಾದ ಭೋಗ ಯೋಗಾದಿಗಳಿಗೆ ಹೇವರಿಸಿ, ನಿರಾಶಕತ್ವದಿಂ ಶಿವಧೋ ಎಂದು ಗುರೂಪಾವಸ್ಥೆಯ ಮಾಡುವಂತಹ ಜ್ಞಾನ ಕಲಾತ್ಮಂಗೆ ಜಂಗಮಾಕೃತಿಯಿಂದ ಪ್ರತ್ಯಕ್ಷವಾಗಿ ಆ ಜ್ಞಾನ ಕಲಾತ್ಮನ ಉಪಾವಸ್ಥೆಯನೊಂದಿಸಿ ಅತನಿಗೆ ಅಂಜಬೇಡೆಂದು ಅಭಯ ಹಸ್ತವನಿತ್ತು ರೇವಣಸಿದ್ಧೇಶ್ವರ ಮೊದಲಾದ ಗಣಾಚಾರದ ಮಧ್ಯದಲ್ಲಿ ಈ ಜ್ಞಾನ ಕಲಾತ್ಮನನೊಪ್ಪಿಸಿ, ಅವರಿಂದ ನಿರಾಕಾರವಾದ ಪ್ರಾಣಲಿಂಗವ ಬಹಿಷ್ಕರಿಸಿ, ಪಂಚಕಲಶ ಸೂತ್ರದಿಂದ ಪ್ರಮಥಗಣ ಸಾಕ್ಷಿಯಾಗಿ ಆತನ ಷಡ್ವಿಧಸ್ಥಾನದಲ್ಲಿ ಸ್ಥಿರಂಗೊಳಿಸಿ, ಅಂತರಂಗ ಬಹಿರಂಗದಲ್ಲಿ ಅಷ್ಟವಿಧಾರ್ಚನೆ, ಷೋಡಶೋಪಚಾರಗಳ ಭಕ್ತಿಯನರುಹಿ, ಆ ಪರಶಿವಲಿಂಗದಲ್ಲಿ ನೈಷ್ಠೆಯ ನೋಡಿ, ಏಕವಿಂಶತಿ ದೀಕ್ಷೆ ಮೊದಲಾಗಿ ಪ್ರಮಥರು ನುಡಿದ ಎರಡೆಂಬತ್ತು ಕೋಟಿ ವಚನಾನುಭಾವ ಉದಾಹರಣೆಯ ಬೋಧಿಸಿ, ನಾನು ನೀನು ಎಂಬ ಭಿನ್ನಭಾವವನುಳಿದು ಏಕಸ್ವರೂಪವೆಂಬ ಅಭಿನ್ನ ಲೀಲೆಯಿಂದ ಪಾದೋದಕ ಪ್ರಸಾದದಲ್ಲಿ ಏಕಭಾಜನವ ಮಾಡಿದ ಮೇಲೆ

ಶ್ರೀಗುರು ಬಸವ ಮೊದಲಾದ ಪ್ರಮಥ ಗಣಾರಾಧ್ಯರ ಕರೆದು ಇಲ್ಲೊಂದು ನಿಜವಸ್ತು ಉಂಟೆಂದು ತಾವು ಮೊದಲು ಶರಣ್ಹೊಕ್ಕು ತಮ್ಮ ಹಿಂದೆ ಶರಣಗಣಂಗಳೆಲ್ಲ ಶರಣ್ಹೊಕ್ಕು ಅಡಿ ಮುಡಿಯಿಂದ ವಸ್ತುವ ಬೆಸಗೊಂಡು ಆ ಲಿಂಗ ಜಂಗಮ ದೇವನೊಡಗೂಡಿ ಬಯಲೊಳಗೆ ಮಹಾ ಬಯಲಾದರು ನೋಡಾ ಸಂಗನಬಸವೇಶ್ವರಾ.

---

(೭) ಪಂಚಾಚಾರ, ಸಪ್ತಾಚಾರಗಳು.

೧೪. ಆಯ್ಯಾ ಆಚಾರದ ವಿವರವ ವಿಸ್ತಾರವಾಗಿ ಕರುಣಿಸೆಲೆ ಚಿಕ್ಕದಂಡ ಪ್ರಭುವೇ ಎಂದು ಅಕ್ಕಮಹಾದೇವಿ ಮೊದಲಾದ ಸಕಲ ಪ್ರಮಥಗಣಂಗಳೆಲ್ಲ ಹಸ್ತಾಂಜುಳಿತರಾಗಿ ಬೆಸಗೊಳಲು ಆಗ ಚಿಕ್ಕದಂಡ ಪ್ರಭುವು ಲಿಂಗದಲ್ಲಿ ಅನಂದ ಜಲ ಉಕ್ಕಿ ಬೋಧಿಸಿದಂತಹ ಮಹಾ ಪ್ರಸಾದ ಉಂಟು. ಅದೆಂತೆಂದೊಡೆ,

ಆಯ್ಯಾ, ಶ್ರೀಗುರುಲಿಂಗ ಜಂಗಮದ ವೇಧಾ ಮಂತ್ರ ಕ್ರಿಯಾ ದೀಕ್ಷೆಗೆ ಹೊರಗಾದ ಭುವನದ ಶೈವದೈವದ ಅರ್ಚನೆ ಪೂಜೆಯ ಮಾಡಿ ಅದರುಚ್ಛಿಷ್ಟವ ಭುಂಜಿಸುವದನುಳಿದು, ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದ ಸ್ವರೂಪವಾದ ಅನಾದಿ ಗುರುಲಿಂಗ ಜಂಗಮದರ್ಚನೆ ಪೂಜೆಯ ಮಾಡಿ ಕಿಂಕುರ್ವಾಣತೆಯಿಂದ ಅವರ ಪ್ರಸಾದವ ಹಾರೈಸುವುದೇ ಲಿಂಗಾಚಾರ. ಈ ಭೇದವ ತಿಳಿದು ಪಂಚಾಚಾರವ ಆಚರಣೆಗೆ ತಂದು ಸಪ್ತಾಚಾರವ ಸಂಬಂಧವ ಇಟ್ಟು, ಅಷ್ಟಾವರಣದ ಕಲೆನೆಲೆಗಳ ಒಳಹೊರಗು ಎನ್ನದೆ ಸದ್ಗುರು ಮುಖದಿಂದ ಆಚರಣೆಯ ಸಂಬಂಧವ ತಿಳಿದು, ಸದ್ಭಕ್ತಿ ಜ್ಞಾನ ವೈರಾಗ್ಯ ಷಟ್‌ಸ್ಥಲ ಮಾರ್ಗವಿಡಿದು ನಿಜಾಚರಣೆಯಲ್ಲಾಚರಿಸುವುದೇ ಶಿವಭಕ್ತಿ ಶಿವಜಂಗಮವಲ್ಲದೆ ಉಳಿದ ವೇಷಧಾರಿಗಳೆಲ್ಲ ಎನ್ನೊಡೆಯ ಪ್ರಮಥ ಗಣಾಚಾರಕ್ಕೆ ಹೊರಗೆಂದಾತ ನಮ್ಮ ಅಂಬಿಗರ ಚೌಡಯ್ಯನು.

ಪಂಚಾಚಾರಗಳು.

೧೫. ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ, ಈ ಪಂಚಾಚಾರದ ಆಚರಣೆ ಎಂತೆಂದೊಡೆ, ಲಿಂಗವಲ್ಲದೆ ಅನ್ಯವನರಿಯದಿಹುದೇ ಲಿಂಗಾಚಾರ, ಸಜ್ಜನ ಕಾಯಕದಲ್ಲಿ ತಂದು

ಗುರುಲಿಂಗ ಜಂಗಮಕ್ಕೆ ಮಾಡಿ ನೀಡಿ ನಿತ್ಯನಾಗಿಹುದೇ ಸದಾಚಾರ, ಶಿವಭಕ್ತರಲ್ಲಿ ಜಾತಿವರ್ಣ ಆಶ್ರಮವನರಸದೆ ಅವರೊಕ್ಕುದ ಕೊಂಬುದೇ ಶಿವಾಚಾರ, ಶಿವಾಚಾರದ ನಿಂದೆಯ ಕೇಳದಿಹುದೇ ಗಣಾಚಾರ, ಶಿವಶರಣರೇ ಹಿರಿಯರಾಗಿ ತಾನೇ ಕಿರಿಯನಾಗಿ ಭಯಭಕ್ತಿಯಿಂದ ಆಚರಿಸುವುದೇ ಭೃತ್ಯಾಚಾರ. ಇಂತೀ ಪಂಚಾಚಾರವುಳ್ಳ ಭಕ್ತರ ಒಕ್ಕುದ ನಿಕ್ಕಿ ಸಲಹಯ್ಯ ಪ್ರಭುವೇ ಕೂಡಲಚನ್ನ ಸಂಗಮದೇವಾ.

೧೬. ಭೃತ್ಯಾಚಾರ, ಲಿಂಗಾಚಾರ, ಶಿವಾಚಾರ, ಗಣಾಚಾರ, ಸದಾಚಾರವೆಂಬ ಪಂಚಾಚಾರದೊಳಗಣ ಭೃತ್ಯಾಚಾರವೆಂತೆಂದೊಡೆ: ದಾಸತ್ವವು, ಪರದಾಸತ್ವವು, ಸ್ವಾಮಿ ಭೃತ್ಯತ್ವವು, ವೀರಭೃತ್ಯತ್ವವು, ಸಜ್ಜನತ್ವವು, ಸಕಲಾವಸ್ಥೆಯು, ಗುರುಪೂಜತ್ವವು, ಲಿಂಗಾರ್ಚಕತ್ವವು, ಜಂಗಮಾರಾಧನತ್ವವು, ಭಕ್ತಕಾಂಕ್ಷಿತ್ವವು, ಸ್ವಗೃಹ, ಸ್ವಧನ, ಸ್ವದೇಹವು ಲಿಂಗ ಜಂಗಮ ಭಕ್ತರಿಗೆ ಸವರ್ಪಣವು, ಇಂತೀ ಭಕ್ತಿ ಮುಖವಾಗಿ ದೇವಭಕ್ತರೇ ಹಿರಿದು ತಾ ಕಿರಿದಾಗಿ ಭಯ ಭೃತ್ಯತ್ವವೇ ಭೃತ್ಯಾಚಾರವು.

ಗೃಹವು, ಕ್ಷೇತ್ರವು, ವೇಷವು, ಪಶು, ವಸ್ತ್ರ, ಆಭರಣ ಸ್ಥಾನ ದ್ರವ್ಯಾದಿಗಳು ಸತಿ ಸುತ ಭೃತ್ಯರು ನೆಂಟರು ಇಷ್ಟರು ತಾನಿಹ ದೇಶಕೋಶಾದಿಗಳು ಲಿಂಗಧಾರಣರಾಗಿಹ ಭಕ್ತರುಗಳ ಆಶ್ರಯದಲ್ಲಿ ಇಹುದು. ಸಕಲ ಪಡಿ ಪದಾರ್ಥಂಗಳು ತೈಲಾದಿ ಪಂಚಾಮೃತಂಗಳು ಶಿವಲಿಂಗ ಧಾರಣರಾದ ಭಕ್ತರುಗಳ ಹಸ್ತದಿಂ ಬಂದಿರ್ದಲ್ಲಿ ಅದನು ಗ್ರಹಿಸುವುದೇ ಲಿಂಗಾಚಾರವು.

ಹೀಗೆ ಲಿಂಗಾಚಾರವೇ ಪ್ರಾಣವಾಗಿ ಬ್ರಾಹ್ಮಣಾದಿ ಚಾಂಡಾಲಾಂತ್ಯವಾದ ಅಷ್ಟಾದಶ ವರ್ಣಾಶ್ರಮದ ಕುಲದಲ್ಲಿ ಹುಟ್ಟಿ ಪೂರ್ವ ಜಾತಿ ಮುಂತ್ರಂಗಳಂ ಬಿಟ್ಟು ಗುರುಕರ ಜಾತರಾಗಿ ಇಷ್ಟಲಿಂಗ ಸಂಬಂಧಿಗಳಾಗಿ ಭಕ್ತ ಜಂಗಮ ಲಾಂಛನ ಯುಕ್ತರಾಗಿ ಆಚರಿಸುತ್ತಿಪ್ಪ ಶಿವ ಭಕ್ತ ಜಂಗಮರ ಪೂರ್ವಕುಲ ವರ್ಣಾಶ್ರಮಂಗಳ ವಿಚಾರಿಸದೆ ಸಮಯಾಚಾರದಿಂದೆ ಲಿಂಗಾರ್ಪಿತ ಮಾಡುವುದೇ ಶಿವಾಚಾರವು.

ಹೀಗೆ ಶಿವಾಚಾರವೇ ಪ್ರಾಣವಾಗಿ ಗುರುಲಿಂಗ ಜಂಗಮ ಭಕ್ತರುಗಳ ನಿಂದಿಸುವ ದುರಾಚಾರಿಗಳ ಭಕ್ತನಿಂದೆ ಹರನಿಂದೆ ಆಚಾರ

ನಿಂದೆಯ ಮಾಳ್ಪ ಮಾಯಾವಾದಿಗಳ ಇತರ ಮತಂಗಳಂ, ಪರದೈವಂಗಳ ನಿಷ್ಠೆಯಿಂ ಶಿವಾಚಾರದ ವ್ರತಂಗಳಂ ಕೆಡಿಸುವ ಜೈನ ಬೌದ್ಧ ಚಾರ್ವಾಕ ಮಾಯಾವಾದಿಗಳು ಪ್ರಾಣಲಿಂಗ ಸಂಬಂಧಿಗಳಪ್ಪ ಭಕ್ತರ ವ್ರತಂಗಳ ಕೆಡಿಸುವ ಪ್ರಯತ್ನದ ಸಮಯದಲ್ಲಿ ಪರವಾದಿಗಳ ಕಾಣುತಾಕ್ಷಣವೇ ಹಸ್ತ ಖಡ್ಗದಿಂದ ಅವರ ಪ್ರಾಣತ್ಯಾಗಮಂ ಮಾಡುವುದು, ಅಲ್ಲದೊಡೆ ಶಪಿಸುವುದು, ಹಾಗಾಗದ ಪಕ್ಷ ಆ ಸ್ಥಾನಗಳ ತೊಲಗಿ ಹೋಗುವುದು, ಇಂತಿಪ್ಪು ಆಗದ ಪಕ್ಷಕ್ಕೆ ತನ್ನ ಪ್ರಾಣವಾದರೂ ತ್ಯಾಗ ಮಾಡುವುದು, ಹಾಗಾಗದಿರ್ದೊಡೆ ಆ ದೇಶತ್ಯಾಗವ ಮಾಡುವುದು, ಇಂತೀ ಪ್ರಕಾರದಲ್ಲಿ ತನ್ನ ಗಣಾಚಾರವನುಂಟು ಮಾಡುವುದೇ ಗಣಾಚಾರ.

ಹೀಗೆ ಗಣಾಚಾರವೇ ಪ್ರಾಣವಾಗಿ ಆಚರಿಸುತಿಪ್ಪ ಶರಣಂಗೆ ಸದಾಚಾರ ವಿಲ್ಲದೆ ಜೀವನ್ಮುಕ್ತನಾಗಬಾರದೆಂದು ನಿಶ್ಚಯಿಸಿ ಸದಾಚಾರದ ಭಾವನೆ ಎಂತೆಂದೊಡೆ, ಅಷ್ಟಾವರಣ ಪಂಚಾಚಾರಂಗಳ ನೈಷ್ಠಿಕ ದೃಢವ್ರತಂಗಳ ಸತ್ಕ್ರಿಯಾ ಸಮ್ಯಜ್ಞಾನಂಗಳ ಸಂಬಂಧಿಸಿದ ಶ್ರೀಗುರು ಉಪದೇಶಪರ ಗುರುಮಾರ್ಗಾಚಾರದಲ್ಲಿ ವರ್ತಿಸುವ ಭಕ್ತ ಜಂಗಮರ ನಿಯಮವ್ರತಂಗಳು ತನ್ನ ಭೃತ್ಯಾಚಾರ ಸಂಬಂಧದಿಂದ ಧರ್ಮಾಚಾರಗಳ ಅಳವಡಿಸಿಕೊಟ್ಟು ತನ್ನ ಸದಾಚಾರಂಗಳ ಬಿಡದೆ ಆಚರಿಸುತಿರ್ಪ ಸಮಯಂಗಳಲ್ಲಿ ವಾಗ್ಜಾಲ, ಶಾಸ್ತ್ರಜಾಲ, ಮಹೇಂದ್ರಜಾಲ, ಮಾಯಾಜಾಲ, ಮಂತ್ರ ತಂತ್ರ ಜಾಲಂಗಳೆಂಬ ಬಹು ಚಾಪಲ್ಯ ಕುಶಲದಿಂ ಪಂಚಮುಖನಪ್ಪ ಪರಮೇಶ್ವರನಾದಡೆಯೂ ಬಂದು ಶರಣನು ತಾನು ನಡೆವ ಸತ್ಕ್ರಿಯಾಚಾರಂಗಳ ಬಿಡಿಸಲೆಂದು ಬಹು ಪ್ರಯತ್ನಂಗೆಯ್ಯಲು ಪ್ರಾಣಾಭಿಮಾನಾದಿ ಪರಯಂತರವೂ ಬಿಡದೆ ಸದಾಚಾರಂಗಳ ಆಚರಿಸುತಿರ್ಪುದೇ ಸದಾಚಾರವು.

ಹೀಗೆ ಸರ್ವಾಚಾರ ಸಂಪನ್ನನಹ ಶರಣನ ಸದಾಚಾರವೇ ಪ್ರಾಣವಾಗಿ ಆಚರಿಸುವ ಶರಣನ ಚರಣಕ್ಕೆ ನಮೋ ನಮೋ ಎಂಬೆ ಕಾಣಾ ಸದ್ಗುರು ಬಸವಲಿಂಗ ಪ್ರಭುವೇ.

೧೭. ಅಯ್ಯ ಶ್ರೀಗುರು ಕರುಣಿಸಿ ಕೊಟ್ಟಲಿಂಗ ಜಂಗಮವಲ್ಲದೆ ಅನ್ಯ ದೈವಂಗಳ ತ್ರಿಕರಣದಲ್ಲಿ ಅರ್ಚಿಸದಿಪ್ಪುದೇ ಲಿಂಗಾಚಾರವೆಂದೆನಯ್ಯಾ.

ಭಕ್ತನಾದಡೆ ಸತ್ಯ ಶುದ್ಧಕಾಯಕ, ಮಹೇಶನಾದಡೆ, ಸತ್ಯಶುದ್ಧ ತೃಷ್ಣೆಯ ಬೇಡಿ, ಸಮಸ್ತ ಪ್ರಾಣಿಗಳಲ್ಲಿ ಪಾತ್ರಾಪಾತ್ರವ ತಿಳಿದು, ಹಸಿವು ಸೀತಕ್ಕೆ ಪರಹಿತಾರ್ಥಿಯಾಗಿರ್ಪುದೇ ಸದಾಚಾರವೆಂಬೆನಯ್ಯ.

ಗುರುಮಾರ್ಗಾಚಾರದಲ್ಲಿ ನಿಂದ ಶಿವಲಾಂಛನ ಧಾರಿಗಳೆಲ್ಲ ಪರ ಶಿವಲಿಂಗವೆಂದು ಭಾವಿಸಿ ಆರ್ಥ ಪ್ರಾಣಾಭಿಮಾನವನೊಪ್ಪಿಸುವುದೇ ಶಿವಾ ಚಾರವೆಂಬೆನಯ್ಯಾ.

ಅಷ್ಟಾವರಣಾಂಗಳ ಮೇಲೆ ನಿಂದೆ ಕುಂದುಗಳು ಬಂದು ತಟ್ಟ ದಲ್ಲಿ ಗಣ ಸಮೂಹವನೊಡಗೂಡಿ, ಆ ಸ್ಥಲವ ತ್ಯಜಿಸುವುದೇ ಗಣಾ ಚಾರವೆಂಬೆನಯ್ಯ.

ಜಾತ್ಯಾಶ್ರಮ ಕುಲಗೋತ್ರ ನಾಮರೂಪ ಕ್ರಿಯಾರಹಿತವಾಗಿ ಗುರೂಪಾವಸ್ಥೆಯಿಂದ ಗುರು ಪ್ರತ್ಯಕ್ಷವ ಮಾಡಿ, ಆ ಗುರುವಿನಿಂದ ಚಿದ್ಘನ ಮಹಾಲಿಂಗವ ಪಡೆದು, ಆ ಲಿಂಗಸಹಿತವಾಗಿ ಭಕ್ತಿ ಜ್ಞಾನ ವೈರಾಗ್ಯ ಪಾದೋದಕ ಪ್ರಸಾದ ವಿಭೂತಿ ರುದ್ರಾಕ್ಷಿ ಮಂತ್ರ ಮೊದಲಾದ ಷಟ್ ಸ್ಥಲ ಮಾರ್ಗದಲ್ಲಿ ನಿಂದ ಭಕ್ತಗಣಂಗಳಲ್ಲಿ ಪಂಚಸೂತಕಂಗಳ ಕಲ್ಪಿ ಸದೆ, ಅವರಿದ್ದ ಸ್ಥಲಕ್ಕೆ ಹೋಗಿ ತನು ಮನ ಧನಂಗಳ ಸಮರ್ಪಿಸಿ ಅವರೊಕ್ಕುದ ಮಿಕ್ಕುದ ಹಾರೈಸಿ ಹಸ್ತಾಂಜಲಿತರಾಗಿ ಪ್ರತಿ ಉತ್ತರವ ಕೊಡದಿರ್ಪುದೇ ಭೃತ್ಯಾಚಾರವೆಂಬೆನಯ್ಯ.

ಸಪ್ತಾಚಾರಗಳು.

೧೮. ಮಲ ಮಾಯಾ ಪಾತಕ ಸೂತಕ ರಹಿತನಾದ ದೀಕ್ಷಾ ಗುರು ಶಿಕ್ಷಾಗುರು ಜ್ಞಾನ ಗುರುವಿಂದ ವೇಧಾ ಮಂತ್ರ ಕ್ರಿಯಾದೀಕ್ಷೆಯ ಪಡೆದು, ದ್ವಾದಶ ಮಲಪಾಶ ಕರ್ಮವ ತ್ಯಜಿಸಿ ಮನ ಮಾರುತ ಮೊದಲಾದ ದ್ವಾದಶ ಇಂದ್ರಿಯಂಗಳ ಗುರುಪಾದ ಜಲದಿಂದ ಪ್ರಕ್ಷಾ ಲಿಸಿ ದಂತ ಪಂಚ್ಮಿ ಕ್ರಿಯೆಗಳ ಮಾಡಿ, ಕಟಸ್ನಾನ ಕಂಠಸ್ನಾನ ಮಂಡೆ ಸ್ನಾನ ಸರ್ವಾಂಗಸ್ನಾನವ ಮಾಡಿ, ಕ್ರಿಯಾ ಭಸಿತದಿಂದ ಸ್ನಾನ ಧೂಳನ

ಧಾರಣ ಮರ್ಮಂಗಳ ತಿಳಿದಾಚರಿಸಿ, ಸಾಕಾರ ನಿರಾಕಾರ ಅಷ್ಟವಿಧಾ ರ್ಚನೆ ಷೋಡಶೋಪಚಾರದಿಂದ ಲಿಂಗ ಜಂಗಮವನರ್ಚಿಸಿ, ನಿರ್ವಂ ಚಕತ್ವದಿಂದ ಘನವಾದ ತೀರ್ಥ ಪ್ರಸಾದ ಮಂತ್ರದಲ್ಲಿ ನಿಂದ ನಿಜಾ ವಸ್ಥೆಯೇ ಕ್ರಿಯಾಚಾರವೆಂಬೆನಯ್ಯಾ.

ಅಂತರಂಗದಲ್ಲಿ ಕರಣ ವಿಷಯ ಕರ್ಕಶದಿಂದಹಂಕರಿಸಿ ಗುರುಹಿರಿ ಯರಲ್ಲಿ ಸಂಕಲ್ಪ ವಿಕಲ್ಪಗಳಿಂದ ಕುಂದು ನಿಂದೆ ಹಾಸ್ಯ ರೋಷವೆಂಬ ಅಜ್ಞಾನವ ಬಳಸದೆ ಪರಮಪಾತಕರ ದರ್ಶನ ಸ್ಪರ್ಶನ ಸಂಭಾಷಣೆ ಸಮ ಪಂಙ್ತಿ ಪಾಕವ ಕೊಳ್ಳದೆ, ಸತ್ಯ ನಡೆನುಡಿಯುಳ್ಳ ಶಿವ ಶರಣ ಗಣಂಗ ಳಲ್ಲಿ ಷಡ್ವಿಧಭಕ್ತಿ ಮುಂದುಗೊಂಡು ಎರಡೆಂಬತ್ತುಕೋಟಿ ವಚನಾನು ಭಾವದಲ್ಲಿ ನಿಂದ ನಿಲುಕಡೆಯೇ ಜ್ಞಾನಾಚಾರವೆಂಬೆನಯ್ಯ.

ತನುವಿನ ವಿಕಾರದಿಂದ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳ ಬಳಕೆಯ ಮಾಡದೆ, ಲೋಕದಂತೆ ನಡೆನುಡಿಗಳ ಬಳಸದೆ ತನ್ನ ಗುಣಾವಗುಣಂಗಳ ಸ್ವಾತ್ಮಾನುಭವದಿಂದ ಅರಿದು ದುರ್ಗುಣವ ತ್ಯಜಿಸಿ ಸದ್ಗುಣವ ಹಿಡಿದು ಬಿಡದಿರ್ಪುದೇ ಭಾವಾಚಾರವೆಂಬೆನಯ್ಯ.

ಕೊಡುವಲ್ಲಿ ಕೊಂಬಲ್ಲಿ ಅತಿ ಆಶೆಯಿಂದ ಹುಸಿನುಡಿಯ ನುಡಿ ಯದೆ ಕೊಟ್ಟ ಭಾಷೆಯ ಪ್ರಾಣಾಂತ್ಯ ಬಂದರೂ ನುಡಿಯಂತೆ ನಡೆ ವುದೇ ಸತ್ಯಾಚಾರವೆಂಬೆ ನೋಡಾ.

ಕಾಲಕಾಮಗಳ ಬಾಧೆಗೊಳಗಾದ ಹಠಯೋಗದ ಕಟ್ಟು ಮುಟ್ಟು ಸೋಂಕುಗಳೆಲ್ಲದೆ ಲಿಂಗಾಣತಿಯಿಂ ಬಂದೊದಗಿದ ಪರಿಣಾಮ ಪ್ರಸಾದ ದಲ್ಲಿ ಲೋಲುಪ್ತನಾಗಿರ್ಪುದೇ ನಿತ್ಯಾಚಾರವೆಂಬೆ ನೋಡಾ.

ಸರ್ವಾವಸ್ಥೆಯಲ್ಲಿ ದಶವಿಧ ಪಾದೋದಕ ಏಕಾದಶ ಪ್ರಸಾದ ಮೂವತ್ತಾರು ಪ್ರಣವ ಮೊದಲಾದ ಮಹಾಮಂತ್ರಂಗಳಲ್ಲಿ ಏರಕತ್ವವ ನುಳ್ಳದೇ ಧರ್ಮಾಚಾರವೆಂಬೆ ನೋಡಾ.

ಇಂತೀ ಮರ್ಮವ ಗುರುಕೃಪೆಯಿಂದರಿದು ಆಚಾರವೇ ಅಂಗ ಮನ ಪ್ರಾಣ ಭಾವಂಗಳಾಗಿ ಇಹಪರಂಗಳ ಮೀರಿ ಪಿಂಡಾದಿ ಜ್ಞಾನ ಶೂನ್ಯಾಂತವಾದ ಏಕೋತ್ತರ ಮಾರ್ಗದಲ್ಲಿ ನಿಂದು ಬಯಲೊಳಗೆ ಬಚ್ಚ

ಬರಿಯ ನಿರವಯವ ಸಾಧಿಸುವುದೇ ಸರ್ವಾಚಾರ ಸಂಪತ್ತಿನಾಚಾರದ ನಿಲುಕಡೆ ನೋಡಾ.

ಇಂತು ಆಚಾರದ ಕುರುಹ ತಿಳಿದು ಪಂಚಾಚಾರವ ಬಹಿಷ್ಕರಿಸಿ, ಸಪ್ತಾಚಾರವ ಗೋಷ್ಯವ ಮಾಡಿ ದರಿದ್ರಗೆ ನಿಧಿನಿಧಾನ ದೊರೆತಂತೆ, ರೋಗಿಗೆ ವೈದ್ಯಲತೆ ದೊರೆತಂತೆ, ಮೂಕ ಫಲ ಸವಿದಂತೆ, ಕಕ್ಕುಗೆ ಜೇಳೂರಿದಂತೆ, ತಮ್ಮ ಚಿದಂಗ ಸ್ವರೂಪನಾದ ಶರಣ ಗಣಂಗಳಲ್ಲಿ ಉಸುರಿ, ದುರ್ಜನರಲ್ಲಿ ಬಳಸದೆ ನಿಂದ ಪರಮಸುಖಿ ನಿಮ್ಮ ಶರಣರಲ್ಲದೆ ಉಳಿದ ಕಣ್ಣುಗೆಟ್ಟಣ್ಣಗಳೆತ್ತ ಬಲ್ಲರಯ್ಯ ಕೂಡಲ ಚನ್ನಸಂಗಮದೇವಾ.

ಪಂಚಾಚಾರ, ಸಪ್ತಾಚಾರ ಇವುಗಳ ಪರಿಣಾಮಗಳು.

೧೯. ಹರಹರಾ ಶಿವಶಿವಾ ಜಯಜಯ, ಹರಗಣಂಗಳಾಚರಿಸಿದ ಸತ್ಯಾಯಕದಿಂದ ಬಹು ಜನ್ಮದ ದೋಷ ತೊಲಗುವುದಯ್ಯಾ. ಸತ್ಕ್ರಿಯೆಯಿಂದ ಕಾಮಕಾಲರ ಭಯ ಹರಿವುದಯ್ಯಾ. ಸಮ್ಯಜ್ಞಾನದಿಂದ ಮಾಯೆಯು ಹಿಂದಾಗುವುದಯ್ಯ. ಸದ್ಭಕ್ತಿಯಿಂದ ಪಾವನ ಸ್ವರೂಪವಾಗುವದಯ್ಯ.

ಲಿಂಗಾಚಾರದಿಂದ ತನ್ನಂಗ ಶುದ್ಧವಾಗುವುದಯ್ಯ. ಸದಾಚಾರದಿಂದ ಮನ ಶುದ್ಧವಾಗುವುದಯ್ಯ. ಶಿವಾಚಾರದಿಂದ ಧನ ಪ್ರಸಿದ್ಧವಾಗುವುದಯ್ಯ. ಗಣಾಚಾರದಿಂದ ನಡೆ ಪರುಷವಾಗುವುದಯ್ಯ. ಭೃತ್ಯಾಚಾರದಿಂದ ನುಡಿ ಪರುಷವಾಗುವುದಯ್ಯ.

ಕ್ರಿಯಾಚಾರದಿಂದ ಕರ್ಮೇಂದ್ರಿಯಂಗಳು ಪವಿತ್ರವಾಗುವವಯ್ಯ. ಜ್ಞಾನಾಚಾರದಿಂದ ಜ್ಞಾನೇಂದ್ರಿಯಂಗಳು ಪಾವನವಾಗುವವಯ್ಯ. ಭಾವಾಚಾರದಿಂದ ಕರಣಂಗಳು ನಿಜಸ್ವರೂಪವಾಗುವವಯ್ಯ. ಸತ್ಯಾಚಾರದಿಂದ ವಿಷಯಂಗಳು ಲಿಂಗಮುಖವಾಗುವವಯ್ಯ. ನಿತ್ಯಾಚಾರದಿಂದ ವಾಯುಗಳು ಮಹಾ ಪ್ರಸಾದವಾಗುವವಯ್ಯ. ಧರ್ಮಾಚಾರದಿಂದ

ಲಿಂಗಾಂಗಗಳು ಏಕವಾಗುವವಯ್ಯ. ಸರ್ವಾಚಾರದಿಂದ ಸರ್ವಾಂಗ ಜ್ಞಾನ ಜ್ಯೋತಿಯಪ್ಪುದು ತಪ್ಪದು ನೋಡಾ.

'ಲಿಂಗಾಚಾರ ಸದಾಚಾರ ಶಿವಾಚಾರಸ್ತಥೈವಚ ।
ಗಣಾಚಾರ ಭೃತ್ಯಾಚಾರ ಪಂಚಾಚಾರಾಃ ಪ್ರಕೀರ್ತಿತಾಃ ॥
ಕ್ರಿಯಾಚಾರ ಜ್ಞಾನಾಚಾರೋ ಭಾವಾಚಾರಸ್ತಥೈವಚ ।
ಸತ್ಯಾಚಾರೋ ನಿತ್ಯಾಚಾರೋ ಧರ್ಮಾಚಾರೋವರಾನನೇ !!
ಸರ್ವಾಚಾರ ಸಂಪನ್ನೇನ ಸದಾಸನ್ನಿಹಿತಃ ಶಿವಃ ।
ಲಿಂಗಾವಸಾನ ಕಾಲೇ ದ್ವಾದಶಾಚಾರಕಂ ಶೃಣು ॥

ಇಂತೆಂದುದಾಗಿ ಸತ್ಯಾಯಕ ಮೊದಲಾದ ಷೋಡಶ ನೆಲೆ ಕಲೆಗಳ ಸದ್ಗುರು ಮುಖದಿಂದ ಚಿದ್ಭಾನಲಿಂಗವ ಮಾಡಿಕೊಂಡು, ಷೋಡಶವರ್ಣವ ಸದ್ಗುರು ಮುಖದಿಂದ ಚಿದಂಗವ ಮಾಡಿಕೊಂಡು ಸದ್ಗುರು ಮುಖದಿಂ ಎರಡಳಿದು ಏಕ ಸ್ವರೂಪದಿಂದ ಜ್ಯೋತಿಯ ಜ್ಯೋತಿ ಬೆರೆವಂತೆ ಬಸವ ಮೊದಲಾದ ಪ್ರಮಥಗಣಂಗಳೆಲ್ಲ ಬಯಲೊಳಗೆ ಮಹಾ ಬಯಲಾದರು ನೋಡಾ ಸಂಗನಬಸವೇಶ್ವರಾ.

ಅಷ್ಟಾವರಣಗಳು.

ಸಾಮಾನ್ಯ ನಿರೂಪಣೆ.

೨೦. ಅಷ್ಟಾವರಣ ಸಂಬಂಧವೆಂತೆಂದೊಡೆ, ಜಗತ್ಪತಿಯಾದ ಪರಮೇಶ್ವರನು ತನ್ನ ಸೊಮ್ಮಿನ ಜೀವನು ವ್ಯರ್ಥ ಪ್ರಾಣಿಯಾಗಿ ಕೆಡುತ್ತಾನೆ ಎಂದು ದಯೆ ಹುಟ್ಟಿ ತ್ರಿವಿಧ ರೂಪ ಧರಿಸಿದನುಃ— ಅದೆಂತೆಂದೊಡೆ, ಏಕ ಮೂರ್ತಿಯಾದ ಮಹಾದೇವನು ತ್ರಿವಿಧ ರೂಪಾದನು. ಅದೆಂತೆಂದೊಡೆ, ಗುರು ಲಿಂಗ ಜಂಗಮ ರೂಪ ಧರಿಸಿ ಆ ಜೀವಾತ್ಮನಿಗೆ ಕಾಯದಲ್ಲಿ ಗುರುವಾಗಿ, ಜೀವದಲ್ಲಿ ಲಿಂಗವಾಗಿ, ಪ್ರಾಣದಲ್ಲಿ ಜಂಗಮವಾಗಿ, ಗುರು ರೂಪದಿಂದ ಬೋಧೆಯ ಮಾಡಿ, ಲಿಂಗರೂಪದಿಂದ ಪೂಜೆಯ ಕೈಕೊಂಡು, ಜಂಗಮ ರೂಪದಿಂದ ಪಾದೋದಕ ಪ್ರಸಾದವ ದಯಪಾಲಿಸಿ, ತನ್ನ ದೇಹದ ಪ್ರಸಾದವೇ ಆತನ ತ್ವಕ್ಕಿನಲ್ಲಿ ಭಸ್ಮಸಂಬಂಧವ ಮಾಡಿ, ತನ್ನ ನೇತ್ರ ಸ್ವರೂಪವಾದ ರುದ್ರಾಕ್ಷಿಗಳನ್ನು ಆತನ ನೇತ್ರಗಳಲ್ಲಿ ಸಂಬಂಧವ ಮಾಡಿ, ತನ್ನ ನಾಮವೆಂಬ ಪಂಚಾಕ್ಷರಿಯ ಮಂತ್ರವನ್ನು ಆತನ ವಾಕ್ಯದಲ್ಲಿ ಸಂಬಂಧವ ಮಾಡಿ, ತನ್ನ ಆನಂದವನ್ನು ಆತನ ಜಿಹ್ವೆಯಲ್ಲಿ ಪಾದೋದಕವ ಸಂಬಂಧಿಸಿ, ತನ್ನ ದಯೆಯನ್ನು ಆತನ ಶ್ರೋತದಲ್ಲಿ ಪ್ರಸಾದನ ಮಾಡಿ ಸಂಬಂಧಿಸಿ, ಮೇಲಾಗಿ ತನ್ನ ಇಪ್ಪತ್ತೆಂಟು ಸ್ಥಾನಂಗಳಾದ ಇಪ್ಪತ್ತೆಂಟು ಆಗಮಗಳನ್ನು ಉತ್ಪನ್ನವ ಮಾಡಿ, ತನ್ನ ಪಂಚ ಮುಖಗಳಿಂದ ಪಂಚವೇದಂಗಳ ಹುಟ್ಟಿಸಿ, ಮೂವತ್ತೆರಡು ಉಪನಿಷತ್ತುಗಳ ಹುಟ್ಟಿಸಿ, ಷಟ್‌ಶಾಸ್ತ್ರಗಳ ಉತ್ಪನ್ನವ ಮಾಡಿದನು. ಏನು ಕಾರಣವೆಂದಡೆ, ಈ ಜೀವನು ವ್ಯರ್ಥ ಪ್ರಾಣಿಯಾಗಿ ಭವಕ್ಕೆ ಬೀಳುತ್ತಾನೆ, ಯತ್ರ ಜೀವಸ್ತತ್ರ ಶಿವನೆಂದು ಎನ್ನ ವಚನ ಉಂಟಾದ ಕಾರಣದಿಂದ ಆತನ ಮೇಲೆ ದಯವಿಟ್ಟು ಹೇಳಿದೆನು, ಅದು ಕಾರಣದಿಂದ ಈ ಅಷ್ಟಾವರಣವನ್ನು ನಂಬಿಕೊಂಡು ಆಚರಿಸಿ ಶಿವಾನುಭಾವವನ್ನು ಗುರು ಮುಖದಿಂದ ಶ್ರುತಪಡಿಸಿಕೊಂಡು ಜೀವಾತ್ಮನು ಎನ್ನಲ್ಲಿ ಐಕ್ಯವಾಗಲಿ ಎಂದು ನಿರೂಪಿಸಿದ ಪ್ರಸಾದವಾಕ್ಯ ಸಂಪೂರ್ಣ ಮಂಗಳ ಮಹಾಶ್ರೀಗುರು.

೨೧. ವಿಭೂತಿ ರುದ್ರಾಕ್ಷಿಯ ಧರಿಸಿ ಷಡಕ್ಷರಿಯಂ ಜಪಿಸಿ, ಗುರು ಲಿಂಗ ಜಂಗಮದ ಆದಿ ಅಂತ್ಯವನರಿಯದೆ ಏನೆಂದು ಪೂಜಿಸುವಿರಿ, ಆರಾಧಿಸುವಿರಿ? ಅದೆಂತೆಂದೊಡೆ, ನೆಲದ ಮೇಲಣ ಸಿಲೆಯ ಕಲು ಕುಟಿಗ ಕಡಿದು ಖಂಡಿಸಿ ಹರದನ ಕಯ್ಯಲ್ಲಿ ಕೊಟ್ಟು ಮಾರಿಸಿಕೊಂಡುದು ಲಿಂಗವಾದ ಪರಿ ಹೇಗೆ? ಸಕಲ ವ್ಯಾಪಾರದಳವಿಂಗೆ ಒಳಗಾಗಿ ತೊಡಿಸಿ ಬರಿಸಿಕೊಂಡುದು ಮಂತ್ರವಾದ ಪರಿ ಹೇಗೆ? ಅಜ್ಞಾನಿ ವೃಗವಿನ ಸಗಣಿಯ ಸುಟ್ಟುದು ವಿಭೂತಿಯಾದ ಪರಿ ಹೇಗೆ? ಪಂಚ ಭೌತಿಕದಿಂದ ಜನಿಸಿದ ವೃಕ್ಷದ ಫಲ ರುದ್ರಾಕ್ಷಿಯಾದ ಪರಿ ಹೇಗೆ? ಸಕಲ ಜೀವವೆರಸಿ ಕರಗಿಸುವ ಜಲ ತೀರ್ಥವಾದ ಪರಿ ಹೇಗೆ? ಸಕಲ ಪ್ರಾಣಿಗಳಾಹಾರ ಹದಿನೆಂಟು ಧಾನ್ಯ ಕ್ಷುಧಾಗ್ನಿಯಲ್ಲಿ ಪಚನವಾದುದು ಪ್ರಸಾದವಾದ ಪರಿ ಹೇಗೆ? ಅದೆಂತೆಂದೊಡೆ, ನಿಗಮಶಾಸ್ತ್ರಕ್ಕೆ ಅಗಣಿತವಾದ ನಾದಬಿಂದುವಿಗೆ ನಿಲುಕದ ನಿತ್ಯ ತೃಪ್ತಿ ಪರಂಜ್ಯೋತಿ ಲಿಂಗವೈ ಭವಕ್ಕೆ ಅಂಗವಾದುದು ಈ ಗುರುವಲಾ ಎಂದರಿದು ಮಾಡುವುದು. ತನು ಮನ ಧನ ವಂಚನೆಯಳಿದು ಗುರುಭಕ್ತಿ ಸನ್ನಿಹಿತನಾಗಿ ಆ ಲಿಂಗದ ಮನ ಈ ಜಂಗಮವಲಾ ಎಂದರಿದು ಮಾಡುವುದು. ತನು ಮನ ಧನವಂಚನೆಯಳಿದು ಜಂಗಮ ಭಕ್ತಿಸನ್ನಿಹಿತನಾಗಿ, ಆ ಲಿಂಗದ ಕಾಯ ಕಾಂತಿ ಬೆಳಗಿನ ಐಶ್ವರ್ಯವಲಾ ಎಂದರಿದು ಧರಿಸುವುದು ಶ್ರೀ ವಿಭೂತಿಯ. ಆ ಲಿಂಗದ ಶೃಂಗಾರದ ಹರಣಾಭರಣವಲಾ ಎಂದರಿದು ಅಳವಡಿಸುವುದು ರುದ್ರಾಕ್ಷಿಯನು. ಆ ಲಿಂಗದ ಉತ್ತುಂಗ ಕಿರಣ ಚರಣಾಂಬುಜ ಜಲವಲಾ ಎಂದರಿದುಕೊಂಬುವುದು ಪಾದೋದಕವನು. ಆ ಲಿಂಗದ ನಿತ್ಯ ಪದ ಸಂಯೋಗ ಶೇಷವಲಾ ಎಂದರಿದುಕೊಂಬುವುದು ಪ್ರಸಾದವನು. ಇಂತಿವೆಲ್ಲವನರಿದು ಸಂತೋಷ ಭರಿತನಾಗಿ ಚರಿಸುವಾತನೇ ಸದ್ಭಕ್ತನು. ಆತನ ಕಾಯ ಕರಣ ಪ್ರಾಣ ಭಾವಾದಿಗಳು ಸೋಂಕಿದುದೆಲ್ಲವು ಲಿಂಗ ಸೋಂಕು, ಲಿಂಗದ ಕ್ರಿ, ಲಿಂಗ ದಾಸೋಹ, ಇಂತೀ ತ್ರಿವಿಧವನರಿದು ಅಳಿದುಳಿದ ಸದ್ಭಕ್ತನ ಶ್ರೀ ಪಾದಕ್ಕೆ ನಮೋ ನಮೋ ಎಂಬೆನು ಕಾಣಾ ಬಸವಣ್ಣ ಪ್ರಿಯ ನಿಃಕಳಂಕ ಸೋಮೇಶ್ವರಾ.

೨೨. ಯಥಾಭಾವಂ ತದ್ಭವತಿ ಎಂಬ ಭಾವ ಉಂಟಾಗಿ ಶಿವ ತಾನೆ ಗುರುವಾದ. ಯದ್ಭಾವಂ ತದ್ಭವತಿ ಎಂಬ ಭಾವ ಉಂಟಾಗಿ ಶಿವ

ತಾನೆ ಶಿವನಾದ. ಯದ್ಭಾವಂ ತದ್ಭವತಿ ಎಂಬ ಭಾವ ಉಂಟಾಗಿ, ಶಿವ ತಾನೆ ಜಂಗಮನಾದ. ಯದ್ಭಾವಂ ತದ್ಭವತಿ ಎಂಬ ಭಾವ ಉಂಟಾಗಿ, ಶಿವ ತಾನೆ ಪ್ರಸಾದವಾದ. ಯದ್ಭಾವಂ ತದ್ಭವತಿ ಎಂಬ ಭಾವ ಉಂಟಾಗಿ ಶಿವ ತಾನೆ ಪ್ರಸಾದಿಯಾದ. ಯದ್ಭಾವಂ ತದ್ಭವತಿ ಎಂಬ ಭಾವ ಉಂಟಾಗಿ, ಕೂಡಲ ಚನ್ನಸಂಗ ತಾನೆಯಾದ.

೩೩. ಅಯ್ಯ ಶ್ರೀ ಮಹಾ ವಿಭೂತಿಯಿಂದ ಕಂಡೆ ಆ ನಿಮ್ಮ ದಿವ್ಯ ಬೆಳಗಿನ ಹೊಳಪ ಈ ಎನ್ನ ಕರಸ್ಥಲದೊಳಗೆ ಅಯ್ಯ. ಶ್ರೀಮಹಾ ರುದ್ರಾಕ್ಷಿಯಿಂದ ಕಂಡೆ ಆ ನಿಮ್ಮ ದಿವ್ಯ ಮೂರ್ತಿಯ ಗೂಢವ ಈ ಎನ್ನ ಕರಸ್ಥಲಮೊಳಗೆ ಅಯ್ಯ. ಶ್ರೀಮಹಾ ಪಂಚಾಕ್ಷರಿಯಿಂದ ಕಂಡೆ ಆ ನಿಮ್ಮ ದಿವ್ಯ ವಸ್ತ್ರಂಗಳ. ಈ ಎನ್ನ ಕರಸ್ಥಲದೊಳಗೆ ನಾ ಬಯಸುವ ಬಯಕೆ ಕೈಸಾರಿತಿಂದು ಕೂಡಲಸಂಗಮದೇವಾ.

ಅಂತರಂಗ ಅಷ್ಟಾವರಣಗಳು.

೩೪. ಭಕ್ತನ ಮನವೇ ಲಿಂಗ, ತನ್ಮನದ ಜ್ಞಾನವೇ ಜಂಗಮ, ಆ ಜ್ಞಾನದ ಪರಿಪೂರ್ಣವೇ ಗುರು, ತದ್ಭಕ್ತನೇ ಶೇಷ, ಆ ಜ್ಞಾನದ ಸಾರವೇ ಪಾದೋದಕ, ಆ ಜ್ಞಾನದ ಪ್ರಕಾಶವೇ ವಿಭೂತಿ, ಆ ಮಾಯಾ ಕರಣಂಗಳ ಮೇಲೆ ಕರೆದ ಜ್ಞಾನ ಸಾರಾಮೃತ ವೃಷ್ಟಿಯೇ ರುದ್ರಾಕ್ಷಿ, ಆ ಭಕ್ತನ ನಾಮವೇ ಮಂತ್ರ, ಇಂತಹ ಭಕ್ತನೇ ಪರಬ್ರಹ್ಮವೆಂದು ಶರಣೆಂದವರೇ ಧನ್ಯರು ನೋಡಾ.

೩೫. ಗುರುವೇ ಇಷ್ಟ, ಲಿಂಗವೇ ಪ್ರಾಣ, ಜಂಗಮವೇ ಭಾವ, ಪ್ರಸಾದವೇ ಚಿತ್ತಾಯ, ಪಾದೋದಕವೇ ಶರಣ, ವಿಭೂತಿಯೇ ಅಂತರಂಗದ ಚಿತ್ಪ್ರಕಾಶ, ರುದ್ರಾಕ್ಷಿಯೇ ಚತುರ್ದಶೇಂದ್ರಿಯಂಗಳು, ಮಂತ್ರವೇ ಷಟ್‌ಪ್ರಕಾರವಾದ ಮಂತ್ರ ತತ್ವ ಕರಣಂಗಳು ನೋಡಾ.

೩೬. ಎನ್ನ ಕರಸ್ಥಲಕ್ಕೆ ಇಷ್ಟಲಿಂಗ ಸ್ವರೂಪವಾಗಿ, ಮತ್ತಾ ಮನಸ್ಥಲಕ್ಕೆ ಪ್ರಾಣಲಿಂಗ ಸ್ವರೂಪವಾಗಿ, ಮತ್ತೆ ಭಾವಸ್ಥಲಕ್ಕೆ ಭಾವ ಲಿಂಗ ಸ್ವರೂಪವಾಗಿ, ಈ ತ್ರಿವಿಧ ಮೂರ್ತಿಯೇ ಅಷ್ಟಾವರಣ ಸ್ವರೂ

ಪವಾಗಿ, ಎನ್ನ ಆರುಹಿನಲ್ಲಿ ಗುರುವಾಗಿ ನಿಂದು, ಎನ್ನ ಪ್ರಾಣದಲ್ಲಿ ಲಿಂಗ, ಎನ್ನ ಜ್ಞಾನದಲ್ಲಿ ಜಂಗಮ, ಎನ್ನ ಜಿಹ್ವೆಯಲ್ಲಿ ಪಾದೋದಕ, ಎನ್ನ ನಾಸಿಕದಲ್ಲಿ ಪ್ರಸಾದ, ಎನ್ನ ತ್ವಕ್ಕಿನಲ್ಲಿ ವಿಭೂತಿ, ಎನ್ನ ನೇತ್ರದಲ್ಲಿ ರುದ್ರಾಕ್ಷಿ, ಎನ್ನ ಶ್ರೋತ್ರದಲ್ಲಿ ಪಂಚಾಕ್ಷರಿ, ಇಂತಿವು ಅಷ್ಟಾವರಣದಲ್ಲಿ ಸ್ವರೂಪವವು ಎನ್ನೊಳಗೆ ತನ್ನ ಕರುಣ ಕೃಪೆಯಿಂದ ತೋರಿದ ನಮ್ಮ ಶಾಂತ ಕೂಡಲ ಸಂಗಮದೇವ.

ಅಷ್ಟಾವರಣಗಳ ಸಾಧನೆ.

(ಸ್ಥೂಲಶರೀರದಲ್ಲಿ.)

೩೭. ದೀಕ್ಷಾತ್ರಯಂಗಳಲ್ಲಿ ನಿಜ ಗುರುವ ಸಂಬಂಧವ ಮಾಡಿಕೊಂಡು, ಪೂಜಾತ್ರಯಂಗಳಲ್ಲಿ ನಿಜಲಿಂಗವ ಸಂಬಂಧವ ಮಾಡಿಕೊಂಡು, ಭೋಗತ್ರಯಂಗಳಲ್ಲಿ ನಿಜ ಜಂಗಮವ ಸಂಬಂಧವ ಮಾಡಿಕೊಂಡು, ಕ್ರಿಯಾತ್ರಯಂಗಳಲ್ಲಿ ನಿಜ ಪಾದೋದಕವ ಸಂಬಂಧವ ಮಾಡಿಕೊಂಡು, ಜ್ಞಾನತ್ರಯಂಗಳಲ್ಲಿ ನಿಜ ಪ್ರಸಾದವ ಸಂಬಂಧವ ಮಾಡಿಕೊಂಡು, ಆಚಾರತ್ರಯಂಗಳಲ್ಲಿ ನಿಜ ಚಿದ್ಭಸಿತವ ಸಂಬಂಧವ ಮಾಡಿಕೊಂಡು, ಸರ್ವಾಂಗದಲ್ಲಿ ನಿಜ ರುದ್ರಾಕ್ಷಿಗಳ ಸಂಬಂಧವ ಮಾಡಿಕೊಂಡು, ಪಂಚಾಕ್ಷರ, ಷಡಕ್ಷರಂಗಳೇ ನಡೆ ನುಡಿಯಾಗಿ ಸಕಲಶಾಸ್ತ್ರಾಗಮ ಪುರಾಣಂಗಳೇ ಹಸ್ತಪಾದಂಗಳಾಗಿ, ಎರಡೆಂಭತ್ತುಕೋಟಿ ವಚನಂಗಳೇ ಮಹಾ ಮಂತ್ರಗಳ ಸಂಬಂಧವ ಮಾಡಿಕೊಂಡರು ನೋಡಾ. ಪರಹಿತಾರ್ಥಕ್ಕೋಸ್ಕರ ಸ್ಥೂಲ ಕಂಥೆಯ ಧರಿಸಿ ನಿರ್ವಂಚಕ ಲೀಲಾ ಮೂರ್ತಿಯಾಗಿ, ಇಂತೀ ಏಕಲಿಂಗ ನಿಷ್ಠಾ ಪರತ್ವದಿಂದ ಅರಿದಾಚರಿಸುವರೇ ನೂತನ ಸದ್ಭಕ್ತ ಶಿವಶರಣಂಗಳು ನೋಡಾ ಸಂಗನಬಸವೇಶ್ವರಾ.

೩೮. ಇಂತೀ ಅಷ್ಟಾವರಣವ ಸದ್ಗುರು ಮುಖದಿಂ ಚಿದಂಗ ಚಿದ್ಘನ ಲಿಂಗದ ಮಧ್ಯದಲ್ಲಿ ಸಂಬಂಧವಿಟ್ಟು ಏಕ ಲಿಂಗ ನಿಷ್ಠಾ ಪರತ್ವದಿಂದ ಸ್ಥೂಲ ಕಂಥೆಯ ಧರಿಸಿ ಸತ್ಕ್ರಿಯಾ ಸಮ್ಯಜ್ಞಾನ ಸದ್ಭಕ್ತಿ ಸದಾಚಾರ ಸನ್ನಿಹಿತರೇ ನೂತನ ಗಣಂಗಳೆನಿಸುವರು ನೋಡಾ.

ಅದರಿಂ ಮೇಲೆ ಚಿದಂಗ ಚಿತ್ಪ್ರಾಣಾಂಗ ಚಿದ್ಭಿನ ಲಿಂಗ ಇವ್ವ
ಗಳನು ಸದ್ಗುರು ಮುಖದಿಂ ಸಂಬಂಧವಿಟ್ಟು ಆ ಲಿಂಗದ ಮಧ್ಯದಲ್ಲಿ
ನಿರಾಕಾರವಾದ ಷೋಡಶ ವರ್ಣವ ಮಾಡಿಕೊಂಡು ಸೂಕ್ಷ್ಮ ತನು ಎಂಬ
ಕಂಥೆಯ ಧರಿಸಿ ಕಂಗಳಾಲಯದ ಜ್ಯೋತಿರ್ಲಿಂಗದ ಮಧ್ಯದಲ್ಲಿ ಮನ
ಮುಳುಗಿಸುವರೇ ಅನಾದಿಗಣಂಗಳು ಎನಿಸುವರು ನೋಡಾ.

ಅದರಿಂ ಮೇಲೆ ಚಿದ್ಭಿನ ತ್ರಿವಿಧಾಂಗ, ಚಿದ್ಭಿನತ್ರಿವಿಧ ಲಿಂಗವ
ಸದ್ಗುರು ಮುಖದಿಂ ಸಂಬಂಧಿಸಿ ಕೊಂಡು, ಆ ಲಿಂಗಾಂಗ ಮಧ್ಯದಲ್ಲಿ
ಕ್ರಿಯಾಷ್ಟಾವರಣ, ಜ್ಞಾನಾಷ್ಟಾವರಣ, ಮಹಾ ಜ್ಞಾನಾಷ್ಟಾವರಣ
ಸಂಬಂಧವಿಟ್ಟು, ಕಾರಣ ತನುವೆಂಬ ಕಂಥೆಯ ಧರಿಸಿ, ಹೃತ್ಕಮಲ
ಮಧ್ಯದಲ್ಲಿ ಬೆಳಗುವ ಪರಂಜ್ಯೋತಿ ಲಿಂಗ ಮಧ್ಯದಲ್ಲಿ ಭಾವ ಮುಳುಗಿ
ಬಚ್ಚಬರಿಯಾನಂದದಲ್ಲಿ ಪರಿಪೂರ್ಣಾನಂದದಿಂದ ಆಚರಿಸುವರೇ ಅನಾದಿ
ಗಣಂಗಳೆನಿಸುವರು ನೋಡಾ.

ಅದರಿಂ ಮೇಲೆ ಚಿದ್ಭಿನ ಅಷ್ಟಾಂಗ ಮಧ್ಯದಲ್ಲಿ ಚಿದ್ಭಿನ ಅಷ್ಟ
ಲಿಂಗಗಳ ಸದ್ಗುರು ಮುಖದಿಂ ಧರಿಸಿ, ಆ ಲಿಂಗಾಂಗದ ಮಧ್ಯದಲ್ಲಿ
ಟಳಿತೆರದ ವರ್ಣವ ಸಂಬಂಧವ ಮಾಡಿಕೊಂಡು, ತಮ್ಮ ಸರ್ವಾಂ
ಗವಲ್ಲಿ ಅಷ್ಟ ವಿಧ ಕಮಲಗಳ ಕಂಡು, ಆ ಕಮಲ ಮಧ್ಯದಲ್ಲಿ ನೆಲೆ
ಸಿರ್ಪ ಚತುರ್ವಿಧ ಬಿಂದು ಲಿಂಗ, ಷಡ್ವಿಧ ಧಾತು ಲಿಂಗ, ದಶವಿಧ
ಕ್ಷೇತ್ರ ಲಿಂಗ, ದ್ವಾದಶ ವಿಕೃತಿ ಲಿಂಗ, ಷೋಡಶ ಕಳಾ ಲಿಂಗ,
ದ್ವಿವಿಧ ವಿದ್ಯಾ ಲಿಂಗ, ಸಹಸ್ರ ಶಿವ ಕಳಾ ಲಿಂಗ, ತ್ರಿವಿಧ ವಿವೇಕ
ಲಿಂಗ, ಇಂತು ಅಷ್ಟವಿಧ ಕಮಲಂಗಳ ಮಧ್ಯದಲ್ಲಿ ನೆಲಸಿರ್ಪ ಅಷ್ಟ
ವಿಧ ಲಿಂಗಂಗಳ ಅಷ್ಟವಿಧ ಹಸ್ತಂಗಳಿಂದ ಅಷ್ಟ ವಿಧಾರ್ಚನೆ, ಷೋಡ
ಶೋಪಚಾರಂಗಳ ಮಾಡಿ, ಎರಡಳಿದು ಏಕ ರೂಪವಾಗಿ, ನಿರವಯ
ಕಂಥೆಯ ಧರಿಸಿ, ಪರತತ್ವ ಜ್ಯೋತಿರ್ಮಯ ಲಿಂಗದೊಳಗೆ ಉರಿ ಉಂಡ
ಕರ್ಪುರದಂತೆ ಸಮರಸವಾದರು ನೋಡಾ. ಅವರಾರೆಂದಡೆ, ರುದ್ರ
ಗಣಂಗಳು, ಶಿವಗಣಂಗಳು, ದೇವಗಣಂಗಳು, ನಾಗಗಣಂಗಳು, ಶಾಂಭವ
ಗಣಂಗಳು, ಮುಂತಾದವರು ಬಯಲೊಳಗೆ ಮಹಾ ಬಯಲು ಜಿಕೆ
ದಂತಾದರು ನೋಡಾ. ಇಂತೀ ಸರ್ವಾಚಾರ ಸಂಪತ್ತಿನಾಚರಣೆಯ
ನಾಚರಿಸುವರೇ ನಿರವಯ ಗಣಂಗಳೆನಿಸುವರು ನೋಡಾ ಸಂಗನಬಸ
ವೇಶ್ವರಾ.

(ಸೂಕ್ಷ್ಮ ಶರೀರದಲ್ಲಿ.)

೨೯. ಆಚಾರ ಅರುಹಿನಲ್ಲಿ ಸಕ್ರಿಯಾ ಸುಜ್ಞಾನ ಗುರುವ
ಸಂಬಂಧವ ಮಾಡಿಕೊಂಡು, ಪಾಣಿ ಪ್ರಾಣದಲ್ಲಿ ಸಕ್ರಿಯಾ ಸುಜ್ಞಾನ
ಲಿಂಗವ ಸಂಬಂಧವ ಮಾಡಿಕೊಂಡು, ಅಚರಣೆ ಸಂಬಂಧಗಳಲ್ಲಿ
ಸಕ್ರಿಯಾ ಸುಜ್ಞಾನ ಜಂಗಮವ ಸಂಬಂಧವ ಮಾಡಿಕೊಂಡು, ನಡೆ
ನುಡಿಗಳಲ್ಲಿ ಸಕ್ರಿಯಾ ಸುಜ್ಞಾನ ಪ್ರಸಾದವ ಸಂಬಂಧವ ಮಾಡಿ
ಕೊಂಡು, ಸರ್ವಾಂಗ ಸುಮನದಲ್ಲಿ ಸಕ್ರಿಯಾ ಸುಜ್ಞಾನ ಚಿದ್ವಿಭೂತಿಯ
ಸಂಬಂಧವ ಮಾಡಿಕೊಂಡು. ತತ್ತತ್ ಸ್ಥಾನಂಗಳಲ್ಲಿ ಚಿದ್ರುದ್ರಾಕ್ಷಿಯಲ್ಲಿ
ಸಕ್ರಿಯಾ ಸುಜ್ಞಾನ ಚಿದ್ರುದ್ರಾಕ್ಷಿಯ ಸಂಬಂಧವ ಮಾಡಿಕೊಂಡು,
ಕ್ರಿಯಾಕಾಶ ಜ್ಞಾನಾಕಾಶಂಗಳಲ್ಲಿ ಸಕ್ರಿಯಾ ಸುಜ್ಞಾನ ಚಿನ್ಮಂತ್ರವ
ಸಂಬಂಧವ ಮಾಡಿಕೊಂಡರು ನೋಡಾ, ಸೂಕ್ಷ್ಮ ಕಂಥೆಯ ಧರಿಸಿ,
ಸಚ್ಚಿದಾನಂದ ಲೀಲಾ ಮೂರ್ತಿಗಳಾಗಿ ಇಂತೀ ಉಭಯ ವಿಚಾರ
ವಿಡಿದು ಆಚರಿಸುವರೇ ಅನಾದಿ ಸದ್ಭಕ್ತ ಶಿವಶರಣಂಗಳು ನೋಡಾ
ಸಂಗನಬಸವೇಶ್ವರಾ.

(ಕಾರಣ ಶರೀರದಲ್ಲಿ)

೩೦. ತನುತ್ರಯಂಗಳಲ್ಲಿ ಕ್ರಿಯಾಗುರು, ಜ್ಞಾನಗುರು, ಮಹಾ
ಜ್ಞಾನಗುರು ಸಂಬಂಧವ ಮಾಡಿಕೊಂಡು, ಮನತ್ರಯಂಗಳಲ್ಲಿ ಕ್ರಿಯಾ
ಲಿಂಗ ಜ್ಞಾನಲಿಂಗ ಮಹಾಜ್ಞಾನಲಿಂಗವ ಸಂಬಂಧವ ಮಾಡಿಕೊಂಡು,
ಭಾವತ್ರಯಂಗಳಲ್ಲಿ ಕ್ರಿಯಾಜಂಗಮ, ಜ್ಞಾನಜಂಗಮ, ಮಹಾಜ್ಞಾನ
ಜಂಗಮವ ಸಂಬಂಧವ ಮಾಡಿಕೊಂಡು, ಆತ್ಮತ್ರಯಂಗಳಲ್ಲಿ ಕ್ರಿಯಾ
ಪ್ರಸಾದ, ಜ್ಞಾನಪ್ರಸಾದ, ಮಹಾಜ್ಞಾನಪ್ರಸಾದವ ಸಂಬಂಧವ ಮಾಡಿ
ಕೊಂಡು, ಕರಣತ್ರಯಂಗಳಲ್ಲಿ ಕ್ರಿಯಾಭಸಿತ, ಜ್ಞಾನಭಸಿತ, ಮಹಾ
ಜ್ಞಾನಭಸಿತವ ಸಂಬಂಧವ ಮಾಡಿಕೊಂಡು, ಜೀವತ್ರಯಂಗಳಲ್ಲಿ ಕ್ರಿಯಾ
ರುದ್ರಾಕ್ಷಿ, ಜ್ಞಾನರುದ್ರಾಕ್ಷಿ, ಮಹಾಜ್ಞಾನರುದ್ರಾಕ್ಷಿಗಳ ಸಂಬಂಧವ
ಮಾಡಿಕೊಂಡು, ಗುಣತ್ರಯಂಗಳಲ್ಲಿ ಕ್ರಿಯಾಮಂತ್ರ, ಜ್ಞಾನಮಂತ್ರ,
ಮಹಾಜ್ಞಾನಮಂತ್ರಗಳ ಸಂಬಂಧವ ಮಾಡಿಕೊಂಡರು ನೋಡಾ ಕಾರಣ
ಕಂಥೆಯ ಧರಿಸಿ ತ್ರಿವಿಧ ವಿಚಾರವಿಡಿದು ಆಚರಿಸುವಡೆ ಅನಾದಿ
ಸದ್ಭಕ್ತ ಶಿವಶರಣ ಗಣಂಗಳು ನೋಡಾ ಸಂಗನಬಸವೇಶ್ವರಾ.

ಗುರು

ಗುರುವಿನ ಕಾರ್ಯ್ಯಗಳು.

೧. ಅಂಗದಲ್ಲಿ ಆಚಾರವ ತೋರಿದ. ಆಚಾರವೇ ಲಿಂಗವೆಂದರುಹಿದ. ಪ್ರಾಣದಲ್ಲಿ ಕರಿವ ನೆಲೆಗೊಳಿಸಿದ. ಕರಿವೇ ಜಂಗಮುವೆಂದು ತೋರಿದ. ಚನ್ನಮಲ್ಲಿಕಾರ್ಜುನನ ಹೆತ್ತ ತಂದೆ ಸಂಗನಬಸವಣ್ಣನು ಎನ್ನನೀ ಕ್ರಮವನರುಹಿದನಯ್ಯ.

೨. ಕಂಗಳ ಕತ್ತಲೆಯ ಕೆಡಿಸಿದ ರವಿಯ ಚಂದದಂತಾಯಿತ್ತು ಎನ್ನ ಗುರುವಿನುಪದೇಶ. ಕನ್ನಡಿಯು ರವಿಯ ತನ್ನೊಳಗೆ ಇರಿಸಿಕೊಂಡಂತಾಯಿತ್ತೆನ್ನ ಗುರುವಿನುಪದೇಶ. ಜಲದ ನಿರ್ಮಳ ಗಗನವನೊಳಕೊಂಡ ಪರಿಯಂತಾಯಿತ್ತೆನ್ನ ಗುರುವಿನುಪದೇಶ. ಚಂದ್ರಕಾಂತದ ಶಿಲೆಯು ಚಂದ್ರಮನ ಸೋಂಕಿದಂತಾಯಿತೆನ್ನ ಗುರುವಿನುಪನೇಶ. ಕೊಡನೊಳಗಣ ಬಯಲ ಹಂಚಿಕೊಂಡ ಪರಿಯಂತಾಯಿತ್ತೆನ್ನ ಗುರುವಿನುಪದೇಶ. ಇದು ಕಾರಣ ಮಹಾಘನ ಸದ್ಗುರು ಸಿದ್ಧಸೋಮನಾಥನೆಂಬ ಲಿಂಗ ದಂತಾಯಿತ್ತೆನ್ನ ಗುರುವಿನುಪದೇಶ.

೩. ಪೂರ್ವಕರ್ಮವ ಕೆಡಿಸಿದನೆನ್ನ ಗುರುವು. ಉಭಯ ಕರ್ಮವ ಬಿಡಿಸಿ ತೋರಿದ. ಸದುಭಕ್ತರ ತೋರಿದನು. ಅವರಿಂದ ಬದುಕಿದೆನು. ನಾಚಯ್ಯ ಪ್ರಿಯ ಮಲ್ಲಿನಾಥಯ್ಯ ಗುರುವಿನಿಂದ ಬದುಕಿದೆನು. ನಿನ್ನ ಹಂಗೇನು ?

೪. ಗುರುಕಾರುಣ್ಯವೇ ಸದಾಚಾರ. ಗುರುಕಾರುಣ್ಯವೇ ಶಿವಾಚಾರ. ಗುರುಕಾರುಣ್ಯವೇ ಪ್ರಸಾದರುಚಿ. ಮುಂದೆ ಗುರು, ಹಿಂದೆ ಲಿಂಗ ಕೂಡಲಸಂಗಮದೇವಾ.

೫. ಭವ ತಿಮಿರವೆಂಬ ಅಜ್ಞಾನದಿಂದ ಮುಸುಕಿಕೊಂಡು, ಕಾಣಬಾರದೆ ಇದ್ದಾಗ ಕಣ್ಣಿಂಗೆ ಜ್ಞಾನವೆಂಬ ಅಂಜನವನೆಚ್ಚು ಶಿವಪಥವಿದೆಂದು ತೋರಿದ ಸದ್ಗುರು ದೇವಂಗೆ ನಮೋ ನಮೋ ಎಂಬೆನಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

೬. ಶ್ರೀಗುರು ಕರುಣಿಸಲೊಡನೆ ಬಿಟ್ಟಿತ್ತು ಮಾಯೆ. ಶ್ರೀಗುರು ಕರುಣಿಸಲೊಡನೆ ಬಿಟ್ಟಿತ್ತು ಮರವೆ. ಶ್ರೀಗುರು ಕರುಣಿಸಲೊಡನೆ ಬಿಟ್ಟಿತ್ತು ಎನ್ನ ಸುತ್ತಿದ್ದ ಮಾಯಪಾಶವು. ಕಣ್ಣಿಂಗೆ ಸತ್ಪರಜ ತಮುವೆಂಬ ತಿಮಿರು ಕವಿದು ಅಜ್ಞಾನ ವಶದಲ್ಲಿ ಸದ್ಗುರುವನುಪಧಾವಿಸಿ, ಔಷಧ ಬೇಡಲೊಡನೆ ಶಿವಜ್ಞಾನವೆಂಬ ಅಂಜನವ ನಚ್ಚಿ, ಎನ್ನ ಕಣ್ಣ ಮುಸುಕಿದ ಅಜ್ಞಾನವೆಂಬ ಕಾಳಿಕೆಯ ಬೇರ್ಪಡಿಸಿ ತನ್ನ ಶ್ರೀಗುರು ಪಾದವನರುಹಿಸಿ ಕೊಟ್ಟನಯ್ಯ ನಮ್ಮ ಕಪಿಲಸಿದ್ಧಮಲ್ಲಿನಾಥಯ್ಯ.

೭. ಕಂಡುದ ಹಿಡಿಯಲೊಲ್ಲದೆ ಕಾಣದುದನರಸಿ ಹಿಡಿದಿಹೆನೆಂದಡೆ ಸಿಕ್ಕಿದನೆಂಬ ಬಳಲಿಕೆಯ ನೋಡಾ. ಕಂಡುದನೇ ಕಂಡು ಗುರು ಪಾದವ ಹಿಡಿದಲ್ಲಿಯೇ ಕಾಣಬಹುದು ಗುಹೇಶ್ವರಾ.

೮. ಅಯ್ಯ ನೀನೆನಗೆ ಗುರುವಪ್ಪೊಡೆ, ನಾ ನಿನಗೆ ಶಿಷ್ಯನಪ್ಪೊಡೆ, ಎನ್ನ ಕರಣಾದಿ ಗುಣಂಗಳ ಕಳೆದು, ಎನ್ನ ಕಾಯದ ಕರ್ಮವ ತೊಡೆದು, ಎನ್ನ ಪ್ರಾಣನ ಧರ್ಮವ ನಿಲಿಸಿ, ನೀನೆನ್ನ ಕಾಯದಲಡಗಿ, ನೀನೆನ್ನ ಪ್ರಾಣದಲಡಗಿ, ನೀನೆನ್ನ ಭಾವದಲಡಗಿ, ನೀನೆನ್ನ ಕರಸ್ಥಲಕ್ಕೆ ಬಂದು ಕಾರುಣ್ಯವ ಮಾಡು ಗುಹೇಶ್ವರಾ.

೯. ಸಕಲವನೆಲ್ಲ ಲಿಂಗದೊಳಗೆ ತೋರಿದನು. ಆ ಲಿಂಗದ ಬೆಳಗ ಸಕಲದೊಳಗೆ ತೋರಿದನು. ಎನ್ನ ಮನಕ್ಕೆ ಅತಿಶಯವಾಗಿ ತೋರಿ ತೋರಿ ರಕ್ಷಿಸಿದನು. ಎನ್ನೊಳಗೆ ತನ್ನ ತೋರಿದನು. ತನ್ನೊಳಗೆ ಎನ್ನ ತೋರಿದನು. ಮತ್ತೆ ಎರಡವನೇಕಮಾಡಿ, ಎನ್ನೊಳಗೆ ಗುಹೇಶ್ವರನಾದನು. ಹೊರಗೆ ಮಹಾಲಿಂಗವಾಗಿ ನಿಂದನು ಶ್ರೀಗುರುಲಿಂಗ ಬಸವಣ್ಣನು.

೧೦. ಗುರುಸ್ವರೂಪವಾಗಿ ಬಂದು, ಬ್ರಹ್ಮನ ಉತ್ಪತ್ತಿಯ ಕೆಡಿಸಿ ಮಾಂಸ ಪಿಂಡವ ಕಳೆದು, ಮಂತ್ರ ಪಿಂಡದಿಂದ ಪ್ರತಿಷ್ಠೆಯ ಮಾಡಿ, ನಾನಾ ಕ್ರಿ ವರ್ತನೆಗೆ ಹೊಲಬನಿಟ್ಟುಕೊಟ್ಟು, ನಿನ್ನ ಕರಕಮಲದಲ್ಲಿ ಜ್ಯೋತಿರ್ಮಯವಪ್ಪ ನಿನ್ನ ನಿಜಾತ್ಮದಿರವ ಆ ಕುರುಹಿನಲ್ಲಿ ಬೈಚಿಟ್ಟು ನಿಜಲಿಂಗವ ಮಾಡಿ, ಎನ್ನ ಕೈಯಲ್ಲಿ ಕೊಟ್ಟೆ. ಲಿಂಗ ಸ್ವರೂಪು ನೀನಾಗಿ ಬಂದು, ಎನ್ನ ಹೃತ್ಕಮಲದಲ್ಲಿ ನಿಂದು, ಕರಣ ನಾಲ್ಕು, ಮರವೆ ಎಂಟು, ಇಂದ್ರಿಯವೈದು, ವಿಷಯವಾರು, ಇಂತಿವರೊಳಗಾದ ಸರ್ವೇಂದ್ರಿಯವ ಕೆಡಿಸಿ, ತ್ರಿಗುಣಾತ್ಮಕವ, ತ್ರಿಶಕ್ತಿ ಭೇದವ, ತ್ರಿಮಲ

ದೋಷವ ಕೆಡಿಸಿ, ನಿಶ್ಚಯ ಪದದಿಂದ ಹೃತ್ಕಮಲವಾಸಿಯಾದೆ. ಆ ಗುಣ ದಿಂದ ಸಾಫಲ್ಯನಾದೆ. ಜಂಗಮ ಮೂರ್ತಿಯಾಗಿ ಬಂದು ಎನಗೆ ದೀಕ್ಷಾ ಗುರು, ಶಿಕ್ಷಾಗುರು, ಜ್ಞಾನಗುರುವಾಗಿ ಬಂದು, ಶುದ್ಧ, ಸಿದ್ಧ, ಪ್ರಸಿ ದ್ಧಮಂ ತೋರಿ, ಎನ್ನ ಭವಪ್ಪೋದಮಂ ಮಾಡಿದೆ. ಇಂತೀ ತ್ರಿವಿಧ ಮೂರ್ತಿ ಭಕ್ತಿ ವಿಷಯದಿಂದ ಬಸವಣ್ಣ, ಚನ್ನಬಸಣ್ಣಗೋಸ್ಕರ ಕ್ರಿಯಾ ಸಂಬಂಧಿಯಾದೆ, ಶಂಭುಗಿಂದಿತ್ತ ಸ್ವಯಂಭುಗಿಂದತ್ತ ಅತಿಬಳ ನೋಡಾ ಮಾತುಳಂಗಮಧುಕೇಶ್ವರನು.

೧೧. ಬ್ರಹ್ಮಸೃಷ್ಟಿ ಪಂಚಭೂತಸಮ್ಮಿಶ್ರದಿಂದಾದ ಕಾಯವು ಭೂತ ಕಾಯವು, ವಾಯು ಪ್ರಾಣಿ ಉತ್ಪತ್ತಿ ಸ್ಥಿತಿ ಲಯ ಕಾರಣ ಕಾಯವು ಈ ಪರಿಯ ಉತ್ಪತ್ತಿಯು ದೇವ, ದಾನವ. ಮಾನವರಿಗೆಯು ಒಂದೇ ಪರಿ. ಶ್ರೀಗುರುವಿನ ಸೃಷ್ಟಿಯಿಂದಲೂ ಮಹಾ ಪ್ರಸಾದದಿಂದಲೂ ಮಹಾ ಮಂತ್ರ ಸಮ್ಮಿಶ್ರದಿಂದಾದ ಕಾಯವು ಪ್ರಸಾದ ಕಾಯವು, ಮಹಾಮಂತ್ರ ಪಿಂಡವು, ಭಕ್ತಿ ಕಾಯವು. ಲಿಂಗಪ್ರಾಣಿಗೆ ಉತ್ಪತ್ತಿ, ಸ್ಥಿತಿ, ಲಯವಿಲ್ಲ, ನಿತ್ಯನು. ಈ ಪರಿಯು ಶ್ರೀಗುರು ಕಾರಣ್ಯವ ಪಡೆದ ಮಹಾತ್ಮರಿಗೆ ಒಂದೇ ಪರಿ. ಶ್ರೀಗುರುವಿನ ಕಾರುಣ್ಯದ ಪರಿ, ಶಿವಭಕ್ತನ ಇರವಿನ ಪರಿ ಇಂತುಟಯ್ಯ. ಉರಿಲಿಂಗ ಪೆದ್ದಿ ಪ್ರಿಯವಿಶ್ವೇಶ್ವರಾ, ನಿಮ್ಮ ಶರಣರಿಗೆ ಲೋಕದ ಮಾನವರು ಸರಿ ಎಂದರೆ ನಾಯಕ ನರಕ ತಪ್ಪದು.

೧೨. ಎನ್ನ ಭಾವಪಾಶಗಳ ಹರಿದು ಶಿವಸಂಸ್ಕಾರಿಯ ಮಾಡಿದ ಶ್ರೀಗುರುವೇ ನಮೋ ನಮೋ ಎಂಬೆನಯ್ಯ. ಎನ್ನ ಭೂತ ಕಾಯವ ಳಿದು ಮಂತ್ರ ಶರೀರವ ಮಾಡಿದ ಶ್ರೀಗುರುವಿಗೆ ನಮೋ ನಮೋ ಎಂಬೆ ನಯ್ಯ. ಎನ್ನ ಹಣೆಯ ದುರ್ಲಿಖಿತವತೊಡೆದು ಶಿವ ಮಂತ್ರವ ಸಂಬೋಧಿ ಸಿದ ಶ್ರೀ ಗುರುವಿಗೆ ನಮೋ ನಮೋ ಎಂಬೆನಯ್ಯ. ಎನ್ನ ವಾಯು ಪ್ರಾಣಿ ಎಂದೆನಿಸದೆ, ಲಿಂಗಪ್ರಾಣಿ ಎಂದೆನಿಸಿದ ಶ್ರೀಗುರುವಿಗೆ ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ.

೧೩. ಸಕಲ ವಿಸ್ತಾರದೊಳಗೆಲ್ಲ ಲಿಂಗವ ತೋರಿದ, ಆ ಲಿಂಗ ದೊಳಗೆ ಎನ್ನ ತೋರಿದ, ಎನ್ನೊಳಗೆ ತನ್ನ ತೋರಿದ, ಮಹಾಗುರು ವಿಗೆ ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ.

೧೪. ಪರಶು ಮುಟ್ಟಿದ ಲೋಹದಂತೆ ಮಾಡಿತ್ತೆನ್ನ ಶ್ರೀಗುರುವಿ ನುಪದೇಶ. ಕರ್ಪೂರ ಜ್ಯೋತಿಯಂತೆ ಮಾಡಿತ್ತೆನ್ನ ಶ್ರೀಗುರುವಿನುಪ ದೇಶ. ಊಡಾಕುಂಡಲಿಯಂತೆ ಮಾಡಿತ್ತೆನ್ನ ಶ್ರೀಗುರುವಿನುಪದೇಶ. ಒರೆಗಲ್ಲು ಪುಥ್ಥಳಿಯೊಪ್ಪವ ಮಾಡಿದಂತೆ ಅಖಂಡೇಶ್ವರಾ ನಿಮ್ಮ ವಚ ನೋಪದೇಶ.

೧೫. ಗುರುವಿಡಿದು ಕುರುಹ ಕಾಣಬೇಕು. ಗುರುವಿಡಿದು ಅರುಹ ಕಾಣಬೇಕು. ಗುರುವಿಡಿದು ಆಚಾರವ ಕಾಣಬೇಕು. ನಿಜವಿಡಿದು ನಿಮ್ಮ ಅಖಂಡೇಶ್ವರನ ಕೂಡಬೇಕು.

೧೬. ಎನ್ನ ಕರಸ್ಥಳದ ಮಧ್ಯದಲ್ಲಿ ಪರಮ ನಿರಂಜನ ಕುರುಹು ತೋರಿದ. ಆ ಕುರುಹಿನ ಮಧ್ಯದಲ್ಲಿ ಅರುಹಿನ ಕಳೆ ತೋರಿದ. ಆ ಕಳೆಯ ಮಧ್ಯದಲ್ಲಿ ಮಹಾ ಜ್ಞಾನದ ಬೆಳಗು ತೋರಿದ. ಆ ಬೆಳಗಿನ ನಿಲವಿ ನೊಳಗೆ ಎನ್ನ ತೋರಿದ. ಎನ್ನೊಳಗೆ ತನ್ನ ತೋರಿದ. ತನ್ನೊಳಗೆನ್ನ ನಿಂಬಿಟ್ಟುಕೊಂಡ ಮಹಾಗುರುವಿಗೆ ನಮೋ ನಮೋ ಎನುತಿರ್ಪೆನಯ್ಯ ಅಖಂಡೇಶ್ವರಾ.

೧೭. ಅಂಕುರ, ಫಲ, ತರು, ಕುಸುಮ, ಫಳ, ರಸ, ಸಾರಾಯ ಇನಿತಿನಿತೆಲ್ಲಿರ್ದುದೋ, ಬೀಜ ಮೊಳೆ ದೋರದಂದು? ಪಶುವಿನ ಅಮೃ ತವೆಲ್ಲಿರ್ದುದೋ, ವೃಷಭ ಮುಟ್ಟದಂದು? ಘನ ಜವ್ವನೆಯರ ಅವ ಸ್ಥಾಂತರದಲ್ಲುದಿಸಿದ ಶಿಶುವೆಲ್ಲಿರ್ದುದೋ, ಕೊಡಗೂಸು ಕನ್ನೆಯಳಿಯ ದಂದು? ಶರಧಿಯ ಸಿಂಪಿನ ರತ್ನವೆಲ್ಲಿರ್ದುದೋ, ಸ್ವಾತಿಯ ಸಲಿಲ ವಿಲ್ಲದಂದು? ಸಪ್ತಸ್ವರ, ಅಕ್ಷರ, ವಸ್ತುಕ, ವರ್ಣಕವೆಲ್ಲಿರ್ದುದೋ ಜ್ಞಾನ ವುದಯಿಸದಂದು? ತ್ರಿಜಗದುತ್ಪತ್ತಿ ಸ್ಥಿತಿಲಯ ಕಾರಣ ಸಚರಾಚರಗಂಭೀ ರವೆಲ್ಲಿರ್ದುದೋ, ಶಿವನ ಅಷ್ಟ ತನುಮೂರ್ತಿಗಳಿಲ್ಲದಂದು? ಶರಣಪದ ಲಿಂಗೈಕ್ಯವೆಲ್ಲಿರ್ದುದೋ, ಆರಾಧ್ಯಲಿಂಗ ಸಕಳೇಶ್ವರ ಮಹಾಘನಲಿಂಗನಿ ದ್ದಾನೆಂದು ಸದ್ಗುರು ಸ್ವಾಮಿ ಕೃಪೆಮಾಡಿ ತೋರದಂದು?

೧೮. ಗುರುವಿನ ಕೃಪೆಯಿಂದ ಸಾಧಾರಣ ತನುವ ಮರೆದೆ. ಗುರು ವಿನ ಕೃಪೆಯಿಂದ ಮಲತ್ರಯವ ತೊಳೆದೆ. ಗುರುವಿನ ಕೃಪೆಯಿಂದ ಅನು ಭಾವಿಯಾದೆ. ಗುರುವಿನ ಕೃಪೆಯಿಂದ ಶುದ್ಧ, ಸಿದ್ಧ, ಪ್ರಸಿದ್ಧ ಪ್ರಮಾ ಣವನರಿದೆ. ಎನಗಾಧಿಕ್ಯವಪ್ಪ ವಸ್ತು ಬೇರೊಂದಿಲ್ಲ. ಅದೇನು ಕಾರಣ?

ಅವ ನಾನಾದೆನಾಗಿ. ಗುರುವೇ ಎನ್ನ ತನುವಿಂಗೆ ಲಿಂಗದೀಕ್ಷೆಯ ಮಾಡಿ ಎನ್ನ ಜ್ಞಾನಕ್ಕೆ ಸ್ವಾನುಭಾವ ದೀಕ್ಷೆಯ ಮಾಡಿ, ಎನ್ನ ತನುಮನಧನದಲ್ಲಿ ವಂಚನೆ ಇಲ್ಲದೆ ಮಾಡಲೆಂದು ಜಂಗಮ ದೀಕ್ಷೆಯ ಮಾಡಿ, ಎನ್ನ ಸರ್ವಾಂಗವು ನಿನ್ನ ವಿಶ್ರಾಮಸ್ಥಾನ ಶುದ್ಧ ಮಂಟಪವಾದ ಕಾರಣ, ಲೋಕವ್ಯಾಪ್ತಿಯನರಿಯದೆ ಲೋಕ ಎನ್ನೊಳಗಾಯಿತ್ತು, ಆ ಲೋಕಕ್ಕೆ ಹೊರಗಾದೆನಾಗಿ. ಅದೇನು ಕಾರಣ? ಜನನ ಮರಣಗಳಿಗೆ ಹೊರಗಾದೆನಾಗಿ, ಗುರುವೇ, ಸದ್ಗುರುವೇ, ಎನ್ನ ಭವದ ಬೇರ ಹಂದ ಗುರುವೇ, ಭಾವನಾಶವಿಮೋಚನ, ಮುಕ್ತಿಫಲದಾಯಕ ಗುರುವೇ, ಬಸವಣ್ಣ ಕಪಿಲ ಸಿದ್ಧಮಲ್ಲಿಕಾರ್ಜುನ ಚನ್ನಬಸಣ್ಣನಾಗಿ ಪ್ರಭು ಮೊದಲಾದ ಅಸಂಖ್ಯಾತರೆಲ್ಲರನು ತೋರಿದ ಗುರುವೇ?

೯. ಚಿನ್ನದೊಳಗಣ ಬಣ್ಣವ ಆ ಚಿನ್ನ ತಾನರಿವುದೇ? ಕಬ್ಬು ರುಚಿಸ ಬಲ್ಲುದೇ ತನ್ನ ತಾನೇ? ಈ ಪರಿಯಂತೆ ನರರರಿವರೆ ಕ್ರಿಯಾ ಜ್ಞಾನಭೇದವ ರಾಮನಾಥಾ.

ಅರ್ಥಃ— ಸುವರ್ಣ ತನ್ನೊಳಗಿಪ್ಪ ಕಾಂತಿಯ ತಾನರಿಯದು ಮಜ್ಜುಗಲ್ಲಿಂದ ಒರೆದಪೆನೆಂಬುದರ್ಥ. ಹಾಗೆ ಇಕ್ಷು ದಂಡವು ತನ್ನಲ್ಲಿಪ್ಪ ಮಧುರವ ತಾನೇ ಸ್ವೀಕರಿಸಲರಿಯದು. ಮನುಷ್ಯರು ಸ್ವೀಕರಿಸಿ ತಿಳಿವರೆಂಬ ಹಾಗೆ. ಆತ್ಮದಲ್ಲಿಪ್ಪ ಜ್ಞಾನ ಕ್ರಿಯೆಗಳು ಶ್ರೀಗುರುವು ಅರುಹು ಕೊಟ್ಟಲ್ಲದೆ ಪ್ರಕಟವಿಲ್ಲೆಂಬುದರ್ಥ.

೧೦. ಜ್ಞಾನಾವೃತವೆಂಬ ಜಲಧಿಯ ಮೇಲೆ ಸಂಸಾರವೆಂಬ ಹಾವಸೆ ಬಂದು ಮುಸುಕಿಹುದು. ನೀರು ಪೊಗೆವರು ಬಂದು ನೂಂಕುವುದಲ್ಲದೆ ತೆರಳದು. ಮರಳಿ ಮರಳಿ ಮುಸುಕುವುದು ಮಾಣದಯ್ಯ. ಆಗಳು ಎನ್ನವನು ನೆನೆಯುತ್ತಿರಬೇಕೆಂದು ಬೇಗ ಗುರು ಒಪ್ಪಯಿಸಿ ತನ್ನ ಪ್ರಸಾದವೆಂದು ಕುರುಹ ತ್ರಿಕಾಲ ಮಾಡ ಹೇಳಿವ ಲಿಂಗ ಪೂಜೆಯ ತನ್ನನರಿಯಬೇಕೆಂದು. ಕೆರೆಯನೀರನುಂಡು ತೊರೆಯ ನೀರ ಹೊಗಳುವ ಅರಿಮರುಳುಗಳ ಮೆಚ್ಚ ನಮ್ಮ ಕೂಡಲಸಂಗಮದೇವಾ.

೧೧. ಅರಲುಗೊಂಡಕೆರೆಗೆ ತೊರೆ ಬಂದು ಹಾಯ್ದಂತೆ, ಬರಲುಗೊಂಡ ಮಳೆ ಸುರಿದಂತಾಯಿತ್ತು ನೋಡಾ. ಇದೆ ಎನಗೆ ಇಹದ ಸುಖದ

ಪರದ ಗತಿ ನಡೆದು ಬಂದಂತಾಯಿತ್ತು ಎನಗೆ. ಚನ್ನಮಲ್ಲಿಕಾರ್ಜುನಯ್ಯ ಗುರುಪಾದವ ಕಂಡು ಧನ್ಯಳಾದೆನು.

೨೨. ಇನ್ನು ಮುಕ್ತನೆಂದೊಡೆ ಮುನ್ನಲೇನು ಬದ್ಧನೇ? ಮುನ್ನ ಮುನ್ನವೇ ಮುಕ್ತನು. ಒಂದು ಕಾರಣದಿಂದ ಬದ್ಧನಾದಡೇನು? ಗುರು ಕಾರುಣ್ಯದಿಂದ ಮುಕ್ತನು. ಗುರುಕಾರುಣ್ಯದಿಂದ ಗುರುವಾದ ಬಳಿಕ ಬದ್ಧ ಮುಕ್ತನೆನನಲುಂಟೇ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ?

೨೩. ಧ್ಯಾನಕ್ಕೆ ನಿಮ್ಮ ಶ್ರೀಮೂರ್ತಿಯೇ ಮುಖ್ಯವಯ್ಯ. ಪೂಜೆಗೆ ನಿಮ್ಮ ಶ್ರೀಪಾದವೇ ಮುಖ್ಯವಯ್ಯ. ಮಂತ್ರಕ್ಕೆ ನಿಮ್ಮ ನಾಮಾವಯವತವೇ ಮುಖ್ಯವಯ್ಯ. ನಿಮ್ಮಿಂದಧಿಕರನಾರನೂ ಕಾಣೆನಯ್ಯ, ಕೂಡಲಸಂಗಮದೇವಾ ನೀವು ಜ್ಞಾನಗುರುವಾದ ಕಾರಣ.

೨೪. ಮಡಕೆಯ ಮಾಡುವರೆ ಮಣ್ಣೇ ಮೊದಲು. ತೊಡಿಗೆಯ ಮಾಡುವರೆ, ಹೊನ್ನೇ ಮೊದಲು. ಶಿವಪಥವನರಿವಡೆ ಗುರುಪಥವೇ ಮೊದಲು. ಕೂಡಲಸಂಗಮದೇವರನರಿವಡೆ ಶರಣರ ಸಂಗವೇ ಮೊದಲು.

ದೀಕ್ಷಾಗುರು ಶಿಕ್ಷಾಗುರು ಜ್ಞಾನಗುರು.

೨೫. ದೀಕ್ಷಾಗುರು ಶಿಕ್ಷಾಗುರು ಮೋಕ್ಷಾಗುರು. ತ್ರಿವಿಧಾಕಾರಂಗಳನರಿದು ಕರ್ಮಕ್ರಿ ಆಚಾರ ಸಂಬಂಧವ ಸಂಬಂಧಿಸಿ ಮಾಡುವಲ್ಲಿ ದೀಕ್ಷಾ ಗುರು. ಆ ಕ್ರಿ ತಪ್ಪಿದಲ್ಲಿ ಬಂಧನವ ಮಾಡುವಲ್ಲಿ ಶಿಕ್ಷಾ ಗುರು. ಇಷ್ಟ ಕಾಮ್ಯ ಮೋಕ್ಷಂಗಳ ಗೊತ್ತುಗೆಡಿಸಿ ನಿಶ್ಚೈಸಿ ಮಾಡುವದು ಮೋಕ್ಷಾ ಗುರು. ಇಂತೀ ಭೇದದಾಗವನರಿಯಬಲ್ಲಡೆ ಪರಮ ಗುರು ನಿಃಕಳಂಕ ಮಲ್ಲಿಕಾರ್ಜುನಾ.

೨೬. ದೀಕ್ಷಾ ಗುರುವಾದಲ್ಲಿ ತ್ರಿವಿಧದಾಸೆ ಇಲ್ಲದಿರಬೇಕು. ಶಿಕ್ಷಾ ಗುರುವಾದಲ್ಲಿ ಅರಿಗಳಿಗಂಜದೆ ಪ್ರಾಣತ್ಯಾಗ ನಿಶ್ಚಯನಾಗಿರಬೇಕು. ಮೋಕ್ಷಾ ಗುರುವಾದಲ್ಲಿ ಸವ ದೋಷ ಸರ್ವೇಂದ್ರಿಯ ನಾಶವಾಗಿರಬೇಕು. ಇಂತೀ ಮೂರವಿೀರಿ ಬೇರೊಂದರಲ್ಲಿ ನಿಂದು, ತ್ಯಾಗಾಂಗ, ಭೋಗಾಂಗ,

ಯೋಗಾಂಗ, ತ್ರಿವಿಧಲೇಪನಾಗಿ ನಿಂದುದು ನಿಜ ಗುರುಸ್ಥಲ. ಆ ಗುರುವಿನ ಕೆಯ್ಯ ಅನುಜ್ಞೆ ಪರಂಜ್ಯೋತಿ ಪ್ರಕಾಶ. ಅದು ನಿರವಯ ತತ್ಪ್ರಸಾದಿ ಸದಾಶಿವಮೂರ್ತಿ ಲಿಂಗವು ತಾನೇ.

೨೭. ದೀಕ್ಷಾ ಗುರುವಾಗಿ ಬಂದು ಬ್ರಹ್ಮನ ಉತ್ಪತ್ತಿಯ ತೊಡೆದಿದೆ. ಶಿಕ್ಷಾ ಗುರುವಾಗಿ ಬಂದು ತ್ರಿವಿಧ ಮಲವ ಕೆಡಿಸಿ ಮುಕ್ತನ ಮಾಡಿದೆ. ಮೋಕ್ಷಾ ಗುರುವಾಗಿ ಬಂದು ಆತ್ಮನ ಪ್ರಕೃತಿಯ ಕೆಡಿಸಿದೆ. ಇಂತೀ ಲೀಲೆಗೆ ಗುರುರೂಪಾಗಿ, ಸ್ವಲೀಲೆಗೆ ಲಿಂಗ ರೂಪಾಗಿ, ನಿಜ ಲೀಲೆಗೆ ಜಂಗಮ ರೂಪಾಗಿ, ಇಂತೀ ತ್ರಿವಿಧ ರೂಪಾಗಿ, ಭಿನ್ನನಾದೆಯಲ್ಲಾ ಭಕ್ತಿ ಕಾರಣನಾಗಿ, ಶಂಭುಗಿಂದಿತ್ತ, ಸಯಂಭುಗಿಂದತ್ತ, ಅತಿಬಳಸೋಡಾ ಮಾತುಳಂಗ ಮಧುಕೇಶ್ವರನು.

೨೮. ಆಚಾರ ಗುರು, ಸಮಯ ಗುರು, ಜ್ಞಾನ ಗುರು. ಆಚಾರ ಗುರು ಬ್ರಹ್ಮನ ಕಲ್ಪವ ತೊಡೆಯಬೇಕು. ಸಮಯ ಗುರು ವಿಷ್ಣುವಿನ ಸ್ಥಿತಿಯ ಹರಿಯಬೇಕು. ಜ್ಞಾನ ಗುರು ಉತ್ಪತ್ತಿ ಸ್ಥಿತಿಲಯ ಮೂರನು ಕಳೆಯಬೇಕು. ತ್ರಿವಿಧ ಗುರು ಏಕವಾದಲ್ಲಿ ಸದ್ಗುರು ಮದ್ಗುರು ಮಹಾಗುರುವೆಂಬೆ ನಿಃಕಳಂಕ ಮಲ್ಲಿಕಾರ್ಜುನಾ.

೨೯. ಅಂಗಕ್ಕೆ ಲಿಂಗವ ಕೊಟ್ಟವ ಆಚಾರ್ಯನಾದ. ಮನಕ್ಕೆ ಅರುಹ ತೋರಿದಾತ ಶಿಕ್ಷಾಗುರುವಾದ. ಮೋಕ್ಷ ವಿಮೋಕ್ಷವಾಗಿ ಉಭಯದ ಗೊತ್ತು ತೋರಿ ಕಾಯದ ಕರ್ಮವ ಕೆಡಿಸಿ ಜೀವನಭವವ ಛೇದಿಸಿ ತದ್ರೂಪವ ತೋರಿದಾತ ಜ್ಞಾನ ಗುರು. ಆತ ಪರಮಪ್ರಕಾಶ, ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವು ತಾನೇ.

೩೦. ಒಳಗೆ ಶೋಧಿಸಿ, ಹೊರಗೆ ಶುದ್ಧವಿಸಿ, ಒಳಹೊರಗೆಂಬ ಉಭಯ ಶಂಕೆಯ ಕಳೆದು ಸ್ಫಟಿಕದ ಶಲಾಕೆಯಂತೆ ತಳವೆಳಗು ಮಾಡಿ, ಸುಕ್ಷೇತ್ರವನರಿದು ಬೀಜವ ಬಿತ್ತುವಂತೆ ಶಿಷ್ಯನ ಸರ್ವ ಪ್ರಪಂಚ ನಿಷ್ಪ್ರಿಯಂ ಮಾಡಿ ನಿಜೋಪದೇಶವನಿತ್ತು ಆ ಶಿಷ್ಯನ ನಿಜದಾದಿಯ ನೈದಿಸುವನೀಗ ದೀಕ್ಷಾಗುರು. ಆ ಸಹಜ ಗುರುವೀಗ ಜಗದಾರಾಧ್ಯರು. ಅವರ ಶ್ರೀಪಾದಕ್ಕೆ ನಮೋ ನಮೋ ಎಂಬೆ ಕಾಣಾ ಚನ್ನಮಲ್ಲಿಕಾರ್ಜುನಾ.

ಯೋಗ್ಯ ಗುರುವಿನಿಂದ ದೀಕ್ಷೆಯನ್ನು ಪಡೆಯತಕ್ಕದ್ದು.

೩೧. ಉಪಚಾರದ ಗುರುವಿಂಗೆ ಉಪಚಾರದ ಶಿಷ್ಯನು. ಉಪಚಾರದ ಲಿಂಗವು, ಉಪಚಾರದ ಜಂಗಮವು, ಉಪಚಾರದ ಪ್ರಸಾದವು ಇಂತಹ ಗುರುವಿಂಗೆ ಭವದ ಲೆಂಕನಾಗಿ ಅಂಧಕನ ಕಯ್ಯ ಅಂಧಕ ಹಿಡಿದಂತೆ ಇವರೆಲ್ಲರೂ ಹೊಲಬುಗೆಟ್ಟರು ಕಾಣಾ ಗುಹೇಶ್ವರಾ.

೩೨. ಭೂವಿಗೆ ಹುಟ್ಟಿದ ಕಲ್ಲು, ಕಲ್ಲುಕುಟಿಗರ ಕೆಯ್ಯ ಕಡಿಸಿಕೊಂಡು, ಶಿಲೆಯನೆಂತು ಲಿಂಗವಯ್ಯ? ಕೊಟ್ಟಾತ ಗುರುವೇ, ಕೊಂಡಾತ ಶಿಷ್ಯನೇ? ಅಲ್ಲ ಕಾಣಿರಯ್ಯ. ಶಿಲಾಲಿಖಿತವ ಕಳೆದು ಕಳಾ ಭೇದವನರಿದು ಕಳೆಯ ತುಂಬಿ ಕೊಡಬಲ್ಲರೆ ಗುರುವೆಂಬೆ, ಕೊಂಬಾತ ಶಿಷ್ಯನೆಂಬೆನಯ್ಯ. ಈ ಭೇದವನರಿಯದೆ ಇಷ್ಟವ ಮಾರುವಾತಂಗೂ ಕೊಂಬುವಾತಂಗೂ ನಾಯಕ ನರಕ ತಪ್ಪದು ಕಾಣಾ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

೩೩. ಅಡ್ಡಬಿದ್ದು ಶಿಷ್ಯನ ಮಾಡಿಕೊಂಬ ದಡ್ಡ ಪ್ರಾಣಿಗಳನೇನೆಂಬೆನಯ್ಯ? ಏನೇನೂ ಅರಿಯದ ಎಡ್ಡ ಮಾನವಂಗೆ ಉಪದೇಶ ಮಾಡುವ ಗೊಡ್ಡ ಮಾನವನ ಮುಖವ ತೋರದಿರಯ್ಯ. ಅದೇನು ಕಾರಣವೆಂದಡೆ, ಆ ಗೊಡ್ಡ ಜೀವಿಯ ಪ್ರಪಂಚವ ಕಳೆಯಲಿಲ್ಲ. ಅವನ ಪಂಚೇಂದ್ರಿಯಂಗಳು ಸಪ್ತ ವ್ಯಸನಂಗಳ ಅಷ್ಟಮದಂಗಳೆಂಬ ಗುಣಂಗಳ ಬಿಡಿಸಲಿಲ್ಲ. ಸೂತಕ ಪಾತಕಂಗಳ ಕೆಡಿಸಿ ಮೂರು ಮಲಂಗಳ ಬಿಡಿಸಿ ಮುಕ್ತಿ ಪಥಂಗಳನರುಹಲಿಲ್ಲ. ಮಹಾಶೂನ್ಯ ನಿರಾಳ ನಿರಂಜನ ಲಿಂಗವ ಕರ ಮನ ಭಾವ ಸರ್ವಾಂಗದಲ್ಲಿ ತುಂಬಿ ನಿತ್ಯನೆಂದಿಸಿಸಲಿಲ್ಲ. ಇದನರಿಯದ ವ್ಯರ್ಥ ಕಾಯರುಗಳ ಗುರುವೆಂದಡೆ ಪ್ರಮಥರು ಮೆಚ್ಚುವರೇ? ಇಂತಪ್ಪ ಗುರು ಶಿಷ್ಯರೀರ್ವರು ಅಜ್ಞಾನಿಗಳು. ಅವರು ಇಹ ಪರಲೋಕಕ್ಕೆ ಹೊರಗೆಂದಾತ ಅಂಬಿಗರಚೌಡಯ್ಯ.

೩೪. ತನ್ನ ಶಿಷ್ಯ ತನ್ನ ಮಗನೆಂಬುದು ತಪ್ಪದಲ್ಲ. ಇಲ್ಲದೆ ಆತನ ಧನಕ್ಕೆ ತಂದೆಯಾದನಲ್ಲದೆ, ಆತನ ಮನಕ್ಕೆ ತಂದೆಯಾದನೇ? ಏಕೆ? ಆತನ ಮನವನರಿಯನಾಗಿ, ಆತನ ಧನಕ್ಕೆ ತಂದೆಯಾದನು. ತನ್ನಲ್ಲಿದ್ದ ಭಕ್ತಿಯ ಮಾರಿಕೊಂಡುಂಬುವರು ನಿಮ್ಮ ನಿಜ ಭಕ್ತರಲ್ಲಯ್ಯ ಮಲ್ಲಿಕಾರ್ಜುನಾ.

೩೫ ಮಹಾಘನ ಶ್ರೀಗುರು ಲಿಂಗವೇ ಲಿಂಗವಲ್ಲದೆ, ಸುತನೊಂದು ಗುರುವೇ? ಭ್ರಾತೃವೊಂದು ಗುರುವೇ? ಪತಿಯೊಂದು ಗುರುವೇ? ಸುತನೊಂದು ಗುರುವೇ? ಗುರುಗುರುವೆಂದರೇನೋ? ಆ ಮಹಾಘನ ಗುರುಲಿಂಗಕ್ಕೆ ಇವೆಲ್ಲವ ಸರಿಗಂಡರೆ ಅಘೋರ ನರಕ ತಪ್ಪದು ಕೂಡಲ ಚನ್ನಸಂಗಮದೇವಾ.

೩೬. ಕಾಲಚಕ್ರ, ಕರ್ಮಚಕ್ರ, ನಾದಚಕ್ರ, ಬಿಂದು ಚಕ್ರದೊಳಗೆ ಹುಟ್ಟದ ಯೋನಿ ಇಲ್ಲ. ಮೆಟ್ಟದ ನೆಲವಿಲ್ಲ. ಉಣ್ಣದಾಹಾರವಿಲ್ಲ. ಕಾಣದ ದುಃಖವಿಲ್ಲ. ಇಂತೀ ನಾನಾ ಜನ್ಮದಲ್ಲಿ ನಾಗ್ಗು ನುರಿಯಾಗಿ ಬಂದವಂಗೆ, ಪ್ರಾಯಶ್ಚಿತ್ತವಿಲ್ಲದೆ ಗುರುವ ಮುಟ್ಟಬಹುದೇ? ಲಿಂಗವನರಿಸಬಹುದೇ? ಪ್ರಸಾದವ ಕೊಳ್ಳಬಹುದೇ? ಕೂಡಲ ಚನ್ನಸಂಗಮದೇವಾ ಈ ಹೀಗೆ ತ್ರಿಕರಣ ಶುದ್ಧವಿಲ್ಲದವಂಗೆ ಉಪದೇಶವ ಕೊಟ್ಟ ಗುರುವಿಂಗೆ ನಾಯಕ ನರಕ ತಪ್ಪದು.

೩೭. ಲೋಕದಲ್ಲಿಯ ನೂರಾರು ಗುರುಗಳ ನೋಡಿ ನಾನು ಬೇಸರಗೊಂಡೆನಯ್ಯ. ವಿತ್ತಾಪಹಾರಿ ಗುರುಗಳು ನೂರಾರು. ಶಾಸ್ತ್ರಾರ್ಥ ಪೇಳುವ ಗುರುಗಳು ನೂರಾರು. ಮಂತತಂತ್ರದಿಂದುಭಯ ಲೋಕದಲ್ಲಿ ಸುಖದುಃಖವನೀವ ಗುರುಗಳ ನೂರಾರು. ಸತ್ಕರ್ಮೋಪದೇಶವನರುಹಿ ಸ್ವರ್ಗ ಮರ್ತ್ಯದಲ್ಲಿ ಸುಖವನೀವ ಗುರುಗಳು ನೂರಾರು. ವಿಚಾರ ಮುಖದಿಂದ ಷಟ್ಸ್ಥಳನೆಯನರುಹಿಪ ಗುರುಗಳು ನೂರಾರು. ವಿಷಯಾದಿಗಳೆಲ್ಲ ಮಿಥ್ಯವೆಂದರುಹಿ ಆತ್ಮಾನುರಾಗತ್ವವನೀವ ಗುರುಗಳು ನೂರಾರು. ಶಿವ ಜೀವರ ಏಕತ್ವವನರುಹಿ ನಿರ್ಮಲ ಜ್ಞಾನವನೀವ ಗುರುಗಳು ಪ್ರಮಥರು. ಸಂಶಯಾಳಿಗಳನ್ನೆಲ್ಲ ಜ್ಞಾನಾಗ್ನಿಯಿಂದೆ ದಹಿಸಿ ಅರುಹಿನ ಬಂಧನದಲ್ಲಿರಿಸಿದ ಗುರು ಚನ್ನಬಸವಣ್ಣನಲ್ಲದೆ ಮತ್ತೋರ್ವನ ಕಾಣೆ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

ದೀಕ್ಷೆಯ ತತ್ವಗಳು.

೩೮. ಭವಿತನಕ್ಕೆ ಹೇಸಿ ಭಕ್ತನಾದೆನೆಂಬಾತನು ಪೂರ್ವಾಶ್ರಯವಮಂ ಕಳೆದು ಭಕ್ತನ ಮಾಡುವ ಪರಿ ಎಂತೆಂದೊಡೆ, ಕಾಯ ಶುದ್ಧಿ, ಜೀವ ಶುದ್ಧಿ, ಭೂತ ಶುದ್ಧಿ, ಆತ್ಮ ಶುದ್ಧಿ, ಮಂತ್ರ ಶುದ್ಧಿ ಎಂಬ ಪಂಚ ಶುದ್ಧಿಯ ಮಾಡಬೇಕು. ಅದು ಹೇಗೆಂದಡೆ, ವಾಕ್ಕು, ಪಾಣಿ, ಪಾದ, ಪಾಯು, ಗುಹ್ಯನೆಂಬ ಕರ್ಮೇಂದ್ರಿಯಂಗಳ ದುಃಕ್ರಿಯೆಗಳಂ ಬಿಡಿಸಿ, ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣನೆಂಬ ಬುದ್ಧೀಂದ್ರಿಯಂಗಳ ಉತ್ಪಾತವಮಂ ಮಾಣಿಸಿ, ದಶವಾಯುಗಳ ದುರ್ಗಮನಂಗಳಂ ನಿಲಿಸಿ, ಮನ ಬುದ್ಧಿ ಚಿತ್ತಾಹಂಕಾರಂಗಳಂ ನಿವೃತ್ತಿಯ ಮಾಡಿ, ಆತಂಗೆ ಪಂಚ ಗವ್ಯವಂ ಕೊಟ್ಟು ಏಕ ಭುಕ್ತೋಪವಾಸವಮಂ ಮಾಡಿಸಿ ಕಾಯ ಶುದ್ಧಿಯಂ ಮಾಡುವುದು.

ಮತ್ತಿರ್ದ ಮಾಯಾ ಪ್ರಪಂಚವಮಂ ಬಿಡಿಸಿ, ಜೀವನೇ ಶಿವನೆಂದು ಪರಿಯಾಯವಮಂ ಕೆಡಿಸಿ, ಆ ಪರಶಿವನೇ ಇಷ್ಟಬ್ರಹ್ಮ, ಆ ಇಷ್ಟವೇ ನಿನ್ನ ಪ್ರಾಣ, ಆ ಪ್ರಾಣವೇ ಇಷ್ಟವೆಂದರುಹಿ, ಜೀವ ಶಿವನಲ್ಲ, ಆ ಶಿವನೇ ನಿನ್ನ ಜೀವವೆಂಬ ಪರಿಯಾಯವಮಂ ತೋರಿಸಿ, ಆತ್ಮನ ಜೀವ ಭಾವವಮಂ ಕಳೆದು ಶಿವ ಭಾವವೆಂದೆನಿಸಿ ಜೀವ ಶುದ್ಧಿಯಂ ಮಾಡುವುದು.

ಪೃಥ್ವೀ ಬ್ರಹ್ಮ ಜಲೆ ವಿಷ್ಣು। ತಥಾ ರುದ್ರ ಹುತಾ ಶನಃ। ಈಶ್ವರಃ ಪವನೋ ದೇವ। ಆಕಾಶ ಸದಾಶಿವಃ॥ ಎಂಬ ಪಂಚಭೂತಾದಿ ದೇವತೆಗಳಪ್ಪ, ಬ್ರಹ್ಮ ವಿಷ್ಣುಶ್ಚ ರುದ್ರಶ್ಚ ಈಶ್ವರಶ್ಚ ಸದಾಶಿವೋ। ಏತೇ ಗರ್ಭಗತಶ್ಚೈವ ತಸ್ಮೈ ಶ್ರೀಗುರವೇ ನಮಃ॥ ಎಂಬ ಪಂಚಭೂತಾದಿ ದೇವತೆಗಳು ಗರ್ಭೀಕರಿಸಿ ಕೊಂಡಿಪ್ಪ ಶ್ರೀಗುರುವ ತೋರಿಸಿ, ಪಂಚ ಭೂತಂಗಳ ಸ್ಥಾನಮಂ ತಿಳುಪಿ, ಭೂತ ಶುದ್ಧಿಯಂ ಮಾಡುವುದು.

'ಜೀವಾತ್ಮ ಪರಮಾತ್ಮಂಜ' ಎಂಬ ಶ್ರುತಿಯಿಂ ಜೀವಾತ್ಮನನೂ ಪರಮಾತ್ಮನನೂ ಏಕಾತ್ಮವ ಮಾಡಿ ಆತ್ಮಶುದ್ಧಿಯಂ ಮಾಡುವುದು.

ಕರ್ಮಣಾ ಮನಸಾ ವಾಚಾ ಗುರುಣಾ ಭಕ್ತವತ್ಸಲ॥ ಶರೀರಮರ್ಥ ಪ್ರಾಣಂಜ ಸದ್ಗುರುಭ್ಯೋ ನೀವೆದಯೇತ್॥ ಎಂಬ ಶ್ರುತಿಯ

ಪ್ರಮಾಣದಿಂದ ಆತನ ಶರೀರಾರ್ಥ ಪ್ರಾಣಂಗಳಂ ಅರ್ಪಿಸಿಕೊಂಡು ಭವದ ಬೇರ ಕೊಯ್ದು, ಶಿವಗಣ ತಿಂಥಿಣಿಯ ಮುಂದೆ ಆ ಶಿಷ್ಯನ ಕಯ್ಯವಿಡಿದು ತಂದು ಚೌಕ ಮಧ್ಯದಲ್ಲಿ ಕುಳ್ಳಿರಿಸಿ ಆತಣ ಮೇಲಣ ದೋಷ ಹೋದ ಹಾಗೆ 'ಕಾಮೇನ ಕಾಮ' ಎಂಬ ಮಂತ್ರದಿಂದ ಅಘೋರ್ಯಾದಕಮಂ ತಳಿದು, ವಿಭೂತಿಯ ಪಟ್ಟವಮಂ ಕಟ್ಟಿ ಮಸ್ತಕ ಕಳ ಶದ ಮೇಲೆ ಹಸ್ತಮಂ ನಿಳುಹಿ, ಶತಪತ್ರ ಕಮಲದೊಳಗಿಪ್ಪ ಮಹಾ ಲಿಂಗದ ಸತ್ಪಳಿಯಂ ತೆಗೆದು ಕ್ರಿಯಾ ಲಿಂಗದಲ್ಲಿ ಕುಳ್ಳಿರಿಸಿ, ಶಿಷ್ಯನ ಕರಸ್ಥಲದಲ್ಲಿ ಕೊಟ್ಟು, ಕರ್ಣದಲ್ಲಿ ಪಂಚಾಕ್ಷರಿಯನುಪದೇಶಿಸಿ, ಸರ್ವ ಭವಿ ಕುಲಮಂ ತೊಳೆದು; ಮಾಂಸ ಪಿಂಡಮಂ ಕಳೆದು ಮಂತ್ರ ಪಿಂಡಮಂ ಮಾಡುವುದು ಮಂತ್ರ ಶುದ್ಧಿ.

ಇಂತೀ ಪರಿಯಲ್ಲಿ ಕಾಯ ಶುದ್ಧಿ, ಜೀವ ಶುದ್ಧಿ, ಭೂತ ಶುದ್ಧಿ, ಆತ್ಮ ಶುದ್ಧಿ, ಮಂತ್ರ ಶುದ್ಧಿ, ಎಂಬ ಪಂಚ ಶುದ್ಧಿಯಂ ಸರ್ವ ಶುದ್ಧಿಯಂ ಮಾಡಿ ಪುನರ್ಜಾತನಂ ಮಾಡುವುದು. ಇದು ಸಹಜ ದೀಕ್ಷೆಯಯ್ಯಾ ಕೂಡಲಚನ್ನಸಂಗಯ್ಯ.

೩೯. ಭವಿತನಕ್ಕೆ ಹೇಸಿ ಭಕ್ತನಾದೆನೆಂದೊಡೆ, ಆತನ ಪೂರ್ವಾ ಶ್ರಯವ ಕಳೆದು, ಭಕ್ತನ ಮಾಡುವ ಪರಿ ಎಂತೆಂದೊಡೆ, ಅವನ ಕಾಯವ ಶುದ್ಧವ ಮಾಡುವುದು. ಜೀವವ ಶುದ್ಧವ ಮಾಡುವುದು. ಆತ್ಮಗೂಡಿ ವಾಕ್ಕು, ಪಾಣಿ, ಪಾದ, ಪಾಯು, ಗುಹ್ಯವೆಂಬ ಕರ್ಮೇಂದ್ರಿಯಂಗಳ ಶುದ್ಧವ ಮಾಡುವುದು. ಆತನ ಶ್ರೋತ್ರ ನೇತ್ರ ಘ್ರಾಣ ಜಿಹ್ವೆ ತ್ವಕ್ಕೆಂಬ ಜ್ಞಾನೇಂದ್ರಿಯಂಗಳ ಶುದ್ಧವ ಮಾಡುವುದು. ಆತನ ಒಳಹೊಂಗೆ ಸುತ್ತಿರ್ದ ಮಾಯಾಪಾಶದ ಪ್ರಪಂಚಮುಂ ಬಿಡಿಸಿ, ಹಿಂದಣ ಭೂತ ಭಾವದಿಂದ ಜೀವ ಶಿವನೆಂಬ ಪರಿಯಾಯಮುಂ ಕೆಡಿಸಿ, ಆ ಪರಶಿವನೇ ಇಷ್ಟ ಬ್ರಹ್ಮ, ಆ ಇಷ್ಟವೇ ನಿನ್ನ ಪ್ರಾಣ, ಆ ಪ್ರಾಣವೇ ಇಷ್ಟವೆಂದರುಹಿ, ಜೀವ ಶಿವನಲ್ಲಿ, ಆ ಶಿವನೆ ನಿನ್ನ ಜೀವವೆಂಬ ಪರಿಯಾಯಮುಂ ತೋರಿಸಿ, ಆತನ ಜೀವ ಭಾವಮುಂ ಕಳೆದು, ಶಿವಭಾವಿ ಎಂದೆನಿಸಿ, ಆತಂಗೆ ಪಂಚಭೂತಾದಿ ಅಧಿದೇವತೆಗಳ ತೋರಿಸಿ ಪಂಚವಕ್ತ್ರಂಗಳ ನೆಲೆಗೊಳಿಸಿ, ಪಂಚವರ್ಣಾಂಗಳನರುಹಿ, ಇದಕ್ಕೆ ಸಾಕ್ಷಿ, 'ಜೀವಾತ್ಮಂಜ' ಎಂಬ ಶ್ರುತಿಯಿಂದೆ ಆತನ ಆತ್ಮ ಶುದ್ಧತೆಯಿಂ ಆತನ ಸರ್ವಾಂಗವ ಶುದ್ಧವ ಮಾಡಿ, ಆತನ ತಂದು ಗಣ ಪಙ್ಕ್ತಿಯಲ್ಲಿ ಕುಳ್ಳಿರಿಸಿ, ಆ ದೀಕ್ಷೆ

ತನ ಜಿಹ್ವೆಯಲ್ಲಿ, ಶ್ರುತಿಯ ನೋದಿಸಿ, ಸಾಕ್ಷಿ ಓಂ ಕರ್ಮಣಾಂ । ಮನಸಾ ವಾಚಾ ಗುರೂಣಾಂ ಭಕ್ತವತ್ಸಲಃ ॥ ಶರೀರಾರ್ಥಂ ಪ್ರಾಣಂಚ । ಸದ್ಗುರು ಭ್ಯೋ ನಿವೇದಯೇತ್ ॥ ಎಂದು ಮಾನಸೋಚ್ಚರಣೆಯಂ ಮಾಡಿಸಿ, ಆ ತಚ್ಛಿಷ್ಯನ ಭವವಂ ಛೇದಿಸಿ, ಆಮೇಲೆ ಅವನ ಎಬ್ಬಿಸಿ ಚೌಕ ಮಧ್ಯದಲ್ಲಿ ಕುಳ್ಳಿರಿಸಿ. ಶ್ರುತಿ । 'ಓಂ ಮೇನಕಾ ಮೇನಕಾ' ಎಂಬ ಮಂತ್ರದಿಂದೆ ಅಘೋರ್ಯಾದಕಮಂ ವಾಮ ಪ್ರದಕ್ಷಿಣವಾಗಿ ತಳಿದು, ಭಾಳದಲ್ಲಿ ವಿಭೂತಿಯ ಪಟ್ಟವಂ ಕಟ್ಟಿ, ಆತನ ಮಸ್ತಕದ ಮೇಲೆ ಹಸ್ತವನಿರಿಸಿ, ಶತಪತ್ರ ಕಮಲದೊಳಗಿರ್ದ ವಸ್ತುವನು ಮಾನಸೋಚ್ಚರಣೆಯಿಂದೆ ಪ್ರಾಣಲಿಂಗವೆಂದರುಹಿ, ಜ್ಞಾನ ದೃಷ್ಟಿಗೆ ತಂದು, ಅದೇ ವಸ್ತುವನೆ ಬಹಿಷ್ಕರಿಸಿ ತಂದು, ಕುಮಾರ ಮೂರ್ತಿಯೊಳಗೆ ಪುದುಗಿಸಿ, ಅಷ್ಟುವೆಲ್ಲ ಒಂದು ಗೂಡಿದ ಮುದ್ರಿಯೇ ಇಷ್ಟಲಿಂಗವೆಂದು ತೋರಿಸಿ, ಕರಮನಭಾವದಲ್ಲಿ ನಿರ್ಧರಿಸೆಂದು ಹೇಳಿ, ಆತ್ಮವೆ ಲಿಂಗವೆಂಬುದು ಮಾಣಿಸಿ, ಕರಕೆ ಕಂಕಣವ ಕಟ್ಟಿ, ನಿರ್ಧರದ ತಾಳಿಯಂ ಕಂಠದಲ್ಲಿ ಕಟ್ಟಿ, ಕಲಿಯಾಗು ಎಂದು ಎನ್ನ ಕೃತಾರ್ಥನ ಮಾಡಿದ ಶ್ರೀಗುರುವೇ, ಕೂಡಲ ಚನ್ನಸಂಗ ನಿಮ್ಮ ಶರಣ ಸಂಗನ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂಬೆನು.

೪೦. ಗುರುವೆಂಬಾತನು ಸಕಲಾಗಮದ ಹೃದಯವನರಿದು, ಕ್ರಿಯಾಜ್ಞಾನಯುಕ್ತನಾಗಿ ತನ್ನ ತಾನರಿದು, ಸರ್ವಾಚಾರ ಸಂಪನ್ನತೆ ನೆಲೆಗೊಂಡು, ನಿರ್ಣಯದ ಗೊತ್ತನರಿದು ಉಪದೇಶವ ಮಾಡಬಹುದು. ಉಪದೇಶವ ಮಾಡುವ ಪರಿ ಎಂತೆಂದೊಡೆ, ಬ್ರಾಹ್ಮಣನ ಮೂರು ವರುಷ ನೋಡಬೇಕು. ಕ್ಷತ್ರಿಯನ ಆರು ವರುಷ ನೋಡಬೇಕು. ವೈಶ್ಯನ ಒಂಬತ್ತು ವರುಷ ನೋಡಬೇಕು. ಶೂದ್ರನ ಹನ್ನೆರಡು ವರುಷ ನೋಡಬೇಕು. ಈ ಹೀಂಗೆ ನೋಡಿದಲ್ಲದೆ, ದೀಕ್ಷೆಯ ಕೊಡಲಾಗದು. ಈ ಕ್ರಮವನರಿಯದೆ, ಉಪಾಧಿವಿಡಿದು, ಉಪದೇಶವ ಕೊಂಬಾತ ಶಿಷ್ಯನಲ್ಲ. ಇವರಿಬ್ಬರ ನಿಲವು ಒಂದೇ. ಟಕ್ಕನ ಮನೆಗೆ ಟಕ್ಕ ಬಂದಂತೆ. ಈ ಗುರು ಶಿಷ್ಯರಿಬ್ಬರನು ರೌರವ ನರಕದಲ್ಲಿಕ್ಕುವ ನಮ್ಮ ಕೂಡಲಚನ್ನಸಂಗಮದೇವಾ.

೪೧. ಗುರುವಿನ ಗುರು ಪರಮಗುರು ಪರಬ್ರಹ್ಮ ಜಂಗಮವೆನಿಸಿಕೊಂಡ ಬಳಿಕ ತಾನೇ ಗುರುವಾಗಿ ಉಪದೇಶವ ಮಾಡಲಾಗದು,

ಮುಂದೆ ಶಿಕ್ಷೆ ದೀಕ್ಷೆಗಳಿಂದೆ ಗುರು ಕರುಣವ ಪಡೆದವರಿಂದೆ, ದಾಸೋಹವ ಮಾಡಿಸಿಕೊಳ್ಳಲ್ಕರ್ತನಲ್ಲದೆ, ತನ್ನ ಪ್ರಾಣಲಿಂಗವ ಕೊಡಕರ್ತನಲ್ಲ. ತನ್ನ ಪ್ರಾಣಲಿಂಗವ ಕೊಟ್ಟು ಗುರುವಾದ ಬಳಿಕ, ಜಂಗಮಸ್ಥಲಕ್ಕೆ ಭಂಗಹೊಂದಿತ್ತು. ಅದೆಂತೆಂದೊಡೆ, ಅವನು ತನ್ನ ಪೂರ್ವಾರ್ಜಿತವ ತ್ಯಜಿಸಿ, ಗುರುಕರಜಾತನಾಗಿ, ನಿರ್ಧರಿಸಿ ನಿಲಲರಿಯ. ಅಂತಪ್ಪ ಭವಜೀವಿಗೆ ನಿಜ ಜಂಗಮವೇ? ಶಿವಯೋಗಿ ಎನಿಸಿಕೊಂಬ ರಾಜ ಕೃಪಾಳು ತಾನೆ ಚರಲಿಂಗವಾಗಿ ಬಂದು ಆಚಾರ ಭ್ರಷ್ಟರಿಂಗೆ ಹಸ್ತಾನುಗ್ರಹವ ಮಾಡಿದೊಡೆ ಜಂಗಮಸ್ಥಲಕ್ಕೆ ಅದೇ ಭಂಗವೆಂದುದು ನಮ್ಮ ಕೂಡಲ ಚನ್ನಸಂಗಯ್ಯನ ವಚನ. ಅದು ಕಾರಣವಾಗಿ ವೀರಶೈವ ಸಿದ್ಧಾಂತದಲ್ಲಿ ಶಬ್ದಮುಗ್ಧವಾಗಿರಬೇಕು. ಗುಹ್ಯಕ್ಕೆ ಗುಹ್ಯವಾಗಿರಬೇಕಯ್ಯಾ.

---

೨೧ ದೀಕ್ಷೆಗಳು

೪೨. ಆಣವಮಲ, ಮಾಯಾಮಲ, ಕಾರ್ಮಿಕಮಲವೆಂಬ ಮಲತ್ರಯಂಗಳ ಕಳೆದು, ಆಜ್ಞಾದೀಕ್ಷೆ. ಉಪಮಾದೀಕ್ಷೆ, ಸ್ಪರ್ಶಿಕಾರೋಹಣ, ಕಳಶಾಭಿಷೇಕ, ವಿಭೂತಿಪಟ್ಟ, ಲಿಂಗಾಯತ, ಲಿಂಗಸ್ವಾಯತ, ಈ ಏಳನು ಕಾಯಕ್ಕಪದೇಶವ ಮಾಡುವುದು. ಸಮಯ, ನಿಸ್ಸಂಸಾರ, ನಿರ್ವಾಣ, ತತ್ವದೀಕ್ಷೆ. ಅಧ್ಯಾತ್ಮ, ಅನುಗ್ರಹ, ಸತ್ಯಶುದ್ಧ ಈ ಏಳನು ಪ್ರಾಣಕ್ಕುಪದೇಶವ ಮಾಡುವುದು. ಏಕಾಗ್ರಚಿತ್ತ, ದೃಢವ್ರತ, ಪಂಚೇಂದ್ರಿಯಾರ್ಪಿತ, ಅಹಿಂಸೆ, ಲಿಂಗನಿಜ, ಮನೋರ್ಲಯ, ಸದ್ಯೋನ್ಮುಕ್ತಿ, ಈ ಏಳನು ಮನಕ್ಕುಪದೇಶವ ಮಾಡುವುದು. ಈ ಕ್ರಮವನರಿದು ಮಾಡುವುದು ಕೂಡಲಚನ್ನಸಂಗಯ್ಯನಲ್ಲಿ ಸಹಜ ದೀಕ್ಷೆಯಯ್ಯ.

೪೩. ಆಯ್ಯ ವರಕುಮಾರ ದೇಶಿಕೇಂದ್ರನೇ ಕೇಳಾ, ಚಿದ್ಘನ ಶರಣ ಪ್ರಸಾದಲಿಂಗವಾಗಿ. ನಿಂದ ನಿಜಾಚರಣೆಯ ನಿಲುಕಡೆಯ ಕಲ್ಯಾಣ ಪಟ್ಟಣದ ಅನುಭವ ಮಂಟಪದ ಶೂನ್ಯಸಿಂಹಾಸನದಲ್ಲಿ ಬಸವ, ಚನ್ನಬಸವ, ಸಿದ್ಧರಾಮ, ಅಕ್ಕಮಹಾದೇವಿ, ನೀಲಲೋಚನೆ, ಮೊದಲಾದ ಸಕಲ ಪ್ರಮಥಗಣಂಗಳು ಮಹಾಪ್ರಭು ಸ್ವಾಮಿಗಳಿಗೆ ಅಭಿವಂದಿಸಿ ಹಸ್ತಾಂಜಲಿತಂಗಾಗಿ, ಎಲೇ ಮಹಾಪ್ರಭುವೇ, ನಿನ್ನ ಅನಾದಿ ಷಟ್‌ಸ್ಥಳ ನಿರಾಭಾರಿ ವೀರಶೈವ ಶರಣರ ನಿಜಾಚರಣೆಯ ನಿಲುಕಡೆಯ ದಯವಿಟ್ಟು ಕರುಣಿಸಬೇಕಯ್ಯ ಮಹಾಗುರುವೇ ಎಂದು ಬೆಸಗೊಂಡಲ್ಲಿ ಆಗ ಮಹಾಪ್ರಭುವು ಲಿಂಗಾಂಗಕ್ಕೆ ಭಿನ್ನವಿಲ್ಲದೆ ಹಸ್ತ ಮಸ್ತಕ ಸಂಯೋಗವ ಮಾಡಿ, ವೇಧಾ ಮಂತ್ರ ಕ್ರಿಯಾ ದೀಕ್ಷೆಯನಿತ್ತು, ಇಪ್ಪತ್ತೊಂದು ತೆರದ ವಿಚಾರವನರುಹಿ, ನೂರೊಂದುಸ್ಥಲದಾಚರಣೆ, ಇನ್ನೂರು ಹದಿನಾರು ಸ್ಥಲದ ಸಂಬಂಧವ ತೋರಿ, ಸರ್ವಾಚಾರ ಸಂಪತ್ತಿನ ವರ್ಣದ ಸ್ವರೂಪು ನಿಲುಕಡೆಯ ತೋರಿಸಿ ಸಾಕಾರ ನಿರಾಕಾರದ ನಿಜದ ನಿಲುಕಡೆಯನರುಪಿ ನಿಜ ಶಿವಯೋಗದ ನಿರ್ಣಯವ ಕರುಣಿಸಿ, ಸತ್ತು ಚಿತ್ತಾನಂದ ನಿತ್ಯಪರಿಪೂರ್ಣ ಅವಿರಳ ಪರಂಜ್ಯೋತಿ ಸ್ವರೂಪು ತಾವೆದಂರುಪಿದರು ನೋಡಾ. ಇಂತು ಚನ್ನಬಸವೇಶ್ವರ ಸ್ವಾಮಿಗಳು ಬೆಸಗೊಂಡು ತಮ್ಮ ಚಿದಂಗ ಸ್ವರೂಪರಾದ ಚಿದ್ಘನ ಶರಣ ನಿರ್ಲಜ್ಜ ಶಾಂತಯ್ಯನೆಂಬ ಶಿವಶರಣನ ಮುಖದಲ್ಲಿ ಮೋಳಿಗಯ್ಯ ಮೋದಲಾದ ಸಕಲ ಪ್ರಮಥರ್ಗೆ ಬೋಧಿಸಿದರು ನೋಡಾ. ಆದೇ ಮಹಾಪ್ರಸಾದವ ನಿನ್ನ ಶ್ರೋತ್ರ ಮುಖದಲ್ಲಿ ಮಹಾಮಂತ್ರ ಮೂರ್ತಿಯಾಗಿ ನೆಲೆಗೊಂಡಿಪ್ಪ ಪ್ರಸಾದಲಿಂಗ ಮುಖದಲ್ಲಿ ಆರುಹಿಸಿ ಕೊಟ್ಟೆವು. ಕೇಳಿ ಮಹಾಲಿಂಗ ಮುಖದಲ್ಲಿ ಸಂತೃಪ್ತನಾಗಿ ಪರಿಣಾಮ ಪ್ರಸಾದದಲ್ಲಿ ಲೋಲುಪ್ತನಾಗಿ, ಆ ಎನ್ನಾಜ್ಞಾ ಮಂಟಪದಲ್ಲಿ ಮೂರ್ತಿಗೊಂಡಿರುವ ಸಂಗನಬಸವೇಶ್ವರನು.

ಆಯ್ಯಾ ಪ್ರಥಮದಲ್ಲಿ ಇಪ್ಪತ್ತೊಂದು ತೆರದ ದೀಕ್ಷೆಯ ಕರುಣಿಸಿ ಹೆವು ನೋಡು, ಅದರ ವಿಚಾರವೆಂತೆಂದೊಡೆ,

---

ಕ್ರಿಯಾ ದೀಕ್ಷೆ

ಆಜ್ಞಾದೀಕ್ಷೆ

೪೪. ಅಷ್ಟತನು ಅಷ್ಟಭೋಗಂಗಳಭಿಲಾಷೆಯ ನೀಗಿ, ಸರ್ವಸಂಗ ಪರಿತ್ಯಾಗದಿಂದ ನಿಜನೈಷ್ಠೆ ಕರಿಗೊಂಡು ಸಚ್ಚಿದಾನಂದದಿಂದ ನಿಂದ ನಿಜೋತ್ತಮಂಗೆ ಶ್ರೀಗುರುಲಿಂಗ ಜಂಗಮವು ಕೃಪಾದೃಷ್ಟಿಯಿಂದ ನೋಡಿ ಜನ್ಮ ಜರೆ ಮರಣಂಗಗಳಿಗಂಜಬೇಡವೆಂದು ಅಂಗ ಮನ ಪ್ರಾಣಂಗಳ ಮೇಲೆ ಅಭಯಹಸ್ತವಿತ್ತು ಸಂಸಾರ ಪ್ರಪಂಚಕ್ಕೊಳಗಾದ ಪಂಚಮಹಾಪಾತಕರಂತೆ ನಡೆಯಬಾರದೆಂದು ಪಾದಕ್ಕಾಜ್ಞೆಯ ಮಾಡಿದರಯ್ಯ.

ಜಡ ಮರ್ತ್ಯರು ನುಡಿದಂತೆ ನುಡಿಯಬೇಡವೆಂದು ವಾಣಿಗೆ ಆಜ್ಞೆಯ ಮಾಡಿದರಯ್ಯ. ಪರದೈವ, ಪರದ್ರವ್ಯ. ಪರಸ್ತ್ರೀಯರ ಮುಟ್ಟಬೇಡ ವೆಂದು ಮಾಡಗೆ ಆಜ್ಞೆಯ ಮಾಡಿದರಯ್ಯ. ಪರಸ್ತ್ರೀಯರ ಮುಟ್ಟಿದರೆ ಅದರಲ್ಲಿ ಜನ್ಮ ತಪ್ಪದೆಂದು ಅದರಿಂದ ಬಿಟ್ಟು ಹುಳುಗೊಂಡವಿಲ್ಲವೆಂದು ವಾಣಿಗೆ ಆಜ್ಞೆಯ ಮಾಡಿದರಯ್ಯ. ಇಂತು ಭವಿವಾರ್ಗವನುಳಿದು, ಸತ್ಯ ನಡೆ, ಸತ್ಯನುಡಿ, ಸತ್ಯಪಾಣಿ, ಸತ್ಯವಾಣಿಯಾದರೆ ನಿನ್ನ ಪಾದ ಮೊದ ಲಾಗಿ ವಾಣಿಯೇ ಅಂತ್ಯವಾದ ಸರ್ವಾಂಗದಲ್ಲಿ ಚತುರ್ವಿಧಸಾರಾಯ ಸ್ವರೂಪ ಗುರುಲಿಂಗ ಜಂಗಮ ಪ್ರಸಾದವಾಗಿ ಕ್ಷೀರದೊಳಗೆ ಘೃತವಡ ಗಿದಂತೆ, ಏಕ ಸ್ವರೂಪಿನಿಂದ ನಿಮಿಷಾರ್ಧವಗಲದೆ ನಿಜವಸ್ತು ಬೆರೆ ದಿರ್ಪುದು ನೋಡಾ ಎಂದು ಅನುಭಾವ ಮಂಟಪದಲ್ಲಿ ಶ್ರೀಗುರು ನಿಃಕ ಳಂಕ ಚನ್ನಬಸವರಾಜೇಂದ್ರನು ನಿರ್ಲಜ್ಜಶಾಂತಲಿಂಗದೇಶಿಕೋತ್ತಮಂಗೆ ಗಣಸಾಕ್ಷಿಯಾಗಿ ಆಜ್ಞಾ ದೀಕ್ಷೆಯ ಮಾಡಿದರು ನೋಡಾ ಸಂಗನ ಬಸವೇಶ್ವರಾ.

ಉಪವಾದೀಕ್ಷೆ

೪೫. ಅಯ್ಯ ನಿನ್ನಿಷ್ಟ ತನುವಿನ ಮಧ್ಯದಲ್ಲಿ ಆ ಪರಬ್ರಹ್ಮ ನಿಜ ವಸ್ತುವೇ ನಿನ್ನ ಪಾವನ ನಿಮಿತ್ಯಾರ್ಥವಾಗಿ ಅಷ್ಟಾವರಣ ಸ್ವರೂಪಿ ನಿಂದ ನೆನೆದಿರ್ಪನು ನೋಡಾ. ಅದರ ವಿಚಾರವೆಂತೆಂದೊಡೆ, ನಿನ್ನ ಸ್ಥೂಲ ತನುವಿನ ಮಧ್ಯದಲ್ಲಿ ಅರುಹೇ ಗುರುವಾಗಿ ನೆಲಿಸಿರ್ಪರು ನೋಡಾ. ನಿನ್ನ ಸೂಕ್ಷ್ಮ ತನುವಿನ ಮಧ್ಯದಲ್ಲಿ ಸುಜ್ಞಾನವೇ ಲಿಂಗವಾಗಿ ನೆಲಿ ಸಿರ್ಪರು ನೋಡಾ. ನಿನ್ನ ಕಾರಣ ತನುವಿನ ಮಧ್ಯದಲ್ಲಿ ಸ್ವಾನುಭಾವ ಜಂಗಮವಾಗಿ ನೆಲಿಸಿರ್ಪರು ನೋಡಾ. ನಿನ್ನ ನಿರ್ಮಲ ತನುವಿನ ಮಧ್ಯ ದಲ್ಲಿ ಕರುಣಾಮೃತಪಾದೋದಕವಾಗಿ ನೆಲಿಸಿರ್ಪರು ನೋಡಾ. ನಿನ್ನ ಆನಂದ ತನುವಿನ ಮಧ್ಯದಲ್ಲಿ ಕೃಪಾಪ್ರಸಾದವಾಗಿ ನೆಲಿಸಿರ್ಪರು ನೋಡಾ. ನಿನ್ನ ಚಿದ್ರೂಪ ತನುವಿನ ಮಧ್ಯದಲ್ಲಿ ಚಿತ್‌ಪ್ರಕಾಶ ಭಸಿತವಾಗಿ ನೆಲಿ ಸಿರ್ಪರು ನೋಡಾ. ನಿನ್ನ ಚಿನ್ಮಯ ತನುವಿನ ಮಧ್ಯದಲ್ಲಿ ಚಿತ್ಕಾಂತೆ ರುದ್ರಾಕ್ಷಿಯಾಗಿ ನೆಲಿಸಿರ್ಪರು ನೋಡಾ. ನಿನ್ನ ಚಿತ್ಪ್ರಕಾಶ ತನುವಿನ ಮಧ್ಯದಲ್ಲಿ ಚಿದಾನಂದ ಮಂತ್ರವಾಗಿ ನೆಲಿಸಿರ್ಪರು. ಇಂತು ನಿನ್ನ ಸರ್ವಾಂ ಗದಲ್ಲಿ ಅಷ್ಟಾವರಣ ಸ್ವರೂಪಿನಿಂದ ಪರಾತ್ಪರ ನಿಜವಸ್ತು ನೆರೆದಿರ್ಪುದು

ನಿನ್ನ ನಿರ್ಮಾಯ ಚಿತ್ತ ಮಹಾಜ್ಞಾನ ನಿಜದೃಷ್ಟಿಯಿಂದ ನಿನ್ನನೀ ತಿಳಿದುನೋಡಾ ಎಂದು ಗಣಸಾಕ್ಷಿಯಾಗಿ ಶ್ರೀಗುರು ನಿಃಕಳಂಕ ಚನ್ನ ಬಸವರಾಜೇಂದ್ರನು ನಿರ್ಲಜ್ಜಶಾಂತ ದೇಶಿಕೋತ್ತಮಂಗೆ ಇದೇ ಉಪವಾ ದೀಕ್ಷೆ, ಇಂತುಟೆಂದು ನಿರೂಪಮಂ ಕೊಡುತಿರ್ದರು ನೋಡಾ ಸಂಗನ ಬಸವೇಶ್ವರಾ.

ಸ್ವಸ್ತಿಕಾರೋಹಣ ದೀಕ್ಷೆ

೪೬. ಅಯ್ಯ ಶ್ರೀಗುರುಲಿಂಗ ಜಂಗಮವೇ, ರುದ್ರ ಲೋಕದ ರುದ್ರ ಗಣಂಗಳಿಗೆ, ಶಾಂಭವಗಣಂಗಳಿಗೆ, ನಾಗಗಣಂಗಳಿಗೆ, ದೇವಗಣಂಗಳಿಗೆ, ಮರ್ತ್ಯಲೋಕದ ಮಹಾಗಣಂಗಳಿಗೆ ಅವರವರ ಮನ ಭಾವ ಕರಣಂ ಗಳು ಹೇಗುಂಟು ಹಾಗೆ ಪ್ರಸನ್ನತೆ ಪ್ರಸಾದವಾಗಿರ್ಪುದು ನೋಡಾ. ಸ್ವರ್ಗ, ಮರ್ತ್ಯ, ಪಾತಾಳ ಲೋಕದಲ್ಲಿ ಚರಿಸುವ ಹರಿ ಸುರ ಬ್ರಹ್ಮಾದಿ ದೇವ ,ದಾನವ, ಮಾನವ, ಮನು, ಮುನಿಗಳೆಲ್ಲ ಅತ್ಯತಿಷ್ಠದಶಾಂಗುಲ ವೆಂದು ಹೊಗಳುವ ಶ್ರುತಿ ಎಂತೋ, ಹಾಗೆ ಅವರವರ ಮನದಂತೆ ಮಹಾದೇವನಾಗಿ ಫಲ ಪದಗಳ ಕೊಟ್ಟು, ದುಷ್ಟ ನಿಗ್ರಹ ಶಿಷ್ಟಪರಿಪಾಲ ಕತ್ವದಿಂದ ಸರ್ವಲೋಕಂಗಳಿಗೆ ಸೂತ್ರಧಾರಿಗಳಾಗಿರ್ಪರು ನೋಡಾ. ಇಂತು ಏಕಮೇವ ಪರಬ್ರಹ್ಮವೆಂಬ ಶ್ರುತಿಯ ದಿಟವ ಮಾಡಿ ಪರಮ ಸ್ಥಸ್ಥಿರ ಮಂಟಪದ ಮೇಲೆ ಶಿವಭಕ್ತಿ ಅಂಗಲಿಂಗವೆಂಬ ಉಭಯ ನಾಮವಳಿದು ಶಿಷ್ಯರೂಪಿನಿಂದ ಕುಳ್ಳಿರಿಸಿ ದೀಕ್ಷಾ ಪಾದೋದಕ ಮಿಶ್ರ ವಾದ ಗೋಮೂತ್ರದಿಂದ ಸಪ್ತಧಾತು ಸಂಬಂಧವಾದ ಸಪ್ತವ್ಯಸನ ಸಂಬಂಧವಾದ ಅಂಗ ಇಂತು ಲಿಂಗದ ಮಲಿನಭಾವ, ಲಿಂಗದ ಶಿಲಾ ಭಾವವ ಕಳೆದು ಕ್ಷೀರ ಘೃತ ರಂಭಾ ಇಕ್ಷು ಮಧು ಯುಕ್ತವಾದ ರಸ ಪಂಚಾಮೃತವ ಜಂಗಮ ಚರಣೋದಕ ಮಿಶ್ರದಿಂದ ಅಭಿಷೇಕವ ಮಾಡಿಸಿ, ಅದರಿಂ ಮೇಲೆ ಗುರುಪಾದೋದಕದಲ್ಲಿ ಶರಣಗಣಂಗಳ ಹಸ್ತೋದಕ ಮುಂತ್ರೋದಕ ಶುದ್ಧೋದಕ ಗಂಧೋದಕ ಪುಷ್ಪೋದಕ ವೆಂಬ ಪಂಚ ಪರಮಾನಂದ ಜಲದಿಂದ ಅಭ್ಯಂಗ ಸ್ನಾನವ ಮಾಡಿಸಿ ಹಿಂದು ಮುಂದಣ ಕಾಮಕಾಲರ ಭಯಕ್ಕಂಜಬೇಡೆಂದು ತ್ರಿವಿಧಂಗುಳ ಪ್ರಮಾಣವಾದ ದರ್ಭೆಯುಂತು ಮಾಡಿ ತ್ರಿವಿಧ ಮಂತ್ರ ಸ್ಮರಣೆಯಿಂದ ಕಟಿಯಲ್ಲಿ ಧರಿಸಿದರಯ್ಯ. ಆರಿಪ್ಪೈರಿಗಳಿಗೆ ಒಳಗಾಗಬೇಡವೆಂದು ಷಡಂ ಗುಲ ಪ್ರಮಾಣವಾದ ರಂಭಾಪಟ್ಟೆಯ ಕೌಪೀನವ ಮಾಡಿ ಷಡ

ಷ್ಟರ ಮಂತ್ರ ಸ್ಮರಣೆಯಿಂದ ಹರಿಯಜದ್ವಾರಗಳ ಬಂಧಿಸಿದರಯ್ಯ. ಆ ಪರಿಯೇಲೆ ನಾರಂಗ ಶಾಟಿಯ ಪವಿತ್ರತೆಯಿಂ ಹೊದ್ದಿಸಿ, ಶ್ರೀಗುರು ದೇವನ ಚರಣಕಮಲಕ್ಕೆ ಅಷ್ಟಾಂಗ ಪ್ರಣತನ ಮಾಡಿಸಿ, ಶಿವಶರಣ ಭಕ್ತಮಹೇಶ್ವರರುಗಳೆಲ್ಲ ಹುಸಿ ನುಡಿಯ ನುಡಿಯದೆ ದಿಟವ ಬಿಡದೆ ಆತ್ಮದಿಂದ ನಡೆನುಡಿ ಕೊಟ್ಟು ಕೊಂಬುವ ವಿಚಾರಗಳ ಶ್ರುತ ಮಾಡಿದಲ್ಲಿ ಶ್ರೀಗುರುದೇವನು ಶರಣಗಣ ಒಪ್ಪಿಗೆಯಿಂದ ಶಿಷ್ಯನ ಮಸ್ತಕದ ಮೇಲೆ ಅಭಯ ಹಸ್ತವ ಇಟ್ಟು ಗುರುಶಿಷ್ಯ ಭಾವವಳಿದು ಗುರುವಿನ ಸೂತ್ರವ ಶಿಷ್ಯಹಿಡಿದು, ಶಿಷ್ಯನ ಸೂತ್ರವ ಗುರುವು ಹಿಡಿದು, ಅಂತರಂಗ ಬಹಿರಂಗದಲ್ಲಿ ಶಿವಯೋಗ ಸಂಧಾನದಿಂದ ಏಕರೂಪವಾಗಿ ಭೃತ್ಯರಿಂದ ಕಲಶಾರ್ಚನೆಯ ರಚಿಸಿ ಪ್ರಮಥಗಣಾರಾಧ್ಯ ಭಕ್ತಮಾಹೇಶ್ವರರೊಡಗೂಡಿ ನವರತ್ನಖಚಿತವಾದ ಶೂನ್ಯಸಿಂಹಾಸನದ ಮೇಲೆ ಮೂರ್ತಿಗೊಂಡಿರುವಂಥ ಮಂತ್ರ ಮೂರ್ತಿ ನಿರಂಜನ ಜಂಗಮಕ್ಕೆ ವಿಭೂತಿ ವೀಳ್ಯ ಸುವರ್ಣಕಾಣಿಕೆದಶಾಂಗ ಫಲಸಾರ ಪುಷ್ಪದ ಮೇಲೆ ವಸ್ತ್ರಾಭರಣ ಮೊದಲಾಗಿ ಸಮಸ್ತ ಪದಾರ್ಥಂಗಳ ಪ್ರಮಥಗಣಾರಾಧ್ಯ ಭಕ್ತಮಾಹೇಶ್ವರರ ಮಧ್ಯದಲ್ಲಿಟ್ಟು ಅಷ್ಟಾಂಗಯುಕ್ತರಾಗಿ ಸ್ವಸ್ಥ ಧೃಢಚಿತ್ತದಿಂದ ಬಹು ಪರಾಕು ಭವರೋಗ ವೈದ್ಯನೇ ಎಂದು ತ್ರಿಕರಣ ಶುದ್ಧತೆಯಿಂದ ಅಭಿವಂದಿಸುವಂಥಾದ್ದೇ ಸ್ವಸ್ತಿಕಾರೋಹಣದೀಕ್ಷೆ ಇಂತುಟೆಂದು ಶ್ರೀಗುರು ನಿಃಕಳಂಕ ಮೂರ್ತಿ ಚನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಕಲಶಾಭಿಷೇಕ ದೀಕ್ಷೆ.

೪೭. ಅಯ್ಯ ಪರಮಸಚ್ಚಿದಾನಂದ ಮಂತ್ರಮೂರ್ತಿ ಜಂಗಮದೇವನು ಪ್ರಮಥಗಣಾರಾಧ್ಯ ಭಕ್ತಮಾಹೇಶ್ವರರೊಪ್ಪಿಗೆಯಿಂದ ನಿರಂಜನ ಜಂಗಮಕ್ಕೆ ಉಪರಿ ಸಿಂಹಾಸನವ ಮಾಡಿ ಮೂರ್ತವ ಮಾಡಿದ ಮೇಲೆ ಷಡಕ್ಷರ ಮಂತ್ರ ಸ್ವರೂಪವಾದ ಪೂರ್ವ ಪಶ್ಚಿಮ ಉತ್ತರ ದಕ್ಷಿಣ ಮಧ್ಯದಲ್ಲಿ ಮೂರ್ತಗೊಂಡಿರುವ ಈಶಾನ್ಯ ಕಲಶ ಮೊದಲಾಗಿ ಪಂಚಕಲಶಂಗಳಿಗೆ ಜಂಗಮದೀಕ್ಷಾ ಪಾದೋದಕವ ತುಂಬಿ ಮುಂಟಪ ಷಟ್ ಸಮ್ಯಾರ್ಜನೆ ಷಡ್ವಿಧ ವರ್ಣದ ರಂಗವೋಲೆ ನವಧ್ಯಾನ ನವಸೂತ್ರ ವಿಭೂತಿ ವೀಳ್ಯ ಸುವರ್ಣ ಕಾಣಿಕೆ ಪಂಚ ಮುದ್ರೆ ಅಷ್ಟವಿಧ ಷೋಡಶೋಪ

ಚಾರಂಗಳೆಂದೊಪ್ಪುವ ಸದ್ಯೋಜಾತ ವಾಮದೇವ ಅಘೋರ ತತ್ಪುರುಷ ಈಶಾನ್ಯ ಕಲಶಮೂರ್ತಿಗಳ ಪಶ್ಚಿಮ ಭಾಗದಲ್ಲಿ ಜಂಗಮವಾದ ಸೋಂಕುವಂತೆ ಗುರುವು ಮೂರ್ತವ ಮಾಡಿ ಆ ಕಲಶಗಳ ಸೂತ್ರವ ತನ್ನ ಪಾದಕ್ಕೆ ಹಾಕಿ ರನ್ನಚಿಪ್ಪೆಳಗಿನ ಮುಂದೆ ಮೂರ್ತಗೊಂಡಿರುವ ಕಲಶಗಳ ಪೂರ್ವ ಭಾಗದಲ್ಲಿ ಕರಿಯ ಕಂಬಳಿಯ ಗದ್ದುಗೆಯ ಮಾಡಿಸಿ ಪಟೆಯ ರಚಿಸಿ, ಆ ಗದ್ದುಗೆಯ ಮೇಲೆ ಶಿಷ್ಯೋತ್ತಮನ ಮೂರ್ತವ ಮಾಡಿಸಿ ಆತನಂಗಕ್ಕೆ ಗುರುಸೂತ್ರವ ಹಾಕಿಸಿ ಶಿಷ್ಯನಂಗದ ಮೇಲೆ ಮೂರ್ತಗೊಂಡಿರುವ ವೀರ ಶಿವಲಿಂಗವ ಗಣಸಾಕ್ಷಿಯಾಗಿ ಶ್ರೀಗುರುದೇವನು ತನ್ನ ಕರಸ್ಥಲದಲ್ಲಿ ಮೂರ್ತವ ಮಾಡಿಸಿ, ಆ ಲಿಂಗದ ಮಸ್ತಕದ ಮೇಲೆ ನಿರಂಜನ ಜಂಗಮದ ಪಾದವಿಡಿಸಿ, ಆ ಪಂಚಕಲಶಂಗಳಲ್ಲಿ ಶೋಭಿಸುವಂಥ ದೇವ ಗಂಗಾಜಲ ಸ್ವರೂಪವಾದ ಗುರುಪಾದೋದಕವನ್ನು ಒಂದು ಪಾತ್ರೆಯಲ್ಲಿ ಆ ಕಲಶಂಗಳೈದರಲ್ಲಿ ತೆಗೆದುಕೊಂಡು ಗುರುವಿನ ದಕ್ಷಿಣ ಭಾಗದಲ್ಲಿ ಮೂರ್ತಗೊಂಡಿರುವ ಪಾದೋದಕ ಕುಂಭದಲ್ಲಿ ಒಂದು ಬಿಂದುವ ತೆಗೆದುಕೊಂಡು ಆ ಪಾತ್ರೆಯಲ್ಲಿ ಹಾಕಿ, ಈ ಆರುತೆರದ ಆಗ್ರೋದಕಗಳ ಪ್ರಮಥಗಣಾರಾಧ್ಯ ಭಕ್ತಮಾಹೇಶ್ವರರೆಲ್ಲ ಆ ಗುರುವಿನ ಹಸ್ತಕಮಲದಲ್ಲಿರುವಂಥ ಉದಕವನ್ನು ತೆಗೆದುಕೊಂಡು ಆ ಶರಣಸತಿ ಲಿಂಗಪತಿಯಾಗಿ ಒಪ್ಪುವ ಶಿಷ್ಯೋತ್ತಮನ ಮಸ್ತಕದ ಮೇಲೆ ಮಂತ್ರ ಧ್ಯಾನದಿಂದ ಸಂಪ್ರೋಕ್ಷಣೆಯ ಮಾಡುವಂಥಾದ್ದೇ ಕಲಶಾಭಿಷೇಕ ದೀಕ್ಷೆ ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ವಿಭೂತಿ ಪಟ್ಟದೀಕ್ಷೆ.

೪೮. ಅಯ್ಯ ಶ್ರೀಗುರುದೇವನು ಪ್ರಮಥಗಣಾರಾಧ್ಯ ಭಕ್ತಮಾಹೇಶ್ವರರೊಡಗೂಡಿ ಪಂಚಾಭಿಷೇಕ ಮೊದಲಾದ ಪಾದೋದಕ ಕಡೆಯಾಗಿ ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ ಇಷ್ಟಲಿಂಗದೇವಂಗೆ ಸಪ್ತವಿಧಾರ್ಚನೆಯ ಮಾಡಿ ತಮ್ಮ ಕುಮಾರ ಮೂರ್ತಿ ಎಂದು ಮಹಾ ಸಂತೋಷದಿಂದ ತೊಡೆಯ ಮೇಲೆ ಮೂರ್ತವ ಮಾಡಿಸಿಕೊಂಡು ಆಮೇಲೆ ಪ್ರಾಣಲಿಂಗಸ್ವರೂಪವಾದ ಉಭಯ ಹಸ್ತವನ್ನು ಸಪ್ತವಿಧಾರ್ಚನೆಯ ಮಾಡಿ ದಶಾಂಗುಳ ಮಧ್ಯದಲ್ಲಿ ದ್ವಾದಶ ಮೂಲ ಪ್ರಣ

ಮವ ಲಿಖಿಸಿ ಕುಮಾರತಾವ ಮಾಡಿ, ಆಮೇಲೆ ಭಾವಲಿಂಗ ಸ್ವರೂ
ಪಗೋಳಕಸ್ಥಾನವಾದ ಮಸ್ತಕವನ್ನು ಸಪ್ತವಿಧಾರ್ಚನೆಯ ಮಾಡಿ ದ್ರಾವಿಡ
ಮಹಾ ಪ್ರಣಮವ ಲಿಖಿಸಿ ಸರ್ವಾಂಗದಲ್ಲಿ ಕ್ರಿಯಾ ಪಾದೋದಕ ಸ್ವರೂಪ
ವಾದ ಚಿದ್ಭಸಿತ ಮಹಾಮಂತ್ರಸ್ಮರಣೆಯಿಂದ ಸ್ನಾನ ಧೂಳನ ಧಾರ
ಣವ ಮಾಡಿ ಲಲಾಟದಲ್ಲಿ ಅನಾದಿ ಪರಶಿವ ಲಿಖಿತವ ಲಿಖಿಸಿ ಸರ್ವಾ
ಚಾರ ಸಂಪನ್ನನಾಗೆಂದು ಆಶೀರ್ವಚನ ನೀಡುವಂಥಾದ್ದೇ ವಿಭೂತಿ
ಪಟ್ಟದೀಕ್ಷೆ ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನಬಸವರಾಜೇಂದ್ರನು
ನಿರ್ಲಜ್ಜಶಾಂತ ಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿ
ರ್ದರು ನೋಡಾ ಸಂಗನಬಸವೇಶ್ವರಾ.

ಲಿಂಗಾಯತ ದೀಕ್ಷೆ.

೪೯. ಆಯ್ಯ ವಸವೀರಶೈವ ಷಟ್‌ಸ್ಥಲಾಚಾರ್ಯ ಘನಲಿಂಗ
ಚಕ್ರವರ್ತಿಯಪ್ಪ ಶ್ರೀಗುರುಲಿಂಗದೇವರು ತನ್ನ ತೊಡೆಯ ಮೇಲೆ
ಮೂರ್ತಗೊಂಡಿರುವ ಇಷ್ಟಲಿಂಗದೇವಂಗೆ ಪ್ರಾಣಲಿಂಗ ಭಾವಲಿಂಗ
ಸ್ವರೂಪವಾದ ಶರಣನ ಚಿದಂಗವೇ ನಿನಗೆ ನಿಜ ಮೋಕ್ಷನುಂದಿ
ರವೆಂದು ಅರುಹಿದ ಮೇಲೆ ನಿಮಿಷಾರ್ಧವಗಲಿದರೆ ನಮ್ಮ ಪ್ರಮಥ
ಗಣಾಚಾರಕ್ಕೆ ಹೊರಗು ಮಾಡಿ ಭವಕ್ಕೆ ನೂಂಕುವೆವೆಂದು ಪ್ರತಿಜ್ಞೆ
ಯನಿತ್ತು ಆ ಶರಣನ ಕರಸ್ಥಲಕ್ಕೆ ಪ್ರಾಣ ಕಳಾ ಚೈತನ್ಯ ಮೂರ್ತಿ ಲಿಂಗ
ದೇವನ ಮೂರ್ತವ ಮಾಡಿಸಿ ಆ ಲಿಂಗದೇವಂಗೆ ಪ್ರಮಥಗಣಾರಾಧ್ಯ
ಭಕ್ತ ಮಾಹೇಶ್ವರರೆಲ್ಲ ಅಭಯ ಹಸ್ತವನಿತ್ತು, ಆ ಮೇಲೆ ಚಿದಂಗ ಸ್ವರೂ
ಪವಾದ ಶರಣಂಗೆ ಈ ಲಿಂಗದೇವನ ನಿಮಿಷಾರ್ಧವಗಲಿದರೆ, ನಿನಗೂ
ಆದೇ ಪ್ರತಿಜ್ಞೆ ಬಂದೀತೆಂದು ಆಜ್ಞಾಪನವ ಮಾಡಿ ಹೃದಯ ಕಮಲ
ಮಧ್ಯದಲ್ಲಾಡುವ ಸಹಸ್ರ ಹೆಡೆಯ ಕುಂಡಲಿ ಸರ್ಪಂಗೆ ಮುಸುಕಿರುವ
ಅಜ್ಞಾನ ಮಾಯಾ ಮುರವೆಯನ್ನು ಅನಾಹತದ್ವಾರದಿಂದ ಅನಾದಿ ಮೂಲ
ಮಂತ್ರವನುಸುರಿ ಕುಂಡಲಿ ಸರ್ಪನ ಹೆಡೆ ಎತ್ತಿಸಿ ಚಿದಗ್ನಿಯ ಪುಟವ
ಮಾಡುವಂಥಾದ್ದೇ ಲಿಂಗಾಯತ ದೀಕ್ಷೆ ಇಂತುಟೆಂದು ಶ್ರೀಗುರು ನಿಃಕ
ಳಂಕ ಚನ್ನಬಸವ ರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತ
ಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಲಿಂಗಸ್ವಾಯತ ದೀಕ್ಷೆ.

೫೦. ಆಯ್ಯ ಘನ ಮಹಾ ಇಷ್ಟಲಿಂಗವೇ ನಿನ್ನ ನಾದಬಿಂದು
ಕಲಿಗಳಿಗೆ ಚೈತನ್ಯ ಸ್ವರೂಪು ನೋಡಾ. ಈ ಲಿಂಗದ ವೃತ್ತದಲ್ಲಿ ಸಕಲ
ಲೋಕಂಗಳು ಸಕಲ ನಾಮಗಳು ಅಡಗಿರ್ಪವು ನೋಡಾ. ಈ ಲಿಂಗವೇ
ನಿನ್ನ ಹರಣ ಕೆರಣ ಚೈತನ್ಯ ಸ್ವರೂಪು ನೋಡಾ. ಈ ಲಿಂಗವೇ
ಸಂಜೀವನ ಕಾಮುಧೇನು ಕಲ್ಪವೃಕ್ಷ ನೋಡಾ. ಇಂತು ನಿನ್ನ ಕರಸ್ಥ
ಲದಲ್ಲಿ ರಾಜಿಸುವ ಪರಶಿವಲಿಂಗದೇವಂಗೆ ಜಂಗಮ ಪಾದೋದಕ ಪ್ರಸಾ
ದವೇ ಪರಮ ಚಿದೈಶ್ವರ್ಯ ನೋಡಾ. ಇಂತು ಜಂಗಮಕ್ಕೆ ಭೃತ್ಯಾ
ಚಾರ ಮೂರ್ತಿಲಿಂಗದೇವನ ಒಕ್ಕುಮಿಕ್ಕ ಕರುಣಜಲ ಪ್ರಸಾದವೇ ನಿನ
ಗರ್ಪಿತವಯ್ಯ. ನಿನ್ನ ಪರಿಣಾಮ ಸಂತೋಷವೇ ಲಿಂಗಾರ್ಪಿತವಯ್ಯ.
ಇಂತಪ್ಪ ಲಿಂಗದೇವನ ನಿನ್ನ ಷಟ್‌ಸ್ಥಾನಂಗಳಲ್ಲಿ ಧರಿಸಿ, ಲಿಂಗವೇ
ನಿನಗೆ ಪ್ರಾಣವಾಗಿ ನೀನು ಲಿಂಗಕ್ಕೆ ಪ್ರಾಣವಾಗಿ ಸತ್ಯದಿಂದ ಬಂದ
ಪದಾರ್ಥವ ದಾಸೋಹಂ ಭಾವದಿಂದ ಸಮುದ್ರದುಕವ ಸಮುದ್ರಕ್ಕೆ
ಅರ್ಪಿಸಿದಂತೆ ಧಾನ್ಯದ ರಾಶಿಯ ಒಳಗಣ ಧಾನ್ಯವ ತಂದು ಪಾಕವ
ಮಾಡಿ ಮತ್ತಾ ರಾಶಿಗೆ ಅರ್ಪಿಸಿದಂತೆ ಆ ಲಿಂಗಜಂಗಮ ಪಾದೋದಕ
ಪ್ರಸಾದವ ಮತ್ತಾ ಲಿಂಗಜಂಗವುಕ್ಕೆ ಅರ್ಪಿಸಿ ಆ ಲಿಂಗಜಂಗಮದ ಪರಿ
ಣಾಮ ಪ್ರಸಾದದಲ್ಲಿ ನಿತ್ಯತೃಪ್ತನಾಗಿರುವಂಥಾದ್ದೇ ಲಿಂಗಸ್ವಾಯತ ದೀಕ್ಷೆ
ಇಂತುಟೆಂದು, ಶ್ರೀಗುರು ನಿಃಕಳಂಕ ಚನ್ನಬಸವರಾಜೇಂದ್ರನು ನಿರ್ಲಜ್ಜ
ಶಾಂತಲಿಂಗದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ
ಸಂಗನಬಸವೇಶ್ವರಾ.

ಇಂತು ಅನಾದಿ ಪರಶಿವಲಿಂಗವೇ ಪಾವನಾರ್ಥವಾಗಿ ದೀಕ್ಷಾಗುರು
ಲೀಲೆಯ ಧರಿಸಿ ಜ್ಞಾನೋದಯವಾಗಿ ಅಡಿಗೆರಗಿ ಬಂದ ಶಿಷ್ಯೋತ್ತ
ಮಂಗೆ ದಯಾನಂದ ಕರುಣ ಹುಟ್ಟಿ ಆತನ ಸ್ಥೂಲತನುವಿಗೆ ಇಷ್ಟಲಿಂಗ
ಸಂಬಂಧವ ಮಾಡಿ, ಎಲೆ ಶಿಷ್ಯೋತ್ತಮನೇ ನಿನ್ನ ಸರ್ವಾಂಗವೆಲ್ಲ
ಶುದ್ಧಪ್ರಸಾದವಾದ ಚಿದ್ಘನಮಯವೆಂದು ಅರುಪುವಂಥಾದ್ದೇ ಕ್ರಿಯಾ
ದೀಕ್ಷೆ ನೋಡಾ. ಇಂತು ಕ್ರಿಯಾದೀಕ್ಷೆಯಾದ ಮೇಲೆ, ಆ ದೀಕ್ಷಾ
ಗುರುವೇ ಶಿಕ್ಷಾಗುರು ಲೀಲೆಯ ಧರಿಸಿ, ಆ ಕ್ರಿಯಾದೀಕ್ಷೆಯಿಂದ ಶಿಷ್ಯೋ
ತ್ತಮಂಗೆ ಉಪದೇಶವ ಕರುಣಿಸುವ ಭೇದವೆಂತೆಂದೊಡೆ,

ಮಂತ್ರದೀಕ್ಷೆ

ಸಮಯದೀಕ್ಷೆ.

೫೧. ಏನಯ್ಯ ಬಸವ ಮೊದಲಾದ ಪ್ರಮಥಗಣಾರಾಧ್ಯರ ಸನ್ಮಾರ್ಗಾಚಾರಕ್ಕೆ ಧೃಡಚಿತ್ತದಿಂದ ನಿಂದು ನಿರಾಭಾರಿ ವೀರಶೈವ ಷಟ್ಸ್ಥಲ ಮಾರ್ಗದಲ್ಲಿ ಆಚರಿಸುವ ಶರಣಗಣಂಗಳಲ್ಲಿ ಪಂಚ ಸೂತಕಂಗಳ ಕಲ್ಪಿಸದೆ, ಭೃತ್ಯಾಚಾರ ಮುಂದುಗೊಂಡು ಅವರೊಕ್ಕುಮಿಕ್ಕುದ ಹಾರೈಸಿ, ನಿಜಭಕ್ತಿಯಲ್ಲಿ ನಿಂದು ಸನ್ಮಾರ್ಗಾಚಾರಕ್ಕೆ ಬಾರದಂಥ ಗುರುಚರ ಭಕ್ತಗಣ ಬಂಧುಬಳಕ ತಂದೆತಾಯಿ ಪುತ್ರಮಿತ್ರ ಕಳತ್ರ ಶಿಷ್ಯ ಮೊದಲಾಗಿ ತೃಣಕ್ಕೆ ಸಮಮಾಡಿ ತ್ಯಜಿಸಿ ಮನದ ಮಧ್ಯದಲ್ಲಿ ಹುಟ್ಟಿದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಂಗಳ ಬಲಿಗೆ ಶಿಲ್ಕದೆ ತ್ರಿಕರಣ ಪವಿತ್ರತೆಯಿಂದ ಅಷ್ಟಾವರಣವ ಸ್ತೋತ್ರವ ಮಾಡು ವಂಥಾದ್ದೇ ಸಮಯದೀಕ್ಷೆ ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನ ಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ನಿಸ್ಸಂಸಾರ ದೀಕ್ಷೆ.

೫೨. ಅಯ್ಯ ನಿನ್ನ ಸ್ವಾತ್ಮ ಜ್ಞಾನದಿಂದ ಶ್ರುತಿಗುರು ಸ್ವಾನು ಭಾವವಿಡಿದು ನಿನ್ನ ತನು ಮನ ಕರಣ ಇಂದ್ರಿಯಂಗಳ ಪರಿಪಕ್ವಮಾಡಿ ಆ ತನುಮನ ಇಂದ್ರಿಯಂಗಳಾಶ್ರಯಿಸಿದ ಆರ್ಥ ಪ್ರಾಣಾಭಿಮಾನಂಗಳ ಶ್ರೀಗುರುಲಿಂಗ ಜಂಗಮ ಭಕ್ತಮಹೇಶ್ವರ ಶರಣ ಗಣಂಗಳಿಗರ್ಪಿತವ ಮಾಡಿ ನಿರ್ಮಂಜಕ ಬುದ್ಧಿ ಮುಂದುಗೊಂಡು, ಅಷ್ಟವಿಧಾರ್ಚನೆ ಷೋಡ ಶೋಪಚಾರಂಗಳಿಂದ ಇಷ್ಟಲಿಂಗತೃಪ್ತಿಯ ಮಾಡಿ ಮಂತ್ರಧ್ಯಾನ ಜಪ ಸ್ತೋತ್ರಂಗಳಿಂದ ಪ್ರಾಣಲಿಂಗ ತೃಪ್ತಿಯ ಮಾಡಿ ಮನೋರ್ಲಯ ನಿರಂಜನ ಕ್ರಿಯೆಗಳಿಂದ ಭಾವಲಿಂಗ ತೃಪ್ತಿಯ ಮಾಡಿ ಗುರುಲಿಂಗ ಜಂಗಮ ಪಾದೋದಕ ಪ್ರಸಾದದಿಂದ ಮತ್ತಾ ಗುರುಲಿಂಗ ಜಂಗಮ ಭಕ್ತಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣೈಕ್ಯ ಮೊದಲಾದ ಮಹಾಪ್ರಮಥಗಣಂಗಳ ತೃಪ್ತಿಯ ಮಾಡಿ ತನಗೊಂದಾಶ್ರಯಂಗಳಿಲ್ಲದೆ ಚಿದ್ಘನ ಮಹಾಲಿಂಗ ದಲ್ಲಿ ಅವಿರಳಾನಂದದಿಂದ ಕೂಟಸ್ಥನಾಗಿರುವಂಥಾದ್ದೇ ನಿಃಸಂಸಾರ ದೀಕ್ಷೆ

ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ನಿರ್ವಾಣದೀಕ್ಷೆ.

೫೩. ಆಯ್ಯಾ, ಮರ್ತ್ಯದ ಮಧ್ಯದಲ್ಲಿ ಶ್ರೀಗುರು ಕರಜಾತನಾದ ಮೇಲೆ ಹೊನ್ನು, ಹೆಣ್ಣು, ಮಣ್ಣು, ಅನ್ನ, ನೀರು, ವಸ್ತ್ರ, ಆಭರಣ, ವಾಹನ, ಪುತ್ರ, ಮಿತ್ರ, ದಾರಿದ್ರ್ಯ, ಚಿಂತೆ, ಶತೃತ್ವಂಗಳ ಸಮಾನಂಗಂಡು ಲಿಂಗಾಣತಿಯಿಂದ ಉಪವಾಸ ತೃಪ್ತಿಗಳು ಬಂದು ತಟ್ಟಿದಲ್ಲಿ ಸಂತೃಪ್ತನಾಗಿ ಆಧಿವ್ಯಾಧಿಗಳು ಬಂದು ತಟ್ಟಿದಲ್ಲಿ ಪಾದೋದಕ ಪ್ರಸಾದದಲ್ಲಿ ಕೂಡಿಸಿ ಸಮಭಾಜನವ ಮಾಡಿ ಅಂಗಭೋಗೋಪಭೋಗಿಯಾಗಿ ಅವಿರಳಾನಂದದಿಂದ ಹಿಂದಣ ಪಾಪ ಮುಂದಣ ಪುಣ್ಯಗಳಿಗೆ ಹೊರಗಾಗಿ ಅವನು ತನ್ನೊಳಗು ಮಾಡಿಕೊಂಡು ಮನಬಯಕೆಯ ನೀಗಿ ಕಾಲಹರ ಕರ್ಮಹರ ದುರಿತಹರ ಪಾಪಹರ ಲೀಲೆಯಿಂದ ಮರ್ತ್ಯದಲ್ಲಿರ್ದು ಇಲ್ಲದಂತೆ ಸಚ್ಚಿದಾನಂದನಾಗಿ ಆಚರಿಸುವಂತಹ ನಿಜನೈಷ್ಠೆಯೇ ನಿರ್ವಾಣ ದೀಕ್ಷೆ ಇಂತುಟೆಂದು ಶ್ರೀಗುರು ನಿಃಕಳಂಕ ಪರಮಾನಂದ ಮೂರ್ತಿ ಚಿಕ್ಕದಂಡನಾಥ ಚನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ತತ್ವದೀಕ್ಷೆ.

೫೪. ಅಯ್ಯ, ಒಂದು ಅನಾದಿ ಮೂಲ ಪ್ರಣವವೇ ಸಾಕಾರ ಲೀಲೆಯ ಧರಿಸಿ ಚಿದಂಗ ಚಿದ್ಘನಲಿಂಗವಾಗಿ ಒಂದಂಗ ಲಿಂಗವೇ ತ್ರಿವಿಧಾಂಗ ತ್ರಿವಿಧ ಲಿಂಗವಾಗಿ, ಆ ತ್ರಿವಿಧಾಂಗ ಲಿಂಗಾಂಗವೇ ಷಡ್ವಿಧ ಲಿಂಗವಾಗಿ ಆ ಷಡ್ವಿಧ ಲಿಂಗಾಂಗವೇ ಮೂವತ್ತಾರು ಲಿಂಗಾಂಗವಾಗಿ, ಆ ಮೂವತ್ತಾರು ಲಿಂಗಾಂಗಗಳನೇ ಶ್ರದ್ಧಾದಿ ಮೂವತ್ತಾರು ಭಕ್ತಿಗಳಲ್ಲಿ ಕೂಟವ ಮಾಡಿ ಇಂತು ಲಿಂಗಾಂಗ ಭಕ್ತಿಗಳಿಗೆ ಸತ್ಕ್ರಿಯಾ, ಸಮ್ಯಜ್ಞಾನ, ಸತ್ಕಾಯಕ, ಸತ್ಪಾತ್ರ ಭಿಕ್ಷದಲ್ಲಿ ಸಮರಸ ಮಾಡಿ, ಆ ಮಹಾಜ್ಞಾನವ ಸಾಧಿಸಿ ಆ ಮಹಾಜ್ಞಾನದ ಬಲದಿಂದ ಪೃಥ್ವೀ ತತ್ವ ಸಂಬಂಧವಾದ ಕರ್ಮೇಂದ್ರಿಯಂಗಳು, ಅಪ್ಪು ತತ್ವ ಸಂಬಂಧವಾದ ಜ್ಞಾನೇಂದ್ರಿಯಂಗಳು, ಅಗ್ನಿತತ್ವ ಸಂಬಂಧವಾದ ವಿಷಯೇಂದ್ರಿಯಂಗಳು,

ವಾಯುತತ್ವ ಸಂಬಂಧವಾದ ಪ್ರಾಣವಾಯುಗಳು, ಭಾನುತತ್ವ ಸಂಬಂಧವಾದ ಉದರವೆಂಬ ಭೂತಗಳು. ಶಿವತತ್ವ ಸಂಬಂಧವಾದ ಶ್ವೇತವರ್ಣ ಮೊದಲಾದ ವರ್ಣಂಗಳು, ಆತ್ಮತತ್ವ ಸಂಬಂಧವಾದ ಸಮಸ್ತನಾದಗಳು, ಇಂತುಸಮಸ್ತ ತತ್ವಂಗಳು ಕೂಡಲಾಗಿ ನಾಲ್ವತ್ತು ತತ್ವವೆನಿಸುವವು. ಈ ತತ್ವಂಗಳ ಶಿವತತ್ವ, ಅನಾದಿ ಶಿವತತ್ವ, ನಿಃಕಲಪರಶಿವತತ್ವ, ಅನಾದಿ ನಿಃಕಲ ಪರಾತ್ಪರ ಶಿವತತ್ವವೆಂಬ ಚತುರ್ವಿಧ ತತ್ವಸ್ವರೂಪ ಗುರುಲಿಂಗ ಜಂಗಮವ ಕೂಡಿಸಿ ಆ ಮಹಾಜ್ಞಾನದಿಂದ ನೋಡಿದಲ್ಲಿ ಳಳ ತತ್ವಸ್ವರೂಪಿನಿಂದ ಒಂದು ಚಿದಂಗವೆನಿಸುವುದಯ್ಯ. ಆ ಚಿದಂಗ ಷಟ್‌ಚಕ್ರಂಗಳಲ್ಲಿ ಶ್ರೀಗುರುಲಿಂಗ ಜಂಗಮ ಕೃಪೆಯಿಂದ ಮೂರ್ತಿಗೊಂಡಿರುವ ೫೬ ಪ್ರಣವಂಗಳೇ ಸಾಕಾರ ಲೀಲೆಯ ಧರಿಸಿ ನಾನಾಕೃತಿ ಸಂಬಂಧವಾದ ಅನಾದಿ ಮೂಲಪ್ರಣಮವ ಕೂಡಿ ಏಕ ಸ್ವರೂಪಿನಿಂದ ೫೭ ಲಿಂಗಸ್ವರೂಪ ಪ್ರಣಮವನೊಳಕೊಂಡು ಒಂದು ಚಿದ್ಘನ ಲಿಂಗವೆನಿಸುವುದಯ್ಯ. ಇಂತು ಅಂಗಲಿಂಗವೆಂಬ ನೂರೊಂದುಸ್ಥಲ ಕುಲಂಗಳ ವಿಚಾರಿಸಿ ಶರಣರೂಪಿಂದ ತನ್ನಾದಿ ಮಧ್ಯಾವಸಾನವನು ತಿಳಿದು, ಕರ್ತೃ ಭೃತ್ಯತ್ವವ ವಿಚಾರವರಿದು ದ್ವಾದಶಾಚಾರದ ಮರ್ಮವನರಿದು ಕರ್ತೃಭೃತ್ಯತ್ವ ಆಚಾರ ಸಚ್ಚಕ್ತಿ ಎಂಬ ನಿಜ ಸಮಾಧಿಯಲ್ಲಿ ನಿರವಯಲ ಕೂಡುವಂಥಾದ್ದೇ ತತ್ವದೀಕ್ಷೆ ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಅಧ್ಯಾತ್ಮದೀಕ್ಷೆ.

೫೫. ಅಯ್ಯ, ನಿನ್ನ ಷಟ್‌ಚಕ್ರಂಗಳಲ್ಲಿ ಅನಾದಿ ನಿಃಕಳಂಕ ಚಿದ್ಘನ ಇಷ್ಟಮಹಾಲಿಂಗವೇ ಷಡ್ವಿಧಲಿಂಗವಾಗಿ ನೆಲಸಿರ್ಪರು ನೋಡಾ. ಅದೆಂತೆಂದೊಡೆ, ಆಧಾರಚಕ್ರ ನಾಲ್ಕೆಸಳ ಮಧ್ಯದಲ್ಲಿ ನಕಾರ ಮಂತ್ರ ಮೂರ್ತಿ ಆಚಾರಲಿಂಗವಾಗಿ ನೆಲಸಿರ್ಪರು ನೋಡಾ. ಸ್ವಾಧಿಷ್ಠಾನ ಚಕ್ರ ಆರೆಸಳ ಮಧ್ಯದಲ್ಲಿ ಮಕಾರ ಮಂತ್ರ ಮೂರ್ತಿ ಗುರುಲಿಂಗವಾಗಿ ನೆಲಸಿರ್ಪರು ನೋಡಾ. ಮಣಿಪೂರಕ ಚಕ್ರದ ಹತ್ತೆಸಳ ಮಧ್ಯದಲ್ಲಿ ಶಿಕಾರ ಮಂತ್ರ ಮೂರ್ತಿ ಶಿವಲಿಂಗವಾಗಿ ನೆಲಸಿರ್ಪರು ನೋಡಾ. ಅನಾಹತ ಚಕ್ರದಲ್ಲಿ ಹನ್ನೆರಡೆಸಳಿನ ಮಧ್ಯದಲ್ಲಿ ವಕಾರಮಂತ್ರ ಮೂರ್ತಿ ಜಂಗಮಲಿಂಗವಾಗಿ ನೆಲಸಿರ್ಪರು ನೋಡಾ. ವಿಶುದ್ಧಿ ಚಕ್ರ ಹದಿನಾರೆಸಳ

ಮಧ್ಯದಲ್ಲಿ ಯಕಾರ ಮಂತ್ರ ಮೂರ್ತಿ ಪ್ರಸಾದಲಿಂಗವಾಗಿ ನೆಲಸಿರ್ಪರು ನೋಡಾ. ಆಜ್ಞಾ ಚಕ್ರದ ಎರಡೆಸಳ ಮಧ್ಯದಲ್ಲಿ ಓಂಕಾರಮಂತ್ರ ಮೂರ್ತಿ ಮಹಾಲಿಂಗವಾಗಿ ನೆಲಸಿರ್ಪರು ನೋಡಾ. ಇಂತು ನಿನ್ನ ಷಟ್‌ಚಕ್ರ ಮಧ್ಯಂಗಳಲ್ಲಿ ನೆಲಸಿ ನಿನ್ನ ಷಡ್ವಿಧಯೋಗಂಗಳ ಕೈಕೊಂಡು ಆ ಪರಿಣಾಮವ ನಿನಗೆ ಸಂತೃಪ್ತಿಯ ಮಾಡಿ ಶರಣಪತಿ ಲಿಂಗಪತಿ ಭಾವದಿಂದೆ ಮೇಲುಗಿರಿ ಮಂಟಪದ ನವರತ್ನಖಚಿತ ಸಹಸ್ರದಳ ಪದ್ಮಯುಕ್ತವಾದ ಪರ್ಯಂಕದ ಮೇಲೆ ಲಿಂಗಾನುಭಾವ ರತಿಸುಖಾನಂದದಿಂ ಕೋಭಿಸುವಂಥಾದ್ದೇ ಆಧ್ಯಾತ್ಮದೀಕ್ಷೆ ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಅನುಗ್ರಹದೀಕ್ಷೆ.

೫೬. ಅಯ್ಯ ನಿನ್ನ ಚಿದಂಗದ ಷಟ್‌ಸ್ಥಾನಂಗಳಲ್ಲಿ ೨೫ ತತ್ವಗಳಡಗಿರ್ಪವಯ್ಯ. ಚಿದ್ಘನಲಿಂಗದ ಷಟ್‌ಸ್ಥಾನಂಗಳಲ್ಲಿ ೧೮ ತತ್ವಂಗಳಡಗಿರ್ಪವಯ್ಯ. ಆ ಚಿದಂಗ ಚಿದ್ಘನಲಿಂಗದ ಮಧ್ಯದಲ್ಲಿ ಬೆಳಗುವ ಅಖಂಡ ಜ್ಯೋತಿ ಪ್ರಣವದ ಷಟ್‌ಸ್ಥಾನದಲ್ಲಿ ಅಷ್ಟವಿಧ ತತ್ವಂಗಳಡಗಿರ್ಪವಯ್ಯ. ಆ ತತ್ವಂಗಳ ವಿಭಾಗವೆಂತೆಂದರೆ, ಪೃಥ್ವಿತತ್ವ ೨೫, ಅಪ್ಪುತತ್ವ ೨೦, ಅಗ್ನಿತತ್ವ ೧೫, ವಾಯುತತ್ವ ೮೦, ಆಕಾಶತತ್ವ ೫ ಇಂತು ೭೫ ತತ್ವಂಗಳು ಆತ್ಮತತ್ವ ಒಂದರಲ್ಲಿ ಅಡಗಿ, ಇಂಥ ಅನಂತಾನಂತಾತ್ಮರು ಔದುಂಬುರ ವೃಕ್ಷಕ್ಕೆ ಫಲ ತೊಂತಿದೋಪಾದಿಯಲ್ಲಿ ಆ ಚಿದಂಗಕ್ಕೆ ಅನಂತಾತ್ಮ ತತ್ವಂಗಳು ತೊಂತಿಕೊಂಡಿರ್ಪವು ನೋಡಾ. ಅಂಥ ಚಿದಂಗ ೧೮ ಪ್ರಣವ ರೂಪಿನಿಂದ ಚಿದ್ಘನಲಿಂಗವನಾಶ್ರಯಿಸಿರ್ಪರು ನೋಡಾ. ಆ ಚಿದ್ಘನ ಲಿಂಗವು ಅಷ್ಟವಿಧಸಕೀಲಗಳಿಂದ ಅಖಂಡ ಮಹಾಜ್ಯೋತಿ ಪ್ರಣವವನಾಶ್ರಯಿಸಿರ್ಪುದು ನೋಡಾ. ಇಂತು ನೂರೊಂದು ಸಕೀಲಂಗಳ ತತ್ವದ ರೂಪಿನಿಂದ ತಿಳಿದು, ಇಂತು ಅಂಗ ಲಿಂಗ ಸಂಗದಲ್ಲಿ ಅಡಗಿರುವ ನೂರೊಂದು ಸಕೀಲಂಗಳ ನೂರೊಂದು ಸ್ಥಲದಲ್ಲಿ ನೆಲೆಗೊಳಿಸಿ ಪರತತ್ವ ಲಿಂಗಲೀಲೆಯಿಂದ ನಿಂದ ನಿಲುಕಡೆಯೆ ಅನುಗ್ರಹ ದೀಕ್ಷೆ ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಸತ್ಯಶುದ್ಧದೀಕ್ಷೆ.

೫೭. ಅಯ್ಯ ಸತ್ತು ಚಿತ್ತಾನಂದ ನಿತ್ಯಪರಿಪೂರ್ಣವೆಂಬ ಪಂಚಾಗವನಂಗೀಕರಿಸಿಕೊಂಡಿರುತ್ತಿಹ ಪರಬ್ರಹ್ಮದಲ್ಲಿ ಸಮರಸ ಸಂಗದಿಂದ ಕೂಟವ ಮಾಡಿ ಅವಿರಳ ಪರಂಜ್ಯೋತಿ ಸ್ವರೂಪ ಶರಣನ ನಿಲುಕಡೆ ಎಂತೆಂದೊಡೆ, ಅಣುಮಾತ್ರ ಸತ್ಯ ನಡೆನುಡಿ ತೊಲಗನಯ್ಯ. ದೃಷ್ಟ ಚಿತ್ತದಿಂದ ಕೊಟ್ಟ ಭಾಷೆಗಳ ಬಿಡನು. ಮನದ ಸಂಗವ ಮಾಡಿ ಹುಸಿ ನುಡಿಯ ನುಡಿಯನಯ್ಯ. ನಿಜ ನೈಷ್ಠಾ ಪರತ್ವದಿಂದ ಸತ್ಯಾಯಕ್ಕ ಸತ್ಪಾತ್ರಭಕ್ತಿ, ಸತ್ಕ್ರಿಯೆ ಜ್ಞಾನಾಚಾರಂಗಳ ಅವರಂತರದಲ್ಲಿ ನಿಂದಿಕುಂದು ದರಿದ್ರ ರೋಗ ರುಜೆ ವಿಪತ್ತು ಹಾಸ್ಯರೋಷಂಗಳು ಬಂದು ತಟ್ಟಿದಲ್ಲಿ ಶ್ರೀಗುರುಲಿಂಗ ಜಂಗಮದ ಕರುಣಾಕಟಾಕ್ಷೆಯಿಂದ ಬಂದ ಮಹಾಪ್ರಸಾದವೆಂದು ಲಿಂಗಭೋಗಿಯಾಗಿರುವನಲ್ಲದೆ ಶೈವ ಜಡಕರ್ಮ ಭೂತ ಪ್ರಾಣಿಗಳಂತೆ ಸತ್ಪಾಯಕ ಸತ್ಪಾತ್ರಭಕ್ತಿ ಸತ್ಕ್ರಿಯೆ ಜ್ಞಾನಾಚಾರಂಗಳ ನಿಮಿಷಾರ್ಧವಗಲುವನಲ್ಲ ನೋಡಾ. ಕುಲಛಲಕ್ಕಾದೊಡೆ ಶಿವಶರಣರಲ್ಲಿ ಜಾತಿಸೂತಕವ ಬಳಸದೆ ದುಷ್ಪ ಕಾಯಕ ಅಪಾತ್ರಭಕ್ತಿ ಅಕ್ರಿಯಾಜ್ಞಾನ ಅನಾಚಾರಂಗಳನನುಕರಿಸಿ ಉದರಪೋಷಣಕ್ಕೆ ಲಾಂಛನದಿಚ್ಛೆಗೆ ನುಡಿದು ಸಮಪಜ್ಞಾಯ ಮಾಡದೆ ಪರಮಾನಂದ ಸುಖಾಬ್ಧಿಯಲ್ಲಿ ಮುಳುಗಿ ಅಷ್ಟಾವಧಾನ ಎಚ್ಚರಗುಂದದೆ ಮನ ಪ್ರಾಣ ಲಿಂಗವಾದುದೀಗ ಸತ್ಯ ಶುದ್ಧದೀಕ್ಷೆ ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಅಯ್ಯ, ಇಂತು ಶಿಕ್ಷಾ ಗುರುದೇವನು ಅನಾದಿ ಶಿಷ್ಯೋತ್ತಮನ ಸೂಕ್ಷ್ಮತನುವಿನಲ್ಲಿ ೩೭ ಪ್ರಣವ ಸ್ವರೂಪವಾದ ಪ್ರಾಣಲಿಂಗವ ಸಂಬಂಧಿಸಿ ಆ ಪ್ರಾಣಲಿಂಗಕ್ಕೆ ಹರಣಕಿರಣ ಚೈತನ್ಯ ಸ್ವರೂಪ ನಿಃಕಳಂಕ ಜಂಗಮವ ತೋರಿ ಆ ಜಂಗಮದ ಚರಣಸೋಂಕಿನಿಂ ಪವಿತ್ರವಾದ ಕ್ರಿಯಾಧಿಷ್ಠಿತ ರುದ್ರಾಕ್ಷಿ ಮಹಾಮಂತ್ರಂಗಳನರುಹಿ, ದಶವಿಧಪಾದೋದಕ, ಏಕಾದಶ ಪ್ರಸಾದವ ಕರುಣಿಸಿ, ಎಲೇ ಶಿಷ್ಯೋತ್ತಮನೇ ನಿನ್ನ ಮನ ಮೊದಲಾದ ಕರಣಂಗಳೆಲ್ಲ ಸಿದ್ಧಪ್ರಸಾದವಾದ ಪ್ರಾಣಲಿಂಗಮಯವಾದುದೆಂದು ಅರುಪುವಂಥಾದ್ದೇ ಕ್ರಿಯಾದೀಕ್ಷೆಯ ಪಡೆದ ಚಿದಂಗ ಚಿದ್ಘನ ಇಷ್ಟಮಹಾಲಿಂಗದೊಳಗಣ ಚಿತ್ಪ್ರಾಣಾಂಗ, ಚಿತ್ಪ್ರಾಣ ಲಿಂಗಕ್ಕೆ ಮಂತ್ರ

ದೀಕ್ಷೆ ಇಂತುಟು ನೋಡಾ. ಇಂತು ಕ್ರಿಯಾದೀಕ್ಷೆ ಮಂತ್ರದೀಕ್ಷೆ ತೀರಿದ ಮೇಲೆ ಆ ದೀಕ್ಷಾಗುರು ಶಿಕ್ಷಾಗುರುವೇ ಜ್ಞಾನಗುರುತ್ವದ ಲೀಲೆಯ ಧರಿಸಿ ಮತ್ತು ಶಿಷ್ಯೋತ್ತಮಂಗೆ ಉಪದೇಶವ ಕರುಣಿಸುವ ಭೇದವೆಂತೆಂದೊಡೆ:-

---

ವೇಧಾದೀಕ್ಷೆ.

ಏಕಾಗ್ರಚಿತ್ತದೀಕ್ಷೆ.

೫೮. ಪರಮಪತಿವ್ರತೆ ಹರಗಣ ಸಾಕ್ಷಿಯಾಗಿ ಕಂಕಣವ ಕಟ್ಟಿದ ಪುರುಷಂಗೆ ತನ್ನ ತನುಮನವ ಮೀಸಲು ಮಾಡಿ ತನ್ನ ಪಿತಮಾತೆ ಬಂಧುಬಳಗ ಒಡಹುಟ್ಟಿದವರು ಮೊದಲಾಗಿ ಪರಶಿವಲಿಂಗ ಜಂಗಮ ತೀರ್ಥಪ್ರಸಾದ ಪುತ್ರಮಿತ್ರರ ಸಂಗವ ಸೋಂಕದೆ ಅವರೊಡವೆಗಿಚ್ಛೈಸಿ ನಡೆನುಡಿಗಳಾಲಿಸದೆ ತನ್ನ ರಮಣನ ದ್ರವ್ಯಾಭರಣವ ಹಾರೈಸಿ ಆತನು ನುಡಿದ ನುಡಿಯೇ ಮಹಾಪ್ರಸಾದವೆಂದು ಪ್ರತಿನುಡಿಯ ನುಡಿಯದೆ ಸರ್ವಾವಸ್ಥೆಯಲ್ಲಿ ಆ ರಮಣನ ರತಿ ಸಂಯೋಗಾನುಸಂಧಾನದಿಂದ ಎರಡಳಿದಿರುವ ಸತ್ಯಾಂಗನೆಯಂತೆ ಶ್ರೀಗುರುವಿನ ಕರಗರ್ಭ ಮಧ್ಯದಲ್ಲಿ ಜನಿತವಾದ ಲಿಂಗಭಕ್ತಿ ಸತಿ ಸುತ ಪಿತ ಮಾತೆ ಬಂಧುಬಳಗ ಒಡಹುಟ್ಟಿದವರು ಮೊದಲಾಗಿ ಪರಶಿವಲಿಂಗ ಜಂಗಮತೀರ್ಥ ಪ್ರಸಾದ ಮಂತ್ರದಲ್ಲಿ ಮನಮುಳುಗಿ ಲೋಕದ ಶೈವ ಮಾರ್ಗಗಳಂತೆ ಹಲವು ಕ್ಷೇತ್ರ ಹಲವು ತೀರ್ಥ ಹಲವು ನೇಮ ವ್ರತಂಗಳಿಗೆ ಅಡಿ ಇಡದೆ ಕಾಯಕ ವಾಚಕ ಮಾನಸ ಮೊದಲಾದ ಸಮಸ್ತ ತತ್ವಂಗಳ ಸ್ವಪಾಕವ ಮಾಡಿ ನಿಃಕಳಂಕ ಪರಶಿವಲಿಂಗ ಜಂಗಮಕ್ಕೆ ಸಮರ್ಪಿಸಿ ಅವರೊಕ್ಕು ಮಿಕ್ಕ ಹರ್ಷಾನಂದ ಮಹಾಪ್ರಸಾದದಲ್ಲಿ ಸಂತೃಪ್ತನಾಗಿ ಇಷ್ಟಲಿಂಗ ಬಾಹ್ಯವಾದ ಜಡಶೈವ ನಡೆನುಡಿಗಳಾಲಿಸದಿರ್ಪುದೇ ಏಕಾಗ್ರ ದೀಕ್ಷೆ ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ದೃಢವ್ರತ ದೀಕ್ಷೆ.

೫೯. ಅಯ್ಯ, ಸತ್ಯ ಸದಾಚಾರ ಲಿಂಗವ ಧರಿಸಿದ ಲಿಂಗಭಕ್ತಂಗೆ ದೀಕ್ಷಾ ಗುರುವೇ ಕುಲದೈವ, ಶಿಕ್ಷಾಗುರುವೇ ಮನೆದೈವ, ಜ್ಞಾನ

ಗುರುವೇ ಮನ ಮಧ್ಯದಲ್ಲಿ ಬೆಳಗುವ ಪರಂಜ್ಯೋತಿರ್ಲಿಂಗವೆಂದು ಕುಲ ತುಂಬಿ ಮನೆ ತುಂಬಿ ಮನ ತುಂಬಿ ಮತ್ತೊಂದು ಇತರ ವಾದಿಗಳಂತೆ ಅನ್ಯಾರ್ಚನೆ ಅನ್ಯಶಾಸ್ತ್ರ ಅನ್ಯಮಂತ್ರ ಅನ್ಯಪಾಕವ ಮುಟ್ಟದೆ ಸ್ವಪಾಕವ ಮಾಡಿ ಹರಗಣ ಗುರು ಚರಪದಕ್ಕೆ ಸಮರ್ಪಿಸಿ ಬಂದ ಬರವ ನಿಂದ ನಿಲುಕಡೆಯ ತಿಳಿದು ತನುವೆಲ್ಲ ದೀಕ್ಷಾಗುರುವಿನ ದೀಕ್ಷಾ ಪಾದೋದಕ ಶುದ್ಧ ಪ್ರಸಾದವೆಂದರಿದ ನಿಜವೇ ಆದಿ ಪ್ರಸಾದಿಸ್ಥಲ ನೋಡಾ. ಮನವೆಲ್ಲ ಶಿಕ್ಷಾಗುರುವಿನ ಶಿಕ್ಷಾಪಾದೋದಕ ಸಿದ್ಧಪ್ರಸಾದವೆಂದರಿದ ನಿಜವೇ ಅಂತ್ಯ ಪ್ರಸಾದಿ ನೋಡಾ. ಭಾವವೆಲ್ಲ ಜ್ಞಾನ ಗುರುವಿನ ಜ್ಞಾನ ಪಾದೋದಕ ಪ್ರಸಿದ್ಧ ಪ್ರಸಾದವೆಂದರಿದ ನಿಜನೈಷ್ಠೆಯೇ ಸೇವ್ಯ ಪ್ರಸಾದಿ ನೋಡಾ. ಇಂತು ದೀಕ್ಷಾ ಗುರು ಶಿಕ್ಷಾಗುರು ಜ್ಞಾನಗುರು ಸ್ವರೂಪವಾದ ಲಿಂಗಜಂಗಮದ ಪಾದೋದಕ ಪ್ರಸಾದ ಒದವಿದಲ್ಲಿ ಆಚರಣೆ ಸಾಮಾನ್ಯದಲ್ಲಿ ಸಂಬಂಧವಿಟ್ಟುಕೊಂಡು ಕೊಟ್ಟು ಕೊಳಬಲ್ಲಾತನೇ ನಿಷ್ಠ ಪ್ರಸಾದಿಯಯ್ಯ. ಲಿಂಗಜಂಗಮದ ಪ್ರಸನ್ನ ಪಾದೋದಕ ಪ್ರಸಾದವ ನುಳಿದು ಜಂಗಮಲಿಂಗದ ಪ್ರಸನ್ನ ಪಾದೋದಕ ಪ್ರಸಾದವ ದಿವಾ ರಾತ್ರಿಗಳಿನ್ನದೆ ಆಚರಣೆಯೇ ಪ್ರಾಣವಾಗಿ ಕೊಟ್ಟು ಕೊಳಬಲ್ಲಾತನೇ ಅಜ್ಞ ಪ್ರಸಾದಿಯಯ್ಯ. ಇವರಿಬ್ಬರಲ್ಲಿ ಅತಿ ಭೃತ್ಯನಾಗಿ ಇವರಿಬ್ಬರಾಚರಣೆಯಲ್ಲಿ ದೃಢಚಿತ್ತದಿಂದ ಕೊಟ್ಟು ಕೊಳಬಲ್ಲಾತನೆ ಸಮಯ ಪ್ರಸಾದಿ ನೋಡಾ. ಇಂತು ಸರ್ವಾಚಾರ ಸಂಪತ್ತಿನಾಚರಣೆಯ ಸಾಕಾರ ಲೀಲೆ ಅರ್ಪಿತಾವಧಾನ ಜೀತನ ಪರಿಯಂತರವು ಆಚರಿಸುವಂಥಾದ್ದೇ ದೃಢ ವ್ರತ ದೀಕ್ಷೆ ಇಂತಿಟಿಂದು ಶ್ರೀಗುರು ನಿಃಕಳಂಕ ಚನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಪಂಚೇಂದ್ರಿಯಾರ್ಪಿತ ದೀಕ್ಷೆ.

೬೦. ಅಯ್ಯಾ, ಶರಣಸತಿ ಲಿಂಗಪತಿ ಭಾವದಿಂದ ಸುಚಿತ್ತ ಸುಬುದ್ಧಿ ನಿರಹಂಕಾರ ಸುಮನ ಸುಜ್ಞಾನ ಸದ್ಭಾವ ನಿರುಪಾಧಿಕ ನಿಃಕಳಂಕ ನಿರಾಲಂಬವೆಂಬ ನವವಿಧ ಹಸ್ತಂಗಳಿಂದ ನವವಿಧ ಪದಾರ್ಥವನ್ನು ಇಷ್ಟ ಪ್ರಾಣಭಾವಲಿಂಗ ಆಚಾರ ಗುರುಲಿಂಗ ಜಂಗಮ ಪ್ರಸಾದಲಿಂಗ ಮಹಾಲಿಂಗವೆಂಬ ನವವಿಧ ಲಿಂಗಂಗಳಿಗೆ ಶ್ರದ್ಧಾಭಕ್ತಿ ಮೊದಲಾಗಿ ನವವಿಧ ಭಕ್ತಿಗಳಿಂದ ಸಮರ್ಪಿಸುವ ಕ್ರಮವೆಂತೆಂದೊಡೆ, ತನು ಸಂಬಂಧವಾದ ರೂಪು ಪದಾರ್ಥವನ್ನು ಇಷ್ಟಲಿಂಗಕ್ಕೆ ಸಮರ್ಪಿಸಿ, ಮನಸಂಬಂಧವಾದ ರುಚಿಪದಾರ್ಥವನ್ನು ಪ್ರಾಣಲಿಂಗಕ್ಕೆ ಸಮರ್ಪಿಸಿ, ಧನಸಂಬಂಧವಾದ ತೃಪ್ತಿ ಪದಾರ್ಥವನ್ನು ಭಾವಲಿಂಗಕ್ಕೆ ಸಮರ್ಪಿಸಿ, ಸುಗಂಧ ಪದಾರ್ಥವನ್ನು ಆಚಾರಲಿಂಗಕ್ಕೆ ಸಮರ್ಪಿಸಿ, ಸುರಸ ಪದಾರ್ಥವನ್ನು ಗುರುಲಿಂಗಕ್ಕೆ ಸಮರ್ಪಿಸಿ, ಸುರೂಪ ಪದಾರ್ಥವನ್ನು ಶಿವಲಿಂಗಕ್ಕೆ ಸಮರ್ಪಿಸಿ, ಸುಸ್ಪರ್ಶನ ಪದಾರ್ಥವನ್ನು ಜಂಗಮಲಿಂಗಕ್ಕರ್ಪಿಸಿ, ಸುಶಬ್ದ ಪದಾರ್ಥವನ್ನು ಪ್ರಸಾದಲಿಂಗಕ್ಕೆ ಸಮರ್ಪಿಸಿ, ಸುತೃಪ್ತಿ ಪದಾರ್ಥವನ್ನು ಮಹಾಲಿಂಗಕ್ಕೆ ಸಮರ್ಪಿಸಿ, ಘ್ರಾಣ, ಜಿಹ್ವೆ, ನೇತ್ರ, ತ್ವಕ್ಕು, ಶ್ರೋತ್ರ, ಹೃದಯಂಗಳು ಮೊದಲಾದ ಸಮಸ್ತ ಮುಖಂಗಳಲ್ಲಿ ಬರುವ ಪದಾರ್ಥಂಗಳ ಸಮಸ್ತಲಿಂಗಂಗಳಿಗೆ ವಿಶ್ರಾವಿಶ್ರಂಗಳೊಡನೆ ಸಮರ್ಪಿಸಿ, ಆ ಲಿಂಗಂಗಳ ಸಂತೃಪ್ತಿ ಪರಿಣಾಮ ಪ್ರಸಾದದಲ್ಲಿ ಲೋಲುಪ್ತರಾಗಿ ಇರುವಂಥಾದ್ದೇ ಪಂಚೇಂದ್ರಿಯಾರ್ಪಿತ ದೀಕ್ಷೆ ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಅಹಿಂಸಾ ದೀಕ್ಷೆ.

೬೧. ಅಯ್ಯಾ, ಶ್ರೀಗುರುಲಿಂಗ ಜಂಗಮದ ಕರುಣಾಕಟಾಕ್ಷೆಯಿಂದುತ್ಪತ್ಯವಾಗಿ ನಿರ್ಮಾಯ ಕಂಥೆಯ ಧರಿಸಿದ ಶಿವಶರಣಂಗೆ ಅನಂತ ಲೀಲೆಯಲ್ಲಿ ಬೆಂಬತ್ತಿ ಬಂದ ಮಹಾಪಾಪವೇ ಒಂದು ರೂಪಾಗಿ ಮಾಯಾ ಜಡ ಜೀವ ಶರೀರವ ಧರಿಸಿ ಪರಿಪರಿಯಿಂದ ನಿಂದೆಕುಂದು ಅಪಮೃತ್ಯಗಳು ಬಂದು ತಟ್ಟಿದಲ್ಲಿ ಅರ್ಪಿತಾವಧಾನ ಸುಖ ದುಃಖಗಳು ಬಂದು ಸೋಂಕಲೊಡನೆ ಶಿವಶರಣನು ತನ್ನ ಸ್ವಾತ್ಮ ಜ್ಞಾನದಿಂದರಿದು ನೋಡಿದಲ್ಲಿ, ಈ ಮಾಯಾ ಜಡ ಜೀವಾತ್ಮರಿಗೆ ಸೂತ್ರಧಾರಿ ಶಿವನು ಕಪಟನಾಟಕ ಲೀಲೆಯ ಧರಿಸಿ ಸಕಲ ಜೀವಾತ್ಮರ ಮಧ್ಯದಲ್ಲಿ ಅಣುವಿಗಣುವಾಗಿ, ಮಹತ್ತಿಂಗೆ ಮಹತ್ತಾಗಿ ಆ ಜೀವನೆಂಬ ವಿಧಿಗೆ ಸ್ತುತಿನಿಂದೆ ಪುಣ್ಯಪಾಪ ಸಂಕಲ್ಪವಿಕಲ್ಪವೆಂಬ ಕುಟಿಲ ವ್ಯವಹಾರವ ಕಲ್ಪಿಸಿ ಆ ಜೀವನಿಂದ ಭಕ್ತಗಣಂಗಳಲ್ಲಿ ಅಷ್ಟಾವರಣದ ನಿಷ್ಠಾಪರತ್ವವ ನೋಡಬೇಕೆಂದು ಅನಂತ ಬಾಧೆಗಳಿಂದ ಬಾಧಿಸಿದಲ್ಲಿ ಶಿವಶರಣ ಗಣಂಗಳು ಆ ಬಾಧೆಗೆ ಅಳುಕದೆ ಚಿಂತಿಸದೆ ಅಷ್ಟಾವರಣಭರಿತ

ರಾಗಿ ದೇಹಾಭಿಮಾನದ ಹಸಿವು ತೃಷೆ ನಿದ್ರೆ ಆಲಸ್ಯ ಸಂಗವೆಂಬ ಕಾಲ ಕಾಮರ ಪಾಶದಲ್ಲಿ ಬೀಳದೆ ಭವಿಭಕ್ತನೆಂಬ ವಿಚಾರವನರಿಯದ ದುಷ್ಟರ ಕಂಡರೆ ದೂರದಲ್ಲಿರಬೇಕೆಂಬ ಗುರುವಾಕ್ಯವ ತಿಳಿದು ಅವರ ಸಂಭಾಷಣೆ ಸಂಸರ್ಗವ ಮಾಡದೆ ಅವರ ಸ್ತುತಿ ನಿಂದ್ಯಾದಿಗಳನಾಲಿಸದೆ ನಿಃಕಳಂಕ ಪರಬ್ರಹ್ಮ ಪರಶಿವಲಿಂಗದಲ್ಲಿ ಸದಾ ಸನ್ನಾರ್ಗಿಯಾಗಿ ಸುಸಂಗಿಗಳಿಂದ ಶ್ರದ್ಧಾತುರ ಪರಿಣಾಮದಲ್ಲಿ ಬಂದು ತಟ್ಟಿದ ಪರಿಣಾಮ ಪಾದೋದಕ ಪ್ರಸಾದದಲ್ಲಿ ಲೋಲುಪ್ತರಾಗಿ ತಮ್ಮ ನಡೆನುಡಿಗಳ ಸ್ವಾತ್ಮಜ್ಞಾನದಿಂದ ವಿಚಾರಿಸಿ ಪಕ್ವಮಾಡುವಂಥ ನಿಂದ ನಿಲುಕಡೆಯ ಅಹಿಂಸಾ ದೀಕ್ಷೆ ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮುಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಲಿಂಗನಿಷ್ಠಾ ದೀಕ್ಷೆ

೬೫. ಅಯ್ಯಾ, ಸತ್ಚಿತ್ಸಾನಂದ ನಿತ್ಯಪರಿಪೂರ್ಣ ಅವಿನಾಶ ಪರಂಜ್ಯೋತಿ ಸ್ವರೂಪ ಪರಮಾರಾಧ್ಯ ವೀರಶೈವಾಚಾರ ಷಟ್‌ಸ್ಥಲ ಪ್ರತಿಪಾದಕ ಶ್ರೀಗುರುಲಿಂಗ ಜಂಗಮ ಕರುಣಾ ಕಟಾಕ್ಷೆಯಿಂದ ಅಂಗ ಮನ ಭಾವಂಗಳೆಲ್ಲ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದ ಸ್ವರೂಪವಾದ ಇಷ್ಟ ಪ್ರಾಣ ಭಾವಲಿಂಗವಾದ ಮೇಲೆ ಭೃಂಗಿ ಕೀಡೆಯೋಪಾದಿಯಲ್ಲಿ ಗುರು ಲಿಂಗ ಜಂಗಮ ಬೇರೆ, ನಾನು ಬೇರೆಂಬ ಭಿನ್ನಭಾವವಳಿದು ಗುರು ಮಾರ್ಗಾಚಾರದಲ್ಲಿ ಪ್ರೇಮವುಳ್ಳಾತನಾಗಿ, ಜ್ಞಾತೃ ಜ್ಞಾನ ಜ್ಞೇಯವೆಂಬ ಅಷ್ಟಾಂಗಯೋಗ ಭ್ರಮಿತರಾದ ಜಡಕರ್ಮ ಶೈವ ಮಾರ್ಗದಲ್ಲಿ ಸಾಕ್ಷಾತ್ ಶಿವನೇ ಇಷ್ಟಲಿಂಗಧಾರಕನಾಗಿ ಗುರು ರೂಪವ ಧರಿಸಿ ಭವಿಭಕ್ತ ಮಾರ್ಗವ ತೋರಲೆ ಇಚ್ಛೆಯ ನುಡಿದು ಉದರವ ಹೊರೆವ ವೇಷವ ಕಂಡು ಶರಣೆಂದು ಮನ್ನಣೆಯ ಕೊಡದೆ ಭೂತ ಸೋಂಕಿದ ಮನುಜನೋಪಾದಿಯಲ್ಲಿ ತನ್ನ ಪವಿತ್ರ ಸ್ವರೂಪ ಪರತತ್ವ ಮಾರ್ಗ ಧ್ಯಾನದಿಂದ ಚಿದ್ಘನ ಲಿಂಗದೊಳಗೆ ತಾನಾಗಿ ತನ್ನೊಳಗೆ ಚಿದ್ಘನಲಿಂಗವಾಗಿ ಸಪ್ತಧಾತು ಸಪ್ತ ವ್ಯಸನಂಗಳಲ್ಲಿ ಕೂಡದೆ ಲಿಂಗವೇ ತಾನಾದ ಸ್ವಸ್ವರೂಪು ನಿಲುಕಡೆಯೇ ಲಿಂಗ ನಿಷ್ಠಾದೀಕ್ಷೆ ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮುಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಮನೋರ್ಲಯದೀಕ್ಷೆ

೬೫. ಅಯ್ಯ ಸತ್ಯ, ಸದಾಚಾರ, ಸದ್ಭಕ್ತಿ, ಜ್ಞಾನ, ವೈರಾಗ್ಯ, ಸಹ್ರಿಯೆ, ಸತ್ಕಾಯಕ, ಸತ್ಪಾತ್ರ ಭಿಕ್ಷೆಯ ಧರಿಸಿ ಲೋಕಪಾವನಾರ್ಥವಾಗಿ ಇಚ್ಛೆಯ ನುಡಿಯದೆ ನಡೆನುಡಿ ಹೀನರ್ಣಾದ ಸೂತಕ ಪಾತಕರ ಸಂಗವ ಹೊದ್ದದೆ ಗುರುಮಾರ್ಗಾಚಾರಕ್ಕೆ ಕುಂದುಕೊರತೆಗಳ ತಾರದೆ, ಸನ್ಮಾರ್ಗದಲ್ಲಾಚರಿಸಿ, ಗುರು ಲಿಂಗ ಜಂಗಮ ಸದ್ಭಕ್ತಿ ಚರಿತ್ರವುಳ್ಳ ಶಿವಶರಣಗಣಂಗಳಲ್ಲಿ ಕುಂದು ನಿಂದ್ಯಾದಿಗಳ ಕಲ್ಪಿಸಿದೆ ಎಚ್ಚರದಪ್ಪಿದಲ್ಲಿ ಬಹುಪರಾಕು ಸ್ವಾಮಿ ಶರಣಗಣಂಗಳು ಹೋದಮಾರ್ಗವಿದಲ್ಲವೆಂದು ಭೃತ್ಯಭಕ್ತಿಯಿಂದ ಹೇಳಿ, ಅಜ್ಞಾನ ಅಕ್ರಿಯೆ ಅನಾಚಾರವೆಂಬ ಮಾಯಾ ಶರಧಿಯಲ್ಲಿ ಮುಳುಗಿ ಹೋಗುವ ಇಷ್ಟಲಿಂಗಧಾರಕ ಭಕ್ತಗಣಂಗಳ ಕಂಡು ಅಸಗ ತನ್ನ ಮಡಿಮೈಲಿಗೆಯ ಹೊರುವ ಕತ್ತೆಯು ಜಿಹ್ವಾಲಂಪಟ ಗುಹ್ಯಾಲಂಪಟದಿಂದ ಹೋಗಿ ಹಳ್ಳಕೊಳ್ಳ ಕೆರೆಭಾವಿಯೊಳಗೆ ಬಿದ್ದು ಹೋಗುವುದ ಕಂಡು ಕಿವಿಯ ಹಿಡಿದು ಎಳೆದು ಕೊಂಡೊಯ್ವೋಪಾದಿಯಲ್ಲಿ ಹಸ್ತಪಾದ ಹಿಡಿಹಿಡಿದು ಕಡೆಗೆಳೆದು ಶ್ರುತಿಗುರು ಸ್ವಾನುಭಾವವ ತೋರಿ ಮತ್ತವರ ಕರುಣವ ಹಡೆದು ಏಕಮಾರ್ಗದಲ್ಲಾಚರಿಸಿ ನಿಃಕಲ ಪರಶಿವಲಿಂಗದಲ್ಲಿ ಶಿಖಿ ಕರ್ಪೂರದಂತೆ ರತಿಸಂಯೋಗವುಳ್ಳಂಥಾದ್ದೇ ಮನೋರ್ಲಯದೀಕ್ಷೆ ಇಂತುಟೆಂದು ಶ್ರೀಗುರು ನಿಃಕಳಂಕ ಮೂರ್ತಿ ಚನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮುಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಸದ್ಯೋನ್ಮುಕ್ತಿದೀಕ್ಷೆ

೬೬. ಅಯ್ಯಾ, ಶ್ರೀಗುರು ಲಿಂಗ ಜಂಗಮದ ಕರುಣಾಕಟಾಕ್ಷೆಯಿಂದ ಶ್ರುತಿಗರು ಸ್ವಾನುಭಾವವಿಡಿದು ಹಿಡಿದಂಥ ಸನ್ಮಾರ್ಗಾಚಾರ ಕ್ರಿಯೆಗಳಲಿ ಅಪಮೃತ್ಯು ಬಂದು ತಟ್ಟಿ ಪ್ರಾಣತ್ಯಾಗವ ಮಾಡಿದಡೂ ಅಂಜಿ ಅಳುಕದೆ ಪರಮ ಪತಿವ್ರತತ್ವದಿಂದೆ ಹಿಂದು ಮುಂದಣ ಪುಣ್ಯಪಾಪವನೆಣಿಸದೆ ಇಂತು ಶ್ರೀಗುರುವಾಕ್ಯ ನಿಜ ನೈಷ್ಠೆಯಿಂದರಿದು ನಿಜವೀರಶೈವ ಸದ್ಭಕ್ತಾಚಾರ ಲಿಂಗ ಮುಖದಿಂದ ಬಂದ ಪ್ರಪಾಕವಾದರೂ ಸರಿಯೇ ಭಕ್ತಾಶ್ರಯದಲ್ಲಿ ಪ್ರಪಾಕವ ಮಾಡಿ ಸಂಬಂಧಾಚರಣೆಗಳಿಂದ ಪವಿತ್ರ

ಸ್ವರೂಪ ಪಾದೋದಕ ಪ್ರಸಾದವೆನಿಸಿ ನಿರ್ವಂಚಕತ್ವದಿಂದ ಸಂಚಲ
ಚಿತ್ತವನಳಿದು ಮಂತ್ರಸ್ಮರಣೆಯಿಂದ ಸರ್ವಾಚಾರ ಸಂಪತ್ತಿನಾಚರ
ಣೆಯನೊಳಕೊಂಡು ಸಮಸ್ತಲೋಕ ಪಾವನ ಮೂರ್ತಿ ನಿಃಕಲ ಪರಶಿವ
ಲಿಂಗ ಜಂಗಮಕ್ಕೆ ಕೊಂಬ ಸದ್ಭಕ್ತ ಜಂಗಮದ ಚರಣಕಮಲ
ಧೂಳನವೇ ದ್ವಿತೀಯ ಕೈಲಾಸ ಶಿವಮಂದಿರವೆಂದು ಹಿಂದು ಮುಂದಣ
ಆಶೆ ಆಮಿಷದ ಭ್ರಾಂತು ಭ್ರಮೆಗಳನುಳಿದು, ಧ್ಯಾನ, ಮೌನ,
ನೇಮ, ನಿತ್ಯ, ಸತ್ಯ, ಸದ್ಭಾವವೆಂಬ ಷಡ್ಗುಣೈಶ್ವರ್ಯ ಸಂಪದವ ನಿಃಕಲ
ಪರತತ್ವ ಮೂರ್ತಿ ತಾನಾದ ನಿಜಮೋಕ್ಷದಿರವೇ ಸದ್ಯೋನ್ಮುಕ್ತಿದೀಕ್ಷೆ
ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನಬಸವ ರಾಜೇಂದ್ರನು ನಿರ್ಲಜ್ಜ
ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ
ಸಂಗನಬಸವೇಶ್ವರಾ.

೬೫. ಅಯ್ಯಾ ಇಂತು ಅನಾದಿ ವಸ್ತುವೇ ಗುರುಶಿಷ್ಯ, ಭಕ್ತಜಂ
ಗಮ, ಅಂಗಲಿಂಗ, ಶರಣಸತಿ ಲಿಂಗಪತಿಯೆಂಬ ಸಾಕಾರ ಲೀಲೆಯ
ಧರಿಸಿ ಅಪಿರಳಾನಂದ ವೇಧಾ ಮಂತ್ರ ಕ್ರಿಯಾದೀಕ್ಷೆಯುಕ್ತವಾದ ೨೧
ದೀಕ್ಷೆಯ ಭಿನ್ನವಿಲ್ಲದೆ ಸದ್ಗುರು ಮುಖದಿಂದರಿದು ಆಚರಿಸಬಲ್ಲಡೆ
ಸಹಜದೀಕ್ಷೆಯುಳ್ಳ ಶ್ರೀಗುರುಲಿಂಗಜಂಗಮ ಭಕ್ತ ಮಹೇಶ ಪ್ರಸಾದಿ
ಪ್ರಾಣಲಿಂಗಿ ಶರಣ ಐಕ್ಯ ನಿರವಯಮೂರ್ತಿ ಎಂಬೆನಯ್ಯ ಕೂಡಲ
ಚನ್ನಸಂಗನಲ್ಲಿ. ಇಂತು ನಿರ್ಲಜ್ಜ ಶಾಂತಲಿಂಗದೇಶಿಕೋತ್ತಮಂಗೆ
ಪರಮ ನಿರಾಭಾರಿ ವೀರಶೈವ ಷಟ್‌ಸ್ಥಲಾಚಾರ್ಯ ಚಿಕ್ಕದಂಡ ಪ್ರಮ
ಥರು ಬೋಧಿಸಿದಂಥ ಮಹಾಪ್ರಸಾದವ ನಿನಗೆ ಹರದನಹಳ್ಳಿ ಸ್ಥಾಪ
ನಾಚಾರ್ಯ ಶಿವಲಿಂಗಶಕ್ತಿವಲ್ಲಭನಾದ ಪರಮಾರಾಧ್ಯ ಬಸವಲಿಂಗ
ಸಾಕ್ಷಿಯಾಗಿ ಅರುಹಿಸಿ ಕೊಟ್ಟೆವು ನೋಡಾ ಸಂಗನಬಸವೇಶ್ವರಾ.

ತಾಮಸ ದೀಕ್ಷೆಗಳನ್ನು ನಿರಾಕರಿಸುವುದು

೬೬. ಸಗಣಿಯ ಬೆನಕಂಗೆ ಸಂಪಿಗೆಯರಳಲ್ಲಿ ಪೂಜಿಸಿದರೆ, ರಂಜ
ನೆಯಲ್ಲದೆ, ಅದರ ಗಂಜಳ ಬಿಡದಣ್ಣಾ. ಮಣ್ಣ ಪುಥ್ಥಳಿಯ ಮಾಣದೆ
ಜಲದಲ್ಲಿ ತೊಳೆದರೆ, ನಿಚ್ಚ ಕೆಸರಲ್ಲದೆ, ಅದರಚ್ಚುಗ ಬಿಡದಣ್ಣಾ. ಲೋಕದ

ಮಾನವಂಗೆ ಶಿವದೀಕ್ಷೆಯ ಕೊಟ್ಟರೆ, ಕೊಟ್ಟವನೇಕೆ ಸದ್ಭಕ್ತನಹನು
ಕೂಡಲಸಂಗಮದೇವಾ?

೬೭. ಕುಂಬಳದ ಕಾಯಿಗೆ ಕಬ್ಬುನದ ಕಟ್ಟು ಕೊಟ್ಟರೆ ಕೊಳೆ
ವುದಲ್ಲದೆ, ಬಲುಹಾಗಬಲ್ಲುದೇ? ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟರೆ,
ಭಕ್ತಿ ಎಂತಹುದೋ? ಮುನ್ನಿನಂತೆ. ಕೂಡಲಸಂಗಯ್ಯ ಮಾನಹೀ
ನನ ಮೀಸಲ ಕಾಯ್ದಿರಿಸಿದಂತೆ.

೬೮. ತನ್ನ ಪುತ್ರಂಗೆ ತಾನೆ ಗುರುವಾದೆನೆಂಬ ಗುರುದ್ರೋಹಿಯ
ಮಾತು ಕೇಳಲಾಗದು. ಎನಗೆ ಎನ್ನ ತಂದೆಯೇ ಗುರುವೆನ್ನುವ
ದ್ರೋಹಿಯ ಮುಖವ ನೋಡಲಾಗದು. ಅವರಿಬ್ಬರೊಳಗೆ ಗುರುಶಿಷ್ಯ
ಸಂಬಂಧವನಾಚರಿಸಿದೊಡೆ, ಅವರಿಬ್ಬರ ತಿರ್ಕಿಸಿ, ಕಟ್ಟಿ, ಹೊತ್ತಿಸಿ,
ಸೊಂದಿಸಿ, ಸುಡುವ ನಮ್ಮ ಕೂಡಲಚನ್ನಸಂಗಮದೇವಾ.

೬೯. ತನ್ನ ಮನೆಯ ಹೊಗದ ಗುರುವಿನರಸಿಕೊಂಡು ಹೋಗು
ವ ಶಿಷ್ಯನಲ್ಲವಯ್ಯಾ. ತಾ ಹೋಗದ ಮನೆಗೆ ಉಪದೇಶವ ಮಾಡು
ವಾತ ಗುರುವಲ್ಲವಯ್ಯಾ. ಅಂಗವ ಮಾರಿಕೊಂಡುಂಬ ಶಿಷ್ಯ ಗುರು
ದ್ರೋಹಿ. ಲಿಂಗವ ಮಾರಿಕೊಂಡುಂಬ ಗುರು ಶಿವದ್ರೋಹಿ. ಈ ಗುರು
ಶಿಷ್ಯರಿಬ್ಬರಿಗೆಯು ದೇವಭಕ್ತನೆಂದೊಡೆ ನಾಯಕ ನರಕವಯ್ಯಾ ಕೂಡಲ
ಚನ್ನಸಂಗಮದೇವಾ.

೭೦. ಕುಲಹೀನ ಶಿಷ್ಯಂಗೆ ಅನುಗ್ರಹವ ಮಾಡಿ ತನ್ನ ಪ್ರಾಣ
ಲಿಂಗವ ಕೊಟ್ಟು ಕರ್ಣದಲ್ಲಿ ಮಂತ್ರವ ನಿಕ್ಷೇಪಿಸಿ, ಬಳಿಕ ಅವ ಬಂದು
ಶಿಷ್ಯನ ಮನೆಯ ಹೊಗಲೊಲ್ಲದೆ ಅಕ್ಕಿಪಡಿಯ ತರಿಸಿಕೊಂಡು ಹೊಸ
ಬಳಿಕೆ ಎಂದು ಮಾಡಿಸಿಕೊಂಡುಂಬವಂಗೇನೆಂಬೆನಯ್ಯಾ? ಅವನ ಧನಕ್ಕೆ
ತಂದೆಯಾದನಲ್ಲದೆ ಅವನಿಗೆ ತಂದೆಯಾದುದಿಲ್ಲ. ಇದು ಕಾರಣವಾಗಿ
ಕೂಡಲಚನ್ನಸಂಗಯ್ಯ ಲಿಂಗವ ಮಾರಿಕೊಂಡುಂಬ ಭಂಗಗಾರರ
ಕಂಡು ನಾಚಿ ಬೆರಗಾದೆನಯ್ಯಾ.

೭೧. ಗುರು ಲಿಂಗ ಜಂಗಮದ ಹೆಸರಿನಿಂದ ಕಾಯಕವ ಮಾಡಿ
ಗುರುಚರಕೆ ವಂಚಿಸಿ, ತಂದೆ, ತಾಯಿ, ಬಂಧುಬಳಗ, ಹೆಂಡಿರು,

ಮಕ್ಕಳು, ಒಡಹುಟ್ಟಿದವರು, ಎಂದು ಸಮಸ್ತ ಪದಾರ್ಥವ ಭಾಗವ ಮಾಡುವನೊಬ್ಬ ಭಕ್ತದ್ರೋಹಿ ಕೂಡಲಸಂಗಮದೇವಾ.

೭೨. ಪರವೈವ ಪರಧನ ಪರಸ್ತ್ರೀ ಪರನಿಂದೆ ಪರಹಿಂಸೆಯಲ್ಲಿ ಚರಿಸುವ ಹೊಲೆಯರಿಗೆ ಕ್ರಿಯಾದೀಕ್ಷೆ ಮಾಡುವನೊಬ್ಬ ಗುರುದ್ರೋಹಿ ನೋಡಾ ಕಲಿದೇವದೇವಾ.

೭೩. ಕ್ರಿಯಾದೀಕ್ಷೆ ಹೀನರಿಗೆ ಮಂತ್ರೋಪದೇಶವ ಹೇಳುವನೊಬ್ಬ ಮಂತ್ರದ್ರೋಹಿ ನೋಡಾ ಕೂಡಲಚನ್ನಸಂಗಮದೇವಾ.

೭೪. ಕ್ರಿಯಾದೀಕ್ಷೆ ಮಂತ್ರದೀಕ್ಷೆ ವೇಧಾದೀಕ್ಷೆಹೀನರಿಗೆ ಜಂಗಮ ಪಾದೋದಕ ಪ್ರಸಾದವ ಕೊಡುವನೊಬ್ಬ ಜಂಗಮದ್ರೋಹಿ ನೋಡಾ ಗುಹೇಶ್ವರಾ.

೭೫. ಅಷ್ಟಪ್ರಸಾದ ನಿಷ್ಟಪ್ರಸಾದ ಸಮಯಪ್ರಸಾದವನರಿಯದ ಮೂಢರಿಗೆ ಷಡ್ವಿಧ ಲಿಂಗಾಂಗ ಪ್ರಸಾದ ಪಾದೋದಕವ ಹೇಳುವನೊಬ್ಬ ಪಾದೋದಕ ದ್ರೋಹಿ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೭೬. ಷಡ್ವಿಧ ಲಿಂಗಾಂಗ ಸಕೀಲವನರಿಯದ ಜಡಜೀವಿಗೆ ದಶ ವಿಧ ಪಾದೋದಕ, ಏಕಾದಶ ಪ್ರಸಾದಸಕೀಲ ಸಂಬಂಧವ ಹೇಳುವನೊಬ್ಬ ಪ್ರಸಾದದ್ರೋಹಿ ನೋಡಾ, ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೇ ಶಾಂತಮಲ್ಲಿಕಾರ್ಜುನಾ.

೭೭. ಅಂತರಂಗ ಬಹಿರಂಗದಲ್ಲಿ ಸರ್ವಾಚಾರ ಸಂಪತ್ತಿನ ಆಚರಣೆಯನರಿಯದ ಮೂಢಾತ್ಮಂಗೆ ಲಿಂಗಾಂಗಸಾಮರಸ್ಯವ ಹೇಳಿ ಸರ್ವಾಂಗ ಸ್ಥಾನ ಧೂಳನ, ಳಲ ಸ್ಥಾನಂಗಳಲ್ಲಿ ಕ್ರಿಯಾಭಸಿತವ ಧರಿಸುವ ನಿರ್ಣಯವ ಹೇಳಿ, ಅಂತರಂಗ ಜಪವ ಹೇಳುವನೊಬ್ಬ ಆಚಾರ ದ್ರೋಹಿ ನೋಡಾ ರಾಮನಾಥಾ.

೭೮. ಚಿದ್ವಿಭೂತಿ ರುದ್ರಾಕ್ಷಿ ಮಂತ್ರವ ಹೇಳುವನೊಬ್ಬ ಗಣ ದ್ರೋಹಿ ನೋಡಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

೭೯. ಇಂತೀ ಅಷ್ಟಾವರಣದ್ರೋಹಿ, ಗಣಭಕ್ತದ್ರೋಹಿಗಳ ಬೆರಿಸದೆ, ನಿಃಕಳಂಕ ಮಹಾಘನಲಿಂಗ ಗರ್ಭದಲ್ಲಿ ಆಚರಿಸುವುದು ಸಂಗನ ಬಸವೇಶ್ವರಾ.

ದೀಕ್ಷೆಯಾದವನಿಗೆ ಜಾತಿಭೇದವಿಲ್ಲ ೧

೮೦. ಗುರು ಸ್ವಾಮಿ ಶಿಷ್ಯನ ಅನುಗ್ರಹವ ಮಾಡುವ ಪರಿ ಎಂತೆಂದೊಡೆ, ಅರಿವು ಆಚಾರಸಹಿತವಾಗಿ ಶೀಕ್ಷೆ ದೀಕ್ಷೆಯ ಮುಖದಿಂದೆ ಗುರುಸ್ಥಲ ಲಿಂಗಸ್ಥಲ ಜಂಗಮಸ್ಥಲ ಪ್ರಸಾದಿ ಸ್ಥಲವೆಂದು ವಿವರವ ಮಾಡಿ ಕರುಣಿಸುವುದೇ ಗುರುತತ್ವ. ಈ ಕ್ರಮವನರಿದು ಮಹಾಪ್ರಸಾದವೆಂದು ಕೈಕೊಂಬುವುದೇ ಶಿಷ್ಯತ್ವ. ಇಂತಹ ಗುರು ಮಾರ್ಗಾಚಾರವನು ಮಹಾಪ್ರಸಾದವೆಂದು ಕೈಕೊಂಡ ಬಳಿಕ ಪರ ಪಾಕಂಗಳ ಬಿಡಬೇಕು. ಒಡಲ ಕಕ್ಕುಲಿತೆಗೆ ಭಕ್ತನ ದಾಕ್ಷಿಣ್ಯಕ್ಕೆ ಅನ್ಯ ಭಜನೆ ಭವಿ ವಿಶ್ರವಾದವರ ಮನೆಯಲ್ಲಿ ನೇಮಸ್ತರುಗಳು ಹೊಕ್ಕು ಲಿಂಗಾರ್ಚನೆಯ ಮಾಡಿದಡೆ ಅನ್ನಪಾಕಾದಿಗಳ ಕೊಂಡೊಡೆ ನಾಯಕ ನರಕ ತಪ್ಪದಯ್ಯಾ ಕೂಡಲಚನ್ನಸಂಗಮದೇವಾ.

೮೧. ಕರ್ಮಜಾತನ ಕಳೆದು ಶ್ರೀಗುರು ಲಿಂಗವ ಕೊಟ್ಟು ಪುಣ್ಯ ಜಾತನ ಮಾಡಿದ ಬಳಿಕ, ಆತಂಗೆ ಶಿವಕುಲವಲ್ಲದೆ, ಬೇರೆ ಮತ್ತೊಂದು ಕುಲ ಉಂಟೇ ಅಯ್ಯಾ?॥ ಸಾಕ್ಷಿ ॥ ಶಿವಜಾತಕುಲೆ ಧರ್ಮಂ। ಪುನರ್ಜನ್ಮ ವಿವರ್ಜಿತಂ। ಉಮಾ ಮಾತಾ ಪಿತಾ ರುದ್ರಾ। ಈಶ್ವರಂ ಕುಲಮೇವ ಚ। ಎಂದುದಾಗಿ, ಕೂಡಲಚನ್ನಸಂಗಯ್ಯ ನಿಮ್ಮ ಭಕ್ತರ ಮಹೇಶ್ವರರ ಕುಲಕ್ಕೆ ಪ್ರತಿಗಾಣೆನು.

೮೨. ಎಂತವನಾದೊಡೇನು? ಲಿಂಗಮುಟ್ಟಿದವನೇ ಕೀಳುಜಾತಿ. ಕುಲವಹುದು ತಪ್ಪದು ಲಿಂಗವ ಮುಟ್ಟಲೊಡನೆ. ಶಿವಕುಲವಹುದು

---

೧ ಈ ವಿಷಯದ ಮೇಲೆ ವಚನಶಾಸ್ತ್ರಸಾರ ೧೯ ಭಾಗದಲ್ಲಿ 'ಜಾತಿಭೇದ' ಈ ಶಿರೋಲೇಖದ ಕೆಳಗೆ ಅನೇಕ ವಚನಗಳಿವೆ. ಅವುಗಳನ್ನು ನೋಡಬೇಕು.

ತಪ್ಪದು. ಪರುಷ ಮುಟ್ಟಲೊಡನೆ ಕಬ್ಬುನ ಹೊನ್ನಹುದು ತಪ್ಪದು. ಕೂಡಲಸಂಗಮದೇವನೊಲ್ಲ ಸರ್ವ ಸಂದೇಹಿಗಳ.

೮೩. ಪಟ್ಟವ ಕಟ್ಟದ ಬಳಿಕ, ಲಕ್ಷಣವನರಸುವರೇ ? ಲಿಂಗದೇವನ ಪೂಜಿಸಿ ಕುಲವನರಸುವರೇ ಅಯ್ಯಾ ? ಕೂಡಲಸಂಗಮದೇವ ಭಕ್ತಕಾಯ ಮಮಕಾಯವೆಂದುದಾಗಿ.

೮೪. ಏಕ ಪಙ್ತಿಯಲ್ಲಿ ತಾ ಭೋಜನಭೇದ ಮಾಡಬಾರದು. ಭೋಜನ ಭೇದ ಮಾಡಿದರೆಯೂ ತಾನೆಣಿಸಬಾರದು. ತಾನೆಣಿಸಿದಲ್ಲಿಯೂ ಅನ್ಯರಿಗೆಯು ತಿಳಿಯಬಾರದು. ಅನ್ಯರಿಗೆ ತಿಳಿದರೆಯೂ ಮನೆ ಬೇರಾಗಬಾರದು. ಮನೆ ಬೇರಾದರೆಯೂ ಮನ ಬೇರಾಗಬಾರದು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

ಲಿಂಗ ಹೋದರೆ ಆತ್ಮಘಾತ ಮಾಡಿಕೊಳ್ಳಬೇಡ ೧

೮೫. ಲಿಂಗ ಹೋಯಿತ್ತೆಂದು ಅಂಗವ ಬಿಡುವವನ ನೋಡಿ ಎನ್ನಂಗ ನಡುಗಿತ್ತಯ್ಯ. ಲಿಂಗ ಹೋದರೆ ನಿನ್ನ ಪ್ರಾಣಂಗಳುಳವವೇ? ಲಿಂಗ ಪ್ರಾಣ, ಪ್ರಾಣ ಲಿಂಗ, ಎಂಬುದು ಹುಸಿಯೇ ಅಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ?

೮೬. ತೆರಹಿಲ್ಲದ ಮಹಾಘನ ಪರಿಪೂರ್ಣ ಲಿಂಗವು ಬೀಳಲಿಕ್ಕೆ ತೆರಹುಂಟೇ ? ಅರಿಯರರಿಯರು ಪ್ರಾಣಲಿಂಗದ ನೆಲೆಯನು. ಅರಿಯದೆ ಅಜ್ಞಾನದಲ್ಲಿ ಕುರುಹು ಬಿದ್ದಿತ್ತೆಂದು ಪ್ರಾಣ ಘಾತಕವ ಮಾಡಿಕೊಂಡು ಸಾವ ಅಜ್ಞಾನಿಗಳ ನೋಡಾ. ಅರಿದು ಕೂಡಿ ಸ್ವಯವಾಗಿರ್ದ ಲಿಂಗವು ಓಸರಿಸಿತ್ತೆಂದು ಆ ಲಿಂಗದೊಡನೆ ಸಾವ ಅಜ್ಞಾನಿಗಳಿಗೆ ಅಘೋರ ನರಕ ತಪ್ಪದು ಕಾಣಾ ಕೂಡಲಚನ್ನಸಂಗಮದೇವಾ.

---

೧ ಈ ವಿಷಯದ ಬಗ್ಗೆ ವಚನಶಾಸ್ತ್ರಸಾರ ಭಾಗ ೧ ಇದರಲ್ಲಿ ಅನೇಕ ಉಕ್ತಿಗಳಿವೆ. ಅವುಗಳನ್ನು ಪಾಠಕರು ನೋಡಬೇಕು.

೮೭. ಸೂತ್ರವ ಬಿಟ್ಟಿತ್ತೆಂದು ಸಂದೇಹಗೊಳ್ಳದಿರಾ ಮರಳು ಮನುಜರಿರಾ. ಸೂತ್ರವಿದ್ದಲ್ಲಿ ನಿಮ್ಮಂಗ ಸೂತ್ರವಾದನಯ್ಯ ಲಿಂಗ ಮೂರ್ತಿಯು. ಸೂತ್ರ ತಪ್ಪಿತ್ತೆಂಬಲ್ಲಿ ಸೂತ್ರ ತಪ್ಪಿಲ್ಲ. ನಿಮ್ಮ ಮನೋ ಸೂತ್ರವೇ ಭಿನ್ನವಾಯಿತ್ತಯ್ಯ ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ.

೮೮. ಅಂಗದೊಳಗೆ ಮಹಾಲಿಂಗವಿರಲು ಕೆಯ್ಯ ಲಿಂಗವು ಬಿದ್ದಿತೆಂದು ನೆಲದೊಳಗಂಗವ ಹೂಣುವರು. ಭಂಗಬಡುವರಲ್ಲಾ ಗುಹೇಶ್ವರಾ ಲಿಂಗವನರಿಯದ ಜಡರುಗಳು!

೮೯. ಲಿಂಗವ ಪೂಜಿಸಿ ಅಂಗವ ನಿರ್ವಯಲ ಮಾಡಿಹೆನೆಂಬವನ ಮುಖವ ನೋಡಲಾಗದು. ಕುರುಹಿಟ್ಟು ಪೂಜಿಸುವ ಲಿಂಗ ತಾನುಳವುದು ಭೂಮಿಯಲ್ಲಿ. ಲಿಂಗವ ಧರಿಸಿದ ದೇಹವು ನಿರ್ವಯಲಹುದು. ಲಿಂಗ ಪೂಜೆಯಲ್ಲಿ ಹುರುಳಿಲ್ಲ ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ.

ದೀಕ್ಷೆಯಲ್ಲಿ ಅಷ್ಟಾವರಣಗಳೆಲ್ಲವನ್ನೂ ಕೊಡುವುದು

೯೦. ಲಿಂಗ ಹೊರತಾಗಿ ವಿಭೂತಿ ರುದ್ರಾಕ್ಷಿಯ ಕೊಟ್ಟು ಗುರುವಾಗಬಹುದೇ ಅಯ್ಯ? ಬೀಜವಿಲ್ಲದೆ ಅಂಕುರವಾಗಬಲ್ಲುದೇ ? ಗಂಡನಿಲ್ಲದ ಮುಂಡೆಗೆ ಗರ್ಭ ನಿಂದಡೆ, ಅವಳಾರಿಗೆ ಯೋಗ್ಯ? ಆ ಉಭಯವು ಕೇಡಾಯಿತ್ತು. ಇದನರಿತು ಮಾಡಿ ಸದಾಶಿವಮೂರ್ತಿ ಲಿಂಗವನರಿವುದಕ್ಕೆ.

೯೧. ಲಿಂಗಪ್ರಾಣಿಯು ಲಿಂಗವಂತನ ಉದರದಲ್ಲಿ ಒಂದು ಲಿಂಗ ನಿಂದು ಉದಿಸಿದಡೆ, ಆ ಕ್ಷಣವೇ ಲಿಂಗ ಸ್ವಾಯತವ ಮಾಡಿ, ಆ ಶಿಸುವ ತನ್ನ ಶಿಸುವೆಂದು ಮುಖವ ನೋಡುವುದು ಸದಾಚಾರವಲ್ಲದೆ, ಬರಿಯ ವಿಭೂತಿಯ ಪಟ್ಟವ ಕಟ್ಟಿ, ಗುರು ಕಾರುಣ್ಯವಾಯಿತ್ತೆಂದು ಅನುಸರಣೆಯಲ್ಲಿ ಆಡಿಕೊಂಬುವುದು ಕ್ರಮವಲ್ಲ. ಅದೇನು ಕಾರಣವೆಂದಡೆ, ತಾ ಲಿಂಗವೇದಿಯಾದುದಕ್ಕೆ ಕುರುಹು ಲಿಂಗವುಳ್ಳವರು ತನ್ನವರೆಂದೆನಬೇಕಲ್ಲದೆ, ಲಿಂಗವಿಲ್ಲದವರ ತನ್ನವರೆಂದರೆ ತನ್ನ ಸದಾಚಾ

ರಕ್ಕೆ ದ್ರೋಹ ಬಹುದು. ಸಮಯಾಚಾರಕ್ಕೆ ಸಲ್ಲರು. ಇದು ಕಾರಣ ಲಿಂಗ ಸ್ವಾಯತವಾಗಿಪ್ಪದೇ ಪಥವಯ್ಯ ನಾಗಪ್ರಿಯಚನ್ನರಾಮೇಶ್ವರಾ.

೯೨. ತನ್ನ ಮನೆಯ ಹೊಗದ ಗುರುವನರಸುವಾತ ಶಿಷ್ಯನಲ್ಲ. ತಾ ಹೊಗದ ಮನೆಯಲುಪದೇಶವ ಮಾಡುವಾತ ಗುರುವಲ್ಲ. ಲಿಂಗವ ಮಾರಿಕೊಂಡುಂಬ ಗುರು ಶಿವದ್ರೋಹಿ. ಅಂಗವ ಮಾರಿಕೊಂಡುಂಬ ಶಿಷ್ಯ ಗುರುದ್ರೋಹಿ. ಇವರಿಬ್ಬರನು ಭಕ್ತರೆಂಬುವರ ಕೂಡಲಚನ್ನಸಂಗಯ್ಯ ನಾಯಕ ನರಕದಲ್ಲಿಕ್ಕುವ.

ಲಿಂಗಧಾರಣ ಸ್ಥಾನಗಳು

೯೩. ಅಂತರಂಗದಲ್ಲಿ ಲಿಂಗಧಾರಣವಾಯಿತ್ತೆಂದರೆ, ಬಹಿರಂಗದಲ್ಲಿ ಅಂಗದ ಮೇಲೆ ಇಷ್ಟಲಿಂಗ ಧಾರಣವಿಲ್ಲದೆ ಇರಬಹುದೇ? ಇರಬಾರದು. ಅದು ವೀರ ಮಾಹೇಶ್ವರರ ಆಚರಣೆ ಅಲ್ಲದ ಕಾರಣ. ಎಷ್ಟು ಅರುಹಾದರೂ ಅಂಗದ ಮೇಲೆ ಲಿಂಗಧಾರಣವಿಲ್ಲದಂದು ಅರುಹಲ್ಲ. ಅದು ನಮ್ಮ ಪುರಾತನರ ಮತವಲ್ಲ. ಸಾಕ್ಷಾತ್ ಪರಮೇಶ್ವರನು ಆದರೂ ಆಗಲಿ, ಅಂಗದ ಮೇಲೆ ಲಿಂಗ ಧಾರಣವಿಲ್ಲದಿರ್ದರೆ, ಅತನ ಮುಖವ ನೋಡಲಾಗದು ಕಾಣಾ. ಅದೇನು ಕಾರಣವೆಂದರೆ ಅದು ಶಿವಾಚಾರದ ಪಥವಲ್ಲದ ಕಾರಣ. ಗುರು ಕರುಣವಂ ಪಡೆದು ಲಿಂಗವ ಕಕ್ಷೆ, ಕರಸ್ಥಲ, ಉರ, ಉತ್ತಮಾಂಗ, ಮುಖಸೆಜ್ಜೆ, ಅಮಳೋಕ್ಯ, ಸ್ಥಾನಂಗಳಲ್ಲಿ ಧರಿಸುವುದೇ ಸತ್ಪಥವು ಕಾಣಾ ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೇ.

೯೪. ಕಾಂಚನಕ್ಕೆ ಕಯ್ಯಾನದಿರ್ದಡೆ ಕರಸ್ಥಲದಲ್ಲಿ ಧರಿಸುವುದಯ್ಯ ಶಿವಲಿಂಗವ. ಕಾಂಕ್ಷೆ ಇಲ್ಲದಿರ್ದಡೆ ಕಕ್ಷೆಯಲ್ಲಿ ಧರಿಸುವುದಯ್ಯ ಶಿವಲಿಂಗವ. ಆಪ್ಯಾಯನವಿಲ್ಲದಿರ್ದಡೆ ಉರಸೆಜ್ಜೆಯಲ್ಲಿ ಧರಿಸುವುದಯ್ಯ ಶಿವಲಿಂಗವ. ಅನ್ನಪಾನಾದಿಗಳಿಗೆ ಬಾಯ್ದೆರೆಯದಿರ್ದಡೆ, ಅಮಳೋಕ್ಯದಲ್ಲಿ ಧರಿಸುವುದಯ್ಯ ಶಿವಲಿಂಗವ. ಭಿನ್ನ ಶಬ್ದವಿಲ್ಲದಿರ್ದಡೆ, ಮುಖಸೆಜ್ಜೆಯಲ್ಲಿ ಧರಿಸುವುದಯ್ಯ ಶಿವಲಿಂಗವ. ಲೋಕಕ್ಕೆರಗದಿರ್ದಡೆ, ಉತ್ತಮಾಂಗದಲ್ಲಿ ಧರಿಸುವುದಯ್ಯ ಶಿವಲಿಂಗವ. ನಾಭಿಯಿಂದ ಕೆಳಯಿಕ್ಕೆ ಧರಿಸಲಾಗದು. ಅದೇನು ಕಾರಣವೆಂದಡೆ, ಅದು ಹೇಯಸ್ಥಾನವಾದುದಾಗಿ ಕೂಡಲಚನ್ನಸಂಗಯ್ಯ.

೯೫. ಸುಜ್ಞಾನೋದಯವಾಗಿ ಸಕಲ ಪ್ರಪಂಚ ನಿವೃತ್ತಿಯ ಮಾಡಿ ಶ್ರೀಗುರು ಕಾರುಣ್ಯವ ಹಡೆದು ಅಂಗದ ಮೇಲೆ ಲಿಂಗಧಾರಣವಾದ ಶಿವಶರಣನು ಷಟ್‌ಸ್ಥಾನದಲ್ಲಿ ಲಿಂಗವ ಧರಿಸುತಿರ್ದನದೆಂತೆಂದೊಡೆ, ಕರಸ್ಥಲವೆಂಬ ಪೃಥ್ವೀತತ್ವದಲ್ಲಿ ಆಚಾರ ಲಿಂಗವ ಸ್ವಾಯತವ ಮಾಡಿ, ಕಕ್ಷೆ ಎಂಬ ಅಪ್ಪ ತತ್ವದಲ್ಲಿ ಗುರುಲಿಂಗವ ಸ್ವಾಯತವ ಮಾಡಿ, ಹೃನಯವೆಂಬ ತೇಜತತ್ವದಲ್ಲಿ ಶಿವಲಿಂಗ ಸ್ವಾಯತವ ಮಾಡಿ, ಕಂಠವೆಂಬ ವಾಯುತತ್ವದಲ್ಲಿ ಜಂಗಮ ಲಿಂಗವ ಸ್ವಾಯತವ ಮಾಡಿ, ಉತ್ತಮಾಂಗವೆಂಬ ಆಕಾಶ ತತ್ವದಲ್ಲಿ ಪ್ರಸಾದ ಲಿಂಗವ ಸ್ವಾಯತವ ಮಾಡಿ, ಅಮಳೋಕ್ಯವೆಂಬ ಆತ್ಮತತ್ವದಲ್ಲಿ ಮಹಾಲಿಂಗವ ಸ್ವಾಯತವ ಮಾಡಿ, ಇದಲ್ಲದೆ ಆಪಾದ ಮಸ್ತಕದ ಪರಿಯಂತರವು ಸರ್ವಾಂಗ ಲಿಂಗಮಯವಾಗಿ, ಆವ ವೇಷ ಧರಿಸಿದರೆಯೂ ಸರ್ವರಲ್ಲಿಯೂ ಶಿವಶರಣ ಅವರವರಂತೆ ಇರ್ಪುದಯ್ಯಾ, ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ಮಾಯ ಪ್ರಭುವೇ.

೯೬. ಕಕ್ಷೆಯಲ್ಲಿ ಲಿಂಗವ ಧರಿಸಿಕೊಂಡಾತ ಭಕ್ತನು. ಕರಸ್ಥಲದಲ್ಲಿ ಲಿಂಗವ ಧರಿಸಿಕೊಂಡಾತ ಮಹೇಶ್ವರನು, ಉತ್ತಮಾಂಗದಲ್ಲಿ ಲಿಂಗವ ಧರಿಸಿಕೊಂಡಾತನು ಪ್ರಸಾದಿ. ಉರಸೆಜ್ಜೆಯಲ್ಲಿ ಲಿಂಗವ ಧರಿಸಿಕೊಂಡಾತ ಪ್ರಾಣಲಿಂಗಿ. ಕಂಠಸೆಜ್ಜೆಯಲ್ಲಿ ಲಿಂಗವ ಧರಿಸಿಕೊಂಡಾತ ಶರಣ. ಅಮಳೋಕ್ಯದಲ್ಲಿ ಲಿಂಗವ ಧರಿಸಿಕೊಂಡಾತ ಐಕ್ಯ. ಇಂತೀ ಷಟ್‌ಸ್ಥಲದವರೆಲ್ಲ ಲಿಂಗವ ಧರಿಸಿ ನಿತ್ಯ ಲಿಂಗಾಂಗ ಸಂಬಂಧಿಗಳಾಗಿ ಲಿಂಗಾವಧಾನಿಗಳಾಗಿ ಇದ್ದರಯ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮ ಶರಣರು.

ಗುರುಶಿಷ್ಯ ಸಂಬಂಧ

೯೭. ಗುರುಶಿಷ್ಯ ಸಂಬಂಧವನೇನೆಂದುಪಮಿಸುವೆನಯ್ಯ? ಜ್ಯೋತಿಯಿಂದೊಗೆದ ಜ್ಯೋತಿಯಂತಿರಬೇಕು. ದರ್ಪಣದೊಳಗಡಗಿದ ಪ್ರತಿಬಿಂಬದಂತಿರಬೇಕು. ಇದು ಕಾರಣ ಕೂಡಲಚನ್ನಸಂಗಯ್ಯನಲ್ಲಿ ಮೂರೀ ಚಿಕಾಜಲದಂತಿರಬೇಕು.

೯೭. ಗುರುಶಿಷ್ಯಭಾವದಿಂದ ಪ್ರಶ್ನೋತ್ತರವಾಗಿ ಕೇಳುವಾತ ಶಿಷ್ಯನು. ಜ್ಞಾನದ್ವಾರದಿಂದ ಹೇಳುವಾತ ಗುರು. ಪೂರ್ವಪಕ್ಷಬೋಧದಿಂದ ಶರೀರಾದಿ ಸಮಸ್ತ ಲೋಕವನು ತೋರಿಸಿ, ಉತ್ತರಪಕ್ಷ ಬೋಧದಿಂದ ಶರೀರಾದಿ ವಿಶ್ವವು ಲಿಂಗದಲ್ಲಿ ಲೀಯ್ಯವಾದ ನಿಲವ ತೋರಿದ ಗುರು. ಸರ್ವಾಚಾರ ಜ್ಞಾನಪರನು ಶಿವಾನುಭೂತ ಸಂಯುಕ್ತನು. ಶಿಷ್ಯನ ಸಂಶಯವ ಛೇದಿಸಿ ನಿಜವ ತೋರಿದ ಆ ಗುರುವಿನ ಶ್ರೀಪಾದಕ್ಕೆ ನಮೋ ನಮೋ ಎಂಬೆನು ಕಾಣಾ ನಿಜಗುರು ಸ್ವತಂತ್ರ ಶಂಭು ಲಿಂಗೇಶ್ವರಾ.

೯೮. ಗಂಡಗಿಂದಲು ಮುನ್ನ ಹೆಂಡತಿ ಹುಟ್ಟಿ, ಗಂಡಗಿಂದಲು ಕಿರಿಯಳಾದಳು. ಆ ಹೆಂಡತಿ ಒಡಹುಟ್ಟಿದಳಾದಳೆಂಬುದ ಕೇಳಿ ಆ ಗಂಡ ಸಂಗವ ಮಾಡಿದರೆ ಇಬ್ಬರಿಗೊಬ್ಬ ಮಗ ಹುಟ್ಟಿತ್ತಲ್ಲಾ. ಹುಟ್ಟಿದ ಮಗುವ ತಾಯಿ ಮುದ್ದಾಡಿಸಿದಡೆ ತಾಯ ತಕ್ಕೈಸಿತ್ತಿದೇನು ಹೇಳಾ? ತಾ ಎದ್ದು ಪತಿಭಕ್ತಿಯ ಮಾಡಿತ್ತ ಕಂಡು ಗುಹೇಶ್ವರ ಲಿಂಗಕ್ಕೆ ಭಕ್ತಿ ಪರಿಣಾಮವಾಯಿತ್ತು.

ಟೀಕು:— ಗುರುವೇ ಪತಿಯಾಗಿ ಶಿಷ್ಯನೇ ಸತಿಯಾದ ಕಾರಣ ಗಂಡಹೆಂಡಿರು ಎಂಬ ಶಬ್ದಕ್ಕರ್ಥ. ಆ ಗುರುವಿನಿಂದ ಮುನ್ನ ಶಿಷ್ಯಂಗೆ ಜ್ಞಾನೋದಯವಾಗಿ ಸಂಸಾರ ಪಾಶವ ಛೇದನವ ಮಾಡಿದ ಬಳಿಕ ಬಂದು ಗುರುವನಾಶ್ರಯಿಸಿದ ಕಾರಣ ಗಂಡನಿಂದ ಮುನ್ನ ಹೆಂಡತಿ ಹುಟ್ಟಿದಳೆಂಬ ಶಬ್ದಕ್ಕರ್ಥ. ಆ ಗುರುವಿನಿಂದ ಮುನ್ನ ಶಿಷ್ಯನಾದ ಡೆಯೂ 'ನ ಗುರೋರಧಿಕಂ ನ ಗುರೋರಧಿಕಂ' ಎಂಬುದನರಿದು ಗುರು ಪುತ್ರನಾಗಿ ಶುಶ್ರೂಷೆಯ ಮಾಳ್ಪ ಗುಣದಿಂದ ಗಂಡಗಿಂದ ಕಿರಿಯಳಾದಳು ಎಂಬ ಶಬ್ದಕ್ಕರ್ಥ. ಆ ಶಿಷ್ಯನ ಗುರುತತ್ವದಿಂ ಭಿನ್ನವಿಲ್ಲದೆ ಆ ಗುರುತತ್ವದೊಡನೆಯೇ ಉನಯವಾದನೆಂಬುದೀಗ ಹೆಂಡತಿ

ಒಡಹುಟ್ಟಿದಳಾದಳೆಂಬ ಶಬ್ದಕ್ಕರ್ಥ. ಆ ಶಿಷ್ಯನಲ್ಲಿ ಆ ಶ್ರೀಗುರು ಅವಿರಳ ಸಂಬಂಧವ ಮಾಡಲಾಗಿ ಲಿಂಗವೆಂಬ ಶಿಷ್ಯ ಹುಟ್ಟಿತ್ತೆಂಬುದೀಗ ಇವರಿಗೊಬ್ಬ ಮಗ ಹುಟ್ಟಿದನೆಂಬ ಶಬ್ದಕ್ಕರ್ಥ. ಅಂತು ಉದಿಸಿದ ಇಷ್ಟಲಿಂಗಕ್ಕೆ ಶಿಷ್ಯನೇ ಮಾತೃಸ್ಥಾನವಾದ ಭಕ್ತ್ಯಾಂಗನೆ ಎನಿಸಿಕೊಂಡು ಲಿಂಗ ಭಕ್ತಿಯ ಮಾಡುತ್ತಿರ್ದನೆಂಬುದೀಗ ಹುಟ್ಟಿದ ಮಗುವ ತಾಯಿ ಮುದ್ದಾಡಿಸಿದಡೆ ಎಂಬ ಶಬ್ದಕ್ಕರ್ಥ. ಅಂತು ಇಷ್ಟಲಿಂಗದಲ್ಲಿ ಭಕ್ತಿ ನೆಲೆಗೊಂಡ ಸದ್ಭಕ್ತನ ಅಂಗ ಪ್ರಾಣ ಸರ್ವೇಂದ್ರಿಯಂಗಳಲ್ಲಿ ಲಿಂಗವೇ ಪ್ರವೇಶಿಸಿತ್ತೆಂಬುದೀಗ ತಾಯ ತಕ್ಕೈಸಿತ್ತಿದೇನು ಹೇಳಾ ಎಂಬ ಶಬ್ದಕ್ಕರ್ಥ. ಅಂತು ಲಿಂಗವೇ ಪ್ರವೇಶಿಸಿ ಸರ್ವಾಂಗ ಲಿಂಗವಾದ ಕಾರಣ ಈ ಲಿಂಗಪದವು ಗುರೂಪದೇಶದಿಂದಾಯಿತ್ತೆಂದು ಗುರುಭಕ್ತಿಯ ಬಿಡದೆ ಮಾಡುತ್ತಿರ್ದನೆಂಬುದೀಗ ತಾಯೆದ್ದು ಪತಿಭಕ್ತಿಯ ಮಾಡಿ ಎಂಬ ಶಬ್ದಕ್ಕರ್ಥ. ಅಂತಪ್ಪ ಗುರುಭಕ್ತಿಯ ಮಾಡಿ ಪರಶಿವನನರಿದು ಪರಮ ಹರುಷಿತನಾದನೆಂಬುದೀಗ ಪತಿಭಕ್ತಿಯ ಮಾಡಿತ್ತ ಕಂಡು ಗುಹೇಶ್ವರ ಲಿಂಗಕ್ಕೆ ಭಕ್ತಿಪರಿಣಾಮವಾಯಿತ್ತೆಂಬ ಶಬ್ದಕ್ಕರ್ಥ.

೯೯. ಆಚಾರವಿಲ್ಲದವನ' ಗುರುವು ಕಂಡರೆ ವಿಚಾರಿಸಿ ನೋಡನು. ಜ್ಞಾನಾಜ್ಞಾನದಲ್ಲಿ ಆಚಾರಿಲ್ಲದ ಗುರುವು, ಆಚಾರಿಲ್ಲದ ಶಿಷ್ಯ, ಇವರೀರ್ವರು ಚರಿಸಿ ಬೆಡಗಿನ ಭವಕ್ಕೆ ಗುರಿಯಾದರು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗವೆ.

ಶಿಷ್ಯೋಪದೇಶ

೧೦೦. ಗುರುಶಿಷ್ಯ ಸಂಬಂಧವೆಂತೆಂದೊಡೆ, ಹೇಳಿಕೆ ಕೇಳಿರೋ ಸದ್ಭಕ್ತ ಶರಣಜನಂಗಳಿಲ್ಲರು. ಶ್ರೀಗುರು ಶಿಷ್ಯಗೆ ಉಪದೇಶವ ಮಾಡುವ ಕಾಲದಲ್ಲಿ, ಶಿಷ್ಯನ ಸ್ಥೂಲತನು ಸೂಕ್ಷ್ಮತನು ಕಾರಣ ತನುವೆಂಬ ತನುತ್ರಯಂಗಳಲ್ಲಿ ಮುಸುಕಿದ ಆಣವಮಲ ಮಾಯಾಮಲ ಕಾರ್ಮಿಕ ಮಲವೆಂಬ ಮಲತ್ರಯಂಗಳ ಕಳೆದು ಮಾಯಾ ಪ್ರಕೃತಿ ಕಾಯದ ಪೂರ್ವಾತ್ರಯದಲ್ಲಿ ಚಿದಗ್ನಿಯಿಂದ ಸುಟ್ಟು ಚಿತ್ಕಾಯವೆಂದೆನಿಸಿ, ಆ ಚಿತ್ಕಾಯ

ಸ್ವರೂಪಾದ ಶಿಷ್ಯನ ಮಸ್ತಕದಲ್ಲಿ ಹಸ್ತವನಿರಿಸಿ ॥ಶ್ಲೋ.॥ ಯಥಾಕಾಲ ಸ್ತಥಾಭಾವೋ ಯಥಾ ಭಾವಸ್ತಥಾ ಮನಃ ॥ ಯಥಾಮನಸ್ತಥಾ ದೃಷ್ಟಿರ್ಯಥಾದೃಷ್ಟಿಸ್ತಥಾಸ್ಥಲಂ ॥ ಎಂಬ ಆಗಮೋಕ್ತವಾಗಿ, ಆ ಶಿಷ್ಯನ ಪಶ್ಚಿಮ ದೇಶದಲ್ಲಿ ಬೆಳಗುತ್ತಿರ್ದ ನಿತ್ಯನಿರಂಜನ ಪರವ. ಕಳೆಯನ್ನು ಧ್ಯಾನಿಸಿ ಭಾವ ಸ್ಥಲಕ್ಕೆ ತಂದು, ಆ ಭಾವಸ್ಥಲದಿಂದ ಮನಸ್ಥಲಕ್ಕೆ ತಂದು, ಆ ಮನಸ್ಥಲದಿಂದ ದೃಷ್ಟಿ ಸ್ಥಲಕ್ಕೆ ತಂದು, ಆ ದೃಷ್ಟಿ ಸ್ಥಲದಿಂದ ಕರ ಸ್ಥಲಕ್ಕೆ ತಂದು, ಆ ಕರಸ್ಥಲದಿಂದ ಸಾಕಾರ ಮೂರ್ತಿಯಲ್ಲಿ ಮೂರ್ತಿ ಗೊಳಿಸಿ, ಆ ಲಿಂಗಕ್ಕೆ ಜಂಗಮಪಾದತೀರ್ಥ ಪ್ರಸಾದವನೇ ಪ್ರಾಣಕಳೆ ಎಂದರ್ಪಿಸಿ, ಮತ್ತು ಇಷ್ಟಲಿಂಗವೇ ಅನಿಷ್ಟ ಪಂಚಕಂಕಳೆದು ಕತ್ತಲೆಯ ನೋಡಿಸುವುದಕ್ಕೆ ಚತುರನೆಂದು ನಂಬುಗೆಗೊಳಿಸಿ, ಮತ್ತಮಾ ಇಷ್ಟಲಿಂಗದಲ್ಲಿ, ವೃತ್ತ, ಕಟಿ, ವರ್ತುಲ, ಗೋಮುಖ, ನಾಳ ಗೋಳ ಕವೆಂಬ ೬ ಸ್ಥಲಂಗಳ ತೋರಿ, ಆ ಆರು ಸ್ಥಲಂಗಳಲ್ಲಿ ನಕಾರ, ಮಕಾರ, ಶಿಕಾರ ವಕಾರ, ಯಕಾರ, ಓಂಕಾರವೆಂಬ ಆರು ಪ್ರಣವ ಗಳನ್ನು ಬೋಧಿಸಿ, ಆ ಆರು ಪ್ರಣವಗಳನ್ನೇ ಆಚಾರಲಿಂಗ, ಗುರು ಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗಗ ಳೆಂಬ ಆರು ಲಿಂಗಗಳೆಂದರುಪಿ, ಆರು ಲಿಂಗಂಗಳಿಗೆ ಘ್ರಾಣ, ಜಿಹ್ವೆ, ನೇತ್ರ, ತ್ವಕ್ಕು, ಶ್ರೋತ್ರ, ಹೃದಯಂಗಳೆಂಬ ಆರು ಇಂದ್ರಿಯಂಗಳನ್ನೇ ಆರು ಮುಖಗಳೆಂದು ತಿಳುಪಿ, ಆ ಮುಖಂಗಳಿಗೆ ಗಂಧ, ರುಚಿ, ರೂಪು, ಸ್ಪರ್ಶನ, ತೃಪ್ತಿ ಎಂಬಾರು ಪದಾರ್ಥಗಳನ್ನು, ಶ್ರದ್ಧಾ, ನೈಷ್ಠಿಕಾ, ಸಾವಧಾನ, ಅನುಭಾವ, ಸಮರಸವೆಂಬಾರು ಭಕ್ತಿಗಳಿಂದರ್ಪಿಸಿ, ಸಕೀ ಲವ ತೋರಿಸಬಲ್ಲಾತನೇ ಗುರುವು. ಆ ಗುರುವಿನ ಕಾರುಣ್ಯದಿಂದ ಪಡೆದಂಥ ಇಷ್ಟಲಿಂಗವನ್ನು ಕರ, ಮನ, ಭಾವ, ಮಂಟಪದಲ್ಲಿ ಮೂ ರ್ತಿಗೊಳಿಸಿ ಸಗುಣಪೂಜೆ, ನಿರ್ಗುಣಪೂಜೆ, ಕೇವಲ ನಿರ್ಗುಣ ಪೂಜೆ ಯನ್ನು ಮಾಡಿ ಆ ಲಿಂಗದ ಮಹಾ ಬೆಳಗಿನೊಳಗೆ ತನ್ನಂಗದ ಕಳೆಯನಡಗಿಸಿ, ಉರಿ ಕರ್ಪುರ ಸಂಯೋಗದಂತೆ, ಅವಿರಳ ಸಮ ರಸವಾಗಿರ್ಪಾತನೇ ಶಿಷ್ಯನು. ಇಂತೀ ಆರುಹು ಆಚಾರ ಸನ್ನಿಹಿತ ಗುರುಶಿಷ್ಯರಿಬ್ಬರು ಬಯಲು ಬಯಲ ಬೆರೆದಂತೆ ನಿರವಯ ಬ್ರಹ್ಮದಲ್ಲಿ ನಿಷ್ಪತ್ತಿಯನ್ಯೈದಿಪ್ಪರು ನೋಡಾ. ಇಂತೀ ಆರುಹಿನ ವಿಚಾರವನರಿಯದೆ ಮಾಡುವ ಮಾಟವೆಲ್ಲ ಅಜ್ಞಾನಗಡಣದೊಳಗು. ಈ ಅಜ್ಞಾನಿ

ಗುರುಶಿಷ್ಯರ ವಿಧಿ ಎಂತಾಯಿತ್ತೆಂದರೆ, ಹುಟ್ಟು ಗುರುಡನ ಕೈಯ್ಯ ಕೆಟ್ಟ ಗಣ್ಣಿವ ಪಿಡಿದು ಬಟ್ಟೆಯ ಕಾಣದೆ, ಕಮರಿಬಿದ್ದು ಸತ್ತಂತಾಯಿತ್ತು ಕಾಣಯ್ಯ ಅಖಂಡೇಶ್ವರಾ.

೧೦೧. ಮಹಾಜ್ಞಾನ ತಲೆದೋರೆ, ಸರ್ವಸಂಗ ಪರಿತ್ಯಾಗವ ಮಾಡಿ ಗುರೂಪಾವಸ್ಥೆಯ ಮಾಡಿದ ಶಿಷ್ಯೋತ್ತಮಂಗೆ ಸೇವ್ಯರ ಭೃತ್ಯ ರಿಂದ ಪಂಚ ಕಲಶಂಗಳ ಸ್ಥಾಪಿಸಿ, ಸೂತ್ರವ ಹಾಕಿಸಿ, ಅಷ್ಟ ವಿಧಾ ರ್ಚನೆ ಷೋಡಶೋಪಚಾರಗಳ ಮಾಡಿಸಿ, ತಮ್ಮ ಕೃಪಾ ಹಸ್ತವನಿಟ್ಟು, ಜಂಗಮ ಮೂರ್ತಿಗಳ ಸಿಂಹಾಸನದ ಮೇಲೆ ಮೂರ್ತವ ಮಾಡಿಸಿ, ಶ್ರೀಗುರುಲಿಂಗವು ಎದ್ದು ಪ್ರಮಥರೊಡಗೂಡಿ ಕುಮಾರಠಾವ ಮಾಡಿದಂಗ ಲಿಂಗವ ತನ್ನ ಚರಣತಳಕ್ಕೆ ಸೂತ್ರವ ಹಿಡಿಸಿ, ಗುರುಶಿಷ್ಯತ್ವವೆಂಬ ಉಭಯ ಭೇದವಳಿದು ಏಕರೂಪವಾಗಿ ನಿರಂಜನ ಮೂರ್ತಿಗೆ ಅಭಿ ವಂದಿಸಿ, ಅಷ್ಟಾಂಗ ಪ್ರಣತರಾಗಿ ಅಪ್ಪಣೆಯ ಬೆಸಗೊಂಡು, ಆ ನಿರಂ ಜನ ಮೂರ್ತಿಗೆ ಪ್ರತಿ ಸಿಂಹಾಸನವ ಮಾಡಿಸಿ, ಗುರುಶಿಷ್ಯವಭಿಮುಖ ವಾಗಿ ಗುರುವಿನ ಬೈಕ್ಕು ಶಿಷ್ಯನ ಮಸ್ತಕದಲ್ಲಿ ಸೂಸೆ, ಆ ಶಿಷ್ಯನ ಬೈಕ್ಕು ಗುರುವಿನ ಚರಣಕಮಲದಲ್ಲಿ ಸೂಸೆ ಏಕಲಿಂಗ ನಿಷ್ಠೆಯಿಂದ ಸಾವಧಾನ ಭಕ್ತಿ ಕರಿಗೊಂಡು, ಆ ಲಿಂಗಾಗದ ಭಾಳದ ಪೂರ್ವ ಲಿಖಿತವ ಜಂಗಮ ಚರಣೋದ್ಭಾಳನದಿಂದ ತೊಡೆದು, ಲಿಂಗಕ್ಕೆ ೨೧ ಪೂಜೆಯ ಮಾಡಿಸಿ, ಲಿಂಗಕ್ಕೆ ಲಿಂಗವ ತೋರಿ, ಪಾಣಿಗ್ರಹಣವ ಮಾಡಿ, ಮಂತ್ರ ವರ್ಣ ದಲ್ಲಿ ಉಸುರಿ, ಪ್ರಮಥರೊಡಗೂಡಿ, ಸೇವೆಯನೆರೆದು, ಕಂಕಣವ ಕಟ್ಟಿ, ನಿಮಿಷಾರ್ಧವಗಲಬೇಡೆಂದು ಅಭಯ ಹಸ್ತವನಿಟ್ಟು ಸರ್ವಾಂಗದಲ್ಲಿ ಚಿದ್ಭನ ಲಿಂಗವನಿತ್ತುದೇ ಪ್ರಥಮದಲ್ಲಿ ಗುರು ಪ್ರಸಾದ ನೋಡಾ. ಅದರಿಂ ಮೇಲೆ ಕ್ರಿಯಾಮಂತ್ರವ ಹೇಳಿ, ದಶವಿಧ ಪಾದೋದಕ ಏಕಾ ದಶ ಪ್ರಸಾದವ ಕರುಣಿಸಿದುದೇ ದ್ವಿತೀಯದಲ್ಲಿ ಲಿಂಗ ಪ್ರಸಾದ ನೋಡಾ. ಅದರಿಂ ಮೇಲೆ ಲಿಂಗಾಂಗ ಷಟ್ ಸ್ಥಾನಂಗಳಲ್ಲಿ ಅಷ್ಟವಿಧ ಸಕೀಲು ಮೊದಲಾದ ಸಮಸ್ತ ಸಕೀಲ ಮರ್ಮವ ಕರುಣಿಸಿದ್ದುದೇ ತೃತೀಯದಲ್ಲಿ ಜಂಗಮ ಪ್ರಸಾದ ನೋಡಾ. ಅದರಿಂದತ್ತ ಲಿಂಗಾಂಗವೆರಡಳಿದು ಸರ್ವಾಚಾರ ಸಂಪತ್ತಿನ ಆಚರಣೆಯ ತೋರಿ, ಮಹಾಪ್ರಸಾದ ಶಿವಾ ನುಭವ ಸ್ವರೂಪವ ಬೋಧಿಸಿ ಶ್ರೀಗುರು ಲಿಂಗಜಂಗಮರ ಅಂತರಂಗ ದಲ್ಲಿ ಬೆಳಗುವ ಚಿಜ್ಜ್ಯೋತಿ ಶರಣನೇ ಚತುರ್ಥದಲ್ಲಿ ನಿಜ ಪ್ರಸಾದ

ನೋಡಾ. ಈ ಚತುರ್ವಿಧ ಪ್ರಸಾದ ಸ್ವರೂಪವೇ ನೀನೆಂದರಿದು ಇನ್ನಾವ ಭಯಕ್ಕೆ ಹೆದರಬೇಡವಯ್ಯಾ. ಪ್ರಮಥರಾಚರಿಸಿದ ಆಚಾರ ಕ್ರಿಯಾ ಜ್ಞಾನಾಚರಣೆಯ ಸಂಬಂಧಕ್ಕೆ ಬಂದುದ ಕೊಂಡು ಬಾರದುದನುಳಿದು ಚಿದ್ಘನ ಮಹಾಲಿಂಗದಲ್ಲಿ ಏಕವಾಗಿ ಬಾಂಧ ಸಂಗನಬಸವೇಶ್ವರಾ.

೧೦೨. ಗುರುವೇ ನಮೋ ನಮೋ ಶರಣಾಗತ ರಕ್ಷಕರ ಗುರುವೇ ನಮೋ ನಮೋ. ಜೀಡಿಕುಂಡಲಿಯುಪದೇಶದಂತೆ ಎನ್ನ ನಿಮ್ಮಂತೆ ಮಾಡಿದ ಗುರುವೇ ನಮೋ ನಮೋ. ಸಕಲದೊಳಹೊರಗೆ ಎನ್ನ ವ್ಯಾಪಕವ ಮಾಡಿ ತೋರಿದ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ಗುರುವೇ ನಮೋ ನಮೋ.

ಗುರುಶಿಷ್ಯ ಸಾಮರಸ್ಯವು.

೧೦೩. ಶ್ರೀಗುರುವು ಮಾಡಿದ ಗುರುತ್ವವು ಉಪಮಾತೀತವಯ್ಯ. ನೇತ್ರದಲ್ಲಿ ತನ್ನ ರೂಪ ತುಂಬಿ, ನೇತ್ರವನು ಗುರುವ ಮಾಡಿದ. ಶ್ರೋತ್ರದಲ್ಲಿ ಮಹಾಮಂತ್ರವ ತುಂಬಿ ಶ್ರೋತ್ರವ ಗುರುವ ಮಾಡಿದ. ಘ್ರಾಣದಲ್ಲಿ ಗುರುಪಾದ ಪದ್ಮದಲ್ಲಿಯ ಮಹಾಗಂಧವನು ತುಂಬಿ, ಘ್ರಾಣವನು ಗುರುವ ಮಾಡಿದ. ಜಿಹ್ವೆಯಲ್ಲಿ ತನ್ನ ಕರುಣ ಪ್ರಸಾದವ ತುಂಬಿ, ಜಿಹ್ವೆಯನು ಗುರುವ ಮಾಡಿದ. ಕಾಯವನು ಭಕ್ತಕಾಯ ಮಮಕಾಯವೆಂದು ಪ್ರಸಾದಕಾಯವೆಂದೆನಿಸಿ, ಕಾಯವನು ಗುರುವ ಮಾಡಿದ. ಪ್ರಾಣವನು ಲಿಂಗಪ್ರಾಣ ಸಂಬಂಧವ ಮಾಡಿ, ಪ್ರಾಣವನು ಗುರುವ ಮಾಡಿದ. ಅಂತು ಅಂತರಂಗ ಬಹಿರಂಗವನು ಗುರುವ ಮಾಡಿ ಸರ್ವಾಂಗವನು ಗುಪ್ತವ ಮಾಡಿದ ಮಹಾಗುರುವಿಂಗೆ ನಾನಿನ್ನೇನ ಮಾಡುವೆನಯ್ಯ? ಗುರು ಪೂಜೆಯಂ ಮಾಡಲು ಆವಾವ ದ್ರವ್ಯಂಗಳನು ಆವಾವ ಪದಾರ್ಥಂಗಳನು ಆವಾವ ಪುಷ್ಪಾದಿಗಳನು ವಿಚಾರಿಸಿ ನೋಡಿದಡೆ ಆವಾವೂ ಗುರುತ್ವವಿಲ್ಲ. ಸರ್ವದ್ರವ್ಯ ಮೂಲವು, ಸರ್ವಪದಾರ್ಥ ಮೂಲವು, ಸರ್ವರಸ ಪುಷ್ಪ ಫಲಾದಿಗಳೆಲ್ಲಕ್ಕೆಯು ಮೂಲಗಮನವು ಗುರುತ್ವವಳ್ಳದು. ಎನ್ನ ಶಿವನು ಶ್ರೀಗುರುವಿನ ದರ್ಶನವ ಮಾಡಿ ಸುಖಿಯಪ್ಪನಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೧೦೪. ಯಥಾ ಬೀಜಂ ತಥಾಂಕುರಂ ತಪ್ಪದು. ಕಲ್ಪವೃಕ್ಷದಿಂದಾದ ಬೀಜ ಕಲ್ಪವೃಕ್ಷವಪ್ಪದು ತಪ್ಪದು. ದಿವ ದಿವ ತಪ್ಪದು ನೋಡಾ. ಕಾಮಧೇನುವಿನ ಶಿಸು ಕಾಮಧೇನುವಪ್ಪದು ತಪ್ಪದು ನೋಡಾ. ಸದ್ಗುರುವಿನಿಂದಾದ ಶಿಷ್ಯನು ಸದ್ಗುರುವಪ್ಪದು ತಪ್ಪದು ನೋಡಾ. 'ಯಥಾಬೀಜಂ ತಥಾಂಕುರಂ' ಎಂಬ ವಾಕ್ಯ ತಪ್ಪದು ತಪ್ಪದು. ಶಿವಬಲ್ಲ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೧೦೫. ಜ್ಯೋತಿಯ ಸಂಗದಿಂದ ಕರ್ಪುರ ಜ್ಯೋತಿಯಪ್ಪಂತೆ, ಅಪ್ಪುವಿನ ಸಂಗದಿಂದ ಉಪ್ಪು ಅಪ್ಪುವಪ್ಪಂತೆ, ಶ್ರೀಗುರುವಪ್ಪದು ತಪ್ಪದು ಶಿವನಾಣೆ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

೧೦೬. ಗುರುಶಿಷ್ಯ ಸಂಬಂಧವಾದುದಕ್ಕಾವುದು ಕುರುಹಯ್ಯ? ಹಿಂದೆ ಬಿಟ್ಟು ಮುಂದೆ ಹಿಡಿಯಲೇ ಬೇಕು. ಕೂಡಲಸಂಗಮದೇವಯ್ಯ ಕಿಚ್ಚಿನೊಳಗೆ ಕೋಲ ಬಯಚ್ಚಿಟ್ಟಂತೆ ಇರಬೇಕು.

೧೦೭. ಗುರುವಿಗೆ ಲಿಂಗ ಬಂದು ಗುರುವಾದುದನರಿದು, ಮತ್ತರಿಯದೆ ಕೆಟ್ಟನಲ್ಲಾ ಶಿಷ್ಯನೆಂದು. ಆ ಲಿಂಗವೇ ಗುರುವೆಂಬುದನರಿಯದೆ, ನಾ ಶಿಷ್ಯನೆಂದು ಕಟ್ಟಿದೆನಲ್ಲಾ ಆ ಲಿಂಗವ. ಆವ ಬೀಜವ ಬಿತ್ತಿದಡೂ ಆ ಬೀಜವಪ್ಪುದಲ್ಲದೆ ಬೇರಪ್ಪುದೇ? ಜ್ಯೋತಿ ಜ್ಯೋತಿಯ ಮುಟ್ಟಿದಂತೆ ಇದಿರೆಡೆ ಇಲ್ಲದೆ ಗುರುಕರಜಾತನ ಮಾಡಬೇಕು. ನಾನು ಕರ್ತು ಆವನು ಭೃತ್ಯನೆಂದಲ್ಲಿ ಗುರುವಾದನಲ್ಲದೆ, ಅಘಹರ ಶ್ರೀಗುರುವಾದುದಿಲ್ಲ ಸದ್ಯೋಜಾತ ಲಿಂಗಕ್ಕೆ.

೧೦೮. ಗುರುವ ತಲೆಯಲ್ಲಿ ಹೊತ್ತು ನಡೆವ ಶಿಷ್ಯನಲ್ಲಿ ಗುರುವಡಗಿ, ಶಿಷ್ಯ ಗುರುವಾದ ಪರಿಯ ಬಲ್ಲವರಾರಯ್ಯ? ಗುರುವಿನ ಗುರುತ್ವ ಶಿಷ್ಯಂಗಾಯಿತ್ತು. ಶಿಷ್ಯನ ಶಿಷ್ಯತ್ವ ಎಲ್ಲಿ ಹೋಯಿತ್ತೆಂದರಿಯಬಾರದು. ಗುರುವಿಲ್ಲದ ಶಿಷ್ಯಂಗೆ ಪರವಿಲ್ಲ. ಪರವಿಲ್ಲದ ಶಿಷ್ಯ ಸ್ವಯವಾದನೆಂಬುದ ನಿಮ್ಮ ಶರಣರ ಅನುಭಾವದಲ್ಲಿ ಕಂಡೆನು ಕಾಣಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

೧೦೯. ತಂದೆಯ ಸಾಮರ್ಥ್ಯದಿಂದ ಹುಟ್ಟಿದ ಮಗನಿಗೆ ತಂದೆಯ ಸ್ವರೂಪಲ್ಲದೆ ಬೇರೊಂದು ರೂಪೆಂದು ತಿಳಿಯಲುಂಟೇ? ಶಿವ ತಾನೆ ತನ್ನ ಸಾಮರ್ಥ್ಯವೇ ಒಂದೆರಡಾಗಿ, ಗುರುವೆಂದು ಶಿಷ್ಯನೆಂದು ಆಯಿತ್ತೆಂದರೆ,

ಆ ಗುರುವಿಂಗೆ ಶಿಷ್ಯಂಗೆ ಬೇರಿಟ್ಟು ನುಡಿಯಲಾಗದಯ್ಯ. ಗುರುವಿನ ಅಂಗ ಶಿಷ್ಯ, ಶಿಷ್ಯನ ಲಿಂಗ ಗುರು. ಗುರುವಿನ ಪ್ರಾಣ ಶಿಷ್ಯ, ಶಿಷ್ಯನ ಪ್ರಾಣ ಗುರು. ಗುರುಶಿಷ್ಯ ಸಂಬಂಧವಾದ ಗುರುಶಿಷ್ಯರೆಂದು ಬೇರಿಟ್ಟು ನುಡಿವ ಭ್ರಷ್ಟರನೇನೆಂಬೆನಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ?

೧೧೦. ಒಳಗು ಹೊರಗು ಎಂಬ ಉಭಯ ಸಂದೇಹದಿಂದ ಗುರುಶಿಷ್ಯರೆಂದು ನುಡಿದುಕೊಂಡು ನಡೆಯಬೇಕಾಯಿತ್ತಲ್ಲದೆ, ಒಳ ಹೊರಗೆಂಬ ಉಭಯವಳಿದು, ಜೀವಪರಮರೆಂಬ ಉಭಯವು ಪರಮ ನೊಬ್ಬನೇ ಎಂದು ತಿಳಿದು, ಗುರುವೇ ಶಿಷ್ಯ, ಶಿಷ್ಯನೇ ಗುರುವಾದುದ ನೇನೆಂಬನಯ್ಯ ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ?

೧೧೧. ಶಿಷ್ಯನ ಗುರುತ್ವವನು, ಗುರುವಿನ ಮಹತ್ವವನು, ಆರಯ್ಯ ಬಲ್ಲವರು? ಗುರು ಶಿಷ್ಯನಾದ ಪರಿಯನು ಶ್ರೀಪಂಚಾಕ್ಷರಿಯ ಉಚ್ಚಾರಣೆಯ ವಿಶ್ವಾಸದ ಮಥನದಿಂದ ವಶಿಷ್ಠ ವಾಮದೇವ ಮೊದಲಾದ ಸಮಸ್ತ ಋಷಿಗಳಿಗೆ ಹಿರಿದಪ್ಪ ಶಿಷ್ಯ ಗುರುವಾದ ಪರಿಯನು ಆರಯ್ಯ ಬಲ್ಲವರು? ವಾಙ್ಮನಾತೀತ ಉಪಮಿಸಬಾರದ ಘನವು ಮಹಾಕ್ರಿಯನು ಭಕ್ತಿಯಿಂದ ಗುರುಭಕ್ತಿ ವತ್ಸಲನಾಗಿ ಶಿಷ್ಯನಾದ ಪರಿಯನು ಆ ಬೀಜವೃಕ್ಷನ್ಯಾಯ ದಂತೆ ಅವಿನಾಭಾವವಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೧೧೨. ಗುರುಶಿಷ್ಯ ಸಂಬಂಧದನುಭಾವವ ಕೇಳಿರಯ್ಯ. ಗುರು ವೆಂಬ ಪರಾಪರ, ಗುರುವೆಂಬ ಪರಮಾರ್ಥ, ಶಿಷ್ಯನೆಂಬ ಏಕಾರ್ಥ, ಗುರುವೆಂಬವನಲ್ಲಿ ಶಿಷ್ಯನೆಂಬವನೆಂತೋ? ಶಿಷ್ಯನೆಂಬವನಲ್ಲಿ ಗುರು ವೆಂಬವನೆಂತೋ? ಸಿದ್ಧಸೋಮನಾಥನಲ್ಲಿ ಶಬ್ದಕ್ಕಿಂಬಿಲ್ಲ.

೧೧೩. ಗುರುಶಿಷ್ಯ ಸಂಬಂಧವನೇನೇಂದುಪಮಿಸುವೆನಯ್ಯ ? ಜ್ಯೋತಿಯಿಂದೊದಗಿದ ಜ್ಯೋತಿಯಂತಿರಬೇಕು. ದರ್ಪಣದೊಳಡಗಿದ ಪ್ರತಿಬಿಂಬದಂತಿರಬೇಕು. ಇದು ಕಾರಣ ಕೂಡಲಚನ್ನಸಂಗಯ್ಯನಲ್ಲಿ ಮರೀಚಿಕಾಜಲದಂತಿರಬೇಕು.

೧೧೪. ಗುರುಶಿಷ್ಯ ಸಂಬಂಧವನರಿಯಲೆಂದು ಹೋದರೆ ತಾನೇ ಗುರುವಾದ, ತಾನೇ ಶಿಷ್ಯನಾದ, ತಾನೇ ಲಿಂಗವಾದ, ಗುಹೇಶ್ವರಾ

ನಿಮ್ಮ ಶರಣನ ಕಾಯದ ಕೈಯ್ಯಲ್ಲಿ ಲಿಂಗವ ಕೊಟ್ಟರೆ ಭಾವ ಒತ್ತಲೆಯಾಯಿತ್ತು.

೧೧೫. ಗುರುಶಿಷ್ಯ ಸಂಬಂಧದಿರವನಿನ್ನಾರು ಬಲ್ಲರಯ್ಯ ? ನೆರೆದ ನೆರವಿಂಗೆ ಹೇಳಲುಂಟೇ? ಈ ಮಾತು ಸ್ತ್ರೀ ಪುರುಷರು ಕೂಡಿದ ಕೂಟವ ಪುತ್ತೊಬ್ಬರಿಗರುಹಬಾರದು. ಗುರು ಶಿಷ್ಯ ಸಂಬಂಧವ ಇನ್ನಾರು ಬಲ್ಲ ರಯ್ಯ ಕಲಿದೇವಯ್ಯ?

೧೧೬. ಗುರುವೆಂಬ ಪ್ರತಿಭಾವವಿಲ್ಲದ ಶಿಷ್ಯ, ಶಿಷ್ಯನೆಂಬ ಪ್ರತಿ ಭಾವವಿಲ್ಲದ ಗುರು, ಏನೆಂಬೆನೇನೆಂಬೆ? ಎರಡಿಲ್ಲದ ಘನವ ಏನೆಂಬೆ ನೇನೆಂಬೆ? ಉಭಯವಳಿದೊಂದಾದುದ ಏನೆಂಬೆನೇನೆಂಬೆ? ಕೂಡಲ ಚನ್ನಸಂಗನಲ್ಲಿ ಗುರುಶಿಷ್ಯಸಂಬಂಧವಪೂರ್ವ.

೧೧೭. ಒಂದೆಂಬೆನೆ? ಎರಡಾಗಿದೆ. ಎರಡೆಂಬೆನೆ? ಒಂದಾ ಗಿದೆ. ಒಂದೆರಡೆಂಬೆ. ಸಂದೇಹವಿದೇನೋ? ಅಗಲಲಿಲ್ಲದ ಕೂಟಕ್ಕೆ ಬಿಚ್ಚಿ ಬೇರಾಗದ ಉಪದೇಶ. ಗುರುಶಿಷ್ಯರೆಂಬ ಭಾವಕ್ಕೆ ಭೇದ ಉಂಟೇ ಗುಹೇಶ್ವರಾ?

೧೧೮. ಜ್ಯೋತಿಯೊಳಗಿರ್ಪ ಕರ್ಪುರಕ್ಕೆ, ಅಪ್ಪುವಿನೊಳಗಿಪ್ಪ ಉಪ್ಪಿಂಗೆ, ಶ್ರೀ ಗುರುವಿನೊಳಗಿಪ್ಪ ಶಿಷ್ಯಂಗೆ, ಬೇರೆ ಬೇರೆ ಕ್ರಿಯಾವರ್ತನೆ ಯುಂಟೇ ಗುಹೇಶ್ವರಾ?

೧೧೯. ಗುರುವಿನ ಪರಿ ವಿಪರೀತವಯ್ಯ. ಭ್ರಮರ ಕೀಟನ್ಯಾಯ ದಂತಾಯಿತ್ತು. ಗುರು ತನ್ನ ನೆನೆಹನ್ನಬರ ಎನ್ನನಾ ಗುರುವ ಮಾಡಿ ದನು. ಇನ್ನು ಶಿಷ್ಯನಾಗಿ ಶ್ರೀಗುರುವ ಪೂಜಿಸುವವರಾರು ಹೇಳಾ ಗುಹೇಶ್ವರಾ?

೧೨೦. ಅರಿವನರಿದಿಹೆನೆಂದರೆ ಮರವೆ. ಮರಹ ಮರೆದಿಹೆನೆಂ ಬುದು ಮರವೆ. ಸಾಕಾರ ನಷ್ಟ, ನಿರಾಕಾರ ದೃಷ್ಟವೆಂಬುದು ಭಾವದ ಬಳಕೆ. ಗುರುವೆಂಬುದು ಶಿಷ್ಯನೆಂದಲ್ಲಿಯೇ ಹೋಯಿತ್ತು. ಶಿಷ್ಯನೆಂ ಬುದು ಗುರುವೆಂದಲ್ಲಿಯೇ ಹೋಯಿತ್ತು. ನಿರ್ಣಯದಲ್ಲಿ ನಿಜೈಕ್ಯನಾದೆ ನೆಂದರೆ, ಎಚ್ಚರಿಕೆಯಲ್ಲಿ ತಪ್ಪಿತ್ತು. ಸಹಜ ಸಂಬಂಧಕ್ಕೆ ಗುರು ಉಂಟೇ? ಗುಹೇಶ್ವರಲಿಂಗದಲ್ಲಿ ಪರವೆಂದಲ್ಲಿ ಗುರು ಉಂಟಲ್ಲದೆ, ಸ್ವಯವೆಂದಲ್ಲಿ ನುಡಿಯಲಿಲ್ಲ.

೧೮. ದರ್ಪಣದೊಳಗಣ ರೂಹಿಂಗೆ ಆ ದರ್ಪಣವೇ ಉತ್ಪತ್ತಿ ಸ್ಥಿತಿ ಲಯವಲ್ಲದೆ ಮರ್ತ್ಯಲೋಕದ ಪ್ರಕೃತಿಯಲಿಲ್ಲವೇಕಯ್ಯ? ಆ ಲೋಕದೊಳಗೆ ಉತ್ಪತ್ತಿ ಸ್ಥಿತಿ ಲಯ ಇದೆಂತಹ ದೇಹ ಕರ್ಮಬದ್ಧರು? ಒಂದರ ಪರಿ ಒಂದಕ್ಕಿಲ್ಲ. ಕಂಡಿರೇ ದೃಷ್ಟವ. ಗುರುಹಸ್ತದೊಳಗಣ ಸದ್ಭಕ್ತಂಗೆ ಅಲ್ಲಿಯೇ ಉತ್ಪತ್ತಿ ಸ್ಥಿತಿ ಲಯ. ಇವೆಂತಹ ಪರಿಯೋ? ಮತ್ತಾವ ಪರಿಯೂ ಇಲ್ಲ. ಲಿಂಗದ ಪರಿಯ ಮಾಡಿದ ಗುಹೇಶ್ವರಾ.

ಅರ್ಥಃ—ಕನ್ನಡಿಯೊಳಗಣ ಪ್ರತಿಬಿಂಬ ಅಲ್ಲಿಯೇ ತೋರಿ ಅಲ್ಲಿಯೇ ಅಳಿವಂತೆ ಶ್ರೀಗುರುವಿನೊಳಗೆ ಉದಿಸಿದ ಶರಣನು ಆ ಶ್ರೀಗುರುವಿನೊಳಗೆ ಅಳಿವನಲ್ಲದೆ ಲೋಕದ ಸಂಸಾರಿಗಳ ಹಾಗೆ ಸಾವನಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

ಲಿಂಗ.

ಲಿಂಗದ ಸ್ವರೂಪು.

೧. ಕಟಿದ ಕಲ್ಲು ಲಿಂಗವೆಂದೆನಿಸಿತ್ತು. ಕಟಿಯದ ಕಲ್ಲು ಕಲ್ಲೆನಿಸಿತ್ತು. ಪೂಜಿಸಿದ ಮಾನವ ಭಕ್ತನೆನಿಸಿದನು. ಪೂಜಿಸದ ಮಾನವ ಮಾನವನೆನಿಸಿದನು. ಕಲ್ಲಾದರೇನು? ಪೂಜೆಗೆ ಫಲವಾಯಿತ್ತು. ಮಾನವನಾದರೇನು? ಭಕ್ತಿಗೆ ಕಾರಣಿಕನಾದನು. ಕಲ್ಲು ಲಿಂಗವಲ್ಲ. ಲಿಂಗ ಕಲ್ಲಲ್ಲ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨. ಆಕಾರವಿಲ್ಲದ ಮೂರ್ತಿಯ ಸಾಕಾರಕ್ಕೆ ತಂದು ಪೂಜಿಸಿದೆ ನೋಡಾ ಮನವೇ. ಆಕಾರದ ಮೂರ್ತಿಯ ನಿರಾಕಾರಕ್ಕೆ ತಂದು ಪೂಜಿಸಲರಿಯೆ ನೋಡಾ ಮನವೇ 'ಯದ್ದೃಷ್ಟಂ ತನ್ನಷ್ಟಂ' ಎಂದ ಬಳಿಕ ನಿರಾಕಾರ ನಿಜ ನಿರ್ವಯಲವೆ ಸ್ಥಿರವೆಂದು ನಂಬು ಮನವೇ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ.

೩. ಕಲ್ಲು ಹಿಡಿದು ಅಲ್ಲಮನ ನೋಡುವೆವೆಂಬವರ ಖುಲ್ಲಮನುಜರೆಂಬೆ. ಕಲ್ಲು ಹಿಡಿದವರೆಲ್ಲ ಅಲ್ಲಮನಾಗಲು ಭವಬೀಜ ಇನ್ನೆಲ್ಲಿಯದಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ?

೪. ಸಂತೆಯೊಳಿದ್ದ ಕಲ್ಲುಗಳೆಲ್ಲ ಲಿಂಗವೇನೋ ಅಯ್ಯ? ಪರ್ವತ ವಾರಣಾಸಿ ಬದರಿಕಾ ಕ್ಷೇತ್ರಗಳಲ್ಲಿದ್ದ ಕಲ್ಲುಗಳೆಲ್ಲ ಲಿಂಗವೇನೋ ಅಯ್ಯ? ಅಂತಕಾಂತಕ ಶ್ರೀಗುರುಮೂರ್ತಿಯು ತನ್ನರೂಹಿನ ರೂಪುವಿಂತೆಂದು ತೋರಿದ ನಿಜ ಕಲ್ಲೇ ನಿಜಲಿಂಗ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೫. ಗಟ್ಟಿಹಿಡಿದು ಗೊತ್ತ ಮುಟ್ಟಬಾರದಯ್ಯ. ನೀರಲ್ಲಿಯ ಕ್ರೀಡೆ ಕುಂಬಳಕಾಯಿಗಲ್ಲದೆ ದೊಡ್ಡ ಬಂಡೆಗುಂಟೇನಯ್ಯ? ಚರಿಸುವ ಜೀವಿಗೆ ನಿರ್ವಯಲ ಪರವಸ್ತು ಲಿಂಗವಲ್ಲದೆ ಪಾಷಾಣಮಯ ಲಿಂಗವೇ ಅಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ?

೬. ವೇದ ವೇದಿಸಲರಿಯದೆ ಅಭೇದ್ಯಲಿಂಗವೆಂದು ನಡುನಡುಗಿತ್ತು. ಶಾಸ್ತ್ರ ಸಾಧಿಸಲರಿಯದೆ ಅಸಾಧ್ಯಲಿಂಗವೆಂದು ಸಾರುತ್ತಿದ್ದಾವೆ.

ತರ್ಕ ತರ್ಕಿಸಲರಿಯದೆ ಅತರ್ಕ್ಯ ಲಿಂಗವೆಂದು ಮೌನಗೊಂಡಪ್ಪ. ಅಗಮ ಅಗಮ್ಯಲಿಂಗವೆಂದು ಗಮಿಸಲರಿಯದೆ ಹೋದವು. ನರರು ಸುರರು ಅಂತುವ ಕಾಣರು. ನಿಮ್ಮ ಕೂಡಲಸಂಗಮದೇವನ ಪ್ರಮಾಣವ ಶರಣ ಬಲ್ಲ.

೭. ಮಹಾಲಿಂಗದ ಸ್ಥಾನಂಗಳು ಮಹಾಲಿಂಗದ ಹೆಸರಲ್ಲದೆ ಲಿಂಗ ಬೇರೆ ರೂಪ ನಿರೂಪವಲ್ಲ. ಲಿಂಗ ಬೇರೆ ಕಾಯ ಸಂಬಂಧಿಯಲ್ಲ. ಲಿಂಗ ಬೇರೆ ಮಹಾಘನದಿಂದತ್ತತ್ತ. ಕೂಡಲಸಂಗಮದೇವರ ನಿಲವು ಆರಿಗೆಯೂ ಅಳವಡದು.

೮. ಹಸಿದು ಎಕ್ಕೆಯ ಕಾಯ ಮೆಲಬಹುದೇ? ನೀರಡಿಸಿ ವಿಷವ ಕುಡಿಯಬಹುದೇ? ಸುಣ್ಣ ತುಯ್ಯಲ ಬಣ್ಣ ಒಂದೆಂದರೆ ನಂಟುತನಕ್ಕೆ ಉಣಬಹುದೇ? ಲಿಂಗಸಾರಾಯ ಸಜ್ಜನರಲ್ಲದವರ ಕೂಡಲಸಂಗಮದೇವರೆಂತೊಲಿವ?

೯. ಅಹಂಕಾರ ಮನವನಿಂಬುಗೊಂಡಲ್ಲಿ, ಲಿಂಗ ತಾನೆಲ್ಲಿಪ್ಪುದೋ? ಅಹಂಕಾರಕ್ಕೆ ಎಡೆಗುಡದೆ, ಲಿಂಗ ತನುವಾಗಿರಬೇಕು. ಅಹಂಕಾರರಹಿತನಾದಲ್ಲಿ ಸನ್ನಿಹಿತ ಕಾಣಾ ಕೂಡಲಸಂಗಮದೇವಾ.

೧೦. ಬೆಳಗಿನೊಳಗಣ ಮಹಾ ಬೆಳಗು. ಶಿವಶಿವ ಪರಮಾಶ್ರಯವೇ ತಾನಾಗಿ ಶತಪತ್ರಕಮಳ ಕರ್ಣಿಕಾಮಧ್ಯದಲ್ಲಿ ಸ್ವತಃ ಸಿದ್ಧನಾಗಿಪ್ಪ ನಮ್ಮ ಕೂಡಲಸಂಗಮದೇವ.

೧೧. ಪೀಠದ ಮಂಟಪದಲ್ಲಿ ಗುರು ಕುಳ್ಳಿರ್ದು ದ್ವಿದಳ ಮಂಟಪದಲ್ಲಿ ಶಿಷ್ಯಂಗೆ ತ್ರಿಕೂಟ ಸ್ಥಾನದ ಲಿಂಗವನುಪದೇಶಿಸಿ ತೋರಿದ ಗುರು ಲಿಂಗದೊಳಗಾದನು. ಇದು ಕರ ಜೋಡ್ಯ ನೋಡಾ ಶಿಷ್ಯ ಲಿಂಗವ ಗ್ರಹಿಸಿ ಲಿಂಗವಾದ ಪರಿಯನು ಇತರರ್ಗೆ ಅರಿಯಬಹುದೇ? ಜ್ಞಾನೋಪದೇಶದ ಬಗೆಯನು ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ ನಿಮ್ಮ ಶರಣ ಬಲ್ಲನು.

೧೨. ಕಾಯವೆಂಬ ಪುರವನಾಳುವ ಜೀವನೆಂಬರಸು ನಿಜಬಲದಿಂ ಕರ್ಮವೆಂಬ ರಾಜ್ಯದಲ್ಲಿ ಸಂಪಾದಿಸಿದ ಸುಕೃತ ದುಷ್ಕೃತಗಳೆಂಬ ದ್ರವ್ಯವನ್ನು ಮನವೆಂಬ ಬೊಕ್ಕಸದೊಳಗಟ್ಟು, ಅಲ್ಲಿ ಭೋಗಂಗಳನ್ನು ಅನುಭವಿಸುತಿರ್ಪ ಕೋಟಲೆಗಲಿಸಿ, ವೇದಾಂತ ಸಮುದ್ರದಲ್ಲಿ ಮುಳುಗಿ, ಅಲ್ಲಿರ್ಪ ಜ್ಞಾನವೆಂಬ ಮುಕ್ತಿರತ್ನವಂ ಕೊಂಡು, ಪರತತ್ವ ದೇಶದಲ್ಲಿ ಪರಿಣಾಮಿಸುತ್ತಿರ್ಪ ಗುರುವೆಂಬ ಮಹಾರಾಜಂಗೆ ಕಾಣಿಕೆಯಂ ಕೊಟ್ಟು,

ಲಿಂಗನೆಂಬಕ್ಷಯ ನಿಧಾನಮಂ ಪಡೆದು, ಅದನ್ನು ಮನೋ ಭಂಡಾರದೊಳಿಟ್ಟು, ಅತಿ ಜಾಗರೂಕತೆಯಿಂ ತಾನೇ ಕಾಪಾಡುತ್ತಿರಲು, ಕತಿಪಯ ಕಾಲಕ್ಕೆ ಕಾಲದೂತರು ಬಂದು, ಅಂಗಪುರ ಭಂಗಮಂ ಮಾಡಲು, ತತ್ಪುರವಾಸಿಗಳಾದ ರುದ್ರರು ಕಾಲದೂತರಂ ತರಿದು, ಯಮನಂ ಪರಿದು, ಲಿಂಗ ನಿಧಾನಬಲದಿಂ ಮೋಕ್ಷ ಸಾಮ್ರಾಜ್ಯಮಂ ಸಂಪಾದಿಸುತ್ತ ಬಾಳುವ ನಿತ್ಯ ಸುಖವನ್ನು ನನಗೆ ಕೊಟ್ಟ ಸಲಹಾ ಮಹಾಘನ ದೊಡ್ಡ ದೇಶಿಕಾರ್ಯ ಗುರುಪ್ರಭುವೇ.

ಲಿಂಗ ಭಕ್ತರ ಪರಸ್ಪರ ಸಂಬಂಧ.

೧೩. ತನುವಿನೊಳಗೆ ಲಿಂಗ, ಲಿಂಗದೊಳಗೆ ಪ್ರಾಣವಾಗಿರ್ದು ಬೇರಿಟ್ಟ ನುಡಿವ ಭಿನ್ನ ಜ್ಞಾನಿಗಳಿಗೆ ಲಿಂಗವೆಲ್ಲಿಯದೋ? ಲಿಂಗವಿಲ್ಲಾಗಿ ಪ್ರಸಾದವಿಲ್ಲ. ಪ್ರಸಾದವಿಲ್ಲಾಗಿ ಮುಕ್ತಿ ಇಲ್ಲ ನೋಡಾ. ಇದು ಕಾರಣ ಭಿನ್ನ ಭಾವವಳಿದು ನಿನ್ನೊಳಡಗಿದೆನು ಕಾಣಾ ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ.

೧೪. ದೇವಭಕ್ತರ ಬಗೆಯು ಬೇರೆಂದರೆ, ಭಕ್ತಿಯ ಬೀಜದ ಅಂಕುರವೇ? ಸತಿಪತಿಯು ಬೇರಾದರೆ, ಪಿಂಡದಂಕುರವೇ? ಭೂಮಿ ಬೀಜ ಬೇರಾದರೆ, ವೃಕ್ಷದಂಕುರವೇ? ಇದು ಕಾರಣ ದೇವಭಕ್ತರಲ್ಲಿ ಬೇರೆಂಬ ಬಗೆಯದೆಂತು ಹೇಳಾ ಕೂಡಲಚನ್ನಸಂಗಮದೇವಾ?

೧೫. ಕರಸ್ಥಲದ ಲಿಂಗ ಮನಸ್ಥಲಕ್ಕೆ ವೇದ್ಯವಾಗಿ, ಮನಸ್ಥಲದ ಲಿಂಗ ಮಹಾಸ್ಥಲಕ್ಕೆ ವೇದ್ಯವಾಗಿ, ಮಹಾಸ್ಥಲವೇ ಎನ್ನ ಸರ್ವಾಂಗ ವೇದ್ಯವಾದ ಬಳಿಕ, ಇನ್ನು ಭಿನ್ನ ಭಾವಕ್ಕೆ ತೆರಹುಂಟೇ ಹೇಳಾ? ಗುಹೇಶ್ವರನೆಂಬ ಪ್ರಾಣಲಿಂಗವು ಬೆರಸಿ ಸಮಧಾತುವಾದ ಬಳಿಕ ಎರಡೆಂಬುದಿಲ್ಲ ನೋಡಾ ಚನ್ನಬಸವಣ್ಣ.

೧೬. ಆಳವುತ್ತಳವುತ್ತ ಬಳಲುವರಲ್ಲದೆ, ಕೊಳಗ ಬಳಲುವದೇ? ನಡೆವುತ್ತ ನಡೆವುತ್ತ ಬಳಲುವರಲ್ಲದೆ, ಬಟ್ಟೆ ಬಳಲುವದೇ? ಶ್ರಮವ ಮಾಡುತ್ತ ಮಾಡುತ್ತ ಬಳಲುವರಲ್ಲದೆ, ಕೋಲು ಬಳಲುವದೇ? ನಿಜವನರಿಯದ ಭಕ್ತ ಬಳಲುವನಲ್ಲದೆ, ಲಿಂಗ ಬಳಲುವದೇ? ಕೂಡಲಸಂಗಮದೇವ ಅರಸರಿಯದ ಬಿಟ್ಟಿಯೋ.

ಲಿಂಗಾಯತ, ಲಿಂಗಸ್ವಾಯತ, ಲಿಂಗಸನ್ನಿಹಿತ.

೧೭. ಅಂಗದಲ್ಲಿ ಆಯತವಾಯಿತ್ತು, ಮನದಲ್ಲಿ ಸ್ವಾಯತವಾಯಿತ್ತು, ಭಾವದಲ್ಲಿ ಸನ್ನಿಹಿತವಾಯಿತ್ತು. ಆಯತವಾದುದೇ ಸ್ವಾಯತವಾಗಿ, ಸ್ವಾಯತವಾದುದೇ ಸನ್ನಿಹಿತವಾಗಿ, ಸನ್ನಿಹಿತ ಸಮಾಧಾನವಾಗಿ ನಿಂದುದು ನಿಜಗುರುಸ್ವತಂತ್ರ ಸಿದ್ಧಲಿಂಗೇಶ್ವರನೇ ತಾನಾಗಿ.

೧೮. ಶ್ರೀಗುರು ಕೊಟ್ಟ ಲಿಂಗ ತನ್ನ ನಚ್ಚಿನ ಲಿಂಗ ಆಯತವಾಯಿತ್ತಯ್ಯ. ಪ್ರಾಣನ ನಚ್ಚಿನಿಂದ ಸ್ವಾಯತವಾಯಿತ್ತಯ್ಯ. ಉಭಯದ ನಚ್ಚಿನಿಂದ ಸಂಗವಾಯಿತ್ತು ಕೂಡಲಚನ್ನಸಂಗಾ ನಿಮ್ಮಲ್ಲಿ.

ಅರ್ಥಃ— ಶಿಷ್ಯನ ಅಂತರಂಗದ ಚಿತ್ಕಲೆಯನೆ ಇಷ್ಟ ಲಿಂಗವ ಮಾಡಿ ಗುರು ಕರಸ್ಥಲಕ್ಕೆ ತಂದು ಕೊಟ್ಟಲ್ಲಿ ಗುರು ಕೊಟ್ಟುದೇ ಲಿಂಗವೆಂಬ ವಿಶ್ವಾಸ ಒಂದು, ತನ್ನ ಪ್ರಾಣ ಕಳೆಯೇ ಇಷ್ಟ ಲಿಂಗವಾಯಿತ್ತೆಂಬ ವಿಶ್ವಾಸ ಒಂದು. ಇಂತು ಉಭಯ ವಿಶ್ವಾಸ ಪುಟ್ಟಿಸಿ ನಚ್ಚಿದ ನಿಶ್ಚಯ ಭಾವದಿಂದ ಆತ್ಮನೆಂಬ ಅಂಗಕ್ಕೆ ಲಿಂಗದಲ್ಲಿ ಹಿಂಗಿದ ಕೂಟವಾಯಿತ್ತೆಂಬುದೀ ವಚನದ ತಾತ್ಪರ್ಯಾರ್ಥ.

ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ.

೧೯. ಹೃದಯ ಕಮಲದಲ್ಲಿ ವಾಸವಾಗಿರುವಾತನೊಬ್ಬನು, ಮನದ ಕೊನೆಯಲ್ಲಿ ಇರುವಾತನೊಬ್ಬನು, ಚಿದಾಕಾಶದಲ್ಲಿರುವಾತನೊಬ್ಬನು, ಇವರೆಲ್ಲರಲ್ಲಿ ಇರುವಾತನೊಬ್ಬನು ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನು.

೨೦. ಸ್ಥೂಲ ತನು, ಸೂಕ್ಷ್ಮ ತನು, ಕಾರಣ ತನು. ಸ್ಥೂಲ ತನುವಿನ ಮೇಲೆ ಇಷ್ಟಲಿಂಗ ಪ್ರತಿಷ್ಠೆ. ಸೂಕ್ಷ್ಮ ತನುವಿನ ಮೇಲೆ ಪ್ರಾಣಲಿಂಗ ಪ್ರತಿಷ್ಠೆ. ಕಾರಣ ತನುವಿನ ಮೇಲೆ ಭಾವಲಿಂಗ ಪ್ರತಿಷ್ಠೆ. ಇಂತೀ ಸ್ಥೂಲ ಸೂಕ್ಷ್ಮ ಕಾರಣವೆಂಬ ಮಹವು. ಆ ಮಹದ ಹೃದಯದಲ್ಲಿ ಕೊನೆದೋರುತಿರ್ಪ ಜ್ಯೋತಿಯು ನಮ್ಮ ಶರಣರ ಸರ್ವಾಂಗದಲ್ಲುಂಟು ನೋಡಯ್ಯ ಕೂಡಲಚನ್ನಸಂಗಮದೇವಾ.

೨೧. ಅಂತರಂಗದಲ್ಲಿ ಆವರಿಸಿ, ಬಹಿರಂಗದಲ್ಲಿ ತೋರಿದೆ. ಕಂಗಳ ಕೊನೆಯಲ್ಲಿ ಮೂರುತಿಯಾಗಿ, ಮನದ ಕೊನೆಯಲ್ಲಿ ತೊಳಗುನೆ. ಎನ್ನ ಬ್ರಹ್ಮರಂಧ್ರದಲ್ಲಿ ತೋರುವ ಜ್ಯೋತಿ ನೀನೇ ಉರಿಲಿಂಗದೇವನವ್ವಾ.

೨೨. ಲಿಂಗದಲ್ಲಿ ಪ್ರಾಣವ ನಿರಿಸಿ, ಪ್ರಾಣದಲ್ಲಿ ಲಿಂಗವನಿರಿಸಿ ನೆನೆವುತ್ತಿದ್ದ ಕಾರಣ ಪ್ರಾಣಲಿಂಗವಾಯಿತ್ತು. ಆ ಲಿಂಗ ಸರ್ವ ಕರಣಂಗಳ ವೇಧಿಸಿ, ಕರಣಂಗಳು ಲಿಂಗ ಕರಣಂಗಳಾದ ಕಾರಣ, ಒಳಗೆ ಕರತಳಾಮಳಕದಂತೆ ಲಿಂಗ ನೆಲೆಗೊಂಡಿತ್ತಾಗಿ ಹೊರೆದೆನೆಂದು ಅರಿಯನು, ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನೀವು ಪ್ರಾಣಲಿಂಗವಾಗಿ.

೨೩. ಅಂತರಂಗದಲ್ಲಿ ನಿರ್ಮಲ ಪರಂಜ್ಯೋತಿ ಪ್ರಾಣಲಿಂಗವನರಿಯದೆ ಬಹಿರಂಗದಲ್ಲಿ ಬಳಲುತ್ತಿದ್ದರಲ್ಲಾ! ಒಳಗೆ ತೊಳಗಿ ಬೆಳಗಿ ತೋರುವ ಚಿದಾಕಾಶ ಪರಬ್ರಹ್ಮ ಪ್ರಾಣಲಿಂಗವನು ಅವರೆತ್ತ ಬಲ್ಲರು? ಮಹಾನುಭಾವದಿಂದ ತಿಳಿದು ನೋಡಲು, ತನ್ನಲ್ಲಿಯೇ ತೋರುತ್ತಿದೆ! ಹೇಳೆ ಹೇಳಿಹೆನೆಂದಡೆ, ನುಡಿಗೊಳಗಾಗದು. ತಿಳಿದುನೋಡಲು ತಾನಲ್ಲದೆ, ಮತ್ತೇನೂ ಇಲ್ಲ. ಅದೇ ಪ್ರಾಣಮಯಲಿಂಗ, ತಾನೇ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು.

೨೪. ಅಂಗದ ಮೇಲೆ ಆಯತವಾದುದೇ ಇಷ್ಟಲಿಂಗ. ಇಷ್ಟಲಿಂಗ ವಿಡಿದು ಪ್ರಾಣಲಿಂಗ ಸ್ವಾಯತ. ಪ್ರಾಣಲಿಂಗ ಉದಿಸಿದಲ್ಲದೆ ಇಷ್ಟಲಿಂಗವ ಕಾಣಬಾರದು. ಈ ಭೇದವ ಭೇದಿಸಬಲ್ಲಡೆ ಕೂಡಲಚನ್ನಸಂಗಯ್ಯನಲ್ಲಿ ಲಿಂಗೈಕ್ಯವು.

೨೫. ಅಗ್ನಿ ದಿಟವೆಂದರೆ, ತಾ ಹುಸಿ, ಕಾಷ್ಠವಿಲ್ಲದೆ. ಕಾಷ್ಠದಲ್ಲಡಗಿ ಸುಡದಿಪ್ಪ ಭೇದವನರಿತಡೆ ಪ್ರಾಣಲಿಂಗ ಎಂದೆಂಬೆನೆಂದನಂಬಿಗ ಚೌಡಯ್ಯ.

೨೬. ಲಿಂಗವೇ ಪ್ರಾಣ. ಪ್ರಾಣವೇ ಲಿಂಗವಾಯಿತ್ತು. ಅಂಗ ಲಿಂಗವಾಯಿತ್ತು. ಗುಹೇಶ್ವರ ಲಿಂಗದಲ್ಲಿ ಸರ್ವಾಂಗ ಪ್ರಾಣಲಿಂಗ ಸ್ವಾಯತವಾಯಿತ್ತು ಕಾಣಾ.

೨೭. ತನುವಿನಲ್ಲಿಪ್ಪುದು ಇಷ್ಟಲಿಂಗವೆಂಬರು. ಆತ್ಮನ ನೆನಹಿನಲ್ಲಿಪ್ಪುದು ಪ್ರಾಣಲಿಂಗವೆಂದೆಂಬರು. ಇಂತೀ ಘಟಾತ್ಮಕ್ಕೆ ಉಭಯಲಿಂಗ ಉಂಟೇ? ಹೊರಗಣ ಅಸ್ತಿ ಚರ್ಮಕ್ಕೆ ಬೇರೊಂದು ಅಸುವ ಕಲ್ಪಿಸಬಹುದೇ? ಒಳಗಣ ಕರಳು ಮಜ್ಜೆ ಮಾಂಸಕ್ಕೆ ಬೇರೊಂದು ಅಸು

ವಿನ ಕಲೆಯುಂಟೀ? ಇದಕ್ಕೆ ದೃಷ್ಟವ ಕಂಡಡೆ, ಇಷ್ಟಪ್ರಾಣಲಿಂಗಸಂ
ಬುದಕ್ಕೆ ಕಟ್ಟು. ಅದು ಅಜೀತನವಪ್ಪುದೊಂದು ಸಾವಯವ, ಜೀತನವ
ಪ್ಪುದೊಂದು ನಿರವಯವ. ಸಾವಯವ ನಿರವಯವದೊಳಡಗಿ ಕುರು
ಹಾದ ಭೇದ ಆ ಕಾಯದ ಒಳಹೊರಗಿನ ನೋವಿನ ಭೇದದಂತೆ. ಉಭ
ಯವನರಿದಾತ್ಮ ಒಂದೇಯಾಗಿ, ಕಾಯದ ಇಷ್ಟವೆಂದು, ಅತ್ಮನ ಅರಿ
ವೆಂದು ಎರಡೆನಿಸುವ ಲಿಂಗವೆಂಬುದೊಂದು ಕುರುಹಿಲ್ಲ. ಅದು ಏಕ
ಮೇವ ಸ್ವರೂಪು, ಅದು ಚಿದ್ಘನ ಸ್ವರೂಪು. ಅದು ಘಟಮಠದೊಳಗೆ ಗೃಹಿ
ಸಿಪ್ಪ ಬಯಲಿನ ಇರವಿನ ಪರಿಯಂತೆ. ಎನ್ನಯ್ಯಪ್ರಿಯ ಇಮ್ಮಡಿ ನಿಷ್ಕ
ಳಂಕ ಮಲ್ಲಿಕಾರ್ಜುನಲಿಂಗವು ಅತ್ಯತಿಷ್ಠದ್ದಶಾಂಗುಲನಾಗಿಪ್ಪನು.

೨೮. ಇಷ್ಟಲಿಂಗ ಪ್ರಾಣಲಿಂಗವೆಂದು ವಿಭೇದಿಸುವಲ್ಲಿ, ಕುಸು
ಮದ ಗಿಡುವಿಂಗೆ ವಾಸನೆಯುಂಟೀ, ಕುಸುಮಕಲ್ಲದೆ? ಅದು ಗಿಡುವಿ
ಡಿದಾದ ಕುಸುಮವೆಂದರಿದು, ಗಿಡುವಿನ ಹೆಚ್ಚುಗೆ ಕುಸುಮದ ನಲಿವು,
ಸುಗಂಧದ ಬೆಳಿ. ಭಕ್ತಿಗೆ ಕ್ರಿಯೆ, ಕ್ರಿಗೆ ಶ್ರದ್ಧೆ, ಶ್ರದ್ಧೆಗೆ ಪೂಜೆ, ಪೂಜೆಗೆ
ವಿಶ್ವಾಸ, ವಿಶ್ವಾಸಕ್ಕೆ ವಸ್ತು, ತನ್ಮಯವಾಗಿಪ್ಪುದು. ಇದು ತೂರ್ಯ
ಭಕ್ತಿಯ ಇರವು. ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ
ಲಿಂಗವ ಮೆಲ್ಲಮೆಲ್ಲನೆ ಕೂಡುವ ಕೂಟ.

೨೯. ಅಯ್ಯ ಕಾಯ ಲಿಂಗವೋ? ಕಾಯದಲ್ಲಿ ಸಾರಿಪ್ಪ ಲಿಂಗ
ಲಿಂಗವೋ? ಪ್ರಾಣ ಲಿಂಗವೋ? ಪ್ರಾಣದಲ್ಲಿ ಸಾರಿಪ್ಪ ಲಿಂಗ ಲಿಂಗವೋ?
ಜ್ಞಾನ ಲಿಂಗವೋ? ಜ್ಞಾನದ ಮೊನೆಯಲ್ಲಿ ಬೆಳಗುವ ಲಿಂಗ ಲಿಂಗವೋ?
ಲಿಂಗ ಪ್ರಾಣ, ಪ್ರಾಣ ಲಿಂಗವೆಂತಂದರಿಯರು. ನಿಮ್ಮ ಕಾಯದ ಕರ
ಸ್ಥಲವ ಸಾರಿದ ಲಿಂಗ ಪ್ರಾಣದೊಳಗೆ ವೇದ್ಯವಾದ ಪರಿಯನುಪದೇಶಿಸಿ
ಕೃಪೆ ಮಾಡಾ ಪ್ರಭುವೇ ಕಪಿಲಸಿದ್ಧಮಲ್ಲಿಕಾರ್ಜುನಾ.

೩೦. ಸುಗುಣವೇ ಲಿಂಗ ಪ್ರಾಣಿಯಯ್ಯ. ದುರ್ಗುಣವೇ ವಾಯು
ಪ್ರಾಣಿಯಯ್ಯ. ಸುಗುಣ ನಿರ್ಗುಣವೆಂಬುಭಯವನತಿಗಳೆದು ಸುಖ
ದುಃಖಾದಿಗಳ ಸಮಾನಗಂಡು, ಹಾಸ್ಯ, ವಿಸ್ಮಯ, ವಿರಹ, ಕರಣ ಹೇಸಿಕೆ
ಇಂತೀ ಪ್ರಾಣದ ವಿಷಯ ಭ್ರಾಂತಿಗಳನತಿಗಳೆದು, ಪ್ರಾಣದ ಪೂರ್ವಾಶ್ರಯ
ವನಳಿದು, ಲಿಂಗದ ನೆನೆಹು ಸಂಬಂಧಿಸಿ, ಲಿಂಗವೇ ಪ್ರಾಣವಾಗಿರಬಲ್ಲಡೆ,
ಪ್ರಾಣಲಿಂಗಿಸ್ಥಲವೆಂಬೆನಯ್ಯ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.

ಲಿಂಗದ ಸ್ಥಾನಗಳು.

ದೇಹದಲ್ಲಿಯ ಚಕ್ರಗಳಲ್ಲಿ

೩೧. ಇಷ್ಟ ಮಹಾಲಿಂಗವೇ ಅನಾದಿಶರಣನ ಆಧಾರ ಚಕ್ರದಲ್ಲಿ ನಕಾರ ಮಂತ್ರ ಮೂರ್ತಿಯಾಗಿ ನೆಲಿಸಿರ್ಪುದು ನೋಡಾ. ಸ್ವಾಧಿಷ್ಠಾನ ಚಕ್ರದಲ್ಲಿ ಮಕಾರ ಮಂತ್ರ ಮೂರ್ತಿಯಾಗಿ ನೆಲಸಿರ್ಪುದು ನೋಡಾ. ಆ ಮಹಾಲಿಂಗವೇ ಮಣಿಪೂರಕ ಚಕ್ರದಲ್ಲಿ ಶಿಕಾರ ಮಂತ್ರಮೂರ್ತಿಯಾಗಿ ನೆಲಸಿರ್ಪುದು ನೋಡಾ. ಅನಾಹತ ಚಕ್ರದಲ್ಲಿ ವಕಾರ ಮಂತ್ರ ಮೂರ್ತಿಯಾಗಿ ನೆಲಿಸಿರ್ಪುದಯ್ಯ. ವಿಶುದ್ಧಿ ಚಕ್ರದಲ್ಲಿ ಯಕಾರ ಮಂತ್ರ ಮೂರ್ತಿಯಾಗಿ ನೆಲಿಸಿರ್ಪುದಯ್ಯ. ಆ ಮಹಾಲಿಂಗವೇ ಆಜ್ಞಾಚಕ್ರದಲ್ಲಿ ಓಂಕಾರ ಮೂರ್ತಿಯಾಗಿ ನೆಲಿಸಿರ್ಪುದು ನೋಡಾ. ಬ್ರಹ್ಮರಂಧ್ರದಲ್ಲಿ ಹಂಕಾರ ಮೂರ್ತಿಯಾಗಿ ನೆಲಿಸಿರ್ಪುದಲ್ಲಿ. ಶಿಖಾಚಕ್ರದಲ್ಲಿ ಕ್ಷಕಾರ ಮಂತ್ರ ಮೂರ್ತಿಯಾಗಿ ನೆಲಿಸಿರ್ಪುದು ನೋಡಾ. ಪಶ್ಚಿಮ ಚಕ್ರದಲ್ಲಿ ವ್ಯಂಜನ ವಿಲ್ಲದ ಹಕಾರ ಮಂತ್ರ ಮೂರ್ತಿಯಾಗಿ ನೆಲಸಿರ್ಪುದು ನೋಡಾ.

ಈ ಪ್ರಕಾರದಿಂದ ಅನಾದಿ ಶರಣನ ಸರ್ವಾಂಗದಲ್ಲಿ ಕಿಷ್ಕಿಂಧಮಯವಾಗಿ ತುಂಬಿಕೊಂಡಿರ್ಪುದು ನೋಡಾ. ಇಂತಪ್ಪ ಪರಂಜ್ಯೋತಿ ಚಿದ್ಘನ ಲಿಂಗವು ಪ್ರಮಾಣಿಸಿ ನೋಡಿಹೆನೆಂದವರಿಗೆ ಅತ್ಯತಿಷ್ಠದ್ದಶಾಂಗುಲನಾಗಿರ್ಪನು ನೋಡಾ ಸಂಗನಬಸವೇಶ್ವರಾ.

ಇಷ್ಟಲಿಂಗದಲ್ಲಿ.

೩೨. ಪೀಠದಲ್ಲಿ ಆಚಾರಲಿಂಗ, ಕಟಿಯಲ್ಲಿ ಗುರುಲಿಂಗ, ವರ್ತುಳದಲ್ಲಿ ಶಿವಲಿಂಗ, ಗೋಮುಖದಲ್ಲಿ ಜಂಗಮಲಿಂಗ, ನಾಳಯಲ್ಲಿ ಪ್ರಸಾದ ಲಿಂಗ, ಮಸ್ತಕದಲ್ಲಿ ಮಹಾಲಿಂಗವು. ಆಚಾರಲಿಂಗದರಿವು ಗಂಧ, ಗುರು ಲಿಂಗದರಿವು ರಸ, ಶಿವಲಿಂಗದರಿವು ಸ್ಪರ್ಶನ, ಪ್ರಸಾದಲಿಂಗದರಿವು ಶಬ್ದ, ಮಹಾಲಿಂಗದರಿವು ಸರ್ವೇಂದ್ರಿಯವು. ಇಂತು ಇಷ್ಟಲಿಂಗದಲ್ಲಿ ಆರು ಸ್ಥಾನಂಗಳಿರ್ಪವು.

ಲಿಂಗಪೂಜೆಯ ತತ್ವಗಳು.

೩೩. ಲಿಂಗನೆಂದು ಪೂಜಿಸಿದೊಡೆ ಅಂಗದೊಡನುಳಿಯಿತ್ತು. ಅಂಗದೊಡನುಳಿವ ಲಿಂಗವ ಹಿಂಗಿ ಪೂಜಿಸಬೇಕು. ಹಿಂಗದ ಪೂಜೆಯನೆಂದೊಡೆ ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಲಿಂಗೈಕ್ಯನೆನಿಸುವನು.

೩೪. ಪೂಜಿಸುವನ್ನಕ್ಕರ ಫಲದಾಯಕ ಕಂಡಯ್ಯಾ. ಸಹಜ ಸಂಬಂಧದರಿವು ಹುಟ್ಟಿದನ್ನಕ್ಕರ ಎರಡೆನಿಸುವುದು. ಗಮನ ನಿರ್ಗಮನವಾಗಿ ಆತ ಅಮಿಷವಳಿಯದನ್ನಕ್ಕರ ಲಿಂಗದ ಪೂಜೆ ಎಲ್ಲಿಹುದೋ? ಘಟದೊಳಗೆ ದಿಟವಾಗಿರ್ದ ಪಂಚಭೂತದ ಹುಂಗಳಿದಲ್ಲದೆ ನಮ್ಮ ಕೂಡಲಚನ್ನಸಂಗಯ್ಯನ ಮುಟ್ಟಬಾರದು.

೩೫. ಮಾತುಕಲಿತು ಮುಂಡೆಯ ಬೋಳಿಸಿಕೊಂಡಡೇನು, ವೇಷ ಲಾಂಛನ ಉದರಪೋಷಕನಲ್ಲದೆ? ಶಿವಾನುಭಾವದ ಸುವಿಚಾರದ ಸುಯಿಧಾನವ ಹೊಲಬನರಿಯರು. ಅರುಹು ಆಚಾರ ಏಕವಾದುದೇ ಇಷ್ಟ. ಆಚಾರ ಹೀನವಾದುದರಿಂದೆ, ಅಷ್ಟವಿಧಾರ್ಚನೆ ಷೋಡಶೋಪಚಾರಾದಿ ಭಜನೆ ಪೂಜಾ ಕ್ರಿಯೆಗಳಿಗೆ ಸಲ್ಲದ ಕಾರಣ, ಅದು ಸೀಮೆಯ ಕಲ್ಲು. ಅನ್ಯರ ಬೋಧಿಸಿ ತಂದುದರವ ಹೊರೆದ ವೇಷಡಂಭಕ ಗುರು ಶಿಷ್ಯರ ಮೆಚ್ಚುವರೇ ಕೂಡಲಚನ್ನಸಂಗಮದೇವ?

೩೬. ಶಿವಶಿವಾ, ಶಿವಶಿವಾ, ಶಿವಶಿವಾ, ಎಂದೊಮ್ಮೆ ಶಿವನಾಗಿ ಶಿವನ ಪೂಜಿಸು ಮನವೇ. ಹರಹರಾ, ಹರಹರಾ, ಹರಹರಾ, ಎಂದೊಮ್ಮೆ ಹರನಾಗಿ ಪುರಹರನ ಪೂಜಿಸು ಮನವೇ. ಲಿಂಗವೇ, ಲಿಂಗವೇ, ಎಂದೊಮ್ಮೆ ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗವ ಪೂಜಿಸಿ, ಲಿಂಗವಾಗು ಮನವೇ.

೩೭. ಮಾಡಬೇಕು, ಮಾಡಬೇಕು ಮನ ಒಲಿದು ಲಿಂಗಪೂಜೆಯ. ನೋಡಬೇಕು, ನೋಡಬೇಕು ಮನ ಒಲಿದು ಲಿಂಗಸಂಭ್ರಮವ. ಹಾಡಬೇಕು, ಹಾಡಬೇಕು ಮನ ಒಲಿದು ಲಿಂಗಸ್ತೋತ್ರವ. ಕೂಡಬೇಕು, ಕೂಡಬೇಕು ಕಪಿಲಸಿದ್ಧಮಲ್ಲಿಕಾರ್ಜುನ ಎನ್ನ ಗುರು ಚನ್ನಬಸವಣ್ಣ ಕೊಟ್ಟ ಇಷ್ಟಲಿಂಗದ ಅಡಿಯಲ್ಲಿ.

೩೮. ಶರಣನ ಪೂಜೆಯದು ಮರಣದ ಕೇಡು ನೋಡಿರಯ್ಯ. ಶರಣನ ಪೂಜೆಯದು ಶಿವನ ಕರುಣಾರಸ ನೋಡಿರಯ್ಯ. ಶರಣನ ಪೂಜೆಯದು ಕಪಿಲಸಿದ್ಧಮಲ್ಲಿಕಾರ್ಜುನನ ಪೂಜೆ ನೋಡಿರಯ್ಯ?

೩೯. ನಾ ಮಾಡಿದ ಪೂಜಾ ಫಲ ಅಂತಿಂತಲ್ಲ. ಬಾಣ ಪೂಜಿಸಿದ ಫಲ ಬಾಗಿಲ ಕಾಯ್ದಲ್ಲಿ ಹೋಯಿತ್ತು. ಮಯೂರ ಪೂಜಿಸಿದ ಫಲ ವಿದ್ಯಾದಾನದಲ್ಲಿ ಹೋಯಿತ್ತು. ಹನುಮಂತ ಪೂಜಿಸಿದ ಫಲ ವಜ್ರದೇಹದಲ್ಲಿ ಹೋಯಿತ್ತು. ನಾ ಪೂಜಿಸಿದ ಫಲ ಕೊಟ್ಟು ಕೊಟ್ಟು ತೀರದೆ ನಿಂದಿತ್ತು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೦. ಒಲಿದು ಮೋಕ್ಷವ ಕೊಡಲಿ. ಕೊಡದೆ ಭವಕ್ಕೆ ಬೀಜ ಮಾಡಲಿ. ಬಿಡೆ ಬಿಡೆನಯ್ಯ ನಿಮ್ಮ ಪೂಜೆಯ. ಬಿಡೆ ಬಿಡೆನಯ್ಯ ನಿಮ್ಮ ದಾಸೋಹವ. ಅದರ ಮಾನಾಪಮಾನವು ನಿಮ್ಮದು ನೋಡಯ್ಯ, ಎಲೆ ಕಪಿಲಸಿದ್ಧಮಲ್ಲಿಕಾರ್ಜುನನೆಂಬ ಪರಮಪವಿತ್ರ ಇಷ್ಟಲಿಂಗವೇ.

೪೧. ಬ್ರಹ್ಮನ ಪೂಜಿಸಿ ಸೃಷ್ಟಿಗೊಳಗಾಗುವುದ ಬಲ್ಲೆ. ರುದ್ರನ ಪೂಜಿಸಿ ಲಯಕ್ಕೊಳಗಾಗುವುದ ಬಲ್ಲೆ. ನಮ್ಮಿಷ್ಟಲಿಂಗ ಮೂರ್ತಿಯ ಪೂಜಿಸಿ ಲಿಂಗವಾಗಿ ಸರ್ವವಳಿವುದ ಬಲ್ಲೆ ನೋಡಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೪೨. ಲಿಂಗಪೂಜೆಯ ಮಾಡಿ, ಲಿಂಗದ ಕರುಣ ಹಡೆಯಿರೆಂದು ಹೇಳುವರಲ್ಲದೆ, ನೀ ನಾ ಲಿಂಗಾಗೆಂದು ಹೇಳುವರಿಲ್ಲ, ನೋಡಯ್ಯ. ಲಿಂಗ ನೀನೆಂದು ಹೇಳುವರಲ್ಲದೆ ಲಿಂಗದ ಲೀಲೆ ಹೇಳುವರಿಲ್ಲ ನೋಡಯ್ಯ. ಲಿಂಗದ ಲೀಲೆ ಹೇಳುವರಲ್ಲದೆ ಲಿಂಗ ತಾನಾದವರಿಲ್ಲ ನೋಡಯ್ಯ. ಲಿಂಗ ತಾವಾದವರು ಇಹರಲ್ಲದೆ ಲಿಂಗ ಶಬ್ದ ಮುಗ್ಧವಾದವರು ಒಬ್ಬರೂ ಇಲ್ಲ ಕಪಿಲಸಿದ್ಧಮಲ್ಲಯ್ಯ.

೪೩. ಕೆಲವರು ಲಿಂಗವ ಪೂಜಿಸಿ ಪಡೆದರು ಗತಿಯ. ಕೆಲವರು ಲಿಂಗವ ಪೂಜಿಸಿ ಪಡೆದರು ಮತಿಯ. ನಮ್ಮ ಕಪಿಲಸಿದ್ಧನ ಪೂಜಿಸಿ ಪಡೆಯಲಿಲ್ಲವನ ಜ್ಯೋತಿಯ.

೪೪. ನೋಡುವರುಳ್ಳರೆ ಮಾಡುವೆ ದೇಹಾರವ. ಎನಗೊಂದು ನಿಜವಿಲ್ಲ. ಎನಗೊಂದು ನಿಷ್ಪತ್ತಿ ಇಲ್ಲ. ಲಿಂಗವ ತೋರಿ ಉದರವ ಹೊರೆವ ಭೃಂಗಗಾರ ನಾನು ಕೂಡಲಸಂಗಮದೇವಾ.

ಇಷ್ಟ ಪ್ರಾಣ ಭಾವಲಿಂಗಗಳ ಪೂಜೆ.

೪೫. ಇಷ್ಟಲಿಂಗದ ಪೂಜೆಯಾವುದು, ಪ್ರಾಣಲಿಂಗದ ಪೂಜೆಯಾವುದು, ಭಾವಲಿಂಗದ ಪೂಜೆಯಾವುದು, ಹೇಳಿಹೆ ಕೇಳಿರಯ್ಯ. ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಮಾಡುವುದು ಅದು ಇಷ್ಟಲಿಂಗದ ಪೂಜೆ. ಆ ಲಿಂಗವ ಮನಸಿನಲ್ಲಿ ಧ್ಯಾನಿಸಿ ಮನೋಮಧ್ಯದಲ್ಲಿಪ್ಪ ನಿಷ್ಕಲ ಬ್ರಹ್ಮವನು ಧ್ಯಾನವೆಂಬ ಹಸ್ತದಲ್ಲಿ ಹಿಡಿದು ಕರಸ್ಥಲದಲ್ಲಿಪ್ಪ ಲಿಂಗದ ಗೊತ್ತಿನಲ್ಲಿ ಕಟ್ಟಿ ನೆರೆಪುದೀಗ ಪ್ರಾಣಲಿಂಗದ ಪೂಜೆ. ಮನಸ್ಸು ತಲ್ಲಿಂಗದಲ್ಲಿ ಲೀಯವಾಗಿ ನಚ್ಚು ಮಚ್ಚು ಅಚ್ಚೊತ್ತಿ ಅಗಲದಿಪ್ಪುದೀಗ ಭಾವಲಿಂಗದ ಪೂಜೆ. ಇವು ಮೂರು ಲಿಂಗದ ಅರ್ಚನೆ, ಮೂರು ಲಿಂಗದ ಉಪಚಾರ, ಶಿವಾರ್ಚಕರಾದ ವೀರಶೈವರುಗಳು ಮಾಡುವ ಲಿಂಗಾರ್ಚನೆಯ ಕ್ರಮವು, ಮಹಾಲಿಂಗ ಗುರು ಶಿವ ಸಿದ್ಧೇಶ್ವರಪ್ರಭುವೇ.

೪೬ ಲಿಂಗಾಂಗಸಂಬಂಧದ ಭೇದವನರಿಯದೆ ಲಿಂಗಾಂಗಸಂಬಂಧಿಗಳೆಂದು ಅಂದಚಂದವಾಗಿ ನುಡಿದುಕೊಂಬ ಕ್ರಿಯಾಭ್ರಾಂತರು ನೀವು ಕೇಳಿರಿ, ಲಿಂಗಾಂಗಸಂಬಂಧದ ಉತ್ತರೋತ್ತರ ನಿರ್ಣಯವ. ಹೊರಗಣ ಹೂವನೇ ತಂದು ಸ್ಥೂಲ ತನುವಿನ ಮೇಲಿಪ್ಪ ಆಚಾರಲಿಂಗಮಂ ಪೂಜೆಯ ಮಾಡಿ ತನುವ ಸಮರ್ಪಿಸಿ ಬೇಡಿಕೊಂಡು, ಹೊರಗಣ ಹೊನ್ನು ಹೆಣ್ಣು ಮಣ್ಣು ಷಟ್ಕರ್ಮಂಗಳಂ ಬಿಟ್ಟಡೆ ಇಷ್ಟಲಿಂಗದ ಪೂಜೆ. ಒಳಗಣ ಹೂವ ತಂದು ಸೂಕ್ಷ್ಮತನುವಿನ ಮೇಲಿಪ್ಪ ಜಂಗಮಲಿಂಗಮಂ ಪೂಜೆಯ ಮಾಡಿ ಮನವ ಸಮರ್ಪಿಸಿ ಉಪಾವಸ್ಥೆಯಂ ಮಾಡಿ, ಒಳಗಣ ಅಂತಃಕರಣಂಗಳ ಸುಟ್ಟುದೇ ಪ್ರಾಣಲಿಂಗದ ಪೂಜೆ. ಮನೋಮಧ್ಯದೊಳಗಿಪ್ಪ ಪ್ರಭಾವ ಪುಷ್ಪವನೇ ತಂದು ಕಾರಣ ತನುವಿನ ಮೇಲಿಪ್ಪ ತೃಪ್ತಿಲಿಂಗಮಂ ಪೂಜೆಯಂ ಮಾಡಿ ಸಂತೋಷಮಂ ಸಮರ್ಪಿಸಿ ದೈನ್ಯಂ ಬಟ್ಟು ಜ್ಞಾನ ಕ್ರಿಯಳಿದುದೇ ಭಾವಲಿಂಗದ ಪೂಜೆ. ಈ ಪ್ರಕಾರದ ಲಿಂಗಾಂಗದ ಸಾಧಕತ್ವಮಂ ಶಿವರಾತ್ರೆಯ ಸಂಕಣ್ಣಂಗೊಲಿದಂತೆ ಎನಗೊಲಿದು ಕರುಣಿಸಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

೪೭. ಎನ್ನಂತರಂಗದಲ್ಲಿ ಕುಮಂತ್ರ ಕುಡಿವರಿದ ಭೇದವ ನಿನ್ನೊಡನೆ ಮರೆ ಇಲ್ಲದೆ ಆಡುತಿಪ್ಪೆನಯ್ಯ. ಒಡೆಯನೇ ಜಾಗ್ರಾವಸ್ಥೆಯಲ್ಲಿ

ಲೋಕೋಪಚಾರವಿಡಿದು ಜಿಹ್ವಾಲಂಪಟತನ ಉಡುಗದು. ಸುಖದುಃಖಕ್ಕೆ ಎನ್ನ ಮನ ಅಳುತ್ತ ನಗುತ್ತ ಇದ್ದ ಬಳಿಕ ಎನಗೆ ಇಷ್ಟಲಿಂಗದ ಪೂಜೆ ಎಲ್ಲಿಯದೋ? ಸ್ವಪ್ನಾವಸ್ಥೆಯಲ್ಲಿ ಬ್ರಹ್ಮಾಂಡದೊಳಗುಳ್ಳ ಕಡೆ ಮೊದಲಿಲ್ಲದ ದುರ್ವಿಕಾರ ಸ್ವಪ್ನದಲ್ಲಿ ಹರಿದಾಡುವ ಜೀವಂಗೆ ಪ್ರಾಣಲಿಂಗದ ಪೂಜೆ ಎಲ್ಲಿಯದೋ? ಸುಷುಪ್ತಾವಸ್ಥೆಯಲ್ಲಿ ಲಿಂಗವ ಕೂಡಿ, ವೈಮನರಹಿತ ಕನಸಿನ ಸ್ತ್ರೀಯ ಕೂಡಿ, ಇಂದ್ರಿಯಂಗಳ ಬಿಟ್ಟು ಆನಂದಿಸುವ ಕಾಮವಿಕಾರಿಗೆ ಭಾವಲಿಂಗದ ಪೂಜೆ ಎಲ್ಲಿಯದೋ? ಈ ಪ್ರಕಾರದ ದುರ್ಗುಣಂಗಳ ನಾನು ಮರೆಮಾಡಿಕೊಂಡು, ಶರಣರ ವಚನಗಳ, ಹಾಡಿದ ಗೀತಂಗಳ, ಬೆಳಗಿನ ಸಿರಿಯ, ಕಂಡು ನಾಯಿ ಹರುಷಂಗೊಂಡು ಜೊಗಳಿದಂತಾಯಿತ್ತು. ಅದೇನು ಕಾರಣವೆಂದಡೆ, ನೀ ಎನ್ನ ಅಂಗದ ಮೇಲೆ ಬಂದಿಹೆ ಎಂಬ ಸಂತೋಷಕ್ಕೆ ಉಬ್ಬಿಕೊಬ್ಬಿ ಅಹಂಕರಿಸಿ ಹಾಡಿದೆನಲ್ಲದೆ, ನುಡಿದಂತೆ ನಡೆಯಲಿಲ್ಲ, ನಡೆದಂತೆ ನುಡಿಯಲಿಲ್ಲ. ಇದು ಕಾರಣ ಎನ್ನ ಮನದ ಕಾಳಿಕೆಯುಂ ಕರುಣದಿಂದೆ ಕಳೆದು ಅವಸ್ಥಾತ್ರಯಂಗಳಲ್ಲಿ ನಿನ್ನ ಅಪ್ಪಿ ಅಗಲದಂತೆ ಎನ್ನ ಪರಮ ಕಾರ್ಯವ ಮಾಡಯ್ಯ, ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

೪೮. ಮುಕ್ತಿಗೆ ಸದಾ ಸಂಧಾನದಲ್ಲಿ ಇರಬೇಕೆಂದು ಶಿವಶರಣರು ನುಡಿವುತಿಪ್ಪರು. ಆ ಸಂಧಾನದ ಹೊಲಬ ನಾನರಿಯೆ. ಎನಗೆ ಮುಕ್ತಿ ಇಲ್ಲ. ಇನ್ನೇನೆನೆಂದು ಕಂಬನಿದುಂಬಿ ಕರಗುತಿಪ್ಪೆ ಮನವೇ. ಗುರು ಕೊಟ್ಟ ಸಂಧಾನವೇ ಕರಕಮಲದಲ್ಲಿ ಪ್ರಸನ್ನ ಪ್ರಸಾದಮಂ ಪ್ರತ್ಯಕ್ಷವಾಗಿ ತೋರುತ್ತಿದೆ. ಗುರುಕೊಟ್ಟ ಸಂಧಾನವೇ ಎಂಟಿಸಳಿನ ಚೌದಳದ ಮಧ್ಯದಲ್ಲಿ ಹೊಂಗಳಸದಂತೆ ಥಳ ಥಳನೆ ಹೊಳೆವುತ್ತಿದೆ. ಗುರು ಕೊಟ್ಟ ಸಂಧಾನವೇ ಮುಪ್ಪುರದ ಮಧ್ಯದಲ್ಲಿ ರತ್ನ ಮಿಂಚಿನಂತೆ ಕುಡಿವರಿದು ಉರಿವುತ್ತಿದೆ. ಗುರು ಕೊಟ್ಟ ಸಂಧಾನವೇ ಪಂಚಪತ್ರದ ಮಧ್ಯದಲ್ಲಿ ಬೆಳ್ದಿಂಗಳ ಲತೆಯಂತೆ ಬೀದಿವರಿದು ಬೆಳಗುಬೀರುತ್ತಿದೆ. ಈ ಪ್ರಕಾರದ ಬೆಳಗೇ ಮುಕ್ತಿಗೆ ಸಂಧಾನವಾಗಿ ಒಪ್ಪುತ್ತಿಪ್ಪುದು. ಇದನೆ ಕಣ್ತುಂಬಿ ನೋಡಾ. ಇದನೆ ಮನ ದಣಿವಂತೆ ಹಾಡು. ಇದನೆ ಅಪ್ಪಿ ಅಗಲದಿಪ್ಪುದೇ ನಿಜಮುಕ್ತಿ. ಇದಕ್ಕೆ ತಪ್ಪದು. ನೀನಂಜಬೇಡ. ಗುರುಕೊಟ್ಟ ಸಂಧಾನಮಂ ಮರೆದು ಭಿನ್ನವಿಟ್ಟು ಲಕ್ಷಿಸರ ಸಂಧಾನವೆಲ್ಲ ಭವಸಂಧಾನವಯ್ಯ, ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

೪೯. ಕಾಯದ ಕರದಲ್ಲಿ ಲಿಂಗವ ಧರಿಸಿ ಲಿಂಗಾರ್ಚನೆಯ ಮನ ಮುಟ್ಟಿ ಮಾಡುತ್ತಿದ್ದರೆ, ಮನ ಲಿಂಗದಲ್ಲಿ ತರಹರವಾಯಿತ್ತು. ಮನ ಲಿಂಗದಲ್ಲಿ ತರಹರವಾದ ಮತ್ತೆ ಮನದ ಮೇಲೆ ಲಿಂಗ ನೆಲೆಗೊಂಡಿತ್ತು. ಮನದ ಮೇಲಣ ಲಿಂಗವ ಭಾವ ಭಾವಿಸಿ ಭಾವ ಬಲಿದಲ್ಲಿ ಭಾವದ ಕೊನೆಯಲ್ಲಿ ನಿಂದಿತ್ತಾಗಿ ಭಾವ ಬಯಲಾಗಿ ನಿರ್ಭಾವವಾಯಿತ್ತು, ನಿಜ ಗುರುಸ್ವತಂತ್ರಸಿದ್ಧಲಿಂಗೇಶ್ವರಾ ನಿಮ್ಮ ಶರಣಂಗೆ.

೫೦. ಎಲ್ಲರಿಗಿಂತಲೂ ಶಿವಭಕ್ತರಧಿಕರೆಂಬ ಕಾರಣವೇನಯ್ಯಾ? ನಿತ್ಯ ಲಿಂಗಾರ್ಚನೆ ಮೂರು ವೇಳೆ, ಲಿಂಗಾರ್ಚನೆಗೊಮ್ಮೆ ಲಿಂಗತ್ರಯ ಪೂಜೆ, ಪೂಜೆಗೊಮ್ಮೆ ಮಹಾಪ್ರಣಮಂಗಳ ಜಪ, ಜಪಕ್ಕೊಮ್ಮೆ ನಿಜ ಧ್ಯಾನ, ಧ್ಯಾನಕ್ಕೊಮ್ಮೆ ಚಿತ್ತಿನ ಲಯ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೫೧. ಹಸಿವು ತೃಷೆಯಳಿದಡೇನು? ಭಕ್ತನಪ್ಪನೇ? ಅಲ್ಲಲ್ಲ. ಅಷ್ಟ ಮಹಾಸಿದ್ಧಿಯುಳ್ಳೊಡೇನು? ಭಕ್ತನಪ್ಪನೇ? ಅಲ್ಲಲ್ಲ. ತನು ಬಯಲಾಗಿ ಚತುರ್ವಿಧ ಪದಸ್ಥನಾಗಿ ಕೈಲಾಸದಲ್ಲಿದ್ದಡೇನು? ಭಕ್ತನಪ್ಪನೇ? ಅಲ್ಲಲ್ಲ. ಗಿಡಗಳ ತಿಂದ ಬಳಿಕ ಹಸಿವು ತೃಷೆದೋರದು. ಯೋಗವಂಗವಾದ ಬಳಿಕ ಸ್ವೇಚ್ಛಾಚಾರ ಬಿಡದು. ಅಘೋರ ತಪವ ಮಾಡಿದ ಬಳಿಕ ಮಹಾ ಸಿದ್ಧಿಗಳು ಬಿಡವು. ಒಂದೊಂದರಿಂದೊಂದು ಸಿದ್ಧಿ. ಅಂಗ ಮೂರರಲ್ಲಿ ಲಿಂಗ ಸಂಬಂಧವಾಗಿ, ಲಿಂಗ ಮೂರರಲ್ಲಿ ವಸ್ತುತ್ರಯವ ಪೂಜಿಸಿ, ತತ್ಪ್ರಸಾದ ಗ್ರಾಹಕ ಭಕ್ತನಲ್ಲದೆ ಬಾಲ ಬ್ರಹ್ಮಗೆ ಭಕ್ತನೆನ್ನಬಹುದೇನಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ?

೫೨. ಅಕಾರವದು ಇಷ್ಟಲಿಂಗ, ಉಕಾರವದು ಪ್ರಾಣಲಿಂಗ, ಮಕಾರವದು ಭಾವಲಿಂಗ. ಭಕ್ತಂಗಾಗಲಿ, ಷಟ್‌ಸ್ಥಲ ಬ್ರಹ್ಮಿಯಾದವಂಗೆ ಆಗಲಿ, ಲಿಂಗತ್ರಯ ಪೂಜೆಯೇ ಬೇಕು. ಲಿಂಗತ್ರಯ ಪೂಜೆಯ ರಿತು ಮಾಡದವರ ಮನದೆರೆದು ಮಾತಾಡೆಯಯ್ಯ ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗವೇ.

೫೩. ಇಷ್ಟಲಿಂಗ ಪೂಜೆಯದು ಅಷ್ಟೈಶ್ವರ್ಯ ಪ್ರದವಾಯಿತ್ತು. ಪ್ರಾಣಲಿಂಗ ಪೂಜೆಯದು ಅಖಂಡ ಚಿದೈಶ್ವರ್ಯಪ್ರದವಾಯಿತ್ತು. ಭಾವ ಲಿಂಗ ಪೂಜೆಯದು ನಿರ್ಭಾವ ನಿಜಾನಂದ ವಸ್ತು ಸ್ವರೂಪವಾಯಿತ್ತು ಕೇಳಾ ಕಪಿಲಸಿದ್ಧಮಲ್ಲಿಕಾರ್ಜುನಾ.

ಪ್ರಾಣಲಿಂಗ ಪೂಜೆ.

೫೪. ದೇಹವೇ ದೇಗುಲ, ಕಾಲೇ ಕಂಭ, ಶಿರಸ್ಸೇ ಶಿಖರ ನೋಡಾ. ಹೃದಯಕಮಲ ಕರ್ಣಿಕಾವಾಸವೇ ಸಿಂಹಾಸನ. ಮಹಾಘನ ಪರತತ್ವವೆಂಬ ಪ್ರಾಣಲಿಂಗ ಮೂರ್ತಿಗೊಳಿಸಿ ಪರಮಾನಂದಾಮೃತ ಜಲದಿಂದ ಮಜ್ಜನಕ್ಕೆರೆದು ಮಹಾದಳ ಪದ್ಮದಲ್ಲಿ ಪೂಜಿಸಿ ಪರಮ ಪರಿಣಾಮವೆಂಬ ನೈವೇದ್ಯವ ಗಡಣಿಸಿ ಪ್ರಾಣಲಿಂಗಕ್ಕೆ ಪ್ರಾಣಸಂಬಂಧವಾದ ಪೂಜೆಯ ಮಾಡುತಿರ್ದೆನು ಕಾಣಾ ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ.

೫೫. ಲಿಂಗಕ್ಕು ಪ್ರಾಣಕ್ಕು ಭೇದವಿಲ್ಲೆಂದರಿದು ಶಿವಲಿಂಗಾರ್ಚನೆಯ ಮಾಡಿ ಈ ಪ್ರಕಾರದಲ್ಲಿ ಆಚರಿಸಲಾಗಿ ಷಟ್‌ಪ್ರಕಾರವಪ್ಪ ಲಿಂಗವು ಕ್ರಮತಪ್ಪದೆ ಸಾಧ್ಯವಪ್ಪುದು ಸಂಕಲ್ಪವಿಕಲ್ಪವಿಲ್ಲದೆ ಹೀಗೆಂದರಿಯಲು ಆ ಪ್ರಾಣದ ಮಹಾಲಿಂಗದ ಪ್ರಭೆಯೊಳಗೆ ಓಲಾಡುತಿರ್ಪುದಯ್ಯ ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೇ.

೫೬. ನಮ್ಮ ಶರಣ ಅಂತರಂಗದ ಅಷ್ಟವಿಧಾರ್ಚನೆಯಂ ಮಾಡಿ ಸುಜ್ಞಾನ ದೃಷ್ಟಿಯಿಂ ನೋಡಲು, ಆ ಜ್ಯೋತಿರ್ಲಿಂಗ ಒಂದೆರಡಾಯಿತ್ತು. ಎರಡು ಮೂರಾಯಿತ್ತು. ಮೂರಾರಾಯಿತ್ತು. ಆರು ಒಂಬತ್ತಾಯಿತ್ತು. ಒಂಬತ್ತು ಹದಿನೆಂಟಾಯಿತ್ತು. ಹದಿನೆಂಟು ಮೂವತ್ತಾರಾಯಿತ್ತು. ಆ ಮೂವತ್ತಾರೇ ಇನ್ನೂರು ಹದಿನಾರಾಯಿತ್ತು. ಇನ್ನೂರು ಹದಿನಾರೇ ಸಾವಿರದ ಏಳುನೂರು ಇಪ್ಪತ್ತೆಂಟು ಆಯಿತ್ತು. ಆ ಲಿಂಗಂಗಳೇ ಶರಣನ ರೋಮದ ಕುಳಿಯಲ್ಲಿ ನಿಂದು ಸರ್ವಾಂಗ ಲಿಂಗವಾಯಿತ್ತು. ಆ ಲಿಂಗ ಶರಣಂಗೆ ಚೈತನ್ಯವಾಯಿತ್ತು. ಆ ಶರಣನೇ ಲಿಂಗಕ್ಕೆ ಚೈತನ್ಯವಾಗಲು ಶರಣಸತಿ ಲಿಂಗಪತಿ ಎಂಬೆರಡು ಅಳಿದು ಒಬ್ಬ ಶರಣನೇ ಉಳಿಯಲು ಆ ಶರಣನ ಪಾದೋದಕವೇ ಲಿಂಗಕ್ಕೆ ಅಭಿಷೇಕವಾಯಿತ್ತು. ಆ ಶರಣನ ಪಾದಕ್ಕರ್ಪಿಸಿದ ಕುಸುಮವೇ ಪ್ರಸಾದ ಪುಷ್ಪವಾಯಿತ್ತು. ಆ ಶರಣನ ಪಾದಕ್ಕರ್ಪಿಸಿದ ಗಂಧಾಕ್ಷತೆಯೇ ತಾಂಬೂಲವೇ ಲಿಂಗ ಪ್ರಸಾದಗಳಾದವು. ಆ ಶರಣನ ಪಾದಸನ್ನಿಧಿಯಲ್ಲಿ ಪ್ರಕಾಶನಾಗಿ ಧೂಪ ದೀಪಂಗಳೇ ಲಿಂಗ ದ್ರವ್ಯಗಳಾಗಿ ಆ ಶರಣನ ಪಾದ ಪೂಜಾದ್ರವ್ಯವೇ ಲಿಂಗ ಪೂಜಾ ದ್ರವ್ಯವಾಗಿ ಆಚರಿಸುತ್ತಿರ್ದಲ್ಲಿ ಶರಣಸತಿ ಲಿಂಗಪತಿ ಎಂಬ

ನ್ಯಾಯ ಹಿಂದಾಯಿತ್ತು. ಲಿಂಗ ಹಿರಿದು ಅಂಗ ಕಿರಿದು ಎಂಬ ನ್ಯಾಯ ಇಲ್ಲದೇಹೋಯಿತ್ತು. ಅದೆಂತೆಂದೊಡೆ, ದೀಪದಿಂದ ದೀಪ ಹುಟ್ಟಿದಲ್ಲಿ ಆವ ಆವ ದೀಪ ಮೊದಲೆಂಬುದು ಕಾಣದಂತೆ, ಸರ್ಪ ಕಚ್ಚಿದ ಮನುಷ್ಯನ ಅಂಗ ವಿಷ ಒಂದು ಠಾವಿನಲ್ಲಿ ಇದೆ ಎಂದು ಕುರುಹಿಡಬಾರದಂತೆ ಲಿಂಗಪ್ರಾಣನಾದ ಶರಣನು ಶರಣ ಪ್ರಾಣವಾದ ಲಿಂಗಕ್ಕೆ ಭೇದವಿಲ್ಲ. ಹರಗುರು ವಾಕ್ಯದಲ್ಲಿ ಶರಣ ಲಿಂಗದಾಚರಣೆ ಇಂತಿಹುದು. ಈ ಶರಣ ಲಿಂಗ ದೂಷಣೆಯ ಮಾಡುವ ದ್ರೋಹಿಗಳಿಗೆ ನಾಯಕನರಕ ತಪ್ಪದು ತಪ್ಪದು ಕೂಡಲ ಚನ್ನಸಂಗಮದೇವಾ.

೫೭. ಇಷ್ಟಲಿಂಗದಲ್ಲಿ ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಂ ಮಾಡುವುದು ಇಷ್ಟಲಿಂಗದ ಪೂಜೆ. ಆ ಲಿಂಗವನು ಮನಸ್ಸಿನಲ್ಲಿಯೇ ಧ್ಯಾನಿಸುವುದೇ ಪ್ರಾಣಲಿಂಗ ಪೂಜೆ ನೋಡಾ ಅಪ್ರಮಾಣ ಕೂಡಲಸಂಗಮದೇವಾ.

೫೮. ಉದಕದಿಂದ ಅಭಿಷೇಕಂಗೈವಡೆ ಒದವಿದವು ನೋಡಾ ನಿನ್ನುತ್ತುಮಾಂಗದಲ್ಲಿ ಅರುವತ್ತೆಂಟು ಕೋಟಿ ನದಿಗಳು. ಪುಷ್ಪವ ಧರಿಸುವಡೆ ಚಂದ್ರಕಲಾ ಪ್ರಕಾಶ ಉಂಟು ನೋಡಾ ಜಟಾಗ್ರದಲ್ಲಿ. ನೀರಾಜನವೆತ್ತುವಡೆ ಸೂರ್ಯ ಚಂದ್ರಾಗ್ನಿ ನೇತ್ರ ನೋಡಾ. ಸ್ತೋತ್ರವ ಮಾಡುವಡೆ, ವೇದಂಗಳು ಹೊಗಳಿ ಹೊಗಳಿ ಮೂಗುವಟ್ಟವು ನೋಡಾ. ನಿನ್ನ ಮುಂಧಾಗದಲ್ಲಿ ನಾಟ್ಯವನಾಡುವಡೆ ಅದುರಿದವು ನೋಡಾ ಅಜಾಂಡಗಳು ನಿನ್ನ ಪಾದ ಸ್ಪರ್ಶನದಿಂದ. ಚಾಮರ ಬೀಸುವಡೆ ನೋಡಾ ಹನ್ನೊಂದು ಕೋಟಿ ರುದ್ರಕನ್ನಿಕೆಯರ ಕೈತಾಳ ಧ್ವನಿಯು. ಚಂದನವ ಧರಿಸುವಡೆ ನೋಡಾ, ಮಲಯಾಚಲ ನಿವಾಸಿ. ವಸ್ತ್ರವ ಧರಿಸುವಡೆ ನೋಡಾ, ವ್ಯಾಘ್ರಾಸುರ ಗಜಾಸುರ ಚರ್ಮವಾಸಿ. ಭಸ್ಮವ ಧರಿಸುವಡೆ ನೋಡಾ ಕಾಮನ ಶುದ್ಧ ಭಸ್ಮ. ಅಂಗದಲ್ಲಿ ಅಕ್ಷತೆಯ ಧರಿಸುವಡೆ ನೋಡಾ ಅಜಾಂಡಂಗಳ ದಾಟಿದ ಮಸ್ತಕ. ಅಂತಪ್ಪ ವಿಗ್ರಹವ ಪೂಜಿಸುವಡೆನ್ನಳವೇ? ಶರಣನ ಮುಖದಿಂದ ಬಂದ ಪದಾರ್ಥವ ಕೈಕೊಂಡು ಪೂಜಾಪ್ರೀತನಾಗಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೫೯. ಕಾಯವೇ ಪೀಠಿಕೆ, ಪ್ರಾಣವೇ ಲಿಂಗವಾಗಿರಲು, ಬೇರೆ ಮತ್ತೆ ಕುರುಹು ಏಕಯ್ಯಾ? ಕುರುಹುವಿಡಿದು ಕೂಡುವ ನಿರವಯ

ಉಂಟೇ ಜಗದೊಳಗೆ? ನಷ್ಟವ ಕೈಯ್ಯಲ್ಲಿ ಹಿಡಿದು ದೃಷ್ಟವ ಕಂಡಿಹೆನೆಂದರೆ ಕಪಿಲಸಿದ್ಧಮಲ್ಲಿನಾಥಯ್ಯನು ಸಾಧ್ಯವಹ ಪರಿಯ ಹೇಳಾ ಪ್ರಭುವೇ?

೬೦. ಅಂಗದ ಮೇಲೆ ಲಿಂಗಸಂಬಂಧಿಯಾದ ಬಳಿಕ, ಸರ್ವಾಂಗದಲ್ಲಿ ತೋರುವ ವಿಕಾರವಳಿದಿರಬೇಕು. ಆ ಅಂಗವ ಸೋಂಕಿದ ಲಿಂಗಕ್ಕೆ ಪ್ರಕರಣ ಶುದ್ಧವಾದುದೇ ಸೆಜ್ಜೆ, ಶಿವಧಾರ. ಈ ತ್ರಿವಿಧವ ಮುಟ್ಟಿ ಲಿಂಗಾರ್ಚನೆಯ ಮಾಡಬೇಕು. ಅಂಗ ಲಿಂಗ ಸಂಬಂಧಕ್ಕೆ ಇದೇ ಕ್ರಮ ವಯ್ಯಾ ಕೂಡಲಚನ್ನಸಂಗಮದೇವಾ.

ಭಾವಲಿಂಗ ಪೂಜೆ.

೬೧. ಹೊತ್ತಾರೆ ಎದ್ದು, ಹೂ ಪತ್ರೆಯ ಕೊಯಿತಂದು, ಹೊರ ಉಪಚಾರವ ಮಾಡುವುದೆಲ್ಲ ಬರಿಯ ಭಾವದ ಬಳಲಿಕೆ ನೋಡಾ. ಅಳಲಿಸದೆ ಬಳಲಿಸದೆ ಅಯಾಸಂಬಡದೆ ಒಳಗಣ ಜ್ಯೋತಿಯ ಬೆಳಗಿನ ಕಳೆಯ ಕಮಲವ ಪೂಜಿಸಬಲ್ಲ ಶರಣಂಗೆ ಬೆಳಗಾಗಿ ಎದ್ದು ಪೂಜಿಸುವೆನೆಂಬ ಕಳವಳವೆಂದೇನು ಹೇಳಾ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ?

೬೨. ಕಾಯದ ಮೇಲಣ ಲಿಂಗವ ಧರಿಸಿ ದೇವರ ಪೂಜೆಯ ಮಾಡಿ, ಕಾಯವಳಿದು ದೇವತಾ ಭೋಗವನೆಯ್ದೆಹೆವೆಂಬ ಗಾವಿಲರ ಎನಗೊಮ್ಮೆ ತೋರದಿರಯ್ಯಾ. ಕಾಯವನು ಜೀವವನು ಲಿಂಗದಲ್ಲಿರಿಸಬಲ್ಲರೆ ಮಹಾದೇವನೆಂದು ಬೇರುಂಟೇ? ಆ ಮಹೇಶ್ವರಂಗೆ ನಮೋ ನಮೋ ಎಂಬೆನು ಕಾಣಾ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ.

೬೩. ಉಪ್ಪು ಉದಕವ ಬೆರಿಸಿದಂತೆ, ವಾರಿಕಲ್ಲು ವಾರಿಯ ಬೆರಿಸಿದಂತೆ, ಕರ್ಪುರ ಅಗ್ನಿಯ ಬೆರಿಸಿದಂತೆ, ಮನ ಲಿಂಗದಲ್ಲಿ ಲೀಯ್ಯವಾಗಿಹುದು ಭಾವಲಿಂಗ ಪೂಜೆ ನೋಡಾ, ಅಪ್ರಮಾಣ ಕೂಡಲಸಂಗಮದೇವಾ.

೬೪. ಭಾವಲಿಂಗದಿಂದ ಇಷ್ಟಲಿಂಗವ ಧ್ಯಾನಿಸ ಹೋದರೆ ಇಷ್ಟಲಿಂಗವೇ ಭಾವಲಿಂಗವಾಯಿತ್ತು. ಭಾವಲಿಂಗದಿಂದ ತ್ರಿವಿಧವನರಿದಿಹೆನೆಂದರೆ, ಭಾವಲಿಂಗವೇ ಮಹಾಲಿಂಗವಾಗಿ ಅಳವಡಿಸಿದನು, ಎನ್ನ ಗುರು ಚನ್ನಬಸವಣ್ಣನು ಕಾಣಾ ಕಪಿಲಸಿದ್ಧಮಲ್ಲೇಶಾ.

ಇಷ್ಟ ಪ್ರಾಣ ಭಾವಲಿಂಗಗಳಲ್ಲಿ ಇಷ್ಟ ಪ್ರಾಣ ಭಾವಲಿಂಗಗಳ ಪೂಜೆ.

೬೫. ವಿಭೂತಿ, ರುದ್ರಾಕ್ಷಿ ಧಾರಣಾಲಂಕಾರವೇ ಇಷ್ಟಲಿಂಗದ ಪೂಜೆ. ಪೂಜಾವಿಧಾನವೇ ಇಷ್ಟಲಿಂಗದಲ್ಲಿ ನ್ಯಸ್ತವಾದ ಪ್ರಾಣಲಿಂಗದ ಪೂಜೆ, ಶ್ರದ್ಧಾಭಕ್ತಿಯೇ ಇಷ್ಟಲಿಂಗದಲ್ಲಿ ನ್ಯಸ್ತವಾದ ಭಾವಲಿಂಗದ ಪೂಜೆ. ಬಹು ಪೂಜಾಕ್ರಮವ ಅಂತರಂಗದಲ್ಲಿ ಅಳವಡಿಸಿ ಮಾಡುವುದೇ ಪ್ರಾಣಲಿಂಗದ ಪೂಜೆ, ಮಾನಸ ಮಂತ್ರೋಚ್ಚರಣವೇ ಪ್ರಾಣಲಿಂಗದಲ್ಲಿ ನೆಲಸಿದ ಇಷ್ಟಲಿಂಗದ ಪೂಜೆ. ಧ್ಯಾನಾರೂಢವೇ ಪ್ರಾಣಲಿಂಗಸಂಬಂಧವಾದ ಭಾವಲಿಂಗದ ಪೂಜೆ. ಮನೋರ್ಲಯವೇ ಭಾವಲಿಂಗದ ಪೂಜೆ, ಸುಜ್ಞಾನವೇ ಭಾವಲಿಂಗದೊಳಗಣ ಇಷ್ಟಲಿಂಗದ ಪೂಜೆ, ಪರಿಣಾಮವೇ ಭಾವಲಿಂಗದಲ್ಲಿ ಕೂಡಿದ ಪ್ರಾಣಲಿಂಗದ ಪೂಜೆ.

ಷಡ್ಲಿಂಗ ಪೂಜೆ.

೬೬. ಈ ಪ್ರಕಾರದಲ್ಲಿ ಗುರುವಿನ ಹಸ್ತದಲ್ಲಿ ಹುಟ್ಟಿ ಲಿಂಗದೇಹಿ ಎನಿಸಿಕೊಂಡ ಜ್ಞಾತ ಪುರುಷನು ತನ್ನ ಜ್ಞಾನ ಸ್ವರೂಪವನು ಅರಿಯಬೇಕಯ್ಯ. ಆ ಜ್ಞಾನವೇ ಆರು ತೆರನಾಗಿಪ್ಪುದು. ಅವು ಆವವೆಂದೊಡೆ, ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂದು ಆರು ತೆರನಾಗಿಪ್ಪುದು. ಈ ಷಡ್ವಿಧ ವ್ರತವನರಿದು ಆಚರಿಸುವ ಕ್ರಮವೆಂತುಂಟಯ್ಯ ಎಂದೊಡೆ,

ಆಧಾರ ಚಕ್ರಸ್ಥಾನದಲ್ಲಿ ನಾಲ್ಕೆಸಳ ಕಮಲದ ವ, ಶ, ಷ, ಸ, ಎಂಬ ನಾಲ್ಕು ಬೀಜಾಕ್ಷರದ ಪೃಥ್ವೀ ತತ್ವ, ಕೆಂಪುವರ್ಣದ ನೆಲೆಯನರಿಯಬೇಕಯ್ಯ. ಸ್ವಾಧಿಷ್ಠಾನ ಚಕ್ರದ ಆರೆಸಳ ಕಮಲದ ಬ, ಭ, ಮ, ಯ, ರ, ಲ, ಎಂಬ ಆರು ಬೀಜಾಕ್ಷರ ಯುಕ್ತವಾದ ಅಪ್ಪು ತತ್ವದ ನೀಲ ವರ್ಣದ ನೆಲೆಯನರಿಯಬೇಕಯ್ಯ. ಮಣಿಪೂರಕ ಚಕ್ರಸ್ಥಾನದಲ್ಲಿ ಹತ್ತೆಸಳ ಕಮಲದ ಡ, ಢ, ಣ, ತ, ಥ, ದ, ಧ, ನ, ಪ, ಫ, ಎಂಬ ಹತ್ತು ಬೀಜಾಕ್ಷರ ಸ್ವಾಯತವಪ್ಪ ಅಗ್ನಿ ತತ್ವವದು ಕುಂಕುಮ ವರ್ಣದ ನೆಲೆಯನರಿಯಬೇಕಯ್ಯ. ಅನಾಹತ ಚಕ್ರಸ್ಥಾನದಲ್ಲಿ ಹನ್ನೆರಡೆಸಳ ಕಮಲದ ಕ, ಖ, ಗ, ಘ, ಙ, ಚ, ಛ, ಜ, ಝ, ಞ, ಟ, ಠ, ಎಂಬ ಹನ್ನೆರಡಕ್ಷರಯುಕ್ತವಾಗಿಪ್ಪ ವಾಯು ತತ್ವದ ಶ್ವೇತ ವರ್ಣದ ನೆಲೆಯನರಿಯಬೇಕಯ್ಯ. ವಿಶುದ್ಧಿ ಚಕ್ರಸ್ಥಾನದಲ್ಲಿ ಹದಿನಾರೆಸಳ ಕಮಲದ ಅ, ಆ, ಇ, ಈ, ಉ, ಊ, ಋ, ೠ, ಇ, ೞ, ಎ, ಏ, ಐ, ಒ, ಓ, ಔ, ಅಂ, ಅಃ, ಎಂಬ ಹದಿನಾರಕ್ಷರ ಸ್ವಾಯತವಾಗಿಪ್ಪ ಆಕಾಶ ತತ್ವದ ಸ್ಫಟಿಕ ವರ್ಣದ ನೆಲೆಯನರಿಯಬೇಕಯ್ಯ. ಆಜ್ಞಾ ಚಕ್ರಸ್ಥಾನದಲ್ಲಿ ಎರಡೆಸಳ ಕಮಲದ ಹಂ ಸ ಎಂಬೆರಡು ಬೀಜಾಕ್ಷರಯುಕ್ತವಾಗಿರ್ಪ ಆತ್ಮತತ್ವದ ಮಾಣಿಕ್ಯ ವರ್ಣದ ನೆಲೆಯನರಿಯಬೇಕಯ್ಯ. ಇವೆಲ್ಲಕ್ಕೆ ಮೇಲಣ ತತ್ವವೆನಿಸುವ ಬ್ರಹ್ಮರಂಧ್ರದಲ್ಲಿ ಸಾಸಿರೆಸಳ ಕಮಲ ಸಾಸಿರ ಬೀಜಾಕ್ಷರ ಸರ್ವತೋ ಮುಖವಾಗಿರ್ಪ ಭೇದವ ಹೇಳಿಹೆನು;

ಆಧಾರಚಕ್ರದ ನಾಲ್ಕೆಸಳ ಕಮಲ ಮಧ್ಯದಲ್ಲಿ ಆಚಾರಲಿಂಗ ಸ್ವಾಯತವ ಮಾಡಿ, ಸ್ವಾಧಿಷ್ಠಾನ ಚಕ್ರದ ಆರೆಸಳ ಕಮಲಮಧ್ಯದಲ್ಲಿ ಗುರುಲಿಂಗವ ಮೂರ್ತಿಗೊಳಿಸಿ, ಮಣಿಪೂರಕ ಚಕ್ರದ ಹತ್ತೆಸಳ ಕಮಲ ಮಧ್ಯದಲ್ಲಿ ಶಿವಲಿಂಗವ ಸಂಬಂಧಿಸಿ, ಅನಾಹತ ಚಕ್ರದ ಹನ್ನೆರಡೆಸಳ ಕಮಲದ ಮಧ್ಯದಲ್ಲಿ ಜಂಗಮಲಿಂಗವ ನೆಲೆಗೊಳಿಸಿ, ವಿಶುದ್ಧಿ ಚಕ್ರದ ಹದಿನಾರೆಸಳ ಕಮಲದ ಮಧ್ಯದಲ್ಲಿ ಪ್ರಸಾದ ಲಿಂಗವ ಮೂರ್ತಿಗೊಳಿಸಿ, ಆಜ್ಞಾಚಕ್ರದ ಎರಡೆಸಳ ಕಮಲದ ಮಧ್ಯದಲ್ಲಿ ಮಹಾಲಿಂಗವ ನೆಲೆಗೊಳಿಸಿ;

ಘ್ರಾಣದಲ್ಲಿ ಆಚಾರಲಿಂಗವ ಸಂಬಂಧಿಸಿ, ಜಿಹ್ವೆಯಲ್ಲಿ ಗುರುಲಿಂಗವ ಸಂಬಂಧಿಸಿ, ನೇತ್ರದಲ್ಲಿ ಶಿವಲಿಂಗವ ಸಂಬಂಧಿಸಿ, ತ್ವಕ್ಕಿನಲ್ಲಿ ಜಂಗಮಲಿಂಗವ ಸಂಬಂಧಿಸಿ, ಶ್ರೋತ್ರದಲ್ಲಿ ಪ್ರಸಾದಲಿಂಗವ ಸ್ವಾಯತವ ಮಾಡಿ, ಭಾವದಲ್ಲಿ ಮಹಾಲಿಂಗವ ಮೂರ್ತಿಗೊಳಿಸಿ, ಬ್ರಹ್ಮದಲ್ಲಿರ್ಪ ಪರಿಪೂರ್ಣ

ಲಿಂಗವು ಸರ್ವಾಂಗದಲ್ಲಿ ಸ್ವಾಯತವಾಗಲು. ಅಂಗಸಂಗಗಳೆಲ್ಲವು ಲಿಂಗ ಸಂಗಗಳಾಗಿ ಲಿಂಗವೃಕ್ಷೇ ನಿರಂತರ ಪ್ರಕಾಶಿಸುತ್ತಿರ್ಪುದಯ್ಯಾ, ಲಿಂಗ ಪ್ರಭೆಯೊಳಗೆ ಶಿವಶಿವ ಎನುತಿರ್ಪನಯ್ಯ ಮಹಾಲಿಂಗ ಗುರುಶಿವಸಿದ್ಧೇ ಶ್ವರಪ್ರಭುವೇ.

ನವಲಿಂಗ ಪೂಜೆ.

೬೭. ನವನಾಳವ ಬಲಿದು ಶಿವಧ್ಯಾನದಲ್ಲಿ ಕುಳ್ಳಿರ್ದು ಭವದ ದುಃಖದಿಂದ ನವಲಿಂಗವ ನೋಡಿ ಪೂಜಿಸಿ ಕೂಡುವ ಭೇದವೆಂತೆಂದೊಡೆ,

ಆಚಾರಲಿಂಗ

ಆಧಾರ ಚಕ್ರವೆಂಬ ರಂಗಮಂಟಪದಲ್ಲಿ ಮೂರ್ತಿಗೊಂಡಿದ್ದ ಆಚಾರಲಿಂಗಕ್ಕೆ ಶಿವಾನಂದ ಜಲ ಮಜ್ಜನಕ್ಕೆರೆದು, ಪೃಥ್ವೀನಿವೃತ್ತಿಯಾದ ಗಂಧವ ಧರಿಸಿ, ಚಿತ್ತ ಸುಚಿತ್ತವಾದ ಅಕ್ಷತೆಯನಿಟ್ಟು, ಅಲ್ಲಿಹ ಚತುರ್ದಳಂಗಳನೆ ಪುಷ್ಪಮಾಲೆ ಎಂದು ಧರಿಸಿ, ಆಲ್ಲಿ ಕಮಲ ಸದ್ವಾಸನೆಯ ಧೂಪವ ಬೀಸಿ, ಅಲ್ಲಿರ್ದ ಪೀತವರ್ಣವನೇ ಕರ್ಪುರದ ಜ್ಯೋತಿಯಿಂದ ಬೆಳಗಿ, ಅಲ್ಲಿಹ ಜಾಗ್ರದವಸ್ಥೆ ಎಂಬ ನವೀನ ವಸ್ತ್ರವ ಹೊದ್ದಿಸಿ, ನಿಃಕಾಮವೆಂಬ ಆಭರಣವ ತೊಡಿಸಿ, ಸುಗಂಧವೆಂಬ ನೈವೇದ್ಯವನರ್ಪಿಸಿ, ಶ್ರದ್ಧೆ ಎಂಬ ತಾಂಬೂಲವನಿತ್ತು, ಇಂತು ಆಚಾರ ಲಿಂಗದ ಅಷ್ಟ ವಿಧಾರ್ಚನೆಯು ಮಾಡಿ, ಕೋಟಿ ಸೂರ್ಯ ಪ್ರಭೆಯಂತೆ ಬೆಳಗುವ ಆಚಾರ ಲಿಂಗವನ್ನು ಕಂಗಳು ತುಂಬಿ ನೋಡಿ, ಸಂತೋಷಬಟ್ಟು ಆಚಾರಲಿಂಗದ ಪೂಜೆಯ ನಿರ್ವಾಳ್ಯವ ಮಾಡಬೆ ಓಂ, ನಾಂ ನಾಂ ನಾಂ ನಾಂ ನಾಂ ನಾಂ ಎಂಬ ನಕಾರ ಷಡ್ವಿಧ ಮಂತ್ರಂಗಳಿಂದ ನಮಸ್ಕರಿಸಿ ಆಚಾರ ಲಿಂಗವನೇ ಕೂಡಿ ಎರಡಳಿದು,

ಗುರುಲಿಂಗ

ಆ ಲಿಂಗದ ಮುಂದಕ್ಕೆ ಹೋಗಿ ಸ್ವಾಧಿಷ್ಠಾನವೆಂಬ ರಂಗ ಮಂಟಪದಲ್ಲಿ ಮೂರ್ತಿಗೊಂಡಿರ್ಪ ಗುರುಲಿಂಗಕ್ಕೆ ಪರಿಣಾಮವೆಂಬ ಜಲದಿಂದ ಮಜ್ಜನಕ್ಕೆರೆದು, ಅಪ್ಪು ನಿವೃತ್ತಿಯಾದ ಗಂಧವ ಧರಿಸಿ, ಬುದ್ಧಿ ಸುಬ

ದ್ಧಿಯಾದಕ್ಷತೆಯನಿಟ್ಟು, ಆಲ್ಲಿಹ ಷಡುದಳಂಗಳನೇ ಪುಷ್ಪಮಾಲೆಯ ಧರಿಸಿ, ಆಲ್ಲಿಹ ಕಮಲ ಸದ್ವಾಸನೆಯ ಧೂಪಮುಂ ಬೀಸಿ, ಅಲ್ಲಿಹ ನೀಲವರ್ಣವನ್ನೇ ಕರ್ಪುರದ ಜ್ಯೋತಿ ಎಂದು ಬೆಳಗಿ, ಅಲ್ಲಿಹ ಸ್ವಪ್ನಾವಸ್ಥೆ ಎಂಬ ವಸ್ತ್ರವ ಹೊದ್ದಿಸಿ, ನಿಃಕ್ರೋಧವೆಂಬ ಆಭರಣವ ತೊಡಿಸಿ, ಸುರುಚಿ ಎಂಬ ನೈವೇದ್ಯವನರ್ಪಿಸಿ, ನೈಷ್ಠೆ ಎಂಬ ತಾಂಬೂಲವನರ್ಪಿಸಿ, ಇಂತೀ ಗುರುಲಿಂಗದ ಅಷ್ಟ ವಿಧಾರ್ಚನೆಯುಂ ಮಾಡಿಕೊಂಡು, ಕೋಟಿಸೂರ್ಯ ಪ್ರಭೆಯಂತೆ ಬೆಳಗುವ ಗುರುಲಿಂಗವನ್ನು ಕಂಗಳು ತುಂಬಿ ನೋಡಿ, ಮನಸ್ಸಂತೋಷಂಗೊಂಡು ಆ ಗುರುಲಿಂಗ ಪೂಜೆ ನಿರ್ವಾಳ್ಯವ ಮಾಡಬೆ, ಓಂ, ಮಾಂ ಮಾಂ ಮಾಂ ಮಾಂ ಮಾಂ ಮಾಂ ಎಂಬ ಮಕಾರ ಷಡ್ವಿಧ ಮಂತ್ರಂಗಳಿಂದೆ ನಮಸ್ಕರಿಸಿ ಆ ಗುರುಲಿಂಗವನ್ನು ಕೂಡಿ ಎರಡಳಿದು,

ಶಿವಲಿಂಗ

ಆ ಲಿಂಗದ ಮುಂದಕ್ಕೆ ಹೋಗಿ, ಮಣಿಪೂರಕ ಚಕ್ರ ರಂಗ ಮಂಟಪದಲ್ಲಿ ಮೂರ್ತಿಗೊಂಡಿರ್ದ ಶಿವಲಿಂಗಕ್ಕೆ ಪರಮಾನಂದವೆಂಬ ಮಜ್ಜನಕ್ಕೆರೆದು ಅಗ್ನಿ ನಿವೃತ್ತಿಯಾದ ಗಂಧವ ಧರಿಸಿ ಅಹಂಕಾರವೆಂಬ ಅಕ್ಷತೆಯನಿಟ್ಟು ಆಲ್ಲಿಹ ದಶದಳಂಗಳನೇ ಪುಷ್ಪಮಾಲೆಯ ಧರಿಸಿ ಆಲ್ಲಿಹ ಕಮಲ ಸದ್ವಾಸನೆಯ ಧೂಪವ ಬೀಸಿ, ಅಲ್ಲಿಹ ಕಪ್ಪು ವರ್ಣವೇ ಕರ್ಪುರ ಜ್ಯೋತಿ ಎಂದು ಬೆಳಗಿ, ಅಲ್ಲಿಹ ಸುಷುಪ್ತಾವಸ್ಥೆ ಎಂಬ ವಸ್ತ್ರವ ಹೊದ್ದಿಸಿ, ನಿರ್ಲೋಭವೆಂಬ ಆಭರಣವ ತೊಡಿಸಿ ಸುರೂಪು ಎಂಬ ನೈವೇದ್ಯವಂ ಸಮರ್ಪಿಸಿ, ಸಾವಧಾನವೆಂಬ ತಾಂಬೂಲವನಿತ್ತು, ಶಿವಲಿಂಗದಷ್ಟ ವಿಧಾರ್ಚನೆಯುಂ ಮಾಡಿ, ಕೋಟಿಸೂರ್ಯ ಪ್ರಭೆಯಂತೆ ಬೆಳಗುವ ಶಿವಲಿಂಗವ ಕಂಗಳ ತುಂಬಿ ನೋಡಿ, ಮನದಲ್ಲಿ ಸಂತೋಷಂಗೊಂಡು ಶಿವಲಿಂಗ ಪೂಜೆಯ ನಿರ್ವಾಳ್ಯಪ ಮಾಡಬೆ, ಓಂ, ಶೀಂ ಶೀಂ ಶೀಂ ಶೀಂ ಶೀಂ ಶೀಂ ಎಂಬ ಶಿಕಾರ ಷಡ್ವಿಧ ಮಂತ್ರಂಗಳಿಂದೆ ನಮಸ್ಕರಿಸಿ, ಆ ಶಿವಲಿಂಗವನ್ನು ಕೂಡಿ ಎರಡಳಿದು,

ಜಂಗಮಲಿಂಗ

ಅಲ್ಲಿಂದ ಮುಂದಕ್ಕೆ ಹೋಗಿ, ಮೂರ್ತಿಗೊಂಡಿದ್ದ ಆ ಜಂಗಮ ಲಿಂಗಕ್ಕೆ ಶಾಂತಿ ಎಂಬ ಜಲದಿಂದೆ ಮಜ್ಜನಕ್ಕೆರೆದು, ವಾಯುನಿವೃತ್ತಿಯಾದ

ಗಂಧವ ಧರಿಸಿ, ಅಲ್ಲಿಹ ಕಮಲ ಸದ್ವಾಸನೆಯ ಧೂಪವ ಬೀಸಿ, ಅಲ್ಲಿಹ ಮಾಂಜಿಷ್ಟ ವರ್ಣವೇ ಕರ್ಪೂರದ ಜ್ಯೋತಿ ಎಂದು ಬೆಳಗಿ, ಅಲ್ಲಿಹ ಸೂರ್ಯಾವಸ್ಥೆ ಎಂಬ ವಸ್ತ್ರವ ಸಮರ್ಪಿಸಿ, ನಿರ್ಮೋಹವೆಂಬ ಆಭರಣವ ತೊಡಿಸಿ ಸುಸ್ಪರ್ಶನವೆಂಬ ನೈವೇದ್ಯವನರ್ಪಿಸಿ ಅನುಭಾವವೆಂಬ ತಾಂಬೂಲವನಿತ್ತು, ಇಂತು ಜಂಗಮಲಿಂಗದ ಅಷ್ಟವಿಧಾರ್ಚನೆಯಂ ಮಾಡಿ ಕೋಟಿ ಸೂರ್ಯ ಪ್ರಭೆಯಂತೆ ಬೆಳಗುವ ಜಂಗಮ ಲಿಂಗವನ್ನು ಕಂಗಳ ತುಂಬಿ ನೋಡಿ, ಮನದಲ್ಲಿ ಸಂತೋಷಂಗೊಂಡು, ಆ ಜಂಗಮ ಲಿಂಗದ ಪೂಜೆಯ ನಿರ್ವಾಳ್ಯವ ಮಾಡದೆ ಓಂ, ವಾಂ ವಾಂ ವಾಂ ವಾಂ ವಾಂ ವಾಂ ವಾಂ ಎಂಬ ವಕಾರ ಷಡ್ವಿಧ ಮಂತ್ರಂಗಳಿಂದೆ ನಮಸ್ಕರಿಸಿ, ಆ ಜಂಗಮ ಲಿಂಗವನ್ನೇ ಕೂಡಿ ಎರಡಳಿದು,

ಪ್ರಸಾದಲಿಂಗ

ಅಲ್ಲಿಂದ ಮುಂದಕ್ಕೆ ಹೋಗಿ, ವಿಶುದ್ಧಿ ಚಕ್ರವೆಂಬ ರಂಗಮಂಟಪದಲ್ಲಿ ಮೂರ್ತಿಗೊಂಡಿರ್ಪ ಪ್ರಸಾದಲಿಂಗಕ್ಕೆ ಪ್ಲವೆಮೆ ಎಂಬ ಜಲದಿಂದ ಮಜ್ಜನಕ್ಕೆರೆದು, ಗಗನ ನಿವೃತ್ತಿಯಾದ ಗಂಧವ ಧರಿಸಿ, ಜ್ಞಾನ ಸುಜ್ಞಾನವಾದ ಅಕ್ಷತೆಯನಿಟ್ಟು ಅಲ್ಲಿಹ ಷೋಡಶದಳಂಗಳನೆ ಪುಷ್ಪದ ಮಾಲೆಯ ಧರಿಸಿ, ಅಲ್ಲಿಹ ಕಮಲ ಸದ್ವಾಸನೆಯ ಧೂಪವ ಬೀಸಿ, ಅಲ್ಲಿಹ ಕೃಷ್ಣವರ್ಣವೇ ಕರ್ಪೂರದ ಜ್ಯೋತಿಯಂ ಬೆಳಗಿ, ಅಲ್ಲಿಹ ತೂರ್ಯಾತೀತಾವಸ್ಥೆ ಎಂಬ ನವೀನ ವಸ್ತ್ರವ ಧರಿಸಿ, ನಿರ್ಮದವೆಂಬ ಆಭರಣವನಿಟ್ಟು ಸುಶಬ್ದವೆಂಬ ನೈವೇದ್ಯವನರ್ಪಿಸಿ ಆನಂದವೆಂಬ ತಾಂಬೂಲವನಿತ್ತು ಇಂತು ಪ್ರಸಾದಲಿಂಗದ ಅಷ್ಟವಿಧಾರ್ಚನೆಯಂ ಮಾಡಿಕೊಂಡು ಕೋಟಿ ಸೂರ್ಯ ಪ್ರಭೆಯಂತೆ ಬೆಳಗುವ ಪ್ರಸಾದ ಲಿಂಗವನ್ನು ಕಂಗಳ ತುಂಬಿ ನೋಡಿ ಮನಸ್ಸಂತೋಷಂಗೊಂಡು ಆ ಪ್ರಸಾದಲಿಂಗದ ಪೂಜೆಯಂ ನಿರ್ವಾಳ್ಯವ ಮಾಡದೆ, ಓಂ, ಯಾಂ ಯಾಂ ಯಾಂ ಯಾಂ ಯಾಂ ಯಾಂ ಎಂಬ ಯಕಾರ ಷಡ್ವಿಧದಿಂದ ಮಂತ್ರವ ಸ್ಮರಿಸಿ ಆ ಪ್ರಸಾದ ಲಿಂಗವನೊಡಗೂಡಿ ಎರಡಳಿದು,

ಮಹಾಲಿಂಗ

ಅಲ್ಲಿಂದ ಮುಂದಕ್ಕೆ ಹೋಗಿ, ಆಜ್ಞಾಚಕ್ರವೆಂಬ ರಂಗಮಂಟಪಕ್ಕೆ ಹೋಗಿ, ಅಲ್ಲಿ ಮೂರ್ತಿಗೊಂಡಿರ್ಪ ಮಹಾಲಿಂಗಕ್ಕೆ ಸಂತೋಷವೆಂಬ ಜಲದಿಂದ ಮಜ್ಜನಕ್ಕೆರೆದು ಆತ್ಮನಿವೃತ್ತಿಯಾದ ಗಂಧವ ಧರಿಸಿ,

ಭಾವಸದ್ಭಾವದಕ್ಷತೆಯನಿಟ್ಟು, ಅಲ್ಲಿಹ ದ್ವಿದಳಂಗಳ ಪುಷ್ಪ ಮಾಲೆಯ ಧರಿಸಿ, ಅಲ್ಲಿಹ ಕಮಲ ಸದ್ವಾಸನೆಯ ಧೂಪವಮಂ ಬೀಸಿ, ಅಲ್ಲಿಹ ಮಾಣಿಕ್ಯ ವರ್ಣವೇ ಕರ್ಪೂರ ಜ್ಯೋತಿ ಎಂದು ಬೆಳಗಿ, ಅಲ್ಲಿಹ ನಿರವಸ್ಥೆ ಎಂಬ ವಸ್ತ್ರವ ಪೊದಿಸಿ, ನಿರ್ಮಲವೆಂಬ ಆಭರಣವ ತೊಡಿಸಿ, ಸುತೃಪ್ತಿ ಎಂಬ ನೈವೇದ್ಯವ ಧರಿಸಿ, ಸಮರಸವೆಂಬ ತಾಂಬೂಲವನಿತ್ತು, ಇಂತು ಮಹಾಲಿಂಗನ ಅಷ್ಟ ವಿಧಾರ್ಚನೆಯಂ ಮಾಡಿ, ಕೋಟಿ ಸೂರ್ಯ ಪ್ರಭೆಯಂತೆ ಬೆಳಗುವ ಮಹಾಲಿಂಗವ ಕಂಗಳ ತುಂಬಿ ನೋಡಿ, ಮನಸ್ಸಂತೋಷಗೊಂಡು ಆ ಮಹಾಲಿಂಗದ ಪೂಜೆಯ ನಿರ್ವಾಳ್ಯವ ಮಾಡದೆ, ಓಂ ಓಂ ಓಂ ಓಂ ಓಂ ಓಂ ಓಂ ಎಂಬ ಓಂಕಾರ ಷಡ್ವಿಧ ಮಂತ್ರಂಗಳಿಂದೆ ನಮಸ್ಕರಿಸಿ, ಆ ಮಹಾಲಿಂಗವನೊಡಗೊಂಡು ಎರಡಳಿದು,

ನಿಷ್ಕಲಲಿಂಗ

ಅಲ್ಲಿಂದ ಮುಂದಕ್ಕೆ ಹೋಗಿ ಬ್ರಹ್ಮರಂಧ್ರವೆಂಬ ಸಹಸ್ರದಳ ಮುಂಟಪದಲ್ಲಿ ಮೂರ್ತಿಗೊಂಡಿರ್ಪ ನಿಷ್ಕಳ ಲಿಂಗಕ್ಕೆ ಅನುಪಮವೆಂಬ ಜಲದಿಂದ ಮಜ್ಜನಕ್ಕೆರೆದು, ಅನಾದಿ ಎಂಬ ಗಂಧವ ಧರಿಸಿ, ಅಗಮ್ಯವೆಂಬ ಅಕ್ಷತೆಯನಿಟ್ಟು, ಅವಿರಳವೆಂಬ ಪುಷ್ಪದ ಮಾಲೆಯಂ ಧರಿಸಿ, ಅಷ್ಟಾವರಣವೆಂಬ ಧೂಪವ ಬೀಸಿ, ಅಖಂಡವೆಂಬ ಜ್ಯೋತಿಯ ಬೆಳಗಿ, ಸತ್ಯವೆಂಬ ವಸ್ತ್ರವ ಹೊದಿಸಿ, ಸದಾನಂದವೆಂಬ ಆಭರಣವ ತೊಡಿಸಿ, ... ನೈವೇದ್ಯವನರ್ಪಿಸಿ, ನಿರುಪಮವೆಂಬ ತಾಂಬೂಲವನಿತ್ತು, ಇಂತು ನಿಷ್ಕಳ ಲಿಂಗದ ಅಷ್ಟ ವಿಧಾರ್ಚನೆಯಂ ಮಾಡಿ, ಅನಂತ ಕೋಟಿ ಸೂರ್ಯ ಪ್ರಭೆಯಂತೆ ಬೆಳಗುವ ನಿಷ್ಕಲ ಲಿಂಗದ ಪೂಜೆಯ ನಿರ್ವಾಳ್ಯವ ಮಾಡದೆ, ಅಗಣಿತವೆಂಬ ನಮಸ್ಕಾರವ ಮಾಡಿ ನಿಷ್ಕಳ ಲಿಂಗವನೊಡಗೂಡಿ ಎರಡಳಿದು,

ಶೂನ್ಯಲಿಂಗ

ಅಲ್ಲಿಂದ ಮುಂದಕ್ಕೆ ಹೋಗಿ ಶಿಖಾಚಕ್ರವೆಂಬ ತ್ರಿದಳ ಮುಂಟಪದಲ್ಲಿ ಮೂರ್ತಿಗೊಂಡಿರ್ದ ಶೂನ್ಯ ಲಿಂಗಕ್ಕೆ ನಿರ್ಭಾವವೆಂಬ ಜಲದಿಂದ ಮಜ್ಜನಕ್ಕೆರೆದು, ನಿಜಾನಂದವೆಂಬ ಗಂಧವ ಧರಿಸಿ, ನಿರ್ಜಡವೆಂಬ ಅಕ್ಷತೆಯನಿಟ್ಟು, ನಿರ್ದ್ವಂದ್ವವೆಂಬ ಪುಷ್ಪದ ಮಾಲೆಯಂ ಧರಿಸಿ,

ನಿರ್ಲಜ್ಜವೆಂಬ ಧೂಪವ ಬೀಸಿ, ನಿರಾಧಾರವೆಂಬ ಜ್ಯೋತಿಯ ಬೆಳಗಿ ನಿರಾಮಯವೆಂಬ ವಸ್ತ್ರವ ಪೊದಿಸಿ, ನಿಸ್ಪೃಹವೆಂಬ ಆಭರಣವ ತೊಡಿಸಿ, ನಿರಾಳವೆಂಬ ತಾಂಬೂಲವನಿತ್ತು, ಇಂತು ಶೂನ್ಯಲಿಂಗದ ಅಷ್ಟ ವಿಧಾರ್ಚನೆಯಂ ಮಾಡಿ, ಅಗಣಿತ ಕೋಟಿ ಸೂರ್ಯ ಪ್ರಕಾಶದಂತೆ ಬೆಳಗುವ ಶೂನ್ಯಲಿಂಗವನ್ನು ಕಂಗಳ ತುಂಬಿ ನೋಡಿ, ಮನಸ್ಸಂತೋಷಂಗೊಂಡು, ಆ ಶೂನ್ಯಲಿಂಗದ ಪೂಜೆಯ ನಿರ್ವಾಳ್ಯವ ಮಾಡದೆ, ನಿರ್ಭೇದ್ಯವೆಂಬ ನಮಸ್ಕಾರವಂ ಮಾಡಿ ಆ ಶೂನ್ಯಲಿಂಗವನೊದಗೂಡಿ ಎರಡಳಿದು,

ನಿರಂಜನಲಿಂಗ

ಅಲ್ಲಿಂದ ಮುಂದಕ್ಕೆ ಹೋಗಿ, ಪಶ್ಚಿಮ ಚಕ್ರವೆಂಬ ಏಕವಳ ಮಂಟಪದಲ್ಲಿ ಮೂರ್ತಿಗೊಂಡಿರ್ದ ನಿರಂಜನ ಲಿಂಗಕ್ಕೆ ನಿರ್ವಾಣವೆಂಬ ಜಲದಿಂದ ಮಜ್ಜನಕ್ಕೆರೆದು ನಿಃಕರುಣವೆಂಬ ಗಂಧವ ಧರಿಸಿ, ನಿಸ್ಸಂಗವೆಂಬ ಅಕ್ಷತೆಯನಿಟ್ಟು ನಿಸ್ಸಾರವೆಂಬ ಪುಷ್ಪದ ಮಾಲೆಯ ಧರಿಸಿ, ನಿರುಪಾಧಿಕವೆಂಬ ಧೂಪವ ಬೀಸಿ, ನಿಷ್ಕಳಂಕವೆಂಬ ಜ್ಯೋತಿಯ ಬೆಳಗಿ, ನಿಶ್ಚಲವೆಂಬ ವಸ್ತ್ರವ ಪೊದಿಸಿ, ನಿರ್ವಾಸನೆ ಎಂಬ ಆಭರಣವ ತೊಡಿಸಿ, ನಿಶ್ಶೂನ್ಯವೆಂಬ ನೈವೇದ್ಯವ ಸಮರ್ಪಿಸಿ, ನಿರವಯ ತಾಂಬೂಲವನಿತ್ತು ಇಂತು ನಿರಂಜನ ಲಿಂಗದ ಅಷ್ಟವಿಧಾರ್ಚನೆಯಂ ಮಾಡಿ ತೆರಹಿಲ್ಲದ ಬೆಳಗಿನ ಬೆಳಗು ಮಹಾ ಬೆಳಗನೊಳಕೊಂಡು ಬೆಳಗುವ ನಿರಂಜನ ಲಿಂಗವ ಕಂಗಳ ತುಂಬಿ ನೋಡಿ ಮನದಲ್ಲಿ ಸಂತೋಷದಿಂದ ನಿರಂಜನ ಲಿಂಗದ ಪೂಜೆಯ ನಿರ್ವಾಳ್ಯವ ಮಾಡದೆ, ನಿಸ್ಸಬ್ದವೆಂಬ ನಮಸ್ಕಾರವ ಮಾಡಿ, ಆ ನಿರಂಜನ ಲಿಂಗವನೊಡಗೂಡಿ ಎರಡಳಿದು,

ಬಯಲು

ಅಲ್ಲಿಂದ ಮುಂದೆ ನೋಡಲು ಬರಿಯ ಬಯಲು ಇಪ್ಪುದ ಕಂಡು, ಆ ಬಯಲೇ ತನ್ನ ನಿಜವಾಸವೆಂದು ತಿಳಿದು, ಆ ನಿಜವಾಸದಲ್ಲಿ ತಾನಿದ್ದು, ತನ್ನಿಂದ ಕೆಳಗಣ ನವಚಕ್ರಂಗಳಲ್ಲಿರ್ದ್ದ ನವಲಿಂಗಂಗಳ ಪೂಜೆಯ ನಿರಂತರದಲ್ಲಿ ಮಾಡುವ ಶಿವಯೋಗಿಗೆ ಭವಬಂಧನವಿಲ್ಲ. ಆ ಭವಬಂಧನ

ವಿಲ್ಲವಾಗಿ ಜೀವಕಲ್ಪಿತವು ಮುನ್ನವೇ ಇಲ್ಲವಾಗಿ ಆತನು ಪರಿಪೂರ್ಣವಾಗಿ, ಪರಾತ್ಪರನಾಗಿ, ಪಂಚಾಪರ ಶಿವಬ್ರಹ್ಮವೇಯಾಗಿರ್ಪನಯ್ಯ ಅಖಂಡೇಶ್ವರಾ.

೨ನೇ ವಚನ

ಆಚಾರಲಿಂಗ

೬೮. ಅಯ್ಯ ತಾರಕಾಕೃತಿ, ನಕಾರ ಪ್ರಣವ, ವೇಣುನಾದ, ಆಧಾರಚಕ್ರ, ಪೀತವರ್ಣ, ಭಕ್ತಸ್ಥಲ, ಸ್ಥೂಲತನು, ಸುಚಿತ್ತಹಸ್ತ, ಆಚಾರಲಿಂಗ, ಘ್ರಾಣಮುಖ, ಶ್ರದ್ಧಾಭಕ್ತಿ, ಗಂಧಪದಾರ್ಥ, ಸುಗಂಧ ಪ್ರಸಾದ, ಬ್ರಹ್ಮಪೂಜಾರಿ, ಬ್ರಹ್ಮನಧಿದೇವತೆ, ಕರ್ಮಸಾದಾಖ್ಯ, ಸತ್ತುವೆಂಬ ಲಕ್ಷಣ, ಪರವೆಂಬ ಸಂಜ್ಞೆ, ಪೂರ್ವದಿಕ್ಕು, ಋಗ್ವೇದ, ಪೃಥ್ವಿಯೇ ಅಂಗ, ಜೀವಾತ್ಮ, ಕ್ರಿಯಾಶಕ್ತಿ, ನಿವೃತ್ತಿಕಲೆ, ಇಂತು ೨೪ ಸಕೀಲಂಗಳನೊಳಕೊಂಡು ಎನ್ನಷ್ಟಾಧಾರ ಚಕ್ರವೆಂಬ ಶ್ರೀಶೈಲ ಕ್ಷೇತ್ರದಲ್ಲಿ ಮೂರ್ತಿಗೊಂಡಿರ್ದ ಪಂಚಾಚಾರ ಸ್ವರೂಪವಾದ ಆಚಾರಲಿಂಗವೇ ಮಲ್ಲಿಕಾರ್ಜುನ ಲಿಂಗವೆಂದು ತನುತ್ರಯವ ಪುಡಿಮಾಡಿ ಶಿವಾನಂದ ಜಲದಿಂ ಮಜ್ಜನಕ್ಕೆರೆದು, ಪೃಥ್ವಿ ನಿವೃತ್ತಿಯಾದ ಗಂಧವ ಧರಿಸಿ, ಚಿತ್ತ ಸುಚಿತ್ತವಾದ ಅಕ್ಷತೆಯನಿಟ್ಟು ಅಲ್ಲಿಹ ಚತುರ್ದಳಗಳನೆ ಪುಷ್ಪದ ಮಾಲೆ ಎಂದು ಧರಿಸಿ, ಅಲ್ಲಿಹ ಕಮಲ ಸದ್ವಾಸನೆಯ ಧೂಪವ ಬೀಸಿ, ಅಲ್ಲಿಹ ಪೀತವರ್ಣವ ಕರ್ಪೂರದ ಜ್ಯೋತಿ ಎಂದು ಬೆಳಗಿ, ಅಲ್ಲಿಹ ಜಾಗ್ರಾವಸ್ಥೆ ಎಂಬ ನವೀನ ವಸ್ತ್ರವ ಹೊದ್ದಿಸಿ, ನಿಃಕಾಮವೆಂಬಾಭರಣವ ತೊಡಿಸಿ, ಸುಗಂಧವೆಂಬ ನೈವೇದ್ಯವನರ್ಪಿಸಿ, ಶ್ರದ್ಧೆ ಎಂಬ ತಾಂಬೂಲವನಿತ್ತು, ಇಂತು ಪಂಚಾಚಾರ ಮೂರ್ತಿ ಆಚಾರಲಿಂಗಕ್ಕೆ ಅಷ್ಟವಿಧಾರ್ಚನೆಯ ಮಾಡಿ, ಕೋಟಿಸೂರ್ಯ ಪ್ರಭೆಯಂತೆ ಬೆಳಗುವ ಆಚಾರಲಿಂಗವನ್ನು ಕಂಗಳು ತುಂಬಿ ನೋಡಿ, ಮನದಲ್ಲಿ ಸಂತೋಷಂಗೊಂಡು, ಆಚಾರ ಲಿಂಗದ ಪೂಜೆಯ ಸಮಾಪ್ತವ ಮಾಡಿ ಓಂ ನಾಂ ನಾಂ ನಾಂ ನಾಂ ನಾಂ ನಾಂ ನಾಂ ಎಂಬ ನಕಾರ ಷಡ್ವಿಧ ಮಂತ್ರಂಗಳಿಂದೆ ನಮಸ್ಕರಿಸಿ, ಆ ಲಿಂಗವೇ ತಾನೆಂದರಿದು ಕೂಡಿ ಎರಡಳಿದು ನಿಚ್ಚೈರಗಿನಿಂದ ಆಚರಿಸಬಲ್ಲಾತನೇ ಶ್ರದ್ಧಾಭಕ್ತಿಯುಳ್ಳ ಸದ್ಭಕ್ತ ನೋಡಾ ಸಂಗನಬಸವೇಶ್ವರಾ.

ಗುರುಲಿಂಗ

೯೯. ಅಯ್ಯ ದಂಡಕಾಕೃತಿ ಮಕಾರ ಪ್ರಣವ, ಘಂಟಾನಾದ, ಸ್ವಾಧಿಷ್ಠಾನಚಕ್ರ, ಶ್ವೇತವರ್ಣ, ಮಹೇಶ್ವರಸ್ಥಲ, ಸೂಕ್ಷ್ಮತನು, ಸುಬುದ್ಧಿ ಹಸ್ತ, ಗುರುಲಿಂಗ, ಜಿಹ್ವೆಮುಖ, ನೈಷ್ಠಿಕಾಭಕ್ತಿ, ರಸಪದಾರ್ಥ, ಸುರಸ ಪ್ರಸಾದ, ವಿಷ್ಣುಪೂಜಾರಿ, ವಿಷ್ಣುವಧಿದೇವತೆ, ಕರ್ತೃಸಾದಾಖ್ಯ, ಚಿತ್ತು ವೆಂಬ ಲಕ್ಷಣ, ಗೂಢವೆಂಬ ಸಂಜ್ಞೆ, ಪಶ್ಚಿಮದಿಕ್ಕು, ಯಜುರ್ವೇದ, ಅಪ್ಪುವೇ ಅಂಗ, ಅಂತರಾತ್ಮ, ಜ್ಞಾನಶಕ್ತಿ, ಪ್ರತಿಷ್ಠಾಕಲೆ, ಇಂತು ೨೪ ಸಕೀಲಗಳನೊಳಕೊಂಡು ಎನ್ನ ಸ್ವಾಧಿಷ್ಠಾನ ಚಕ್ರವೆಂಬ ಸೇತು ಬಂಧ ಕ್ಷೇತ್ರದಲ್ಲಿ ಮೂರ್ತಿಗೊಂಡಿರ್ಪ ಮಂತ್ರ ಮೂರ್ತಿ ಸ್ವರೂಪ ಪಾದ ಗುರುಲಿಂಗ ಸ್ವರೂಪವನೆ ರಾಮೇಶ್ವರನೆಂದು ಮನತ್ರಯವ ಮಡಿ ಮಾಡಿ ಪರಿಣಾಮವೆಂಬ ಜಲದಿಂ ಮಜ್ಜನಕ್ಕೆರೆದು, ಅಪ್ಪು ನಿವೃತ್ತಿಯಾದ ಗಂಧವ ಧರಿಸಿ, ಬುದ್ಧಿ ಸುಬುದ್ಧಿಯಾದ ಅಕ್ಷತೆಯನಿಟ್ಟು, ಅಲ್ಲಿ ಷಡ್ದಳಂಗಳನೆ ಪುಷ್ಪದ ಮಾಲೆ ಎಂದು ಧರಿಸಿ, ಅಲ್ಲಿಹ ಕಮಲ ಸದ್ವಾಸನೆಯ ಧೂಪವ ಬೀಸಿ, ಅಲ್ಲಿಹ ಶ್ವೇತ ವರ್ಣವೇ ಕರ್ಪೂರದ ಜ್ಯೋತಿ ಎಂದು ಬೆಳಗಿ, ಅಲ್ಲಿಹ ಸ್ವಪ್ನಾವಸ್ಥೆ ಎಂಬ ವಸ್ತ್ರವ ಹೊದ್ದಿಸಿ, ನಿಃಕ್ರೋಧವೆಂಬ ಆಭರಣವ ತೊಡಿಸಿ, ಸುರುಚಿ ಎಂಬ ನೈವೇದ್ಯವನ ರ್ಪಿಸಿ, ನೈಷ್ಠೆ ಎಂಬ ತಾಂಬೂಲವನಿತ್ತು, ಕೋಟಿಸೂರ್ಯ ಪ್ರಭೆ ಯಂತೆ ಬೆಳಗುವ ಗುರುಲಿಂಗ ಮೂರ್ತಿಯನು ಕಂಗಳ ತುಂಬಿ ನೋಡಿ ಮನದಲ್ಲಿ ಸಂತೋಷಂಗೊಂಡು ಆ ಗುರುಲಿಂಗ ಪೂಜೆಯ ಸಮಾ ಪ್ತಿಯ ಮಾಡಿ, ಓಂ, ಮಾಂ ಮಾಂ ಮಾಂ ಮಾಂ ಮಾಂ ಮಾಂ ಎಂಬ ಮಕಾರ ಷಡ್ವಿಧ ಮಂತ್ರಂಗಳಿಂದೆ ನಮಸ್ಕರಿಸಿ ಆ ಲಿಂಗವೇ ತಾನೆಂದರಿದು ಕೂಡಿ ಎರಡಳಿದು ನಿಶ್ಚಿಂತದಿಂದ ಬೆರಿಸಬಲ್ಲಾತನೇ ನೈಷ್ಠಿಕಾ ಭಕ್ತಿಯನುಳ್ಳ ವೀರ ಮಹೇಶ್ವರ ನೋಡಾ ಸಂಗನಬಸ ವೇಶ್ವರಾ.

ಶಿವಲಿಂಗ.

೨೦. ಅಯ್ಯ ಕುಂಡಲಾಕೃತಿ, ಶಿಕಾರ ಪ್ರಣವ, ಭೇರೀನಾದ, ಮಣಿಪೂರಕಚಕ್ರ, ಹರಿತ ವರ್ಣ, ಪ್ರಸಾದಿಸ್ಥಲ, ಕಾರಣತನು, ನಿರ ಹಂಕಾರ ಹಸ್ತ, ಶಿವಲಿಂಗ, ನೇತ್ರವೆಂಬ ಮುಖ, ಸಾವಧಾನಭಕ್ತಿ,

ರೂಪು ಪದಾರ್ಥ, ಸುರೂಪು ಪ್ರಸಾದ, ರುದ್ರಪೂಜಾರಿ, ರುದ್ರನಧಿದೇ ವತೆ, ಮೂರ್ತಿಸಾದಾಖ್ಯ, ಆನಂದವೆಂಬ ಲಕ್ಷಣ, ಶರೀರಸ್ಥನೆಂಬ ಸಂಜ್ಞೆ, ಉತ್ತರದಿಕ್ಕು, ಸಾಮವೇದ, ಅಗ್ನಿಯೇ ಅಂಗ, ಪರಮಾತ್ಮ, ಇಚ್ಛಾಶಕ್ತಿ, ವಿದ್ಯಾಕಲೆ ಇಂತು ೨೪ ಸಕೀಲಂಗಳನೊಳಕೊಂಡು ಎನ್ನ ಮಣಿಪೂರಕ ಚಕ್ರವೆಂಬ ಪಂಪಾಕ್ಷೇತ್ರದಲ್ಲಿ ಮೂರ್ತಿಗೊಂಡಿರ್ಪ, ನಿರೀ ಕ್ಷಣ ಸ್ವರೂಪನಾದ, ಶಿವಲಿಂಗವೇ ಶ್ರೀವಿರೂಪಾಕ್ಷಲಿಂಗವೆಂದು ಆತ್ಮತ್ರಯವ ಮಡಿ ಮಾಡಿ, ಪರಮಾನಂದವೆಂಬ ಜಲದಿಂ ಮಜ್ಜನಕ್ಕೆರೆದು, ಅಗ್ನಿನಿವೃತ್ತಿಯಾದ ಗಂಧವ ಧರಿಸಿ, ಅಹಂಕಾರ ನಿರಹಂಕಾರವಾದಕ್ಷತೆಯನಿಟ್ಟು, ಅಲ್ಲಿಹ ದಶ ದಳಂಗಳನೆ ಪುಷ್ಪದ ಮಾಲೆ ಎಂದು ಧರಿಸಿ, ಅಲ್ಲಿಹ ಕಮಲ ಸದ್ವಾಸನೆಯ ಧೂಪವ ಬೀಸಿ, ಅಲ್ಲಿಹ ಹರಿತ ವರ್ಣವೇ ಕರ್ಪೂರಜ್ಯೋತಿ ಎಂದು ಬೆಳಗಿ, ಅಲ್ಲಿಹ ಸುಷುಪ್ತಾವಸ್ಥೆ ಎಂಬ ವಸ್ತ್ರವ ಹೊದ್ದಿಸಿ, ನಿರ್ಲೋಭವೆಂಬ ಆಭರಣವ ತೊಡಿಸಿ, ಸುರೂಪು ಎಂಬ ನೈವೇದ್ಯವನರ್ಪಿಸಿ, ಸಾವಧಾನವೆಂಬ ತಾಂಬೂಲವನಿತ್ತು, ಇಂತೀ ಪರಶಿವಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡಿ ಕೋಟಿ ಸೂರ್ಯ ಪ್ರಭೆಯಂತೆ ಬೆಳಗುವ ಪರಶಿವಲಿಂಗವನ್ನು ಕಂಗಳು ತುಂಬಿ ನೋಡಿ, ಮನದಲ್ಲಿ ಸಂತೋಷಂಗೊಂಡು ಆ ಪರಶಿವಲಿಂಗ ಪೂಜೆಯ ಸಮಾ ಪ್ತಿಯ ಮಾಡಿ ಓಂ ಶೀಂ ಶೀಂ ಶೀಂ ಶೀಂ ಶೀಂ ಶೀಂ ಎಂಬ ಶಿಕಾರ ಷಡ್ವಿಧ ಮಂತ್ರಂಗಳಿಂದೆ ನಮಸ್ಕರಿಸಿ, ಆ ಪರಶಿವಲಿಂಗವೇ ತಾನೆಂದರಿದು ಕೂಡಿ ಎರಡಳಿದು ನಿಃಕಳಂಕನಾಗಿ ಆಚರಿಸಬಲ್ಲಾತನೇ ಸಾವಧಾನ ಭಕ್ತಿಯನುಳ್ಳ ಪ್ರಸಾದಿ ನೋಡಾ ಸಂಗನಬಸವೇಶ್ವರಾ.

ಜಂಗಮಲಿಂಗ.

೨೧. ಅಯ್ಯ ಅರ್ಧಚಂದ್ರಾಕೃತಿ, ನಕಾರ ಪ್ರಣವ, ಮೇಘನಾದ, ಅನಾಹತಚಕ್ರ, ಮಾಂಜಿಷ್ಠವರ್ಣ, ಪ್ರಾಣಲಿಂಗಿಸ್ಥಲ, ನಿರ್ಮಲತನು, ಸುಮನಹಸ್ತ, ಜಂಗಮಲಿಂಗ, ತ್ವಕ್ಕೆಂಬ ಮುಖ, ಅನುಭಾವಭಕ್ತಿ, ಸ್ಪರ್ಶನ ಪದಾರ್ಥ, ಸುಸ್ಪರ್ಶನ ಪ್ರಸಾದ, ಈಶ್ವರ ಪೂಜಾರಿ, ಈಶ್ವರನ ಧಿದೇವತೆ, ಅಮೂರ್ತಿಸಾದಾಖ್ಯ, ನಿತ್ಯವೆಂಬ ಲಕ್ಷಣ, ಲಿಂಗಕ್ಷೇತ್ರವೆಂಬ ಸಂಜ್ಞೆ, ದಕ್ಷಿಣದಿಕ್ಕು, ಅಥರ್ವಣವೇದ, ವಾಯುವೇ ಅಂಗ, ನಿರ್ಮಲಾತ್ಮ, ಆದಿಶಕ್ತಿ, ಶಾಂತಿಕಲೆ, ಇಂತು ೨೪ ಸಕೀಲಂಗಳನೊಳಕೊಂಡು

ಎನ್ನ ಅನಾಹತ ಚಕ್ರವೆಂಬ ಹಿಮವತ್ಕೇದಾರ ಕ್ಷೇತ್ರದಲ್ಲಿ ಮೂರ್ತಿಗೊಂಡಿರ್ದ ಯಜನ ಸ್ವರೂಪವಾದ ಜಂಗಮಲಿಂಗವೇ ಹಿಮಗಿರೀಶ್ವರನೆಂದು ಪ್ರಾಣತ್ರಯವ ಮಡಿ ಮಾಡಿ ಶಾಂತಿ ಎಂಬ ಮಜ್ಜನಕ್ಕೆರೆದು ವಾಯು ನಿವೃತ್ತಿಯಾದ ಗಂಧವ ಧರಿಸಿ ಮನ ಸಮನವಾದ ಅಕ್ಷತೆಯನಿಟ್ಟು ಅಲ್ಲಿಹ ದ್ವಾದಶ ದಶಂಗಳನೇ ಪುಷ್ಪದ ಮಾಲೆ ಎಂದು ಧರಿಸಿ, ಅಲ್ಲಿಹ ಕಮಲ ಸದ್ವಾಸನೆಯ ಧೂಪವ ಬೀಸಿ, ಅಲ್ಲಿಹ ಮಾಂಜಿಷ್ಟ ವರ್ಣವೇ ಕರ್ಪುರದ ಜ್ಯೋತಿ ಎಂದು ಬೆಳಗಿ, ಅಲ್ಲಿಹ ತೂರ್ಯಾವಸ್ಥೆ ಎಂಬ ವಸ್ತ್ರವ ಹೊದ್ದಿಸಿ, ನಿರ್ಮೋಹವೆಂಬ ಆಭರಣವ ತೊಡಿಸಿ, ಸುಸ್ಪರ್ಶನವೆಂಬ ನೈವೇದ್ಯವನರ್ಪಿಸಿ, ಅನುಭಾವವೆಂಬ ತಾಂಬೂಲವನಿತ್ತು, ಇಂತೀ ಜಂಗಮಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡಿ ಕೋಟಿ ಸೂರ್ಯರಂತೆ ಬೆಳಗುವ ಜಂಗಮಲಿಂಗವನ್ನು ಕಂಗಳು ತುಂಬಿ ನೋಡಿ, ಮನದಲ್ಲಿ ಸಂತೋಷಂಗೊಂಡು, ಆ ಜಂಗಮಲಿಂಗದ ಪೂಜೆಯ ಸಮಾಪ್ತವ ಮಾಡಿ ಓಂ, ವಾಂ, ವಾಂ, ವಾಂ, ವಾಂ, ವಾಂ, ವಾಂ, ಎಂಬ ವಕಾರ ಷಡ್ವಿಧ ಮಂತ್ರಂಗಳಿಂದ ನಮಸ್ಕರಿಸಿ ಆ ಜಂಗಮಲಿಂಗವೇ ತಾನೆಂದರಿದು ಕೂಡಿ ಎರಡಳಿದು ನಿಃಪ್ರಪಂಚಿಯಾಗಿ ಚರಿಸಬಲ್ಲಾತನೇ ಅನುಭಾವ ಭಕ್ತಿಯನುಳ್ಳ ಲಿಂಗವ್ಯಾಣಿ ನೋಡಾ ಸಂಗನಬಸವೇಶ್ವರಾ.

ಪ್ರಸಾದಲಿಂಗ.

೭೨. ಆಯ್ಯ, ದರ್ಪಣಾಕೃತಿ, ಯಕಾರ ಪ್ರಣಮು, ಪ್ರಣವನಾದ ವಿಶುದ್ಧಿ ಚಕ್ರ, ಕಪೋತ ವರ್ಣ, ಶರಣಸ್ಥಲ, ಆನಂದ ತನುವು, ಸುಜ್ಞಾನ ಹಸ್ತ, ಪ್ರಸಾದಲಿಂಗ, ಶ್ರೋತ್ರ ಮುಖ, ಆನಂದ ಭಕ್ತಿ, ಶಬ್ದ ಪದಾರ್ಥ, ಸುಶಬ್ದ ಪ್ರಸಾದ, ಸದಾಶಿವ ಪೂಜಾರಿ, ಸದಾಶಿವನಧಿದೇವತೆ, ಶಿವಸಾದಾಖ್ಯ, ಪರಿಪೂರ್ಣನೆಂಬ ಲಕ್ಷಣ, ಅನಾದಿವತ್ ಎಂಬ ಸಂಜ್ಞೆ, ಊರ್ಧ್ವ ದಿಕ್ಕು, ಅಜಪವೇದ, ಆಕಾಶವೇ ಅಂಗ, ಶುದ್ಧಾತ್ಮ, ಪರಾಶಕ್ತಿ, ಶಾಂತಾತೀತ ಕಲೆ, ಇಂತು ೨೪ ಸಕೀಲಂಗಳನೊಳಕೊಂಡು ಎನ್ನ ವಿಶುದ್ಧಿ ಚಕ್ರವೆಂಬ ಅವಿಮುಕ್ತ ಕ್ಷೇತ್ರದಲ್ಲಿ ಮೂರ್ತಿಗೊಂಡಿರ್ದ ಈಳನಾ ಸ್ವರೂಪವಾದ ಪ್ರಸಾದಲಿಂಗವೇ ವಿಶ್ವನಾಥ ಲಿಂಗವೆಂದು ಭಾವತ್ರಯವ ಮಡಿ ಮಾಡಿ ಕ್ಷಮೆ ಎಂಬ ಜಲದಿಂದ ಮಜ್ಜನಕ್ಕೆರೆದು ಗಗನ ನಿವೃತ್ತಿಯಾದ ಗಂಧವ ಧರಿಸಿ, ಜ್ಞಾನ ಸುಜ್ಞಾನವಾದಕ್ಷತೆಯನಿಟ್ಟು, ಅಲ್ಲಿಹ ಷೋಡಶ

ದಳಂಗಳನೆ ಪುಷ್ಪದ ಮಾಲೆ ಎಂದು ಧರಿಸಿ, ಅಲ್ಲಿಹ ಕಮಲ ಸದ್ವಾಸನೆಯ ಧೂಪವ ಬೀಸಿ, ಅಲ್ಲಿಹ ಕಪೋತ ವರ್ಣವೇ ಕರ್ಪುರದ ಜ್ಯೋತಿ ಎಂದು ಬೆಳಗಿ, ಅಲ್ಲಿಹ ತೂರ್ಯಾತೀತಾವಸ್ಥೆಯೇ ನವೀನ ವಸ್ತ್ರವೆಂದು ಹೊದ್ದಿಸಿ, ನಿರ್ಮದವೆಂಬ ಆಭರಣವ ತೊಡಿಸಿ, ಸುಶಬ್ದವೆಂಬ ನೈವೇದ್ಯವನರ್ಪಿಸಿ, ಆನಂದವೆಂಬ ತಾಂಬೂಲವನಿತ್ತು, ಇಂತೀ ಪ್ರಸಾದಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡಿ, ಕೋಟಿ ಸೂರ್ಯ ಪ್ರಭೆಯಂತೆ ಬೆಳಗುವ ಪ್ರಸಾದಲಿಂಗವನ್ನು ಕಂಗಳು ತುಂಬಿ ನೋಡಿ ಮನದಲ್ಲಿ ಸಂತೋಷಂಗೊಂಡು ಆ ಪ್ರಸಾದಲಿಂಗದ ಪೂಜೆಯ ಸಮಾಪ್ತವ ಮಾಡಿ, ಓಂ ಯಾಂ ಯಾಂ ಯಾಂ ಯಾಂ ಯಾಂ ಯಾಂ ಎಂಬ ಯಕಾರ ಷಡ್ವಿಧ ಮಂತ್ರಂಗಳಿಂದ ನಮಸ್ಕರಿಸಿ ಆ ಪ್ರಸಾದಲಿಂಗವೇ ತಾನೆಂದರಿದು ಕೂಡಿ ಎರಡಳಿದು ನಿರ್ಮೋಹಿಯಾಗಿ ಆಚರಿಸಬಲ್ಲಾತನೇ ಆನಂದ ಭಕ್ತಿಯನುಳ್ಳ ಶಿವಶರಣ ನೋಡಾ ಸಂಗನಬಸವೇಶ್ವರಾ.

ಮಹಾಲಿಂಗ.

೭೩. ಅಯ್ಯಾ, ಜ್ಯೋತಿರಾಕೃತಿ, ಓಂಕಾರ ಪ್ರಣವ, ಸಿಂಹನಾದ, ಆಜ್ಞಾಚಕ್ರ, ಮಾಣಿಕ್ಯ ವರ್ಣ, ಐಕ್ಯಸ್ಥಲ, ಶುದ್ಧ ತನು, ಸದ್ಭಾವ ಹಸ್ತ, ಮಹಾಲಿಂಗ, ಹೃದಯವೆಂಬ ಮುಖ, ಸಮರಸ ಭಕ್ತಿ, ತೃಪ್ತಿ ಪದಾರ್ಥ, ಸುತೃಪ್ತಿ ಪ್ರಸಾದಿ, ಮಹಾದೇವ ಪೂಜಾರಿ, ಮಹಾದೇವನಧಿದೇವತೆ, ಮಹಾಸಾದಾಖ್ಯ, ಅಖಂಡವೆಂಬ ಲಕ್ಷಣ, ಮಹವೆಂಬ ಸಂಜ್ಞೆ, ಪಾತಾಳ ದಿಕ್ಕು, ಗಾಯತ್ರೀವೇದ, ಆತ್ಮನೇ ಅಂಗ, ಜ್ಞಾನಾತ್ಮ, ಚಿತ್‌ಶಕ್ತಿ, ಶಾಂತಾತೀತೋತ್ತರ ಕಲೆ ಇಂತು ೨೪ ಸಕೀಲಗಳನೊಳಕೊಂಡು, ಎನ್ನ ಆಜ್ಞಾಚಕ್ರವೆಂಬ ತ್ರಿಕೂಟ ಸಂಗಮಕ್ಷೇತ್ರದಲ್ಲಿ ಮೂರ್ತಿಗೊಂಡಿರ್ದ ಬೋಧಾಸ್ವರೂಪವಾದ ಮಹಾಲಿಂಗವೇ ಸಂಗಮೇಶ್ವರ ಲಿಂಗವೆಂದು ಆವಸ್ಥಾತ್ರಯವ ಮಡಿ ಮಾಡಿ, ಸಂತೋಷವೆಂಬ ಜಲದಿಂ ಮಜ್ಜನಕ್ಕೆರೆದು ಆತ್ಮನಿವೃತ್ತಿಯಾದ ಗಂಧವ ಧರಿಸಿ, ಭಾವ ಸದ್ಭಾವವಾದಕ್ಷತೆಯನಿಟ್ಟು, ಅಲ್ಲಿಹ ದ್ವಿದಳಂಗಳನೆ ಪುಷ್ಪದ ಮಾಲೆ ಎಂದು ಧರಿಸಿ, ಅಲ್ಲಿಹ ಕಮಲ ಸದ್ವಾಸನೆಯ ಧೂಪವ ಬೀಸಿ, ಅಲ್ಲಿಹ ಮಾಣಿಕ್ಯ ವರ್ಣವೇ ಕರ್ಪುರದ ಜ್ಯೋತಿ ಎಂದು ಬೆಳಗಿ, ಅಲ್ಲಿಹ ನಿರವಸ್ಥೆಯೇ ನವೀನ ವಸ್ತ್ರವೆಂದು ಹೊದ್ದಿಸಿ, ನಿರ್ಮಲವೆಂಬಾಭರಣವ ತೊಡಿಸಿ, ಸುತೃಪ್ತಿ ನೈವೇದ್ಯವನರ್ಪಿಸಿ, ಸಮರಸವೆಂಬ ತಾಂಬೂಲವನಿತ್ತು, ಇಂತೀ ಮಹಾಲಿಂಗಕ್ಕೆ

ಅಷ್ಟವಿಧಾರ್ಚನೆಯಂ ಮಾಡಿ, ಕೋಟಿ ಸೂರ್ಯರ ಪ್ರಭೆಯಂತೆ ಬೆಳಗುವ ಮಹಾಲಿಂಗವ ಕಂಗಳು ತುಂಬಿ ನೋಡಿ, ಮನದಲ್ಲಿ ಸಂತೋಷಂಗೊಂಡು, ಆ ಮಹಾಲಿಂಗ ಪೂಜೆಯ ಸಮಾಪ್ತವಂ ಮಾಡಿ, ಓಂ ಓಂ ಓಂ ಓಂ ಓಂ ಓಂ ಎಂಬ ಓಂಕಾರ ಷಡ್ವಿಧ ಮಂತ್ರಂಗಳಿಂದ ನಮಸ್ಕರಿಸಿ, ಆ ಮಹಾಲಿಂಗವೇ ತಾನೆಂದರಿದು ಕೂಡಿ ಎರಡಳಿದು ನಿತ್ಯತೃಪ್ತನಾಗಿ ಆಚರಿಸಬಲ್ಲಾತನೇ ಸಮರಸ ಭಕ್ತಿಯನುಳ್ಳ ಲಿಂಗೈಕ್ಯ ನೋಡಾ ಸಂಗನಬಸವೇಶ್ವರಾ.

ನಿಃಕಳಲಿಂಗ.

೭೪. ಆಯ್ಯಾ, ನಿಃಕಲಾಕೃತಿ, ಓಂಕಾರ ಪ್ರಣವ, ಭ್ರಮರನಾದ, ಬ್ರಹ್ಮಚಕ್ರ, ನಿಶಿಜ್ಯೋತಿ ವರ್ಣ, ನಿಃಕಳಂಕಸ್ಥಳ, ಚಿದ್ರೂಪ ತನು, ಸ್ವತಂತ್ರ ಹಸ್ತ, ನಿಃಕಳಲಿಂಗ, ಬ್ರಹ್ಮರಂಧ್ರಮುಖ, ಸದ್ಭಾವ ಭಕ್ತಿ, ಪರಮಾನಂದ ಪದಾರ್ಥ, ಪರಮಾನಂದ ಪ್ರಸಾದ, ಶ್ರೀಗುರು ಪೂಜಾರಿ, ಶ್ರೀಗುರು ಅಧಿದೇವತೆ, ಅಗಮ್ಯವೆಂಬ ಲಕ್ಷಣ, ಅಪ್ರಮಾಣವೆಂಬ ಸಂಜ್ಞೆ, ಹೃತ್ಕಮಲ ದಿಕ್ಕು, ಧನುರ್ವೇದ, ಚಿತ್‌ಸೂರ್ಯನೆಂಬ ಅಂಗ, ಮಹಾ ಆತ್ಮ, ಅನಾಮಯ ಶಕ್ತಿ, ನಿರ್ವಂಚಕ ಕಲೆ, ಇಂತು ೨೪ ಸಕೀಲಂಗಳನೊಳಕೊಂಡು ಎನ್ನ ಬ್ರಹ್ಮರಂಧ್ರ ಚಕ್ರದ ರಜತಾದ್ರಿ ಎಂಬ ಕ್ಷೇತ್ರದಲ್ಲಿ ಮೂರ್ತಿಗೊಂಡಿರ್ದ ಶಿವದೀಕ್ಷಾ ಸ್ವರೂಪನಾದ ನಿಃಕಲ ಲಿಂಗವೇ ರಜತೇಶ್ವರ ಲಿಂಗವೆಂದು ಗುಣತ್ರಯವ ಮಡಿ ಮಾಡಿ, ಸ್ವತಂತ್ರವೆಂಬ ಜಲದಿಂ ಮಜ್ಜನಕ್ಕೆರೆದು, ಸೂರ್ಯ ನಿವೃತ್ತಿಯಾದ ಗಂಧವ ಧರಿಸಿ, ಪರತಂತ್ರವಳಿದು ಸ್ವತಂತ್ರವಾದಕ್ಷತೆಯನಿಟ್ಟು ಅಲ್ಲಿಹ ಸಹಸ್ರದಳಂಗಳನೇ ಪುಷ್ಪದ ಮಾಲೆ ಎಂದು ಧರಿಸಿ, ಅಲ್ಲಿಹ ಕಮಲ ಸದ್ವಾಸನೆಯ ಧೂಪವ ಬೀಸಿ, ಅಲ್ಲಿಹ ಜ್ಯೋತಿ ವರ್ಣವೇ ಕರ್ಪೂರ ಜ್ಯೋತಿಯ ಬೆಳಗಿ ಅಲ್ಲಿಹ ನಿಃಕಳಂಕಾವಸ್ಥೆಯೇ ನವೀನ ವಸ್ತ್ರವೆಂದು ಹೊದ್ದಿಸಿ, ನಿರಾಧಾರವೆಂಬ ಆಭರಣವ ತೊಡಿಸಿ, ಪರಮಾನಂದವೆಂಬ ನೈವೇದ್ಯವನರ್ಪಿಸಿ, ಸದ್ಭಾವವೆಂಬ ತಾಂಬೂಲವನಿತ್ತು, ಇಂತೀ ನಿಃಕಳಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡಿ ದಶಕೋಟಿ ಸೂರ್ಯರ ಪ್ರಭೆಯಂತೆ ಬೆಳಗುವ ನಿಃಕಳಲಿಂಗವನು ಕಂಗಳು ತುಂಬಿ ನೋಡಿ ಮನದಲ್ಲಿ ಸಂತೋಷಂಗೊಂಡು ಆ ನಿಃಕಳಲಿಂಗ ಪೂಜೆಯ ಸಮಾಪ್ತವ ಮಾಡಿ, ಕ್ರಿಯಾ ಜಪವೆಂಬ ದ್ವಾದಶ ಪ್ರಣವ ಮಂತ್ರಂಗಳಿಂದೆ ನಮಸ್ಕರಿಸಿ, ಆ ನಿಃಕಳಲಿಂಗವೇ ತಾನೆಂದರಿದು ಕೂಡಿ, ಎರಡಳಿದು ಸ್ವತಂತ್ರನಾಗಿ ಆಚರಿಸಬಲ್ಲಾತನೇ ಸದ್ಭಾವ ಭಕ್ತಿಯನುಳ್ಳ ನಿಃಕಳಂಕ ನೋಡಾ ಸಂಗನಬಸವೇಶ್ವರಾ.

ಶೂನ್ಯಲಿಂಗ.

೭೫. ಆಯ್ಯಾ, ನಿಃಶೂನ್ಯಾಕೃತಿ, ಕ್ಷಕಾರ ಪ್ರಣವ, ದಿವ್ಯನಾದ, ಶಿಖಾಚಕ್ರ, ಮಹಾಜ್ಯೋತಿ ವರ್ಣ, ನಿರಾಲಂಬಸ್ಥಲ, ಚಿನ್ಮಯ ತನು, ನಿರಾಳ ಹಸ್ತ, ಶೂನ್ಯಲಿಂಗ, ಉನ್ಮನಿ ಮುಖ, ನಿರಹಂಕಾರ ಭಕ್ತಿ, ಪರಿಪೂರ್ಣ ಪದಾರ್ಥ, ಪರಿಪೂರ್ಣ ಪ್ರಸಾದ, ಪರಶಿವನಧಿದೇವತೆ, ಅವಿರಳ ಸಾದಾಖ್ಯ, ಅಗಮ್ಯವೆಂಬ ಲಕ್ಷಣ, ನಿರ್ಮಾಯನೆಂಬ ಸಂಜ್ಞೆ, ದಿವ್ಯನಾದ, ಘೋಷ ದಿಕ್ಕು, ಮನೋರ್ಲಯ ವೇದ, ಚಿಚ್ಚಂದ್ರನೆಂಬ ಅಂಗ, ದಿವ್ಯಾತ್ಮ, ನಿಭ್ರಾಂತಿ ಶಕ್ತಿ, ಅನಂತಕಲೆ, ಇಂತು ೨೪ ಸಕೀಲವನೊಳಕೊಂಡು ಎನ್ನ ಶಿಖಾಚಕ್ರವೆಂಬ ಹೇಮಾದ್ರಿ ಎಂಬ ಕ್ಷೇತ್ರದಲ್ಲಿ ಮೂರ್ತಿಗೊಂಡಿರ್ದ ಶಿವಮಂತ್ರ, ಶಿಕ್ಷಾ ಕರ್ತೃ ಸ್ವರೂಪವಾದ ಶೂನ್ಯಲಿಂಗವೇ ಹಿರಣ್ಯೇಶ್ವರ ಲಿಂಗವೆಂದು ಕರಣತ್ರಯವ ಮಡಿ ಮಾಡಿ, ಅನುಪಮ ಜಲದಿಂ ಮಜ್ಜನಕ್ಕೆರೆದು ಚಂದ್ರ ನಿವೃತ್ತಿಯಾದ ಗಂಧವ ಧರಿಸಿ, ಅವಿರಳದಕ್ಷತೆಯನಿಟ್ಟು, ಅಲ್ಲಿಹ ತ್ರಿದಳಂಗಳನೆ ಪುಷ್ಪದ ಮಾಲೆ ಎಂದು ಧರಿಸಿ, ಅಲ್ಲಿಹ ಕಮಲಸದ್ವಾಸನೆಯ ಧೂಪವ ನರ್ಪಿಸಿ, ಅಲ್ಲಿಹ ಮಹಾಜ್ಯೋತಿ ವರ್ಣವೇ ಕರ್ಪೂರದ ಜ್ಯೋತಿ ಎಂದು ಬೆಳಗಿ ಅಲ್ಲಿಹ ನಿಃಸಂಸಾರಾವಸ್ಥೆಯೇ ನವೀನ ವಸ್ತ್ರವೆಂದು ಹೊದ್ದಿಸಿ, ಸದಾನಂದವೆಂಬ ಆಭರಣವ ತೊಡಿಸಿ, ಪರಿಪೂರ್ಣವೆಂಬ ನೈವೇದ್ಯವನರ್ಪಿಸಿ, ನಿರಹಂಕಾರವೆಂಬ ತಾಂಬೂಲವನಿತ್ತು ಇಂತೀ ಶೂನ್ಯಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡಿ ಶತ ಕೋಟಿ ಸೂರ್ಯರ ಪ್ರಭೆಯಂತೆ ಬೆಳಗುವ ಶೂನ್ಯಲಿಂಗವನು ಕಂಗಳು ತುಂಬಿ ನೋಡಿ ಮನದಲ್ಲಿ ಸಂತೋಷಂಗೊಂಡು, ಆ ಶೂನ್ಯಲಿಂಗದ ಪೂಜೆಯ ಸಮಾಪ್ತಿಯ ಮಾಡಿ ಜ್ಞಾನ ಜಪವೆಂಬ ದ್ವಾದಶ ಪ್ರಣವ ಮಂತ್ರಂಗಳಿಂದ ನಮಸ್ಕರಿಸಿ, ಆ ಶೂನ್ಯಲಿಂಗವೇ ತಾನೆಂದು ಕೂಡಿ, ಎರಡಳಿದು ನಿಃಸಂಸಾರಿಯಾಗಿ ಆಚರಿಸಬಲ್ಲಾತನೇ ನಿರಹಂಕಾರ ಭಕ್ತಿಯನುಳ್ಳ ನಿರಾತಂಕ ನೋಡಾ ಸಂಗನಬಸವೇಶ್ವರಾ.

ನಿರಂಜನಲಿಂಗ.

೭೬. ಆಯ್ಯ, ನಿರಂಜನಾಕೃತಿ, ವ್ಯಂಜನ ಹಕಾರ ಪ್ರಣವ, ಮಹಾನಾದ, ಷಷ್ಟಿಮುಚಕ್ರ, ಅಖಂಡ ಮಹಾಜ್ಯೋತಿರ್ವರ್ಣ, ನಿರಾತಂಕ

ಸ್ಥಲ, ನಿರ್ಮುಕ್ತಿ ತನು, ನಿರ್ಮಾಯ ಹಸ್ತ, ನಿರಂಜನ ಲಿಂಗ, ಪಶ್ಚಿಮ ಮುಖ, ಅಪ್ರಮಾಣ ಭಕ್ತಿ, ಅವಿರಳ ಪದಾರ್ಥ, ಅವಿರಳಪ್ರಸಾದ, ಪರಮೇಶ್ವರ ಪೂಜಾರಿ, ಪರಮೇಶ್ವರನಧಿದೇವತೆ, ನಿಶ್ಚಲ ಸಾದಾಖ್ಯ, ನಿರ್ವಂಚಕವೆಂಬ ಲಕ್ಷಣ, ಅವಿರಳವೆಂಬ ಸಂಜ್ಞೆ, ನಿರಾಳದಿಕ್ಕು, ಅಗಮ್ಯ ವೇದ, ಶಿವಯೋಗಿಯೇ ಅಂಗ, ಚಿನ್ಮಯಾತ್ಮ, ನಿರ್ವಯ ಶಕ್ತಿ, ಅನಂತ ಕಲೆ, ಇಂತು ೨೪ ಸಕೀಲಂಗಳನೊಳಕೊಂಡು, ಎನ್ನ ಪಶ್ಚಿಮ ಚಕ್ರವಾದ ಮಹಾಮೇರು ಪರ್ವತವೆಂಬ ಕ್ಷೇತ್ರದಲ್ಲಿ ಮೂರ್ತಿಗೊಂಡಿರ್ಪ ನಿಜ ಮೋಕ್ಷ ಕರ್ತೃ ಸ್ವರೂಪನಾದ ನಿರಂಜನ ಲಿಂಗವೇ ಶಾಂಭವ ಮೂರ್ತಿಲಿಂಗವೆಂದು ಹಂಸ ತ್ರಯವ ಮಡಿ ಮಾಡಿ, ನಿರ್ಭಾವ ಜಲದಿಂ ಮಜ್ಜನಕ್ಕೆರೆದು, ನಿರ್ಜಾತನೆಂಬ ಗಂಧವ ಧರಿಸಿ, ನಿರ್ಜಡವೆಂಬ ಅಕ್ಷತೆಯನಿಟ್ಟು, ನಿರ್ವ್ಯಂದ್ವವೆಂಬ ಪುಷ್ಪದ ಮಾಲೆಯ ಧರಿಸಿ, ನಿರ್ಲಜ್ಜೆ ಎಂಬ ಧೂಪವ ಬೀಸಿ, ನಿರಾಲಂಬ ಜ್ಯೋತಿಯ ಬೆಳಗಿ, ನಿರವಯವೆಂಬ ವಸ್ತ್ರವ ಹೊದ್ದಿಸಿ, ನಿಸ್ಪೃಹವೆಂಬ ಆಭರಣವ ತೊಡಿಸಿ, ನಿರಾಳವೆಂಬ ನೈವೇದ್ಯವನರ್ಪಿಸಿ, ನಿರ್ವಾಣವೆಂಬ ತಾಂಬೂಲವನಿತ್ತು, ಇಂತೀ ನಿರಂಜನಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡಿ, ಸಹಸ್ರ ಕೋಟಿ ಸೂರ್ಯರ ಪ್ರಭೆಯಂತೆ ಬೆಳಗುವ ನಿರಂಜನ ಲಿಂಗವನು ಕಂಗಳು ತುಂಬಿ ನೋಡಿ, ಮನದಲ್ಲಿ ಸಂತೋಷಂಗೊಂಡು ಆ ನಿರಂಜನಲಿಂಗದ ಪೂಜೆಯ ಸಮಾಪ್ತವ ಮಾಡಿ, ಮಹಾಜ್ಞಾನ ಜಪವೆಂಬ ದ್ವಾದಶ ಪ್ರಣವ ಮಂತ್ರಂಗಳಿಂದ ನಮಸ್ಕರಿಸಿ, ಆ ನಿರಂಜನ ಲಿಂಗವೇ ತಾನೆಂದರಿದು ಕೂಡಿ, ಎರಡಳಿದು, ನಿಜಾಂತರ್ಯಾಮಿಯಾಗಿ ಆಚರಿಸಬಲ್ಲಾತನೇ ಅಪ್ರಮಾಣ ಭಕ್ತಿಯನುಳ್ಳ ನಿಜಮೋಕ್ಷ ಸ್ವರೂಪ ನೋಡಾ ಸಂಗನಬಸವೇಶ್ವರಾ.

ಅಣುಲಿಂಗ.

22. ಆಯ್ಯಾ, ತಾರಕಾಕೃತಿ ಮೊದಲಾದ ನಾನಾಕೃತಿಗಳು, ನಕಾರ ಪ್ರಣವ ಮೊದಲಾಗಿ ನವನಾದಗಳು, ಆಧಾರ ಚಕ್ರ ಮೊದಲಾಗಿ ನವಚಕ್ರಗಳು, ಪೀತವರ್ಣ ಮೊದಲಾಗಿ ನವವರ್ಣಗಳು, ಭಕ್ತಸ್ಥಲ ಮೊದಲಾಗಿ ನವಸ್ಥಲಗಳು, ಸ್ಥೂಲತನು ಮೊದಲಾಗಿ ನವತನುಗಳು, ಸುಚಿತ್ತಹಸ್ತ ಮೊದಲಾಗಿ ನವಹಸ್ತಗಳು, ಆಚಾರಲಿಂಗ ಮೊದಲಾಗಿ ನವಲಿಂಗಗಳು, ಘ್ರಾಣಮುಖ ಮೊದಲಾಗಿ ನವಮುಖಗಳು, ಶ್ರದ್ಧಾ

ಭಕ್ತಿ ಮೊದಲಾಗಿ ನವಭಕ್ತಿಗಳು, ಗಂಧಪದಾರ್ಥ ಮೊದಲಾಗಿ ನವಪದಾರ್ಥಗಳು, ಸುಗಂಧ ಪ್ರಸಾದ ಮೊದಲಾಗಿ ನವಪ್ರಸಾದಗಳು, ಬ್ರಹ್ಮ ಪೂಜಾರಿ ಮೊದಲಾಗಿ ನವಪೂಜಾರಿಗಳು, ಬ್ರಹ್ಮನಧಿದೇವತೆ ಮೊದಲಾಗಿ ನವಅಧಿದೇವತೆಗಳು, ಕರ್ಮಸಾದಾಖ್ಯ ಮೊದಲಾಗಿ ನವಸಾದಾಖ್ಯಗಳು, ಸತ್ತುಲಕ್ಷಣ ಮೊದಲಾಗಿ ನವಲಕ್ಷಣಗಳು, ಪರವೆಂಬ ಸಂಜ್ಞೆ ಮೊದಲಾಗಿ ನವಸಂಜ್ಞೆಗಳು, ಪೂರ್ವದಿಕ್ಕು ಮೊದಲಾಗಿ ನವದಿಕ್ಕುಗಳು, ಋಗ್ವೇದ ಮೊದಲಾಗಿ ನವವೇದಗಳು, ಚಿತ್‌ಪೃಥ್ವಿ ಮೊದಲಾಗಿ ನವಲಿಂಗಗಳು, ಜೀವಾತ್ಮ ಮೊದಲಾಗಿ ನವ ಆತ್ಮರು, ಕ್ರಿಯಾಶಕ್ತಿ ಮೊದಲಾಗಿ ನವಶಕ್ತಿಯರು, ನಿವೃತ್ತಿಕಲೆ ಮೊದಲಾಗಿ ನವಕಲೆಗಳು ಇಂತು ೨೪ ಸಕೀಲಂಗಳು ನವವಿಧತೆರದಿಂದ ೨೧೬ ಸಕೀಲ ಮೊದಲಾದ ಸಮಸ್ತಕ್ಷೇತ್ರಂಗಳನೊಳಕೊಂಡು, ಎನ್ನ ಅಣುಚಕ್ರವೆಂಬ ಪರಮಕೈಲಾಸ ಚಿದಾಕಾಶ ಮಂಡಲದ ವರ ಚೌಕ ಮಂಟಪದ ನವರತ್ನಖಚಿತ ಶೂನ್ಯ ಸಿಂಹಾಸನ ಪೀಠದಲ್ಲಿ ಮೂರ್ತಿಗೊಂಡಿರ್ಪ ಪರಾತ್ಪರ ನಿಜಜಂಗಮ ಲಿಂಗಸ್ವರೂಪ ಸರ್ವ ಜೈತನ್ಯಾಧಾರ ಸ್ವರೂಪವಾದ ಅಣುಲಿಂಗ ಜಂಗಮವೇ ಪರತತ್ವ ನಿಃಕಲ ಪರಬ್ರಹ್ಮ ಮೂರ್ತಿ ಲಿಂಗಜಂಗಮ ಪ್ರಸಾದವೆಂದು ತನುತ್ರಯ, ಮನತ್ರಯ, ಭಾವತ್ರಯ, ಆತ್ಮತ್ರಯ, ಪ್ರಾಣತ್ರಯ, ಗುಣತ್ರಯ, ಅವಸ್ಥಾತ್ರಯ, ತತ್ವತ್ರಯ, ಹಂಸತ್ರಯಂಗಳ ಪೂರ್ಣ ಮಡಿ ಮಾಡಿ, ನಿರ್ಭಾವವೆಂಬ ಜಲದಿಂದ ಮಜ್ಜನಕ್ಕೆರೆದು ನಿರಾಕಾರ ನಿಃಕಾರವೆಂಬ ಗಂಧವ ಧರಿಸಿ, ನಿಃಸಂಗವೆಂಬ ಅಕ್ಷತೆಯನಿಟ್ಟು, ನಿಃಪರಿಪೂರ್ಣವೆಂಬ ಪುಷ್ಪದ ಮಾಲೆಯ ಧರಿಸಿ, ನಿರುಪಾಧಿಕವೆಂಬ ಧೂಪವ ಬೀಸಿ, ನಿಃಕಳವೆಂಬ ಜ್ಯೋತಿಯ ಬೆಳಗಿ ನಿರಾಳವೆಂಬ ವಸ್ತ್ರವ ಹೊದ್ದಿಸಿ, ಪರಮನಿಜಾಭರಣವ ತೊಡಿಸಿ, ಶೂನ್ಯವೆಂಬ ನೈವೇದ್ಯವನರ್ಪಿಸಿ, ನಿರವಯವೆಂಬ ತಾಂಬೂಲವನಿತ್ತು, ಇಂತೀ ಅಣುಲಿಂಗಜಂಗಮ ಪ್ರಸಾದಕ್ಕೆ ಅಷ್ಟವಿಧಾರ್ಚನೆಯ ಮಾಡಿ, ಅನಂತಕೋಟಿ ಸೂರ್ಯ ಚಂದ್ರಾಗ್ನಿ ಪ್ರಭೆಯಂತೆ ಬೆಳಗುವ ಅಣುಲಿಂಗಜಂಗಮ ಪ್ರಸಾದವನ್ನೇ ಅನಿಮಿಷ ದೃಷ್ಟಿಯಿಂ ನಿರೀಕ್ಷಿಸಿ, ಉನ್ಮನಾಗ್ರದಲ್ಲಿ ಸಂತೋಷಂಗೊಂಡು, ಆ ಅಣುಲಿಂಗ ಜಂಗಮಪ್ರಸಾದ ಪೂಜೆಯ ಸಮಾಪ್ತಿಯ ಮಾಡಿ, ಅನಂತಕೋಟಿ ಮಹಾಮಂತ್ರಂಗಳಿಂದ ನಮಸ್ಕರಿಸಿ, ಆ ಅಣುಲಿಂಗ ಜಂಗಮಪ್ರಸಾದವೇ ತಾನೆಂದರಿದು ಏಕತ್ವದಿಂ ನಿಶ್ಚಲ ಚಿತ್ತದೋಳ್ಮಾಡಿ, ಉಭಯವಳಿದು, ಇಹಪರಂಗಳ ಹೊದ್ದದೆ, ಕನ್ನಡಿಯ

ಪ್ರತಿಬಿಂಬದಂತೆ ಸರ್ವಸಂಗ ಪರಿತ್ಯಾಗನಾಗಿ, ನಿಜಾಚರಣೆಯಲ್ಲಿ ಆಚರಿಸಬಲ್ಲಾತನೇ ದಶವಿಧ ಲಿಂಗಜಂಗಮ ಸಂಗಭಕ್ತಿ ಪ್ರಸಾದವುಳ್ಳ ಅನಾದಿ ಅಖಂಡ ಚಿಜ್ಜ್ಯೋತಿ ಸದ್ಭಕ್ತಿ ಜಂಗಮ ನೋಡಾ ಸಂಗನಬಸವೇಶ್ವರಾ.

ನಿಜಚಿದ್ಬೆಳಗು.

೬೮. ಅಯ್ಯಾ, ಇಂತು ಬೆಳಗುವ ನಿಜವಸ್ತುವ ಲಿಂಗ ಲಿಂಗವೆಂಬ ಪ್ರತಿದೋರದೆ ತನ್ನ ನಿಜಚಿದ್ಬೆಳಗ ತಾನೇ ನೋಡಿ ಕೂಡಿ, ಅರ್ಚಿಸುವ ವಿಚಾರವೆಂತೆಂದೊಡೆ, ಅಯ್ಯ ಬಿಳಿಯ ಮುಗಿಲಿನ ಕರಿಯ ನಕ್ಷತ್ರದಲ್ಲಿ ಉರಿಯ ಅಂಕುರ ಉಂಟು. ಒಂದೆರಡೊಂಬತ್ತು ಉರಿವುತ್ತಿದೆ. ಹೊಸ್ತಿಲ ಜ್ಯೋತಿಯಂತೆ ಒಳಗು ಹೊರಗು ಬೆಳಗುತಿದೆ. ಅದು ನೋಡಿದರೆ ಘನ, ನೋಡದಿದ್ದರೆ ಸಹಜ. ಈ ಭೇದವನು ಗುಹೇಶ್ವರ ಲಿಂಗವಲ್ಲಿ ಚನ್ನಬಸವಣ್ಣನೇ ಬಲ್ಲ. ಬೆಸಗೊಂಬೆ ಬಾರಾ ಶಿವಯೋಗಿ ಸಿದ್ಧರಾಮಯ್ಯ ಎಂದು ಶೂನ್ಯಸಿಂಹಾಸನದಲ್ಲಿ ಪ್ರಭುಸ್ವಾಮಿಗಳು ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಸರ್ವಾಂಗಲಿಂಗ.

ವಿವರಣೆಃ— ಹಿಂದಿನ ವಿವರಣೆಗಳಲ್ಲಿ ಹೇಳಿದ ಆಚರಣೆಗಳ ಮೂಲಕ ವೀರಶೈವನು ಸರ್ವಾಂಗಲಿಂಗಸ್ಥಿತಿಯನ್ನು ಹೊಂದುವನು. ಇದರ ಸ್ವರೂಪು ಕೆಳಗಿನ ವಚನಗಳಲ್ಲಿ ಹೇಳಲ್ಪಟ್ಟಿದೆ.

೬೯. ಶ್ರೀಗುರು ಕರುಣಿಸಿ ಅಂಗದ ಮೇಲೆ ಲಿಂಗವ ಧರಿಸಿದ ಕಾರಣ ಸರ್ವಾಂಗವು ಲಿಂಗವಾಯಿತ್ತು. ಅದೆಂತೆಂದೊಡೆ, ಅಗ್ನಿಯಿಂದ ತಪ್ತವಾದ ಲೋಹದ ಪುತ್ಥಳಿಯಂತೆ, ಒಳಗು ಹೊರಗು ಲಿಂಗವಾಗಿ, ಲಿಂಗವೇ ಬೆಳಗುತ್ತಿದ್ದ ಕಾರಣ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮ ಶರಣ ಸರ್ವಾಂಗಲಿಂಗಿಯಾದನು.

೭೦. ಅಂಗೇಂದ್ರಿಯ ಕರಣ ಹರಣದಲ್ಲಿ ಲಿಂಗವ ಧರಿಸಿ ಲಿಂಗಾಂಗಿಯಾದನಯ್ಯ ನಿಮ್ಮ ಶರಣ. ಅದೆಂತೆಂದೊಡೆ, ಘ್ರಾಣದಲ್ಲಿ ಲಿಂಗವ

ಧರಿಸಿದನಾಗಿ, ಜಿಹ್ವಾಲಿಂಗದ ಜಿಹ್ವೆಯಾಯಿತ್ತು. ನೇತ್ರದಲ್ಲಿ ಲಿಂಗವ ಧರಿಸಿದನಾಗಿ, ನೇತ್ರಲಿಂಗದ ನೇತ್ರವಾಯಿತ್ತು. ತ್ವಕ್ಕಿನಲ್ಲಿ ಲಿಂಗವ ಧರಿಸಿದವನಾಗಿ ತ್ವಕ್ಕುಲಿಂಗದ ತ್ವಕ್ಕಾಯಿತ್ತು. ಶ್ರೋತ್ರದಲ್ಲಿ ಲಿಂಗವ ಧರಿಸಿದನಾಗಿ ಶ್ರೋತ್ರಲಿಂಗದ ಶ್ರೋತ್ರವಾಯಿತ್ತು. ಮನದಲ್ಲಿ ಲಿಂಗವ ಧರಿಸಿದನಾಗಿ, ಮನ ಲಿಂಗವಾಯಿತ್ತು. ಸರ್ವಾಂಗದಲ್ಲಿ ಲಿಂಗವ ಧರಿಸಿದನಾಗಿ, ಸರ್ವಾಂಗ ಲಿಂಗವಾಯಿತ್ತು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮ ಶರಣಂಗೆ.

೭೧. ಅತ್ತಲಿತ್ತ ಹರಿವ ಮನವ ನಿಲಿಸಿ ಸ್ವಸ್ಥಾನಂಗೊಳಿಸಿ ತತ್ವಾನುಭಾವದ ರಹಸ್ಯದ ಕೀಲವನರಿದು, ತತ್ವಮಸಿ ವಾಕ್ಯದ ಮೇಲಣ ಷಟ್ ಸ್ಥಲಾಂಗವ ತಿಳಿದು, ಆ ಲಿಂಗಕ್ಕೆ ಷಟ್‌ಸ್ಥಲಾಂಗವನಾದಿ ಮಾಡಿ, ಆ ಲಿಂಗವನು ಲಿಂಗ ಮುಖವ ಮಾಡಿದುದೇ ಸರ್ವಾಂಗ ಲಿಂಗಿಯ ಮತವು. ಈ ಗುಣವುಳ್ಳ ಷಟ್‌ಸ್ಥಲ ಲಿಂಗಾಂಗಿಯೇ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು ತಾನೆ ಬೇರಿಲ್ಲ.

೭೨. ನೀಲ ವರ್ಣದ ಮಾಣಿಕಕ್ಕೆ ಐದು ಹೊನ್ನ ಕೊಟ್ಟಿ. ಪಚ್ಚ ವರ್ಣದ ಮಾಣಿಕಕ್ಕೆ ಐದ ಹೊನ್ನ ಕೊಟ್ಟಿ. ಶ್ವೇತ ವರ್ಣದ ಮಾಣಿಕಕ್ಕೆ ಐದು ಹೊನ್ನ ಕೊಟ್ಟಿ. ಮುತ್ತಿನ ವರ್ಣದ ಮಾಣಿಕಕ್ಕೆ ಐದು ಹೊನ್ನ ಕೊಟ್ಟಿ. ರಕ್ತ ವರ್ಣದ ಮಾಣಿಕಕ್ಕೆ ನಾಲ್ಕು ಹೊನ್ನ ಕೊಟ್ಟಿ. ಅಗ್ನಿ ವರ್ಣದ ಮಾಣಿಕಕ್ಕೆ ಒಂದು ಹೊನ್ನ ಕೊಟ್ಟಿ. ಸೂರ್ಯ ಪ್ರಕಾಶದ ಮಾಣಿಕಕ್ಕೆ ಮರ್ತ್ಯ ಲೋಕವ ಕೊಟ್ಟಿ. ಚಂದ್ರ ಕಾಂತಿಯ ಮಾಣಿಕಕ್ಕೆ ಸ್ವರ್ಗ ಲೋಕವ ಕೊಟ್ಟಿ. ಅಗ್ನಿ ಕಾಂತಿ ಮಾಣಿಕಕ್ಕೆ ಪಾತಾಳ ಲೋಕವ ಕೊಟ್ಟಿ. ಇಂತೀ ರತ್ನವ ಕೊಂಡು ಮನೆಯ ಸುಟ್ಟು ಬೂದಿಯ ಧರಿಸಿ, ಕಾಯಕವ ಮಾಡುತಿರ್ದ ನಿಮ್ಮ ಶರಣ ಕಾಡಿನೊಳಗಾದ ಚನ್ನ ಕದಂಬ ಲಿಂಗ ನಿರ್ಮಾಯ ಪ್ರಭುವೇ.

ಅರ್ಥಃ— ಶಿವಜ್ಞಾನೋದಯವಾಗಿ ಶ್ರೀಗುರು ಕಾರುಣ್ಯವ ಪಡೆದು ಲಿಂಗಾಂಗ ಸಂಬಂಧಿಯಾದ ಜ್ಞಾನ ಕಲಾತ್ಮನು ಸರ್ವಾಂಗದಲ್ಲಿ ಲಿಂಗ ಧಾರಣ ಮಾಡುವ ಪರಿಯ ಹೇಳ್ದೆ. ಆದೆಂತೆಂದೊಡೆ, ಆಧಾರಚಕ್ರದ ನಾಲ್ಕೆಸಳಿನ ಮಧ್ಯದಲ್ಲಿರುವ ನಕಾರ ಪ್ರಣವ ಪೀಠದಲ್ಲಿ ನೀಲವರ್ಣದ ಪ್ರಕಾಶದಿಂ ಬೆಳಗುವ ಆಚಾರಲಿಂಗವನು ಪೃಥ್ವೀ ತತ್ವದಲ್ಲಿ ಸ್ಥಾಯತ

ಮಾಡಿ, ಆ ಪೃಥ್ವೀ ತತ್ವಂಶಿಕವಾದ, ವಾಕ್, ಪಾಣಿ, ಪಾದ, ಗುಪ್ತ, ಗುಹ್ಯವೆಂಬ ಪಂಚ ಕರ್ಮೇಂದ್ರಿಯಂಗಳ ನಷ್ಟ ಮಾಡಿ ಎಂಬುದೀಗ ನೀಲವರ್ಣದ ಮಾಣಿಕಕ್ಕೆ ಐದು ಹೊನ್ನ ಕೊಟ್ಟಿನೆಂಬ ಶಬ್ದಕ್ಕರ್ಥ. ಅಂತಪ್ಪ ಆಚಾರಲಿಂಗ ಸಂಬಂಧಿಯಾದ ಶಿವಶರಣನು ಸ್ವಾಧಿಷ್ಠಾನ ಚಕ್ರದಲ್ಲಿ ಆರೆಸಳ ಮಧ್ಯದಲ್ಲಿರುವ ಮಕಾರ ಪ್ರಣವ ಪೀಠದಲ್ಲಿ ಪಚ್ಚ ವರ್ಣದ ಪ್ರಕಾಶದಿಂ ಬೆಳಗುವ ಗುರುಲಿಂಗವನು ಅಪ್ಪ ತತ್ವದಲ್ಲಿ ಸ್ವಾಯತವ ಮಾಡಿ ಅಪ್ಪ ತತ್ವಂಶಿಕವಾದ ಶಬ್ದ, ಸ್ಪರ್ಶ, ರೂಪು, ರಸ, ಗಂಧವೆಂಬ ಪಂಚ ವಿಷಯ ಪದಾರ್ಥವನು ನಷ್ಟವ ಮಾಡಿ, ಎಂಬುದೀಗ ಪಚ್ಚವರ್ಣದ ಮಾಣಿಕಕ್ಕೆ ಐದು ಹೊನ್ನ ಕೊಟ್ಟಿನೆಂಬ ಶಬ್ದಕ್ಕರ್ಥ. ಅಂತಪ್ಪ ಗುರುಲಿಂಗ ಜಂಗಮ ಸಂಬಂಧಿಯಾದ ಶಿವಶರಣನು ಮಣಿ ಪೂರಕ ಚಕ್ರದ ಹತ್ತಿ ಸಳ ಮಧ್ಯದಲ್ಲಿರುವ ಶಿಕಾರ ಪ್ರಣವ ಪೀಠದಲ್ಲಿ ಶ್ವೇತ ವರ್ಣದ ಪ್ರಕಾಶದಿಂ ಬೆಳಗುವ ಶಿವಲಿಂಗವನು ತೇಜತತ್ವದಲಿ ಸ್ವಾಯತವ ಮಾಡಿ, ಆ ತೇಜ ತತ್ವಂಶಿಕವಾದ ಕಾವಾಗ್ನಿ, ಕ್ರೋಧಾಗ್ನಿ, ಮಂದಾಗ್ನಿ, ಕೋಕಾಗ್ನಿ, ಒಡಬಾಗ್ನಿ ಎಂಬ ಪಂಚ ತಾಪತ್ರಯಾಗ್ನಿಗಳ ನಷ್ಟವ ಮಾಡಿ, ಎಂಬುದೀಗ ಶ್ವೇತವರ್ಣದ ಮಾಣಿಕಕ್ಕೆ ಐದು ಹೊನ್ನ ಕೊಟ್ಟಿನೆಂಬ ಶಬ್ದಕ್ಕರ್ಥ. ಅಂತಪ್ಪ ಶಿವಲಿಂಗ ಸಂಬಂಧಿಯಾದ ಶಿವಶರಣನು ಅನಾಹತ ಚಕ್ರದ ದ್ವಾದಶ ಎಸಳ ಮಧ್ಯದಲ್ಲಿರುವ ವಕಾರ ಪ್ರಣವ ಪೀಠದಲ್ಲಿ ಮುತ್ತಿನ ವರ್ಣದ ಪ್ರಕಾಶದಿಂ ಬೆಳಗುವ ಜಂಗಮ ಲಿಂಗವನು ವಾಯು ತತ್ವದಲ್ಲಿ ಸ್ವಾಯತವ ಮಾಡಿ, ಆ ವಾಯು ತತ್ವಂಶಿಕವಾದ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನವೆಂಬ ಪಂಚಪ್ರಾಣ ವಾಯುಗಳ ನಷ್ಟವ ಮಾಡಿ, ಎಂಬುದೀಗ ಮುತ್ತಿನ ವರ್ಣದ ಮಾಣಿಕಕ್ಕೆ ಐದು ಹೊನ್ನ ಕೊಟ್ಟಿನೆಂಬ ಶಬ್ದಕ್ಕರ್ಥ. ಅಂತಪ್ಪ ಜಂಗಮಲಿಂಗ ಸಂಬಂಧಿಯಾದ ಶಿವಶರಣನು ವಿಶುದ್ಧಿ ಚಕ್ರದ ಷೋಡಶ ಎಸಳುಗಳ ಮಧ್ಯದಲ್ಲಿರುವ ಯಕಾರ ಪ್ರಣವ ಪೀಠದಲ್ಲಿ ರಕ್ತ ವರ್ಣದ ಪ್ರಕಾಶದಿಂ ಬೆಳಗುವ ಪ್ರಸಾದ ಲಿಂಗವನು ಆಕಾಶ ತತ್ವದಲಿ ಸ್ವಾಯತವ ಮಾಡಿ, ಆ ಆಕಾಶ ತತ್ವಂಶಿಕವಾದ ಮನ, ಬುದ್ಧಿ, ಚಿತ್ತ, ಅಹಂಕಾರವೆಂಬ ಕರಣ ಚತುಷ್ಟಯಂಗಳ ನಷ್ಟವ ಮಾಡಿ, ಎಂಬುದೀಗ ರಕ್ತವರ್ಣದ ಮಾಣಿಕಕ್ಕೆ ನಾಲ್ಕು ಹೊನ್ನ ಕೊಟ್ಟಿನೆಂಬ

ಶಬ್ದಕ್ಕರ್ಥ. ಅಂತಪ್ಪ ಪ್ರಸಾದಲಿಂಗ ಸಂಬಂಧಿಯಾದ ಶಿವಶರಣನು ಅಗ್ನಿ ಚಕ್ರದ ಅಷ್ಟದಳದ ಮಧ್ಯದಲ್ಲಿರುವ ಓಂಕಾರ ಪ್ರಣವ ಪೀಠದಲ್ಲಿ ಅಗ್ನಿ ವರ್ಣದ ಪ್ರಕಾಶದಿಂ ಬೆಳಗುವ ಮಹಾಲಿಂಗವನು ಆತ್ಮ ತತ್ವದಲಿ ಸ್ವಾಯತವ ಮಾಡಿ, ಆ ಆತ್ಮ ತತ್ವಂಶಿಕವಾದ ಮನವೊದಲಾಗಿ ಅರವತ್ತಾರು ಕೋಟಿ ಕರಣಂಗಳು ಅತ್ಯೋಹಂ ಪರಬ್ರಹ್ಮಂ ಎಂಬ ಮೂಲಾಹಂಕಾರದಲ್ಲಿ ಪುಟ್ಟುವವು. ಅಂತಪ್ಪ ಮೂಲಾಹಂಕಾರವನು ಜ್ಞಾನಾಗ್ನಿಯಲ್ಲಿ ನಷ್ಟವ ಮಾಡಿದೆನೆಂಬುದೀಗ ಅಗ್ನಿ ವರ್ಣದ ಮಾಣಿಕಕ್ಕೆ ಒಂದು ಹೊನ್ನ ಕೊಟ್ಟಿನೆಂಬ ಶಬ್ದಕ್ಕರ್ಥ. ಅಂತಪ್ಪಾತ್ಮನಲ್ಲಿ ಮಹಾಲಿಂಗ ಸಂಬಂಧಿಯಾದ ಶಿವಶರಣನು ಸೂರ್ಯನೆಂದಡೆ ಇಷ್ಟ ಲಿಂಗವು. ಅದೆಂತೆಂದೊಡೆ, 'ಸೂರ್ಯನು ಪ್ರಾತಃಕಾಲದಲ್ಲಿ ಉದಯವಾಗಲು ರಾತ್ರಿಯಲ್ಲಿ ಮುಸುಕಿದ ಮಹಾ ಕಾವಳವು ಪಲಾಯನವಾಗಿ ಮಹಾಬೆಳಗನು ತೋರುವುದು. ಹಾಗೆ ಚಿತ್ ಸೂರ್ಯನೆಂಬ ಇಷ್ಟ ಬ್ರಹ್ಮವು ಸುಜ್ಞಾನೋದಯ ಕಾಲಕ್ಕೆ ಗುರು ಮುಖದಿಂ ಬಹಿಷ್ಕರಿಸಿ ಕರಸ್ಥಲಕ್ಕೆ ಬರಲು ಅಜ್ಞಾನವೆಂಬ ಮಾಯಾ ತಾಮಸ ಕಾವಳವು ಪಲಾಯನವಾಗಿ ಆ ಶಿವಶರಣಂಗೆ ಮಹಾಜ್ಞಾನ ಪ್ರಕಾಶಮಯವಾಗಿ ತೋರುವುದಾದ ಕಾರಣ, ಇಷ್ಟಲಿಂಗಕ್ಕೆ ಸೂರ್ಯನೆಂಬ ನಾಮವಾಯಿತ್ತು. ಅಂತಪ್ಪ ಇಷ್ಟಲಿಂಗ ಬ್ರಹ್ಮವು ಬ್ರಹ್ಮ ಚಕ್ರದ ಸಹಸ್ರದಳ, ಶತದಳ, ಪಂಚದಳ, ತ್ರಿದಳ ಮಧ್ಯದಲ್ಲಿರುವ ನಿಃಕಲ ಪ್ರಣವೆಂಬ ಆಕಾರ ಪ್ರಣವ ಪೀಠದಲ್ಲಿ ಅನಂತ ಕೋಟಿ ಸೂರ್ಯ ಪ್ರಕಾಶದಿಂ ಬೆಳಗುತ್ತಿರ್ಪುದು. ಅಂತಪ್ಪ ಇಷ್ಟಲಿಂಗವನು ಸ್ಥೂಲ ತನುವಿನಲ್ಲಿ ಸ್ವಾಯತವ ಮಾಡಿ, ಆ ಸ್ಥೂಲ ತನುವಿನ ಅಂಶಿಕವಾದ ಉಂಡಿಹೆ, ಉಟ್ಟಿಹೆ, ಕೊಟ್ಟಿಹೆ, ಭೋಗಿಸಿಹೆವೆಂಬ ಕರಣವಿಷಯಂಗಳ ಸಕ್ರಿಯಾ ಪ್ರಕಾಶದಲ್ಲಿ ನಷ್ಟವ ಮಾಡಿ ಎಂಬುದೀಗ ಸೂರ್ಯ ಪ್ರಕಾಶದ ಮಾಣಿಕಕ್ಕೆ ಮರ್ತ್ಯ ಲೋಕವ ಕೊಟ್ಟಿನೆಂಬ ಶಬ್ದಕ್ಕರ್ಥ. ಅಂತಪ್ಪ ತನುವಿನ ಇಷ್ಟಲಿಂಗ ಸಂಬಂಧಿಯಾದ ಶಿವಶರಣನು ಶಿಖಾಚಕ್ರದ ತ್ರಿದಳ ಮಧ್ಯದಲ್ಲಿರುವ ಶೂನ್ಯ ಪ್ರಣವವೆಂಬ ಉಕಾರ ಪ್ರಣವ ಪೀಠದಲ್ಲಿ ಅಗಣಿತ ಕೋಟಿ ಚಂದ್ರಕಾಂತಿಯನೊಳಕೊಂಡು ಬೆಳಗುವ ಪರಮ ಕಾಂತಿ ಜ್ಞಾನ ಪ್ರಕಾಶವನುಳ್ಳ ಪ್ರಾಣಲಿಂಗವನು ಸೂಕ್ಷ್ಮ ತನುವಿನಲ್ಲಿ ಸ್ವಾಯತವ ಮಾಡಿ, ಆ ಸೂಕ್ಷ್ಮ ತನುವಿನ ಅಂಶಿಕವಾದ ಆಶೆ, ರೋಷ,

ಹರುಷವೆಂಬ ಕರಣ ವಿಷಯಂಗಳ ಸುಜ್ಞಾನ ಪ್ರಕಾಶದಲ್ಲಿ ನಷ್ಟವ ಮಾಡಿ, ಎಂಬುದೀಗ ಚಂದ್ರಕಾಂತಿ ಮಾಣಿಕಕ್ಕೆ ಸ್ವರ್ಗ ಲೋಕವ ಕೊಟ್ಟೆನೆಂಬ ಶಬ್ದಕ್ಕರ್ಥ. ಅಂತಪ್ಪ ಮನವಲ್ಲಿ ಪ್ರಾಣಲಿಂಗ ಸಂಬಂಧಿಯಾದ ಶಿವಶರಣನು ಪಶ್ಚಿಮ ಚಕ್ರದ ಏಕದಳದ ಮಧ್ಯದಲ್ಲಿರುವ ನಿರಂಜನ ಪ್ರಣಮವೆಂಬ ಮಕಾರ ಪ್ರಣಮ ಪೀಠದಲ್ಲಿ ಅತಿಶಯ ಕೋಟಿ ಸೂರ್ಯ ಚಂದ್ರರ ಪ್ರಕಾಶವ ಕೀಲ್ಪಡಿಸುವಂಥ ಮಹಾಜ್ಞಾನ ಪ್ರಕಾಶದಿಂ ಬೆಳಗುವ ಭಾಪಲಿಂಗವನು ಕಾರಣ ತನುವಿನಲ್ಲಿ ಸ್ವಾಯತವ ಮಾಡಿ, ಆ ಕಾರಣ ತನುವಿನಂಶಿಕವಾದ ಅಹಂಕಾರ ಮಮಕಾರವೆಂಬ ಕಾರಣ ವಿಷಯಂಗಳ ಮಹಾಜ್ಞಾನ ಪ್ರಕಾಶದಲ್ಲಿ ನಷ್ಟವ ಮಾಡಿ, ಎಂಬುದೀಗ ಅಗ್ನಿಕಾಂತಿ ಮಾಣಿಕಕ್ಕೆ ಪಾತಾಳ ಲೋಕವ ಕೊಟ್ಟೆನೆಂಬ ಶಬ್ದಕ್ಕರ್ಥ. ಇಂತೀ ತ್ರಿವಿಧ ಷಡ್ವಿಧಾಂಗದಲ್ಲಿ ನವರತ್ನವೆಂಬ ನವಲಿಂಗವ ಸ್ವಾಯತವಾದ ಶಿವಜ್ಞಾನ ಶರಣನು ಆ ಲಿಂಗದ ಮಹಾಜ್ಞಾನದ ಪ್ರಕಾಶದಲ್ಲಿ ಸರ್ವಾಂಗವನು ದಹನ ಮಾಡಿ, ಆ ಜ್ಞಾನ ಭಸ್ಮವನು ಅವಧರಿಸಿ ತಾರಕದ ಮಧ್ಯದಲ್ಲಿ ಪ್ರಪಂಚವನಾಚರಿಸುತಿರ್ದ ಪರಶಿವ ಲಿಂಗದಲ್ಲಿ ಬೆಂದ ಜ್ಞಾನ ಕಲಾತ್ಮನು ಎಂಬುದೀಗ ಇಂತೀ ರತ್ನವ ಕೊಂಡು ಮನೆಯ ಸುಟ್ಟು ಬೂದಿಯ ಧರಿಸಿ ಕಾಯಕವ ಮಾಡುತಿರ್ದ ನಿಮ್ಮ ಶರಣನೆಂಬ ಶಬ್ದಕ್ಕರ್ಥ.

೮ನೆ. ಎನ್ನ ಸರ್ವಾಂಗಲ್ಲಿ ಲಿಂಗವಿದ್ದಾನೆ. ಐದಾನೆ. ಮನವರಿಯದೆ ಕೆಟ್ಟಿ, ಕೆಟ್ಟಿ. ಎನ್ನಂತರಂಗ ಬಹಿರಂಗವೆಂದೆನ್ನದೆ ಲಿಂಗವಿದ್ದಾನೆ. ಮನವರಿಯದೆ ಕೆಟ್ಟಿ, ಕೆಟ್ಟಿ. ಮನವು ಅವಿಶ್ವಾಸದಿಂದ ಗ್ರಹಿಸಲೊಲ್ಲದೆ ಕೆಟ್ಟಿ, ಕೆಟ್ಟಿನಯ್ಯಾ. ಎನ್ನ ಮನ ವಿಶ್ವಾಸದಿಂದ ಗ್ರಹಿಸಿರದೆ, ಸತ್ಯನಹೆ, ನಿತ್ಯನಹೆ, ಮುಕ್ತನಹೆ, ಉರಿಲಿಂಗಪೆದ್ದಿ ಪ್ರಿಯವಿಶ್ವೇಶ್ವರಾ.

೯ನೆ. ಕರಸ್ಥಲದ ಲಿಂಗ ಮನಸ್ಥಲಕ್ಕೆ ವೇದ್ಯವಾಗಿ, ಮನಸ್ಥಲದ ಲಿಂಗವೆನ್ನ ಸರ್ವಾಂಗದಲ್ಲಿ ವೇದ್ಯವಾದ ಬಳಿಕ, ಇನ್ನು ಭಿನ್ನ ಭಾವಕ್ಕೆ ತೆರಹುಂಟೇ? ಗುಹೇಶ್ವರನೆಂಬ ಲಿಂಗವ ಬೆರಸಿ ಸಮರಸವಾದ ಬಳಿಕ ಎರಡೆಂಬುದಿಲ್ಲ ನೋಡಾ ಚನ್ನಬಸವಣ್ಣ.

ಷಟ್‌ಸ್ಥಲಯುಕ್ತ ಲಿಂಗ ಪೂಜಾವಿಧಿ.

ವಿವರಣೆಃ— ಈ ವರೆಗೆ ಲಿಂಗ ಪೂಜೆಯ ತಾತ್ವಿಕ ವಿಚಾರಗಳು ಹೇಳಲ್ಪಟ್ಟವು. ಮುಂದೆ ವೀರಶೈವನ ದೈನಿಕ ಕ್ರಿಯೆಯಾದ ಲಿಂಗ ಪೂಜೆಯ ಕ್ರಮಗಳು ವಿವರಿಸಲ್ಪಟ್ಟಿವೆ.

೧ನೇ ವಚನ.

ಭಕ್ತಸ್ಥಲ.

ಲಿಂ. ಶಿವಶರಣನು ಶಿವಯೋಗ ನಿದ್ರಾ ಮುದ್ರೆಯಲ್ಲಿ ಪವಡಿಸಿರ್ದು 'ಬ್ರಾಹ್ಮೀ ಮುಹೂರ್ತೇ ಚ ಉತ್ಥಾಯ' ಎಂದು ಹೇಳುತ್ತಿಹುದಾದ ಕಾರಣ, ಬ್ರಾಹ್ಮೀ ಮುಹೂರ್ತದಲ್ಲಿ ಶಿವಧ್ಯಾನದಿಂದೆದ್ದು, ಶಿವಮಂತ್ರೋಚ್ಚಾರಣೆ ಶಿವಲಿಂಗನಿರೀಕ್ಷಣೆಯಂ ಮಾಡಿ, ಸ್ಥೂಲ ಶೌಚಾಚಮನಂಗಳಿಗೆ ಹೋಗಿ ಬಂದು, ಕರಚರಣ ಮುಖ ಪ್ರಕ್ಷಾಲನಂಗೈದು, ದಂತಧಾವನವಂ ಮಾಡಿ, ಸ್ನಾನಂ ಗೈದು, ಕುಸುಮಾಂಗಳಂ ಶೋಧಿಸಿಕೊಂಡು ಪಾವುಗೊರಡಮಂ ಪೆಟ್ಟಿಕೊಂಡು ಬಂದು, ಭಕ್ತಿಸ್ಥಲ ಸುಖಾಸನನೆಂದು ಹೇಳುತ್ತಿಹುದಾದ ಕಾರಣ, ಉನ್ನತಾಸನದ ಗದ್ದುಗೆಯ ಮೇಲೆ ಸುಖಾಸನದಲ್ಲಿ ಮುಹೂರ್ತವ ಮಾಡಿಕೊಂಡು, ಶ್ರೀ ವಿಭೂತಿ ರುದ್ರಾಕ್ಷಿಗಳನ್ನು ಜಲ ಮಿಶ್ರ ಪುಷ್ಪಗಳಿಂದರ್ಚಿಸಿ, ತತ್ತತ್ ಸ್ಥಾನಂಗಳಲ್ಲಿ ಅತ್ಯಂತ ವಿಶ್ವಾಸದಿಂದ ಅಲಂಕರಿಸಿಕೊಂಬುವುದೇ ಶ್ರದ್ಧಾಭಕ್ತಿಯನುಳ್ಳ ಭಕ್ತಸ್ಥಲವಾಗುವುದು.

ಮಹೇಶ್ವರಸ್ಥಲ.

ತದನಂತರದಲ್ಲಿ ಪರಶಿವನ ದ್ವಯಾಭಿಧಾನದಿಂದ ಮೂಲಪಂಚಾಕ್ಷರೀ ಮಂತ್ರವನ್ನು ಮಾನಸ, ವಾಚಕ, ಉಪಾಂಶುಕವೆಂಬ ತ್ರಿಕರಣಂಗಳಲ್ಲಿ ಅತ್ಯಂತ ನೈಷ್ಠೆಯಿಂದ ಪುನಶ್ಚರಣೆ ಜಪಂಗೈವುದೇ ನೈಷ್ಠಿಕಾಭಕ್ತಿಯನುಳ್ಳ ಮಹೇಶ್ವರಸ್ಥಲವಾಗಿಸ್ಪುದು.

ಪ್ರಸಾದಿಸ್ಥಲ.

ತದನಂತರದಲ್ಲಿ ಸೆಜ್ಜೆ ವಸ್ತ್ರಂಗಳಲ್ಲಿಪ್ಪ ಶಿವಲಿಂಗ ಮೂರ್ತಿಯನ್ನು ಒಂದಾನೊಂದು ಸೊಪ್ಪೆಯ ಸಿವುಡ ಹಿರಿವ ಹಾಗೆ ಅಡ್ಡ ಮೋರೆಯ

ಹೀಗೆ ಶಿವಶರಣನು ಶಿವಾರ್ಚನೆಗೆ ಮುಹೂರ್ತವ ಮಾಡಿದುದೇ ಮೊದಲಾಗಿ ಶಿವಾರ್ಪಿತ ಮುಗಿಯುವಷ್ಟರಲ್ಲಿ ಅವೆಲ್ಲವೂ ಷಟ್‌ಸ್ಥಳಂಗಳಾಗಿರ್ಪುವು

೨ನೇ ವಚನ.

೬೬. ಲಿಂಗಪೂಜೆ ಲಿಂಗಾರ್ಪಿತ ಮುಗಿಯುವುದರೊಳಗೆ ಷಟ್‌ಸ್ಥಲಂಗಳು ಸಂಬಂಧವಾಗಿರುವ ಕ್ರಮವೆಂತೆಂದೊಡೆಃ-

ಭಕ್ತಸ್ಥಲ.

ಪ್ರಾತರ್ವಿಧಿ.

ಪ್ರಾತಃಕಾಲದಲ್ಲಿ ಶಿವಸ್ಮರಣೆಯಿಂದ ಹಾಸಿಕೆಯ ಬಿಟ್ಟು ಎದ್ದು ಮುಖ ಪ್ರಕ್ಷಾಲಿಸಿಕೊಂಡು ಭಸ್ಮಧಾರಣವ ಮಾಡಿಕೊಂಡು, ಬಹಿರ್ಭೂಮಿಗೆ ಹೋಗಿ, ಮರಳಿ ಮನೆಗೆ ಬಂದು ಸೂಕ್ಷ್ಮ ಮಲವ ತೊಳೆಯುವುದು. ಅವು ಆವವೆಂದರೆ, ಎರಡು ನೇತ್ರದಲ್ಲಿಯ ಪಿಚ್ಚು, ಎರಡು ಕಿವಿಗಳಲ್ಲಿರುವ ಕೂಗಣಿ, ಎರಡು ನಾಸಿಕ ದ್ವಾರಗಳಲ್ಲಿರುವ ಸುಂಬಳ, ಗಂಟಲಲ್ಲಿರುವ ಶ್ಲೇಷ್ಮ, ಹಸ್ತದ ಹತ್ತು ಬೆರಳುಗಳಲ್ಲಿರುವ ಹಕ್ಕು, ಇಂತಿಷ್ಟು ತೊಳೆದು ಶುಚಿ ಮಾಡಿಕೊಳ್ಳಬೇಕು.

ಪುಷ್ಪಾವಚಯ.

ಆ ಮೇಲೆ ಪುಷ್ಪದ ಕರಡಿಗೆಯ ತೆಗೆದುಕೊಂಡು ವನಕ್ಕೆ ಹೋಗಿ ಪತ್ರೆ ಪುಷ್ಪ ಇರುವಂತಹ ಗಿಡಗಳ ಸಮೀಪದಲ್ಲಿ ನಿಂತು ಶಬ್ದ ಹಾಕಬೇಕು. ಏನೆಂತೆಂದಡೆ, "ಓಂ, ಕಾರಣಂ ಪುಷ್ಪಸ್ಯ ಉತ್ಪತ್ತ್ಯಾದಿ ಮಹೀತಳೆ, ಶಿವಪೂಜಾನಿಮಿತ್ತಾರ್ಥಂ ಭಿಕ್ಷಾಂ ದೇಹಿ ವನಸ್ಪತೇ" ಹೀಗೆಂದು ಆ ಗಿಡಗಳಲ್ಲಿರುವ ಪತ್ರೆ ಪುಷ್ಪಗಳ ತೆಗೆದುಕೊಂಡು ಬಂದು, ಆ ಮೇಲೆ ಸ್ಥಲ ಸಮ್ಮಾರ್ಜನೆಯ ಮಾಡುವುದು.

ಸ್ಥಲಸಮ್ಮಾರ್ಜನೆ.

ಅದೆಂತೆಂದೊಡೆ, 'ಗೋಮಯಂ ಗೋರೋಜನಂ ಮೂತ್ರ। ದಧಿ ಕ್ಷೀರ ಘೃತಂ ಗವಾಂ ॥ ಷಡಂಗಾನಿ ಪವಿತ್ರಾಣಿ ಏತೈಃ ಸಮ್ಮಾರ್ಜನ ಮಾಚ

ಹರಿಕೊಂಡು ತೆಗೆಯವೆ ಎಡದ ಹಸ್ತವನ್ನು ಪೆಜ್ಜೆ ಪಾಲಿಕೆಯ ತಾಪು ಮಡಗಿಕೊಂಡು ಬಲಹಸ್ತದಿಂದ ಲಿಂಗದ ಷಟ್‌ಸ್ಥಲಂಗಳನ್ನು ಬಿಮ್ಮನೆ ಪಿಡಿದುಕೊಂಡು ಅತ್ಯಂತ ಸುಯಿಧಾನದಿಂದ ವಾಮಭಾಗದ ಕರಸ್ಥಲಕ್ಕೆ ಬಿಜಯಂ ಗೈಸಿಕೊಂಬುವುದೇ ಸುಯಿಧಾನ ಭಕ್ತಿಯನುಳ್ಳ ಪ್ರಸಾದಿಸ್ಥಲವಾಗಿಪ್ಪುದು.

ಪ್ರಾಣಲಿಂಗಿಸ್ಥಲ.

ತದನಂತರದಲ್ಲಿ ಆ ಲಿಂಗಕ್ಕೆ ಭಸ್ಮೋದಕ, ಕುಸುಮೋದಕ, ಕೂಪೋದಕ, ಕುಳಿರೋದಕ, ಶ್ರೀ ಗಂಧೋದಕ, ಸ್ವರ್ಣೋದಕ, ರತ್ನೋದಕ, ಮಂತ್ರೋದಕ, ಪಾದೋದಕಗಳಿಂದ ಮಜ್ಜನಕ್ಕೆರೆದು ಸಣ್ಣ ಧೌತ ವಸ್ತ್ರದಿಂದ ದ್ರವವನಾರಿಸಿ ಶುಭ್ರವಾದ ಶ್ರೀ ವಿಭೂತಿಯನ್ನು ಅತ್ಯಂತ ಸಾವಧಾನದಿಂದ ಧರಿಸಿ, ಪುಣ್ಯವು ಪುಟವಿಕ್ಕುವಂತೆಯೂ, ಭಾಗ್ಯವು ಸೂಸುವಂತೆಯೂ ತರವರಿದು, ಕುಸುಮಾಲಂಕಾರಂಗಳ ಹಿಂಡುದಂಡೆಗಳಿಂದ ಪೂಜೆಯನಲಂಕರಿಸಿ, ಆ ಲಿಂಗವನ್ನು ವ್ಯಾಘ್ರದೃಷ್ಟಿ, ಬಕದೃಷ್ಟಿ, ಕುರಂಗದೃಷ್ಟಿ, ಚಂಚಲದೃಷ್ಟಿ, ವ್ಯವಹಾರ ದೃಷ್ಟಿ, ಊರ್ಧ್ವದೃಷ್ಟಿ, ಅಧೋದೃಷ್ಟಿಗಳಲ್ಲದೊಂದಾನೊಂದು ಅರೆವಿರಿದ ತಾವರೆಯಂತೆ ಅನಿಮಿಷಾಲೋಕನದಿಂದ ನಿರೀಕ್ಷಿಸುತ್ತ ಆ ಲಿಂಗದ ಮಹಿಮಾತಿಶಯಗಳನ್ನು ಕಂದ, ವೃತ್ತ, ಗದ್ಯ, ಪದ್ಯ, ಸ್ವರ ಸಂಗೀತ, ಪ್ರಬಂಧಾದಿಗಳಿಂದ ಸ್ತೋತ್ರ ಮಾಡುವುದೇ ಅನುಭಾವ ಭಕ್ತಿಯನುಳ್ಳ ಪ್ರಾಣಲಿಂಗಿಸ್ಥಲವಾಗಿರ್ಪುದು.

ಶರಣಸ್ಥಲ.

ತದನಂತರದಲ್ಲಿ ಕ್ರಿಯಾಕಾಲದಲ್ಲಿ ಗಡಣಿಸಿ ಬಂದ ಸಕಲಪದಾರ್ಥಂಗಳನ್ನು ಶರಣಸತಿ ಲಿಂಗಪತಿ ಎಂಬ ಭಾವದಿಂದ ಲಿಂಗಕ್ಕರ್ಪಿಸಿ, ಆ ಲಿಂಗಪ್ರಸಾದವನ್ನು ಸವಿದು ಆನಂದಿಸುವುದೇ ಆನಂದಭಕ್ತಿಯನುಳ್ಳ ಶರಣಸ್ಥಲವಾಗಿಪ್ಪುದು.

ಐಕ್ಯಸ್ಥಲ.

ತದನಂತರದಲ್ಲಿ ಶಿಖಿಕರ್ಪೂರ ಸಂಯೋಗವಾದ ಹಾಗೆ ಲಿಂಗದಲ್ಲಿ ತಾ ಕೂಡಿ, ತನ್ನಲ್ಲಿ ಲಿಂಗವು ಕೂಡಿ ತಾನು ಲಿಂಗ ಎಂಬ ಉಭಯ ಭಾವವಳಿದು ತಾನೇ ತಾನಾಗಿರುವುದೇ ಸಮರಸ ಭಕ್ತಿಯನುಳ್ಳ ಐಕ್ಯಸ್ಥಲವಾಗಿರುವುದು.

ರೇತ್' ॥ ಟೀಕುಃ—ಗೋವಿನ ಗೋಮಯ, ಗೋರೋಜನ, ಮೂತ್ರ, ಮೊಸರು, ಕ್ಷೀರ, ತುಪ್ಪ, ಈ ಆರು ಸನ್ನಾಹಗಳಿಂದ ನೆಲಸವ್ಯಾರ್ಜನೆಯ ಮಾಡಿ, ಆ ಮೇಲೆ ಆ ಸ್ಥಳದಲ್ಲಿ ರಂಗವಲ್ಲಿಯ ಹಾಕಬೇಕು. ಅದೆಂತೆಂದೊಡೆ, ಬಿಣಚಿಕಲ್ಲಿನ ಹಿಟ್ಟಿನ ಪುಡಿಯ ಮಾಡಿ, ಅದರೊಳಗೆ ಅರ್ಧ ಹಿಟ್ಟಿಗೆ ಕಾಕಿ ಸೊಪ್ಪಿನ ರಸವಾಗಲಿ ತೊಂಡೇ ಸೊಪ್ಪಿನ ರಸವಾಗಲಿ, ಈ ಎರಡರೊಳಗೆ ಅವುದಾದರೊಂದು ಸೊಪ್ಪಿನ ರಸವ ಹಿಂಡಿ, ಮೂರು ಭಾಗವನಿಟ್ಟು, ಹಸರು ಮಾಡಿಕೊಂಡು, ಉಳಿದ ಬಿಳಿಯ ಹಿಟ್ಟು ಇದ್ದಲಿ ಹಿಟ್ಟು ಈ ಪಂಚ ಹಿಟ್ಟಿನಿಂದ ಹಾಕಬೇಕು. ರಂಗವಲ್ಲಿಯ ಹಾಕಿ ಆ ಮೇಲೆ ಗರ್ದಿಗೆ ಹಾಕಬೇಕು.

ಗದ್ದಿಗೆಹಾಕುವುದು.

ಹೇಗೆಂದರೆ, ಚಿತ್ರಾಸನ ಬಿಳಿಯ ಕಂಬಳಾಸನ ಈ ಎರಡರೊಳಗೆ ಅವುವಾದರೂ ಒಂದು ಆಸನ ಹಾಕಿ ಅದರ ಮೇಲೆ ಲಿಂಗಪೂಜಾ ಸಾಮಗ್ರಿಗಳ ಬೆಳಗಿ, ಶುಚಿ ಮಾಡಿ ಇಟ್ಟು, ಚರಿಗಿ ಬೆಳಗಿ ತೊಳೆದು, ಉದಕ ಸೋಸಿ ಇಟ್ಟು, ಗಂಧ, ಅಕ್ಷತೆ, ಕರ್ಪೂರ, ಲೋಭಾನ ಮೊದಲಾದ ಸಾಮಗ್ರಿಗಳ ಇಟ್ಟು. ಜ್ಯೋತಿ ಮುಟ್ಟಿಸಿ, ಆ ಸಾಮಾನುಗಳ ಮೇಲೆ ತುಂಬ ಮಡಿ ವಸ್ತ್ರವ ಮುಚ್ಚುವುದು.

ದಂತಧಾವನ.

ಆ ಮೇಲೆ ಅಲ, ನೇರಿಲು, ಮಾವು, ಬೇವು, ನೆಲ್ಲಿ, ಹುಣಚೆ ಈ ಕಾಷ್ಯದೊಳಗೆ ಅವುದಾದರೂ ಒಂದು ಕಡ್ಡಿಯ ತಂದು, ಹನ್ನೆರಡು ಬೆರಳುದ್ದ ತೆಗೆದುಕೊಂಡು, ದಂತಧಾವನವ ಮಾಡಿ, ದಂತ ಸಂದಿಗಳಲ್ಲಿಯ ಕೀಳು ಕಿಲ್ಬಿಷವ ತೆಗೆದು, ಜಿಹ್ವಾ ಮುಕ್ಕುಳಿಸಿ, ಮುಖ ಪ್ರಕ್ಷಾಲನವ ಮಾಡುವುದು.

ಸ್ನಾನ.

ಆ ಮೇಲೆ ಸ್ನಾನ ಮಾಡಬೇಕಾದರೆ, ಉತ್ತಮ ಶಿರ ಸ್ನಾನ, ಮಧ್ಯಮ ಕಂಠ ಸ್ನಾನ, ಕನಿಷ್ಠ ಕಟಿಸ್ನಾನ, ಹೀಗೆಂಬಲ್ಲಿ ಉತ್ತಮವಾದ ಶಿರ ಸ್ನಾನವ ಮಾಡಿ, ಮಡಿ ವಸ್ತ್ರವ ಹೊದ್ದುಕೊಂಡು, ಶಿವಸ್ಮರಣೆಯ ಮಾಡುತ್ತ ಬಂದು, ಗದ್ದಿಗೆಯ ಮೇಲೆ ಮೂರ್ತವ ಮಾಡುವಾಗ ಮಂತ್ರ

ಉಚ್ಚರಿಸಬೇಕು. ಆವ ಮಂತ್ರವೆಂದರೆ, 'ಓಂ' ಎಂದು 'ಆಹಃ ಅನಂತ ಶಕ್ತಿ ಧಾಮ್ನೆ। ಜ್ಯೋತಿರೂಪಾಯ ವಸ್ತ್ರಾಯ ಫಟ್" ಎಂದು ಮೂರ್ತವ ಮಾಡುವುದು.

ಪದಾರ್ಥ ಶುದ್ಧಿ.

ಲಿಂಗಕ್ಕೆ ಮಜ್ಜನ ನೀಡಬಾರದು. ಏನು ಕಾರಣವೆಂದರೆ, ಗ್ರಂಥ॥ ಆದಿ ಮಾಂಸಂ ತು ತೋಯಾನಾಂ। ಮಧ್ಯ ಮಾಂಸಂ ತು ಗೋರಸಂ॥ ಸರ್ವ ಮಾಂಸಂ ತು ನಾರೀಣಾಂ। ಕಿಂ ಶೀಲಂ ಮಹೇಶ್ವರೀ ॥ ಟೀಕುಃ— ಎಲೆ ಪರಮೇಶ್ವರನೇ, ಉದಕದಿಂದ ನಿನಗೆ ಅಭಿಷೇಕವಾಗುತ್ತದೆ. ಆ ಉದಕ ಆದಿಯಲ್ಲಿ ಮಾಂಸ ಸ್ವರೂಪು, ಕ್ಷೀರದಿಂದ ಅಭಿಷೇಕವಾಗುತ್ತದೆ. ಆ ಕ್ಷೀರ ಎಂತಹದ್ದು ಎಂದರೆ, ಆಕಳ ಕೆಚ್ಚಿನಲ್ಲಿರುವ ಮಾಂಸದಿಂದ ಹುಟ್ಟುತ್ತದೆ. ಆ ಸ್ತ್ರೀಯಳ ಆಪಾದ ಮಸ್ತಕ ಪರಿಯಂತರ ಮಾಂಸ ಸ್ವರೂಪು, ಹೀಗೆಂಬಲ್ಲಿ ನಿನ್ನ ಶೀಲವೆಂಬುದೇನು ಎಂದು ಪಾರ್ವತಿ ಕೇಳಲಾಗಿ ಪರಮೇಶ್ವರನು ನಿವೃತ್ತಿ ಹೇಳುತ್ತಿರ್ದನು. ಗ್ರಂ॥ ಮಂತ್ರ ಶುದ್ಧಂ ತು ತೋಯಾನಾಂ। ಭಸ್ಮ ಶುದ್ಧಂ ತು ಗೋರಸಂ ॥ ದೀಕ್ಷಾ ಶುದ್ಧಂತು ಸ್ತ್ರೀಣಾಂ। ಮಮ ಶೀಲ ಮಹೇಶ್ವರೀ ॥ ಟೀಕುಃ— ಎಲೇ ಪಾರ್ವತಿ ಕೇಳು, ಮಂತ್ರದಿಂದ ಉದಕ ಶುದ್ಧ ಮಾಡಬೇಕು. ಭಸ್ಮ ಮಿಶ್ರ ಮಾಡಿ ಕ್ಷೀರ ಶುದ್ಧ ಮಾಡಬೇಕು. ದೀಕ್ಷೆಯಿಂದ ಸ್ತ್ರೀಯಳ ಶುದ್ಧ ಮಾಡಬೇಕು. ಎಂದು ಪರಮೇಶ್ವರನ ವಾಕ್ಯವಿದ್ದ ಕಾರಣ ಮಂತ್ರೋದಕ ಮಾಡಿ, ಪುಷ್ಪ ಪತ್ರೆ ಉಪಕರಣಗಳ ಮೇಲೆ ಸಂಪ್ರೋಕ್ಷಿಸಬೇಕು.

ಇಷ್ಟಲಿಂಗ ಪೂಜೆ.

ಆ ಮೇಲೆ ಲಿಂಗಕ್ಕೆ ಮಜ್ಜನವ ನೀಡಬೇಕು. ಆದರೆ ಕರಡಿಗೆಯ ಅರಗಿನಲ್ಲಿ ಎಡಹಸ್ತವನಿಟ್ಟು ಬಲಹಸ್ತದ ಹೆಬ್ಬೆರಳ ಲಿಂಗ ಮಸ್ತಕದ ಮೇಲಿಟ್ಟು, ನಡುವಿನ ಎರಡು ಬೆರಳು ಲಿಂಗದ ಬುಡಭಾಗದಲ್ಲಿಟ್ಟು, ಗೋಮುಖ ಮೇಲು ಮಾಡಿ, ಬಿಜಯಂಗೈಸಿಕೊಂಡು ಎಡಹಸ್ತದಲ್ಲಿ ಮೂರ್ತವ ಮಾಡಿಸಿ, ಮಂತ್ರೋದಕದಿಂದ ಅಭಿಷೇಕವ ಮಾಡಿ, ವಿಭೂತಿಯ ಧರಿಸಿ, ಪತ್ರೆ ಪುಷ್ಪವ ಧರಿಸಿ, ಲೋಭಾನ ಆರ್ಪಿಸಿ, ಸೆಜ್ಜೆಯಲ್ಲಿ ಮೂರ್ತವ ಮಾಡಿಸುವುದು.

ವಿಭೂತಿ ಧಾರಣ.

ಆ ಮೇಲೆ ಬಲಹಸ್ತದ ಹೆಬ್ಬೆರಳು ಮಧ್ಯದ ಎರಡು ಬೆರಳುಗಳಿಂದ ಕೂಡಿದ್ದು ಕುರಂಗ ಮುದ್ರೆ ಎನಿಸುವುದು. ಈ ಕುರಂಗ ಮುದ್ರೆಯಿಂದ ಆಧಾರದಲ್ಲಿರುವ ವಿಭೂತಿಯನ್ನು ಎತ್ತಿ ಎಡದ ಹಸ್ತದಲ್ಲಿಟ್ಟು, ಬಲದ ಹಸ್ತದ ಶುಕ್ತಿ ಮುದ್ರೆಯಿಂದ ಜಲಪುಷ್ಪಗಳ ಹಿಡಿದು, ಅರ್ಘ್ಯ ಕೊಟ್ಟು, ಕೂರ್ಮ ಮುದ್ರೆಯಿಂದ ನಮಸ್ಕರಿಸಿ, ಆ ಮೇಲೆ ಅಗ್ನಿರಿತಿ ಭಸ್ಮ, ವಾಯುರಿತಿ ಭಸ್ಮ, ಜಲನಿತಿ ಭಸ್ಮ, ಸ್ಥಲವಿತಿ ಭಸ್ಮ, ವ್ಯೋಮಿತಿ ಭಸ್ಮ, ಸೂರ್ಯೋತಿ ಭಸ್ಮ, ಓಂ ಕ್ಷಂ ಎಂದು ಎರಡು ಪೊಳ ಪಾದ, ಎರಡು ಬಗಲು, ಉದರ, ಭುಜ ಎರಡು, ಹೃದಯ, ಕಂಠ, ಮಸ್ತಕ, ಸ್ಥಾನಂಗಳಲ್ಲಿ ಸೋಂಕಿಸಿ, ಸರ್ವಾಂಗದಲ್ಲಿ ಧೂಳನವ ನೈದು ಸರ್ವಾಂಗಕ್ಕೆ ಉದ್ವರ್ತನವ ಮಾಡಿ, ಆ ಮೇಲೆ ವಿಭೂತಿ ಧರಿಸುವ ಸ್ಥಾನಗಳಾವಾವೆಂದಡೆ, ಹಣೆಕಾಂಡ, ಎರಡು ಕಿವಿ, ಎರಡು ನೇತ್ರ, ಎರಡು ಘ್ರಾಣರಂಧ್ರವು, ಎರಡು ತೋಳು, ಎರಡು ಭುಜ, ಎರಡು ಕುಚ, ಎರಡು ಪೊಳಕೈ, ಎದೆ, ಎರಡು ಬಗಲು, ಹೊಕ್ಕುಳ, ಮೇಢ್ರ, ಬೆನ್ನು, ಎರಡು ತೊಡೆ, ಎರಡು ಪೊಳಕಾಲು, ಎರಡು ಕಣಕಾಲು, ಗುದ, ಎರಡು ಪಾದಗಳು, ಇಂತು ಮೂವತ್ತೆರಡು ಸ್ಥಾನಂಗಳಲ್ಲಿ ವಿಭೂತಿ ಧರಿಸುವಾಗ, ಮಂತ್ರವ ಉಚ್ಚರಿಸಬೇಕು. ಆವ ಮಂತ್ರವೆಂದರೆ, 'ಪುನಾತಿ ಯಜ್ಞಗತ್ಸರ್ವಂ ತ್ರಿಪುಂಡ್ರಾತ್ಮ ಸದಾಶಿವಃ । ಐಶ್ವರ್ಯ ಪ್ರಾಪ್ತಿ ಬೀಜಾಯ ತಸ್ಮೈ ಶ್ರೀ ಭಸ್ಮನೇ ನಮಃ । ಭೂತಿರ್ಭೂತಿ ಪರಿತ್ಪ ಜನನಿ। ಪಾಪೌಘ ವಿಧ್ವಂಸಿನೀ । ಸರ್ವೋಪದ್ರವ ವಿನಾಶಿನೀ ಶುಭಕರೀ। ಶೋಕಂಜ ವಿಚ್ಛೇದಿನೀ । ಭೂತಪ್ರೇತ ಪಿಶಾಚ ರಾಕ್ಷಸ ಹರೀ । ಸರ್ವದಾ ಸಂಪತ್ಕರೀ । ತೇಜೋರಾಶಿ ವಿಶೇಷ ಮೋಕ್ಷಕರೀ ಭೂತಿಸ್ಸದಾ ಪಾತು ಮಾಂ॥' ಎಂದು ಉಚ್ಚರಿಸುತ್ತ, ಮೇಲೆ ಹೇಳಿದ ಸ್ಥಾನಂಗಳಲ್ಲಿ ವಿಭೂತಿ ಧಾರಣ ಮಾಡಿಕೊಳ್ಳುವುದು.

ಪ್ರಣವಸಂಬಂಧ.

ಆ ಮೇಲೆ ಪ್ರಣವ ಸಂಬಂಧನ ಮಾಡಿಕೊಳ್ಳಬೇಕು. ಅದೆಂತೆಂದೊಡೆ, ಗ್ರಂಥ॥ 'ಓಂಕಾರಂ ವದನಂ ದೇವೀ ನ ಮಕಾರೋ ಭುಜ ದ್ವಯಂ ಶಿಕಾರಂ ದೇಹ ಮಧ್ಯಸ್ತು ವ ಯಕಾರಂ ಪದದ್ವಯಂ॥' ಟೀಕುಃ- ಓಂಕಾರ ಲಲಾಟದಲ್ಲಿ, ನಕಾರ ಬಲ ಭುಜದಲ್ಲಿ, ಮಕಾರ ಎಡಭುಜದಲ್ಲಿ, ಶಿಕಾರ ನಾಭಿಯಲ್ಲಿ, ವ ಯಕಾರ ಬಲ ಎಡ ಪೊಳಕಾಲಲ್ಲಿ, ಹ್ರಂ, ಹ್ರೀಂ, ಹ್ರೂಂ, ಹ್ರೈಂ, ಹ್ರೌಂ, ಹ್ರಃ ಇವು ಆರು ಪ್ರಣವು ಬಲದ ಬಗಲಲ್ಲಿ, ನಮಃ ಶಿವಾಯ ಎಡದ ಬಗಲಲ್ಲಿ 'ಬಸವ' ಕೊರಳಲ್ಲಿ, ಮುಂದೆಸೆಯಲ್ಲಿ, ಅ, ಉ, ಮ, ಅಕ್ಷರ ಕಂಠದಲ್ಲಿ, ಎರಡು ಶಿಕಾರ ನೇತ್ರದಲ್ಲಿ, ಎರಡು ಯಕಾರ ಎರಡು ಕರ್ಣಗಳಲ್ಲಿ, ನಾಸಿಕದಲ್ಲಿ ನಕಾರ, ಬ್ರಹ್ಮರಂಧ್ರದಲ್ಲಿ ಹಕಾರ, ಗುದಸ್ಥಾನದಲ್ಲಿ ಲಿಕಾರ ಇಂತಿಷ್ಟು ಪ್ರಣಮಂಗಳನ್ನು ಸಂಬಂಧವ ಮಾಡಿಕೊಳ್ಳಬೇಕು.

ರುದ್ರಾಕ್ಷಿ ಧಾರಣ.

ಆ ಮೇಲೆ ರುದ್ರಾಕ್ಷಿ ಧರಿಸುವ ಕ್ರಮವೆಂತೆಂದೊಡೆ, ಶಿಖಿಯಲ್ಲಿ ಒಂದು, ತಲೆ ಬಳಸಿ ಮೂವತ್ತಾರು, ಕಂಠದಲ್ಲಿ ಮೂವತ್ತೆರಡು, ಎದೆಯಲ್ಲಿ ಐವತ್ತು, ಎರಡು ತೋಳುಗಳಲ್ಲಿ ಹದಿನಾರು ಹದಿನಾರು, ಎರಡು ಮುಂಗೈಗಳಲ್ಲಿ ಹನ್ನೆರಡು ಹನ್ನೆರಡು, ಎರಡು ಕಿವಿಗಳಲ್ಲಿ ಒಂದೊಂದು, ಯಜ್ಞೋಪವೀತ ನೂರು ಎಂಟು, ಇಂತಿಷ್ಟು ಮೇಲೆ ಹೇಳಿದ ಸ್ಥಾನಂಗಳಲ್ಲಿ 'ರುದ್ರಾಕ್ಷಿ ರುಷ್ಟ ಬೀಜಾಯ, ಭೂತಿ ಸಂಭೂತಿ ಹೇತವೇ, ನೇತ್ರತ್ರಯಾಯ' ಎಂದು, 'ರುದ್ರಾಯ ನಮೋ ಲೋಕಹಿತಾರ್ಥಿನೇ' ಎಂದು ರುದ್ರಾಕ್ಷಿಯ ಧರಿಸಿಕೊಳ್ಳಬೇಕು.

ನ್ಯಾಸ ಮೊದಲಾದವುಗಳು.

ಆ ಮೇಲೆ ಬಲಹಸ್ತಕ್ಕೆ ಭಸ್ಮಲೇಪನವ ಮಾಡಿಕೊಂಡು, ಪ್ರಣಮಂಗಳ ಲಿಖಿಸಿಕೊಂಡು, ಕರನ್ಯಾಸ, ಅಂಗನ್ಯಾಸ, ಪ್ರಾಣಾಯಾಮ, ಅಷ್ಟ ದಿಗ್ಬಂಧನವ ಮಾಡಿದಲ್ಲಿಗೆ ಭಕ್ತಸ್ಥಲ ಸಂಬಂಧವಾದುದು.

ಮಹೇಶ್ವರಸ್ಥಲ

ಆ ಮೇಲೆ ಗುರುವು ಅಪ್ಪಣೆಕೊಟ್ಟಂತಹ ಮಂತ್ರವನ್ನು ಹಸ್ತಕ್ಕೆ ವಿಭೂತಿಯ ಧರಿಸಿಕೊಂಡು ಮಡಿವಸ್ತ್ರವ ಮುಸುಕು ಹಾಕಿಕೊಂಡು, ಪರ ಶೃತಿಗೆ ಕೇಳದ ಹಾಗೆ ಉಚ್ಚರಿಸಿದಲ್ಲಿಗೆ ಮಹೇಶ್ವರಸ್ಥಲ ಸಂಬಂಧವಾದುದು.

ಪ್ರಸಾದಿಸ್ಥಲ

ಆ ಮೇಲೆ ಬಲಹಸ್ತದ ತರ್ಜನಿ, ಅಂಗುಲಿ, ಮಧ್ಯಾವಾಂಗುಲಿ ಸಂದಿಗಳಲ್ಲಿ ಒಂದು ಪುಷ್ಪವ ಹಿಡಿದು ಕರಡಿಗೆಯ ಅರಗಿನಲ್ಲಿ ಎಡ ಹಸ್ತವ ಅಡ್ಡ ಇಟ್ಟು ಮೇಲೆ ಹೇಳಿದ ಪ್ರಕಾರ ಲಿಂಗವನ್ನು ಬಿಜಯಂಗೈಸಿ, ಎಡ ಹಸ್ತದಲ್ಲಿ ಮೂರ್ತವ ಮಾಡಿಸಿದಲ್ಲಿಗೆ ಪ್ರಸಾದಿ ಸ್ಥಲವೆನಿಸುವುದು.

ಪ್ರಾಣಲಿಂಗಿಸ್ಥಲ

ಆ ಮೇಲೆ ಲಿಂಗಕ್ಕೆ ಪಾದ್ಯ, ಅರ್ಘ್ಯ, ಆಚಮನ, ಮಧುಪರ್ಕ, ಪಂಚಾಮೃತ, ಸಪ್ತೋದಕಗಳಲ್ಲಿ ಅಭಿಷೇಕ ಎರೆದು, ಲಿಂಗದ ದ್ರವವ ತೆಗೆದು, ಲೋಭಾನದ ಹೊಗೆಯಿಂದ ಲಿಂಗವ ತರಿಸಿ, ವಿಭೂತಿಯನ್ನು ಅನಾಮಿಕ ಅಂಗುಲಿಯಿಂದ ಧರಿಸಿ, ಗಂಧ, ಅಕ್ಷತೆ, ಪುಷ್ಪ, ವಸ್ತ್ರ, ಯಜ್ಞೋಪವೀತ, ಉತ್ತರೀಯ, ಆಭರಣ ಮೊದಲಾದವುಗಳನ್ನು ಧರಿಸಿ, ಧೂಪ, ದೀಪ, ನೈವೇದ್ಯ, ತಾಂಬೂಲಗಳಿಂದ ಅರ್ಚಿಸಿ, ಗಂಟೆ, ದರ್ಪಣ, ಚಾಮರ, ಬೀಸಣಿಕೆ, ಛತ್ರ ಉಡಾಸವಸ್ತ್ರ, ನಗಾರಿ, ಜಾಗಟೆ, ಕೈತಾಳ, ಸಮಾಳ, ಬುರುಗು, ಕಿನ್ನರಿ, ವೀಣೆ, ಚಿನ್ನಕಾಳಿ, ನಪೂರಿ, ಕರಣೆ, ಹೆಗ್ಗಾಳಿ, ಕೊಳಲು, ಕಂಚಿನ ಸಮಾಳ, ಭೇರಿ, ನರ್ತನ ಇವು ಮೊದಲಾದ ಉಪಚಾರಗಳಿಂದ ಪೂಜಿಸಿದಲ್ಲಿಗೆ ಪ್ರಾಣಲಿಂಗಿ ಸ್ಥಲ ಸಂಬಂಧವಾಗುವುದು.

ಶರಣಸ್ಥಲ

ಆ ಮೇಲೆ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣ ವೇದ, ಗಾಯತ್ರೀ ವೇದಗಳ ಸ್ತೋತ್ರ, ಶಾಸ್ತ್ರ, ಸೂತ್ರ, ಪುರಾಣ, ಸ್ತೋತ್ರ, ಆದ್ಯರು, ವೇದ್ಯರು, ಸಾಧ್ಯರು, ಪುಷ್ಪದಂತ, ಮಲಯರಾಜ, ಮರುಹಣ, ಹಲಾಯುಧ, ಅನಾಮಯ ಮೊದಲಾದ ಕವಿಗಳು ಶಿವನ ಕೂರ್ತು ಮಾಡಿದ ಸ್ತೋತ್ರಂಗಳನ್ನು ಮಾಡಿ, ಶಿರಸ ಪ್ರದಕ್ಷಿಣವ ಮಾಡಿ, ಪುಷ್ಪಾಂಜಲಿಯ ಮಾಡಿ, ನಮಸ್ಕರಿಸಿ, ನಿರ್ಮಾಲ್ಯ ವಿಸರ್ಜನಂಗೈದಲ್ಲಿಗೆ ಶರಣಸ್ಥಲ ಸಂಬಂಧವಾದುದು.

ಐಕ್ಯಸ್ಥಲ

ಆ ಮೇಲೆ ಜಂಗಮ ಮೂರ್ತಿಗಳು, ಆ ವೇಳೆಗೆ ದಯಮಾಡಿದರೆ, ದಶವಿಧ ಪಾದೋದಕದಲ್ಲಿ ಹೇಳಿದ ಪ್ರಕಾರ ಮಹತ್ವಾದವನ್ನು ಪಡೆದುಕೊಂಡು, ಅರ್ಪಿತವ ಮಾಡುವುದು. ಆ ವೇಳೆಗೆ ಮೂರ್ತಿಗಳು ಆರೂ ಬರದಿದ್ದರೆ, ಮಾಡಿದ ಪದಾರ್ಥವನ್ನು ಎಡೆ ಮಾಡಿಸಿಕೊಂಡು, ಹಸ್ತಕ್ಕೆ ಭಸ್ಮ ಲೇಪನವ ಮಾಡಿಕೊಂಡು, ಗುರುವು ಅಪ್ಪಣೆಯ ದಯ ಪಾಲಿಸಿದ ಮಂತ್ರವನ್ನು ಐದು ವೇಳೆ ಉಚ್ಚರಿಸಿ, ಆ ಪದಾರ್ಥಕ್ಕೆ ಸಂಪ್ರೋಕ್ಷಿಸಿ, ಓಗರ ರೂಪವಳಿದು, ಪ್ರಸಾದ ಸ್ವರೂಪವನ್ನು ಮಾಡಿ, ಲಿಂಗಕ್ಕೆ ಮೂರು ವೇಳೆ ಚತುರಂಗುಲ ಪ್ರಮಾಣದಲ್ಲಿ, ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳ ಮಂತ್ರ ಉಚ್ಚರಿಸಿ, ಅರ್ಪಿಸಿ, ಆಮೇಲೆ ಭೋಜ್ಯ ಭೋಜ್ಯಕ್ಕೆ ಮಂತ್ರ ಉಚ್ಚರಿಸುತ್ತ ಲಿಂಗ ನಿರೀಕ್ಷಣೆಯಿಂದ ಅರ್ಪಿತವ ಮಾಡುವುದು. ಆ ವೇಳೆಯಲ್ಲಿ ಬಹು ಮಾತುಗಳನಾಡಲಿ ಕ್ಕಾಗದು. ಪರಶಬ್ದ, ಹಿಂಸಾಶಬ್ದ, ಅಶುಚಿ, ಅಮಂಗಳ ಶಬ್ದ, ವ್ಯಾಪಾರಶಬ್ದ, ವಿಷಯ ಶಬ್ದ, ಹಾಸ್ಯ ಪ್ರಸಂಗದ ಶಬ್ದ, ನ್ಯಾಯದ ಶಬ್ದ, ದುಃಖದ ಶಬ್ದ, ಅಗ್ನಿ ಪ್ರವೇಶದ ಶಬ್ದ, ಇವು ಮೊದಲಾದ ಕನಿಷ್ಟ ಶಬ್ದವ ಕೇಳದೆ ಲಿಂಗಾರ್ಪಿತವ ಮಾಡಿ, ಬಟ್ಟಲ ಖಂಡಿತ ಮಾಡಿ, ಹಸ್ತ ದ್ರವವನಾರಿಸಿದ ಬಳಿಕ ಕರಡಿಗೆಯಲ್ಲಿರುವ ಇಷ್ಟಲಿಂಗವನ್ನು ಮೇಲೆ ಹೇಳಿದ ಪ್ರಕಾರದಲ್ಲಿ ಬಿಜಯಂಗೈಸಿ ಎಡ ಹಸ್ತದಲ್ಲಿ ಮೂರ್ತವ ಮಾಡಿಸಿ, ಅಭಿಷೇಕವ ಮಾಡಿ, ವಿಭೂತಿ ಪತ್ರೆ ಪುಷ್ಪವ ಧರಿಸಿ, ಲೋಭಾನವ ನರ್ಪಿಸಿ, ಹಸ್ತ ಜಪವ ಮಾಡಿ, ನಮಸ್ಕರಿಸಿ ಕರಡಿಗೆಯ ಒಳಗೆ ಮೂರ್ತವ ಮಾಡಿಸಿದಲ್ಲಿಗೆ ಐಕ್ಯ ಸ್ಥಲ ಸಂಬಂಧವಾಗಿರುವುದು. ಎಂದು ಕಲ್ಯಾಣ ಪಟ್ಟಣದಲ್ಲಿ ಜನ್ನ ಬಸವೇಶ್ವರ ಸ್ವಾಮಿಗಳು ಬಸವಣ್ಣ ಮೊದಲಾದ ಪ್ರಮಥ ಗಣಂಗಳಿಗೆ ಅಪ್ಪಣೆಯ ದಯಪಾಲಿಸಿದ ಆಚರಣೆಯ ವಚನ ಸಮಾಪ್ತ.

ಲಿಂಗ ಪೂಜೆಯ ವಿಧಾನಗಳ ಸಮಾಲೋಚನೆ.

ವೀರಶೈವರಲ್ಲಿ ಲಿಂಗಪೂಜೆಯ ಉದ್ದೇಶವು ಆತ್ಮವಿಕಾಸವೇ ಇರುತ್ತದೆ. ಅಂದರೆ ಅದರಿಂದ ತನ್ನನ್ನು ತಾನು ತಿಳಿದುಕೊಂಡು ಆಚರಿಸುವುದೇ ಇರುತ್ತದೆ. ಈ ಉದ್ದೇಶಕ್ಕೆ ಸಹಾಯಕವಾಗಿರುವ ವಿಧಾನಗಳನ್ನು

ಮಾಡುವುದೇ ಲಿಂಗಪೂಜೆಯು. ಪ್ರತಿಯೊಬ್ಬ ಮನುಷ್ಯನಿಗೆ ಸ್ಥೂಲ, ಸೂಕ್ಷ್ಮ, ಕಾರಣಗಳೆಂದು ಮೂರು ಶರೀರಗಳಿರುತ್ತವೆ. ಅವು ಒಂದಕ್ಕೊಂದು ಪರಸ್ಪರಾವಲಂಬಿಗಳಾಗಿವೆ. ಒಂದು ಶರೀರದ ಕಾರ್ಯವು ಕೆಟ್ಟರೆ, ಮತ್ತೊಂದು ಸರಿಯಾಗಿ ವ್ಯವಹರಿಸಲಾರದು. ಆದುದರಿಂದ ಈ ಮೂರೂ ಶರೀರಗಳಲ್ಲಿ ಲಿಂಗ ಚೈತನ್ಯವನ್ನುಂಟು ಮಾಡದ ಹೊರತು ಪರಮಾತ್ಮನನ್ನು ಅರಿಯಲು ಸಾಧ್ಯವಲ್ಲ. ಸ್ಥೂಲ ಶರೀರದಲ್ಲಿ ಪ್ರಜ್ವಲಿಸತಕ್ಕ ಲಿಂಗಕ್ಕೆ ಇಷ್ಟಲಿಂಗವೆಂತಲೂ, ಸೂಕ್ಷ್ಮಶರೀರದಲ್ಲಿ ಪ್ರಜ್ವಲಿಸತಕ್ಕ ಲಿಂಗಕ್ಕೆ ಪ್ರಾಣಲಿಂಗವೆಂತಲೂ, ಕಾರಣ ಶರೀರದಲ್ಲಿ ಪ್ರಜ್ವಲಿಸತಕ್ಕ ಲಿಂಗಕ್ಕೆ ಭಾವಲಿಂಗವೆಂತಲೂ ವಚನಕಾರರು ಹೆಸರುಗಳನ್ನು ಕೊಟ್ಟಿದ್ದಾರೆ. ಈ ದೃಷ್ಟಿಯಿಂದ ಪೂಜಾ ಅರ್ಚನಾದಿಗಳನ್ನು ದಿನಾಲು ಜರುಗಿಸುವದೇ ವೀರಶೈವನ ಕರ್ತವ್ಯವಾಗಿದೆ. ಕೇವಲ ಅಷ್ಟವಿಧಾರ್ಚನೆ ಷೋಡಶೋಪಚಾರಗಳನ್ನು ಲಿಂಗಪೂಜೆಯ ನಿಜವಾದ ಮರ್ಮವನ್ನು ಅರಿಯದೆ ಮಾಡಿದ್ದಾದರೆ, ಏನೂ ಪ್ರಯೋಜನವಾಗಲಾರದು. ಇದನ್ನು ಕೊಸೆಗಾಣಿಸಲು ವಚನಕಾರರು ಈ ಮೂರು ಲಿಂಗಗಳಲ್ಲಿ ಪ್ರತಿಯೊಂದರಲ್ಲಿ ಎರಡೆರಡು ಭಾಗಮಾಡಿ, ಒಟ್ಟಿಗೆ ಆರು ಲಿಂಗಗಳನ್ನು ಕಲ್ಪಿಸಿದ್ದಾರೆ. ಈ ಆರು ಲಿಂಗಗಳು ಯಾವವೆಂದರೆ—

ಇಷ್ಟಲಿಂಗದಲ್ಲಿ ಆಚಾರಲಿಂಗ ಗುರುಲಿಂಗವೆಂತಲೂ, ಪ್ರಾಣಲಿಂಗದಲ್ಲಿ ಶಿವಲಿಂಗ ಜರಲಿಂಗವೆಂತಲೂ, ಭಾವಲಿಂಗದಲ್ಲಿ ಪ್ರಸಾದಲಿಂಗ ಮಹಾಲಿಂಗವೆಂತಲೂ, ಆರು ವಿಭಾಗಗಳು ಮಾಡಲ್ಪಟ್ಟಿವೆ. ಲಿಂಗ ಪೂಜೆಯಲ್ಲಿ ಈ ಆರು ಲಿಂಗಗಳ ಅರ್ಥವನ್ನು ತಿಳಿದು ಆಚರಿಸುವುದು ಅವಶ್ಯವಿದೆ. ಈ ಆರು ಲಿಂಗಗಳ ಅರ್ಥವು ವಚನಕಾರರಿಂದ ಕೆಳಗೆ ಬರೆದ ಮೇರೆಗೆ ವಿವರಿಸಲ್ಪಟ್ಟಿರುತ್ತದೆ.

'ಪಂಚಾಚಾರ ಸ್ವರೂಪವಾದ ಆಚಾರಲಿಂಗ, ಮಂತ್ರಮೂರ್ತಿಯಾದ ಗುರುಲಿಂಗ, ಪರಮ ಪ್ರಕಾಶ ಸ್ವರೂಪವಾದ ಶಿವಲಿಂಗ, ಯಜನಸ್ವರೂಪವಾದ ಜರಲಿಂಗ, ಈಳನ ಸ್ವರೂಪವಾದ ಪ್ರಸಾದಲಿಂಗ, ಜೋಧಾಸ್ವರೂಪವಾದ ಮಹಾಲಿಂಗವಾಗಿ ನೆಲೆಗೊಂಡಿಪ್ಪದು.'

ಮೇಲ್ಕಂಡ ಉಕ್ತಿಯಲ್ಲಿ ಪೂಜಾ ದೃಷ್ಟಿಯಿಂದ ಈ ಆರು ಲಿಂಗಗಳ ಸ್ವರೂಪವು ಹೇಳಲ್ಪಟ್ಟಿದೆ. ಇದನ್ನು ತಿಳಿದುಕೊಂಡು ಈ ಆರು

ಲಿಂಗಗಳನ್ನು ತನ್ನಲ್ಲಿ ಪ್ರಜ್ವಲಿಸುವುದೇ ಈ ಷಟ್‌ಸ್ಥಲಾತ್ಮಕವಾದ ಲಿಂಗಪೂಜೆ ಎಂದಿನಿಸಿಕೊಳ್ಳುತ್ತಿದೆ.

ಆಚಾರಲಿಂಗ.

ಆಚಾರಲಿಂಗವು ಪಂಚಾಚಾರ ಸ್ವರೂಪವೆಂದು ಇಲ್ಲಿ ಹೇಳಲ್ಪಟ್ಟಿದೆ. ಸದಾಚಾರ, ಭೃತ್ಯಾಚಾರ, ಶಿವಾಚಾರ, ನಿಯತಾಚಾರ, ಗಣಾಚಾರ ಇವು ಪಂಚಾಚಾರಗಳು. ಈ ಪಂಚಾಚಾರಗಳನ್ನು ದೃಢಪಡಿಸುವುದರಿಂದ ಆಚಾರ ಲಿಂಗವು ಭಕ್ತನಲ್ಲಿ ನೆಲೆಗೊಳ್ಳಹತ್ತುತ್ತದೆ. ಲಿಂಗಪೂಜೆಯನ್ನು ಮಾಡುವವನು ಶುದ್ಧ ನಡತೆಯುಳ್ಳವನಾಗಿರುವದು ಅತ್ಯಂತ ಆವಶ್ಯವಿರುತ್ತದೆಂದು ತೋರಿಸಲು ಆಚಾರಲಿಂಗದ ವಿವರಣೆಯನ್ನು ವಚನಕಾರರು ಹೀಗೆ ಮಾಡಿದ್ದಾರೆ. ಆದರೆ ಪೂಜಾ ಕ್ರಿಯೆಗಳಲ್ಲಿ ಈ ಆಚಾರ ಲಿಂಗದ ಸ್ಥಾನವನ್ನು ವಚನಕಾರರು ಎಲ್ಲಿ ಇಟ್ಟಿರುವರೆಂಬದನ್ನು ತಿಳಿಯುವದು ಅವಶ್ಯವಿದೆ. ಲಿಂಗ ಪೂಜೆಯ ಹಿಂದಿನ ಅಃ ಈ ವಚನಗಳಿಂದ ಕಂಡುಬರುವದೇನಂದರೆ ಆಚಾರಲಿಂಗದ ಪೂಜೆಯನ್ನು ಪೂಜೆಯ ಪೂರ್ವದಲ್ಲಿ ದೇಹ ಶುದ್ಧಿಗೋಸ್ಕರ ಮಾಡವ ಕ್ರಿಯೆಗಳಲ್ಲಿ ಎಂದರೆ ಸ್ಥಲಸಮ್ಮಾರ್ಜನೆ, ಸ್ನಾನ, ಪದಾರ್ಥ ಶುದ್ಧಿ, ವಿಭೂತಿ ರುದ್ರಾಕ್ಷ ಧಾರಣ, ಪ್ರಣಮ ಸಂಬಂಧ, ನ್ಯಾಸ ಇಂಥ ಕ್ರಮಗಳಲ್ಲಿ ಇಟ್ಟಿರುವರೆಂದು ತಿಳಿದುಬರುತ್ತದೆ. ಆದುದರಿಂದ ಲಿಂಗಪೂಜಾ ಕಾಲದಲ್ಲಿ ಈ ಕಾರ್ಯಗಳನ್ನು ಮಾಡುವುದರಲ್ಲಿಯೇ ಆಚಾರಲಿಂಗದ ಪ್ರಜ್ವಲನೆಯು ಇರುತ್ತದೆ. ಈ ರೀತಿಯಾಗಿ ವರ್ತಿಸುವುದರಿಂದ ಮನುಷ್ಯನ ದೇಹ ಮತ್ತು ಮನಸ್ಸು ಒಂದು ತರದ ನಿರ್ಮಲತೆಯನ್ನು ಹೊಂದಿ ನಿತ್ಯದ ಕ್ರಿಯೆಗಳನ್ನು ಶುದ್ಧವಾದ ರೀತಿಯಿಂದ ಮಾಡಲು ಉತ್ಸಾಹಭರಿತನಾಗುತ್ತಾನೆ. ಇದು ಆಚಾರಲಿಂಗದ ಸಾಧನೆಯು. ಇದು ಭಕ್ತಸ್ಥಲವು.

ಗುರುಲಿಂಗ.

ಗುರುಲಿಂಗವು ಮಂತ್ರಮೂರ್ತಿಯೆಂದು ಮೇಲ್ಕಂಡ ವಚನದಲ್ಲಿ ಹೇಳಿದೆ. ಗುರುವು ದೀಕ್ಷೆಯ ಕಾಲದಲ್ಲಿ ಭಕ್ತನಿಗೆ ಮಂತ್ರೋಪದೇಶವನ್ನು ಮಾಡುತ್ತಾನೆ. ಇದರ ಪ್ರಭಾವದಿಂದ ಆ ಶಿಷ್ಯನು ಲಿಂಗದ ಶ್ರೇಷ್ಠ ತರದ ಚೈತನ್ಯವನ್ನು ಒಳಕೊಳ್ಳುತ್ತಾನೆ. ಹೀಗೆ ಈ ಮಂತ್ರವನ್ನು ಧ್ಯಾನಿ

ಸುವುದು ಭಕ್ತನ ಕರ್ತವ್ಯವು. ಇದನ್ನು ಜಪಿಸುವುದರಿಂದ ಗುರುಲಿಂಗವು ಪೂಜಕನಲ್ಲಿ ಪ್ರಜ್ವಲಿಸುತ್ತ ಹೋಗುತ್ತದೆ. ಇದು ಲಿಂಗಪೂಜೆಯ ಎರಡನೆಯ ಭಾಗವು. ಮಹೇಶ್ವರ ಸ್ಥಲಕ್ಕೆ ಸಂಬಂಧಿಸಿದಂತಹದು.

ಈ ಎರಡು ಕ್ರಿಯೆಗಳು ಮನುಷ್ಯನ ಸ್ಥೂಲ ಶರೀರಕ್ಕೆ ಸಂಬಂಧಪಟ್ಟವಿರುತ್ತವೆ. ಇದರಿಂದ ಅವನ ಬಹಿರಂಗ ಕ್ರಿಯೆಗಳು ಶುದ್ಧವಾಗುತ್ತ ಹೋಗುತ್ತವೆ.

ಶಿವಲಿಂಗ.

ಶಿವಲಿಂಗವು ಪರಮ ಪ್ರಕಾಶ ಸ್ವರೂಪವೆಂದು ಮೇಲ್ಕಂಡ ವಚನದಲ್ಲಿ ಹೇಳಿದೆ. ಈ ಲಿಂಗವು ಮನಸ್ಸಿಗೆ ಸಂಬಂಧಪಟ್ಟದ್ದಿರುತ್ತದೆ. ಇಷ್ಟಲಿಂಗವನ್ನು ಭಕ್ತನು ಕರಸ್ಥಲದಲ್ಲಿಟ್ಟುಕೊಂಡು ಅದನ್ನು ಏಕಾಗ್ರಚಿತ್ತದಿಂದ ಧ್ಯಾನಿಸುವುದರಿಂದ ಪ್ರಕಾಶಸ್ವರೂಪವಾದ ಈ ಶಿವಲಿಂಗವು ಭಕ್ತನಿಗೆ ದೃಗ್ಗೋಚರವಾಗಹತ್ತುತ್ತದೆ. ಈ ಕ್ರಿಯೆಯನ್ನು ಅನುಸರಿಸುವುದರಿಂದ ಮನುಷ್ಯನು ತನ್ನ ಚಿತ್ತವನ್ನು ನಿಗ್ರಹಿಸಲು ಸಮರ್ಥನಾಗುತ್ತಾನೆ. ಇದು ಲಿಂಗಪೂಜೆಯ ಮೂರನೆಯ ಭಾಗವಿರುತ್ತದೆ. ಇದು ಶಿವಲಿಂಗ ಸಾಧನೆಯು. ಇದು ಪ್ರಸಾದಿಸ್ಥಲವು.

ಚರಲಿಂಗ ಅಥವಾ ಜಂಗಮಲಿಂಗ

ಚರಲಿಂಗವು ಯಜನ ಸ್ವರೂಪವೆಂದು ಮೇಲ್ಕಂಡ ವಚನದಲ್ಲಿ ಹೇಳಲ್ಪಟ್ಟಿದೆ. ಎಂದರೆ ಅರ್ಚನೆ, ಪೂಜೆ ಇವುಗಳಿಂದ ಸಾಧ್ಯವಾಗುವದೆಂದು ಇದರ ಭಾವವು. ಅರ್ಚನೆ ಪೂಜನೆಯಿಂದ ಪ್ರಪಂಚದಲ್ಲಿ ವ್ಯಗ್ರವಾದ ಮನುಷ್ಯನ ಮನಸ್ಸು ಪರಮಾತ್ಮನತ್ತ ಹೊರಳುವುದು. ಅದು ಮನುಷ್ಯನ ಮನಸ್ಸಿನ ಚಂಚಲತೆಯನ್ನು ದೂರವಾಡುವುದು. ಆದ್ದರಿಂದ ಇದು ಮನಶ್ಶುದ್ಧಿಗೆ ಕಾರಣವು. ಈ ರೀತಿಯ ಕ್ರಿಯೆಗಳಿಂದ ಮನಸ್ಸಿನಲ್ಲಿ ಮೊದಲು ನೆಲೆಗೊಂಡ ಶಿವಲಿಂಗವು ಮತ್ತಿಷ್ಟು ದೃಢತೆಯನ್ನು ಹೊಂದುವದು. ಹೀಗೆ ಪ್ರಸಾದಿ ಸ್ಥಲದಲ್ಲಿ ಮೂಡಿದ ಶಿವಲಿಂಗವು ಪ್ರಾಣಲಿಂಗ ಸ್ಥಿತಿಯನ್ನು ಹೊಂದುವದು. ಆದ್ದರಿಂದ ವಚನಕಾರರು ಈ ಪೂಜಾ ಅರ್ಚನೆಗಳನ್ನು ಪ್ರಾಣಲಿಂಗಿ ಸ್ಥಲಕ್ಕೆ ಸೇರಿಸಿರುತ್ತಾರೆ.

ಈ ಪ್ರಕಾರ ಶಿವಲಿಂಗ ಮತ್ತು ಚರಲಿಂಗಗಳನ್ನು ತನ್ನಲ್ಲಿ ಪ್ರಜ್ವಲಗೊಳಿಸುವುದೇ ಪ್ರಾಣಲಿಂಗದ ಪೂಜೆಯು.

ಪ್ರಸಾದಲಿಂಗ.

ಪ್ರಸಾದ ಲಿಂಗವು ಐದನೆಯ ಲಿಂಗವಾಗಿದೆ. ಇದು ಈಳನ ಸ್ವರೂಪವೆಂದು ಮೇಲ್ಕಂಡ ವಚನದಲ್ಲಿ ಹೇಳಲ್ಪಟ್ಟಿದೆ. ಈಳನವೆಂದರೆ ಪರಮಾತ್ಮನ ಗುಣಕೀರ್ತನೆಯನ್ನು ಮಾಡುವುದು. ಹೀಗೆ ಪ್ರಾರ್ಥನೆ ಮಾಡುವ ಕಾರ್ಯವನ್ನು ವಚನಕಾರರು ಐದನೆಯ ಸ್ಥಲವಾದ ಶರಣಸ್ಥಲಕ್ಕೆ ಹಾಕಿದ್ದಾರೆ. ಇದರ ಮೇಲಿಂದ ಪರಮಾತ್ಮನನ್ನು ಪ್ರಾರ್ಥಿಸುವ ಕಾರ್ಯಕ್ಕೆ ವಚನಕಾರರು ಎಷ್ಟು ಮಹತ್ವಕೊಟ್ಟಿರುವರೆಂಬದು ತಿಳಿದುಬರುತ್ತದೆ. ಪ್ರಾರ್ಥನೆಯಲ್ಲಿ ಭಕ್ತನು ತನ್ನ ಸರ್ವಸ್ವವನ್ನು ಒಪ್ಪಿಸಿ ಭಕ್ತಿಯಿಂದ ತುಂಬಿ ತುಳುಕುವಂಥವನಾಗುತ್ತಾನೆ. ಈತನು ಶರಣನು. ಇದು ಲಿಂಗಪೂಜೆಯ ಐದನೆಯ ಭಾಗವು. ಇದರಿಂದ ಪ್ರಸಾದಲಿಂಗವು ಪ್ರಜ್ವಲಿಸುತ್ತ ಹೋಗುತ್ತದೆ.

ಮಹಾಲಿಂಗ.

ಮಹಾಲಿಂಗವು ಬೋಧಾಸ್ವರೂಪವೆಂದು ಮೇಲ್ಕಂಡ ವಚನದಲ್ಲಿ ಹೇಳಲ್ಪಟ್ಟಿರುತ್ತದೆ. ಬೋಧಾ ಸ್ವರೂಪದಲ್ಲಿ ಪರಮಾತ್ಮನೊಡನೆ ಏಕಾಕಾರ ಭಾವದಿಂದ ಭಕ್ತನು ವರ್ತಿಸತಕ್ಕದ್ದು. ಆಗ ಆತನು ಲಿಂಗಾನಂದದೊಡನೆ ಕೂಡಿಕೊಂಡು ತಾನೇ ತಾನಾಗಿರುತ್ತಾನೆ. ಆಗ ಆತನು ತನ್ನನ್ನು ಮರೆತು ಪರಮಾತ್ಮನಲ್ಲಿ ಮಗ್ನನಾಗಿರುತ್ತಾನೆ. ಇದು ಲಿಂಗಪೂಜೆಯ ಕಡೆಯ ಸ್ಥಲವು. ಅಂದರೆ ಐಕ್ಯಸ್ಥಲವು. ಈ ರೀತಿಯ ವ್ಯವಹರಣೆಯಿಂದ ಪೂಜಕನಲ್ಲಿ ಮಹಾಲಿಂಗವು ಒಳಕೊಳ್ಳಹತ್ತುತ್ತದೆ. ಹೀಗೆ ಪ್ರಸಾದಲಿಂಗ ಮತ್ತು ಮಹಾಲಿಂಗಗಳನ್ನು ಒಳಕೊಳ್ಳುವುದೇ ಭಾವಲಿಂಗದ ಪೂಜೆಯು.

ಈ ಮೇರೆಗೆ ಲಿಂಗಪೂಜೆಯಲ್ಲಿ ಆರು ವಿಭಾಗಗಳು ಇರುತ್ತವೆ. ಅವುಗಳ ಮರ್ಮಗಳನ್ನು ಪೂಜಕನು ತಿಳಿದುಕೊಂಡು ತನ್ನ ಪೂಜಾಕಾರ್ಯಗಳಲ್ಲಿ ತೊಡಗುವುದೇ ವೀರಶೈವನ ಕರ್ತವ್ಯವು.

ಲಿಂಗಪೂಜೆಯ ವಿಧಾನಗಳ ನಿಜಸ್ವರೂಪು.

ಜಪ.

೮೭. ತಿಳಿಯದೆ ಜಪಿಸಿದ ಮಂತ್ರ ನಿಷ್ಫಲವಾದುದು ನೋಡಾ ಗುರುವೇ. ಪ್ರಣಮ ಪಲ್ಲವಗಳರಿದು ಜಪಿಸುವುದದು ಫಲ ನೋಡಾ ಗುರುವೇ. ಇದರಂದವ ತೋರಿದ ಎನ್ನಗುರು ಚನ್ನಬಸವ ನೋಡಾ ಗುರುವೇ ಕಪಿಲಸಿದ್ಧ ಮಲ್ಲಿಕಾರ್ಜುನ ಗುರುವೇ.

೮೮. ಭಕ್ತನಾದರೇನು? ಮಹೇಶನಾದರೇನು? ಮೊದಲಲ್ಲಿ ಭಕ್ತಿಯ ಜಪವೇ ಜಪ ನೋಡಾ! ಭಕ್ತನಾದರೇನು? ಮಹೇಶನಾದರೇನು? ಕಡೆಯಲ್ಲಿ ಶಿವಜಪವೇ ಜಪ ನೋಡಾ! ಜಪರೀತಿ ಜಪಲಕ್ಷಣ ಜಪಪ್ರಣಮಗಳನರಿಯದೆ ತಾಪತ್ರಯಕ್ಕೊಳಗಾಗಿ ಭವಕ್ಕೀಡಾದರು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೮೯. ಜಪಿಸಬೇಕು, ಜಪಿಸಬೇಕು ದೇಹ ನಾನಲ್ಲೆಂಬ. ಜಪಿಸಬೇಕು, ಜಪಿಸಬೇಕು ಜೀವಾತ್ಮ ಸಾಕ್ಷಿ ಅಲ್ಲೆಂಬ. ಜಪಿಸಬೇಕು, ಜಪಿಸಬೇಕು ನಾ ಚನ್ನಬಸವನೆಂಬ. ಜಪಿಸಬೇಕು, ಜಪಿಸಬೇಕು ಕಪಿಲಸಿದ್ಧ ಮಲ್ಲಿಕಾರ್ಜುನ ಪಾದಪದ್ಮಭ್ರಮರನೆಂಬ.

೯೦. ಜಪಿಸಬಾರದು, ಜಪಿಸಬಾರದು ಕುಮಂತ್ರಂಗಳ. ಜಪಿಸಬಾರದು, ಜಪಿಸಬಾರದು ಮೋಹನದ ಮಂತ್ರಂಗಳ. ಜಪಿಸಬಾರದು ಮಾರಣ ಮಂತ್ರಂಗಳ. ಜಪಿಸಬೇಕು, ಜಪಿಸಬೇಕು ಮಲ್ಲಿಕಾರ್ಜುನಾಯ ನಮಃ ಎಂದು ಕೇಳಾ ಕೇದಾರ ಗುರುದೇವಾ.

ನಿಯಮಗಳು.

೯೧. ದೇವರಿಗೆ ಕೃಷಿಯ ನೇಮಕ ಮಾಡುವರಲ್ಲದೆ ದೇವರ ಪ್ರಥಮ ಮುಖ ಭೂಮಿ ಎಂದರಿಯರೀ ಲೋಕ. ದೇವರಿಗೆ ನದಿಯ ಜಲವೆರೆಯ ಬೇಕೆಂಬ ನೇಮವ ಮಾಡುವರಲ್ಲದೆ ದೇವರ ದ್ವಿತೀಯ ಮುಖ ಜಲವೆಂದರಿಯರೀ ಲೋಕ. ದೇವರಿಗೆ ದೀವಿಗೆಯ ನೇಮಕ ಮಾಡುವರಲ್ಲದೆ ದೇವರ ತೃತೀಯ ಮುಖ ಜ್ಯೋತಿ ಎಂಬುದರಿಯರೀ ಲೋಕ. ದೇವರಿಗೆ ತಾಲವೃಂತದ ನೇಮಕ ಮಾಡುವರಲ್ಲದೆ ದೇವರ ಚತುರ್ಮುಖವೇ ವಾಯುವೆಂದರಿಯರೀ ಲೋಕ. ದೇವರಂಗೆ ಆಶ್ರಯ ಮಾಡಬೇಕೆಂಬ

ನೇಮಕವ ಮಾಡುವರಲ್ಲದೆ ದೇವರ ಪಂಚಮುಖವೇ ಆಕಾಶವೆಂಬುದರಿಯರೀ ಲೋಕ. ದೇವರಿಗೆ ಪ್ರಾಣಪ್ರತಿಷ್ಠೆಯ ಮಂತ್ರ ಹೇಳುವರಲ್ಲದೆ, ದೇವರ ಆರನೆಯ ಮುಖ ಆತ್ಮಪ್ರಾಣವೆಂಬುದರಿಯರೀ ಲೋಕ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೯೨. ಪತ್ರೆಯ ನೇಮದವರು ಒಂದು ಕೋಟಿ. ಲಿಂಗಾರ್ಚನೆಯ ನೇಮದವರು ಒಂದು ಕೋಟಿ. ಜಂಗಮ ತೃಪ್ತಿಯವರು ಒಂದು ಕೋಟಿ. ತನ್ನ ತಾ ತಿಳಿಯುವ ನೇಮದವರು ಒಬ್ಬರೂ ಇಲ್ಲವಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೯೩. ಪತ್ರೆಯ ನೇಮದವರು ನೋಡಯ್ಯ ಪಶು ಆಡುಗಳು. ಲಿಂಗಾರ್ಚನೆಯ ನೇಮದವರು ನೋಡಯ್ಯ ಚತುರ್ವರ್ಣದವರು. ಜಂಗಮ ಸಂತೃಪ್ತಿಯವರು ನೋಡಯ್ಯ ಭಕ್ತರು. ತನ್ನ ತಾ ತಿಳಿವ ನೇಮದವರು ನೋಡಯ್ಯ ವೀರಶೈವಾಗ್ರಗಣ್ಯರು ಕಪಿಲಸಿದ್ಧಮಲ್ಲಿಕಾರ್ಜುನಾ.

ಆಸನಗಳು.

೯೪. ಇನ್ನು ಆಸನಭೇದವೆಂತೆಂದೊಡೆ, ಒಂದು ಹಿಮ್ಮಡದಿಂದ ಯೋನಿಸ್ಥಾನವನೊತ್ತಿ, ಮತ್ತೊಂದು ಹಿಮ್ಮಡದಿಂ ಮೇಢ್ರದ ಮೇಲಿರಿಸಿ ಏಕಚಿತ್ತನಾಗಿ ಋಜುಕಾಯನಾಗಿ ಭ್ರೂಮಧ್ಯದಲ್ಲಿ ದೃಷ್ಟಿಯುಳ್ಳಾತನಾಗಿರುವುದೇ ಸಿದ್ಧಾಸನವೆನಿಸಿತು.

ಎರಡು ತೊಡೆಗಳ ಮೇಲೆ ಎರಡು ಪಾದಂಗಳಂ ಮೇಲು ಮೇಲು ಮುಖವಾಗಿರಿಸಿ, ಎರಡು ಕಂಗಳ ನಡುವೆ ಮೇಲು ಮುಖವಾಗಿರಿಸಿ ರಾಜಿಪ ದಂತಗಳ ನಡುವೆ ರಸನಾಗ್ರವನಿಟ್ಟು ನಾಸಾಗ್ರದೃಷ್ಟಿಯಿಂದಿಹುದೇ ಪದ್ಮಾಸನವೆನಿಸುವುದು.

ಎರಡು ಕಿರುದೊಡೆಗಳ ಸಂದಿಗಳಲ್ಲಿ ಎರಡು ಪಾದಗಳನಿರಿಸಿ ಋಜುಕಾಯನಾಗಿಹುದೇ ಸ್ವಸ್ತಿಕಾಸನವೆನಿಸುವುದು.

ಮೇಢ್ರದ ಮೇಲೆ ಎಡದ ಹಿಮ್ಮಡವನಿರಿಸಿ ಅದರಮೇಲೆ ಬಲಹಿಮ್ಮಡವನಿರಿಸಿ ಋಜುಕಾಯನಾಗಿಹುದೇ ಮುಕ್ತಾಸನವೆನಿಸುವುದು.

ಎಡದ ಹಿಮ್ಮಡವಂ ಬಲದ ಹಿಮ್ಮಡ ಉದರದೊಳಿರಿಸಿ ಜಾನುಗಳಿರಡನ್ನು ಗೋಮುಖಾಕಾರವಾಗಿ ಮಾಳ್ಪುದೇ ಗೋಮುಖಾಸನವೆನಿಸುವುದು.

ಸಕಲಾಸನಂಗಳಿಂದ ಯೋಗಮಂ ಸಾಧಿಸುವುದೇ ಆಸನಯೋಗ ನೋಡಾ ಅಖಂಡೇಶ್ವರಾ.

ಆಹ್ವಾನ ವಿಸರ್ಜನೆಗಳಿಲ್ಲ.

೯೫ ಆಹ್ವಾನವಿಲ್ಲದ ಪ್ರಾಣಲಿಂಗವಾಗಿ ವಿಸರ್ಜನವಿಲ್ಲದ ಲಿಂಗ ನೆಲೆಗೊಂಡಿಪ್ಪುದಾಗಿ, ಇದು ಕಾರಣ ಆಹ್ವಾನ ವಿಸರ್ಜನವಿಲ್ಲದ ಶರಣರ ಪರಿ ಬೇರೆ. ಅಂಗ ಸಂಗವೇ ಲಿಂಗ, ಲಿಂಗ ಸಂಗವೇ ಮನ. ಕೂಡಲ ಚನ್ನಸಂಗನ ಶರಣನು ಸುಯಿಧಾನಿ.

೯೬. ಆಹ್ವಾನಿಸುವಲ್ಲಿ ಪ್ರಾಣಲಿಂಗವಿಲ್ಲ. ವಿಸರ್ಜಿಸುವಲ್ಲಿ ಲಿಂಗವಂತನೆಂತೆಂಬೆ? ಆಹ್ವಾನ ವಿಸರ್ಜನವಿಲ್ಲದ ಪರಿ ಬೇರೆ. ಲಿಂಗ ಭೋಗೋಪಭೋಗವಿಲ್ಲದ ಅನರ್ಪಿತವ ಭೋಗಿಸುವನಲ್ಲ. ಆವಾಗಲೂ ಪ್ರಾಣಲಿಂಗದ ಸಂಗದಲ್ಲಿಪ್ಪನು. ಇದು ಕಾರಣ ಕೂಡಲಚನ್ನಸಂಗಯ್ಯನಲ್ಲಿ ನಮ್ಮ ಶರಣಂಗೆ ನವೋ ನವೋ ಎಂಬೆನು.

೯೭. ಜ್ಞಾನವೇ ಪ್ರಸಾದಕಾಯ. ಜ್ಞೇಯವೇ ಚಿನ್ಮಯ ಲಿಂಗ. ಜ್ಞಾನ ಜ್ಞೇಯ ಸಂಪುಟದಿಂದ ಶರಣನೆನಿಸಿಕೊಂಡು ಆ ಜಂಗಮದ ಅಂತರಂಗದಲ್ಲಿ ನೀನೇ, ಬಹಿರಂಗದಲ್ಲಿ ನೀನೇ. ಎಂತು ನೋಡುವರೆ ಶರಣನ ಕಣ್ಣೆವೊದಲಲ್ಲಿ ನೀನೇ. ಶಿವಜ್ಞಾನಸಂಪನ್ನನಾದ ಶರಣಂಗೆ ಆಹ್ವಾನ ವಿಸರ್ಜನವೆಲ್ಲಿಯದೋ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ?

ಲಿಂಗಪೂಜೆಯಲ್ಲಿ ಗುರುಪೂಜೆ, ಲಿಂಗಪೂಜೆ, ಜಂಗಮಪೂಜೆ.

೯೮. ಮಾಡುವ ಸದಾಚಾರಕ್ಕೆ ಮೊದಲನೆಯ ಲಿಂಗಪೂಜೆ ಗುರು ಪೂಜೆ. ಮಾಡುವ ಸದಾಚಾರಕ್ಕೆ ಎರಡನೆಯ ಲಿಂಗಪೂಜೆಯೇ ಲಿಂಗ ಪೂಜೆ. ಮಾಡುವ ಸದಾಚಾರಕ್ಕೆ ಮೂರನೆಯ ಪೂಜೆಯೇ ಜಂಗಮ ಪೂಜೆ. ಮಾಡುವ ಸದಾಚಾರಕ್ಕೆ ಮೂರು ಪೂಜೆ. ಈ ಪೂಜೆ ಅನಂತ ಜನ್ಮ ದುರಿತಧ್ವಂಸ ನೋಡಾ ಕೂಡಲಚನ್ನಸಂಗಮದೇವ ಸಾಕ್ಷಿಯಾಗಿ.

ಲಿಂಗಪೂಜೆಯಲ್ಲಿ ಸಮರಸಭಾವ.

೯೯. ತಾನೇ ಗುರುವಾಗಿ ಭಕ್ತಿಯ ಮಾಡುತ್ತಿಪ್ಪನು. ತಾನೇ ಲಿಂಗವಾಗಿ ಲಿಂಗಪೂಜೆಯ ಮಾಡುತ್ತಿಪ್ಪನು. ತಾನೇ ಜಂಗಮವಾಗಿ ಜಂಗಮಪೂಜೆಯ ಮಾಡುತ್ತಿಪ್ಪನು. ತಾನೇ ಪಾದೋದಕ ಪ್ರಸಾದವಾಗಿ ಪಾದೋದಕ ಪ್ರಸಾದ ಸೇವನೆಯ ಮಾಡುತ್ತಿಪ್ಪನು. ತಾನೇ ವಿಭೂತಿ

ರುದ್ರಾಕ್ಷಿಯಾಗಿ ವಿಭೂತಿ ರುದ್ರಾಕ್ಷಿಯ ಧರಿಸುತ್ತಿಪ್ಪನು. ತಾನೇ ಮಂತ್ರವಾಗಿ ಮಂತ್ರವ ಜಪಿಸುತ್ತಿಪ್ಪನು. ಇಂತೀ ಅಷ್ಟಾವರಣವೇ ಲಿಂಗವಾಗಿ ಅಷ್ಟಾವರಣವೇ ಸಂಗವಾಗಿ ಅಷ್ಟಾವರಣವೇ ಸಮರಸವಾಗಿ ಇರುವ ಸದ್ಭಕ್ತನು ಸಾಕ್ಷಾತ್ ಪರವಸ್ತುವು ತಾನೇಯಯ್ಯಾ ಅಖಂಡೇಶ್ವರಾ.

೧೦೦. ಅಯ್ಯ ನಿರವಯ ಶೂನ್ಯಮೂರ್ತಿ ಗುಹೇಶ್ವರಾ ಲಿಂಗಕ್ಕೆ ಎನ್ನ ಅಷ್ಟತನುವೇ ಅಷ್ಟ ವಿಧಾರ್ಚನೆಯಾಗಿ, ಎನ್ನ ಅಷ್ಟಾತ್ಮ ಅಷ್ಟ ಕರಣಂಗಳೇ ಷೋಡಶೋಪಚಾರವಾಗಿ, ಶರಣಸತಿ ಲಿಂಗಪತಿ ಎಂಬ ಉಭಯ ಭೇದವಳಿದು ಏಕವಾಗಿ, ಎಲೆಗಳಿದ ವೃಕ್ಷದಂತೆ ಉಲುಹಡಗಿರ್ದೆನಯ್ಯ. ತೆರೆಯಳಿದ ಅಂಬುಧಿಯಂತೆ ಪರಮಚಿಜ್ಞನಗುರು ಶಿವಸಾಗರದೊಳಗೆ ಮುಳುಗಿ ಪರಮ ಚಿದ್ಗಂಭೀರನಾಗಿರ್ದೆನಯ್ಯ. ಘಟವಳಿದ ಆಕಾಶದಂತೆ ಬಚ್ಚಬರಿಯ ಬಯಲಾಗಿ ನಿಶ್ಚಲವಾಗಿರ್ದೆನಯ್ಯ. ಪಟವಳಿದ ಚಿತ್ರದಂತೆ ನಿರ್ಮಲನಿರಾವರಣನಾಗಿ ಶುದ್ಧ ವಿಮಲ ಬ್ರಹ್ಮನಾಗಿ ಪ್ರತಿಯಿಲ್ಲದಪ್ರತಿಮ ಅನುವಿಷ ಅನುಪಮ ಅಪ್ರಮಾಣ ಅನಾಮಯ ಅಗಣಿತ ಅಜಲಾನಂದ ದಿವ್ಯ ನಿಃಕಳಂಕ ನಿರ್ಮಾಯ ನಿರಾಲಂಬ ನಿರ್ಗುಣ ನಿತ್ಯಮುಕ್ತಿ ನಿತ್ಯ ತೃಪ್ತ ನಿಶ್ಚಿಂತ ನಿಃಕಾಮ್ಯ ನಿಜ ಷಡ್ಗುಣೈಶ್ವರ್ಯ ಮಪ್ಪುರು ಸಂಗನಬಸವಣ್ಣನ ಚಿದ್ಬೆಳಗಿನ ಬಯಲೊಳಗೆ ಬಯಲಪ್ಪದು ತಪ್ಪದು ನಿಮ್ಮ ಕೃಪೆಯಿಂದ ನೋಡಾ ಚನ್ನಬಸವಣ್ಣ.

ಲಿಂಗಾನುಸಂಧಾನ.

೧೦೧. ಪಶ್ಚಿಮ ಪದ್ಮಾಸನವಲ್ಲಿ ಕುಳ್ಳಿತ್ತು, ನಿಟ್ಟಿಲುವ ಮುರಿದು ತುಟಿ ಮಿಡುಕದೆ ಅಟ್ಟಿಯಾಡಿತ್ತಲ್ಲಾ. ಬಿಟ್ಟ ಕಣ್ಣು, ಬಿಗಿದ ಹುಬ್ಬು, ಬ್ರಹ್ಮರಂಧ್ರದಲ್ಲಿ ಕಟ್ಟು ಗುಡಿಯ. ಕೂಡಲ ಸಂಗಮದೇವ ಹಿಡಿವಡೆದ.

೧೦೨. ಆಸೆ ರೋಷ ಹರುಷಾದಿಗಳೆಂಬ ಕರಣೇಂದ್ರಿಯವ ಮುಟ್ಟಲೀಯದೆ, ಆಚಾರವ ಶಿವಾಚಾರವ ಮಾಡುವೆ. ಭಯ ಭಕ್ತಿಯಿಂದ ತೋರುವೆ. ಮನದಲ್ಲಿ ವಂಚನೆ ಇಲ್ಲದೆ ಭಾವ ಶುದ್ಧ ಪೂಜೆಯ ಮಾಡುವೆ. ಎನ್ನ ಪ್ರಾಣ ಶಕ್ತಿಯಿಂದ ಕೂಡುವೆ ಕೂಡಲ ಸಂಗಮ ದೇವರ.

೧೦೩. ಪೃಥ್ವಿಯಪ್ಪು ತೇಜ ವಾಯ್ವಾಕಾಶ ನಿರಂಜನದೇವಾ? ನಿಮ್ಮ ಮಹಿಮೆಯ ಪ್ರಣವರೂಪಂಗಲ್ಲದೆ ಕಾಣಲಾರಿಗೆಯೂ ಬಾರದಯ್ಯ. ಜ್ಞಾನ ಜ್ಯೋತಿಯ ಧ್ಯಾನದಿಂದ ನಾಳ ಶುದ್ಧದ್ವಾರನಾಗಿ, ಆರಾಧಿಸಿ ಕಂಡೆ ನಮ್ಮ ಕೂಡಲ ಸಂಗನು ದೇವನ.

೧೦೪. ಕಂದದ ಹೂವನೆ ಕೊಯ್ದು ನಂದದಾರತಿಯ ಬೆಳಗಿ ಆಂದವಳಿಯದೆ ಬಿಂದು ತುಳುಕದೆ ನಂದಿ ಮುಂದುಗೆಡದ ಮುನ್ನಪ ಕಂದದ ಹೂವಿನ ಪೂಜೆಯ ಲಿಂಗ ಮಧ್ಯದಿ ತಿಳಿದು ನೋಡಿ ಮೇಲು ಗಿರಿಯ ಮೇಲಿಹ ಆಕಳಿದ ಕ್ಷೀರದಲ್ಲಿ ಆಡಿಗೆಯನೆ ಮಾಡಿ ನಮ್ಮ ಕೂಡಲ ಚನ್ನ ಸಂಗಯ್ಯನೆಂಬ ಲಿಂಗಕ್ಕೆ ಆರೋಗಣೆಯನೆಸಗಿಹನು.

೧೦೫. ಅಧ್ಯಾತ್ಮ ಅಧ್ಯಾತ್ಮವೆಂಬಿರಿ. ಅಧ್ಯಾತ್ಮವಾರಿಗೆ? ಶ್ರೀ ಗುರು ಸ್ವಾಮಿ ಬಹಳವಪ್ಪ ಶಿವಲಿಂಗವ ಸೂಕ್ಷ್ಮವ ಮಾಡಿ ಕರಸ್ಥಲದಲ್ಲಿ ಕೊಟ್ಟ ಬಳಿಕ ಬೇರೆ ಯೋಗವುಂಟೇ? ತನ್ನ ಹಸ್ತವ ಮಸ್ತಕದಲ್ಲಿಟ್ಟ ವಾಯು ಪ್ರಾಣವಾಗಿದ್ದುವ ಕೊಂದು ಲಿಂಗಪ್ರಾಣಿಯ ಮಾಡಿದ ಬಳಿಕ ಅಕ್ಷಪ್ಟಿದ ರಲ್ಲಿ ಮುಕ್ತನ ಮಾಡಿದ ಬಳಿಕ ಮರಳಿ ಯೋಗವುಂಟೇ, ಶಿವಯೋಗವ ಲ್ಲದೆ? ಇಂತಪ್ಪವನತಿಗಳಿದು ಶುದ್ಧ ಶಿವಯೋಗವ ಮಾಡಿದಾತ ಚೆನ್ನಬ ಸವಣ್ಣ. ಮಹಾಲೋಕದಲ್ಲಿಪ್ಪ ಅಕ್ಷರದ್ವಯವ ಭೇದಿಸಿ ತಂದು ಕರಸ್ಥಲ ದಲ್ಲಿರಿಸಿ ಇದು ಉರುತರ ಪದವೆಂದು ತೋರಿಕೊಟ್ಟ. ಎನ್ನ ತನ್ನಂತೆ ಮಾಡಿದ ಗುರುವೇ ಚನ್ನ ಬಸವಣ್ಣ. ಆನು ಚನ್ನಬಸವಣ್ಣನ ಕರುಣ ದಿಂದ ಅಭ್ಯಾಸ ಯೋಗವನತಿಗಳಿದು ಶಿವಯೋಗದಲ್ಲಿ ನಿತ್ಯನಾಗಿ ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನೆಂಬ ಷಟ್ಸ್ಥಲಕ್ಕೆ ಅಧಿಕಾ ರಿಯಾದೆ. ನಿನ್ನವರ ಸಲುಗೆಗೆ ಸಂದೆ. ಚನ್ನಬಸವಣ್ಣನ ಕೃಪೆ ಎನ್ನನಿಂತು ಮಾಡಿತ್ತು ಕಾಣಾ ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನಾ.

೧೦೬. ಪ್ರಾಣವಾಯು ನೇತ್ರನಾಳ, ಅಪಾನವಾಯು ಜಿಹ್ವಾನಾಳ, ವ್ಯಾನ ವಾಯು ಅಧಮನಾಳ, ಉದಾನ ವಾಯು ಆ ಕಮಳನಾಳ, ಸಮಾನ ವಾಯು ಮುಖನಾಳ, ನಾಗವಾಯು ಶ್ರೋತ್ರನಾಳ, ಕೂರ್ಮ ವಾಯು ಕಂಠನಾಳ, ಕ್ರಕರವಾಯ ಚಂದ್ರನಾಳ, ದೇವದತ್ತ ವಾಯು ಸೂರ್ಯನಾಳ, ಧನಂಜಯವಾಯು ಭ್ರಹ್ಮನಾಳ, ಇಂತಿವು ದಶವಾಯು ಗಳಿಹ ಸ್ಥಾನವು. ಪ್ರಾಣವಾಯು ಹರಿದಲ್ಲಿ ಲಿಂಗಪ್ರಾಣಮುಂ ಮರೆದು, ತನು ಮನ ಧನವೇ ಪ್ರಾಣವಾಗಿಹುದು. ಅಪಾನವಾಯು ಹರಿದಲ್ಲಿ ಲಿಂಗ ಬಯಕೆಯಂ ಬಿಟ್ಟು, ಷಡುರಸಾನ್ನದ ಮೇಲೆ ಬಯಕೆಯಾಗಿಹುದು. ವ್ಯಾನ ವಾಯು ಹರಿದಲ್ಲಿ ಲಿಂಗ ಧ್ಯಾನಮುಂ ಮರೆದು ಉದ್ವೇಶ ಗಮ ನಿಯಾಗಿಹುದು. ಸಮಾನ ವಾಯು ಹರಿದಲ್ಲಿ ಲಿಂಗಜಂಗಮದ ತೀರ್ಥ ಪ್ರಸಾದಮುಂ ಮರೆದು ಕಲ್ಲುಮರನಾಗಿಹನು. ನಾಗವಾಯು ಹರಿದಲ್ಲಿ

ಸುಭಾಷಿತ ಗೋಷ್ಠಿಯುಂ ಕೇಳಲೊಲ್ಲದೆ. ಕುಭಾಷೆ ಕುಶಬ್ದಂಗಳಂ ಕೇಳ ಬೇಕೆನುತಿಹನು. ಕೂರ್ಮ ವಾಯು ಹರಿವಲ್ಲಿ ಜ್ಞಾನಸಂಭಾಷಣೆಯಂ ಬಿಟ್ಟು ಅಜ್ಞಾನ ಸಂಭಾಷಣೆಯುಂ ಮಾಡಬೇಕೆನ್ನುತ್ತಿಹನು. ಕ್ರಕರ ವಾಯು ಹರಿದಲ್ಲಿ ಸುಗುಣವಂ ಬಿಟ್ಟು, ದುರ್ಗುಣದಿಂದ ಕೆಟ್ಟು ಗುರುಲಿಂಗ ಜಂಗಮಕ್ಕೆ ತ್ರಿವಿಧ ಪದಾರ್ಥವನೊಪ್ಪಿಸಿ ಸಂತೋಷದಿಂದ ಶಿವಧ್ಯಾನವ ಬಿಂಸಲೊಲ್ಲದೆ, ಅನರ್ಥವ ಮಾಡಿ ಕೆಡಿಸಿ ಕಳೆದು, ಆಹಾ ಎನ್ನೊಡವೆ ಹಾಳಾಗಿ ಹೋಯಿತ್ತೆಂದು ಮರುಗುತ್ತಿಹನು. ಇಂತೀ ದಶವಾಯುಗಳ ಭೇದವನರಿದು, ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ನಿರ್ಧರಿಸುವುದೇ ಯೋಗಸಿದ್ಧಿ.

೧೦೭. ನಾಲ್ಕು ಗ್ರಾಮದ ಪಟ್ಟಣಕ್ಕೆ ಪಂಚೈವರ ಕಾವಲು ನೋಡಾ. ಅವರ ಸಂಜವಿಡಿದು ಲಿಂಗಾರ್ಚನೆಯ ಮಾಡಿದೊಡೆ ಅದು ಲೋಕದ ಬಳಕೆ ಕಂಡಯ್ಯಾ. ಪಂಚೈವರ ಪಂಚಸ್ಥಾನವನಳಿದು ಏಕಸ್ಥಾ ನವ ಮಾಡಿದುದನರಿದು ನವನಾಳದ ಭೇದದಲಾ ಹರಿಯನರಿದೊಡೆ ಆತ ಲಿಂಗೈಕ್ಯ ನೋಡಾ. ಆ ನವನಾಳದ ಮಧ್ಯದಲ್ಲಿರ್ಪ ಜೀವ ಪರ ಮರ ನೆಲೆಯನರಿದೊಡೆ ನಮ್ಮ ಕೂಡಲ ಚನ್ನಸಂಗಯ್ಯನೊಬ್ಬಾತನೇ ಸಾಹಿತ್ಯವಾಗಿಹನು.

೧೦೮. ಮಾಣಿಕ್ಯ ಮಂಟಪದೊಳಗೆ ಒಳಗೇಳು ಚಿತ್ರಿಕರೊಡನೆ ಮೇಳವಿಸಿದನು ಮಹಾ ಮಂತ್ರಂಗಳ. ಆ ಮೂಲ ಮಂತ್ರದ ಮೇಲೆ ಪ್ರಾಣಲಿಂಗದ ಬೆಳಗು, ಅಲ್ಲಲ್ಲಿಗೆ ವಜ್ರದ ಕೀಲು, ಆ ಮಹಾಕೂಟದ ಜಾಳೀಂದ್ರದೊಳಗೆ ಮಾಣಿಕ್ಯದ ಪ್ರತಿಬಿಂಬ, ಏಳು ರತ್ನದ ಪುತ್ಥಳಿಗಳು, ಮಣಿ ಮಾಲೆಯ ಹಾರಂಗಳು, ಹೊಳೆವ ಮುತ್ತಿನ ದಂಡೆ, ಅಳಿಯ ನೀಲದ ತೊಡಿಗೆಯ ತೊಟ್ಟು, ಸುಳಿವ ಮದ್ದಳೆಕಾರರು ಒಳಗೆ ದಂದಣವೆನಲು, ಕುಣಿ ಕುಣಿದಾಡುವ ಪಾಡಿಗ, ಬಹು ರೂಪುಗ, ನಟುವಿಗ, ತಳೋದರಿಯ ಮೇಳಾಪ, ಕಹಳೆಗಾರರ ನಾದ, ಕೊಳಲ ರಭಸದೊಳು ಹಾಡುತ್ತ ಒಳ ಹೊರಗೆ ಕಾಣಬರುತ್ತಿದೆ ಚಿತ್ರವ ಬೊಂಬೆ. ಫಣಿಪತಿಯ ಕೋಣೆಯೊಳು ಸಂದಣಿಸುತ್ತಿರಲು ಗಣ ತಿಂಥಿಣಿಯ ಮೇಳವೆಲ್ಲವು ನಮ್ಮ ಕೂಡಲ ಚನ್ನಸಂಗಮದೇವರಲ್ಲಿಹ ಕಳಸ ಪ್ರಾಣಲಿಂಗದ ಬೆಳಗಿನೊಳಗೆ ಬೆಳ ಗಾಯಿತ್ತು.

೧೮೯. ಕಾಯಪುರವೆಂಬ ಪಟ್ಟಣದೊಳಗೆ, ಮನವೆಂಬರಸು, ತ್ರಿಕರಣವೆಂಬ ಪ್ರಧಾನಿ, ವಶೀಕರಣವೆಂಬ ಶಾನಬೋವ, ಆಸೆ ರೋಷವೆಂಬ ದ್ವಾರಪಾಲಕರು, ತ್ರಿಮಲವೆಂಬ ಕೋಟೆ, ಬಂಧಿಸುವ ಹಸಿವು ತೃಷೆ, ವಿಷಯಾದಿಗಳ ಬೊಪ್ಪೆಯಬ್ಬರ, ಪಂಚೇಂದ್ರಿಯಗಳೆಂಬ ಕಾಹುಲು ಕವಿವುತ್ತಿದೆ. ಅರಿಷಡ್ವರ್ಗಾದಿಗಳ ಪೇರ್ಬಲದ ಗುಂಪಿನ ಆರ್ಭಟಿಸುವ ಸಂಚಲವೆಂಬ ತೇಜಿ, ಅಪ್ಪಮದವೆಂಬವೆಂಟಾನೆ, ಮೊದಲನಾಯಕರಿಪ್ಪತ್ತೈದುಮಂದಿ, ಪ್ರಜೆ ಪಸಾಯತರು ನೂರನಾಲ್ವತ್ತೆಂಟು, ದೇಹವಿಕಾರದ ಸರಿಗಳ ಸಂದಣಿ, ಈಪೈದು ಮುನ್ನರ ಕಂಟಕವತ್ಯುಗ್ರ, ಮುಂದುವರಿವ ಕಪಳೆಯ ಮೋಹರದ ಸಂಭ್ರಮ, ದುರ್ಮದವೆಂಬ ರಾಜೇಂದ್ರನು ನಿತ್ಯತ್ವದಿಂದ ರಾಜ್ಯಂಗೈಯ್ಯುತ್ತಿರಲು, ಶೂನ್ಯವೆಂಬ ಪಟ್ಟಣದೊಳಗೆ ಅನಾಮಯವೆಂಬ ಶರಣನಂಸು ಸ್ವತಂತ್ರಲೀಲೆಯಿಂದೆಚ್ಚತ್ತು ನೋಡಿ, ಗಹಗಹಿಸಿ ನಗುತ್ತಿಹನು. ಮಹದಹಂಕಾರದ ವಡ್ಡವಣೆಯ ನೋಡಿ ಹೂಂಕರಿಸಿ, ಸುಮನವೆಂಬ ತೇಜಿಯ ಬೇಗದಿಂದೇರಿ, ಘನತರವಾದ ಪಂಚಾಕ್ಷರಿಯ ಜೋಡಂ ತೊಟ್ಟು, ನಿಷ್ಠೆ ಎಂಬ ಅಡ್ಡಾಯುಧಮಂ ಕಿತ್ತು, ಜ್ಞಾನವೆಂಬ ಪಂಜೇಕ್ಷುವಿನಿಂದೆಡಬಲವಂ ನೋಡಿ, ಸತ್ವರಜತಮವೆಂಬ ತ್ರಿಗುಣದ ಪ್ರಧಾನರಂ ಕೆಡೆಮೆಟ್ಟಿ, ದ್ವಾರಕವಾಟಮಂ ಮುರಿದು, ಆಸೆ ರೋಷಾದಿಗಳ ಬೆದರಿಸಿ, ಮಲತ್ರಯದ ಕೋಟಿಯನುರುಹಿ, ಹಸಿವು ತೃಷೆ ವಿಷಯವ್ಯಸನಾದಿಗಳಂ ಸಂಹರಿಸಿ, ಪಂಚೇಂದ್ರಿಯದ ಜಿಹ್ವೆಯಂ ಕೊಯ್ದು, ಅರಿಷಡ್ವರ್ಗಮಂ ಜರಿದು, ಪ್ರಪಂಚವೆಂಬ ತೇಜಿಯಂ ಕೆಡಹಿ, ದೇಹದಲ್ಲಿರ್ದ ಅಷ್ಟಮದಂಗಳ ಹಿಟ್ಟುಗುಟ್ಟಿ, ಇಪ್ಪತ್ತೈವರ ದರ್ಪಮಂ ಕೆಡಿಸಿ, ಮುವ್ವರ ಕಾಲಾಟದ ಸಂಚಾರಕ್ಕೆ ತೆರಹುಗೊಡದೆ, ದುರ್ಗಯದ ಪಟುಭಟರ ಬಲಮಂ ಬರಿಗೈಯ್ದು, ಶರಣುವೊಕ್ಕರ್ಗೆ ಅಭಯ ಹಸ್ತಮಂ ಕೊಟ್ಟು, ಆ ಪುರಮಂ ಸಂತವಿಸಿ, ತನ್ನ ವಶಕ್ಕೆ ತಂದು, ವೀರಶೈವ ಸಮ್ಮತವಾಗಿ ನಿಂದು, ಸತ್ಕ್ರಿಯಾಸಂಪನ್ನನಾಗಿ, ಆ ಪುರಕ್ಕೆ ಅಧಿಪತಿಯಾಗಿ, ತಾನಲ್ಲದನ್ಯವಿಲ್ಲೆಂದು ಕಂಡು, ಆ ಪುರಕ್ಕೆ ಸುಚಿತ್ತ ಸುಬುದ್ಧಿ ಸುಮನ ಸುಜ್ಞಾನವೆಂಬರುವಿಂಗೆ ಪಟ್ಟಮಂ ಕಟ್ಟಿ, ಮಂತ್ರರಾಜನೆಂಬ ಹೆಸರಿಟ್ಟು ಷಡ್ವಿಧ ಬ್ರಹ್ಮಾದ್ವೈತದಲ್ಲಿ ಪರವಶನಾಗಿ, ಬಾಹ್ಯೋಪಚಾರಂಗಳಡಗಿ, ತನ್ನ ತಾ ಬೇರ್ಪಡಿಸಿ ನಿಂದು, ಅಖಂಡವಾಗಿ ಸುಮಹತ್ವದಿಂದೆ ತನ್ನ ಕರಸರೋಜಪೀಠಾಗ್ರದೋಳ್ಮೆರೆವ ಇಷ್ಟ ಬ್ರಹ್ಮದಲ್ಲಿ ತೃಪ್ತನಾಗಿ ಬಾಹ್ಯವೆನ್ನದೆ ಬಾಹ್ಯಾಭ್ಯಂತರವೆನ್ನದೆ ರಾಜಯೋಗಿಯಾಗಿ ತನ್ನ ಪತ್ತಿಮತತ್ವವಂ ತಾನೇ ನೋಡಿ ತಿಳಿದು, ನಿಸ್ಪೃಹಾತ್ಮನಾಗಿ, ಇನ್ನು ಅನ್ಯವಿಲ್ಲವೆಂದರಿದು, ಅದ್ವೈತ ಭಾವದಿಂದೇ ವೀರನಾಗಿ, ಮೇರುಗಿರಿಯ ಮೇಲೆ ತೊಳಗಿ ಬೆಳಗುವ ಶಿಖಾಜಕ್ಯದಿಂದ ಮೇಲಣ ಮಮಪೀಠದಲ್ಲಿರುವ ಪ್ರಣವದ ಪ್ರಭೆಯ ಜ್ಯೋತಿರ್ಮಯ ಲಿಂಗದಲ್ಲಿ ತಾನೆನ್ನದೆ ಇದಿರೆನ್ನದೆ ಅಲ್ಲಿ ಸೈನೆರಗಾದ ನಿಜಶರಣನಲ್ಲಿಯೇ ಸನ್ನಿಹಿತ ನಮ್ಮ ಕೂಡಲಚನ್ನಸಂಗಮದೇವಾ.

೧೯೦. ಪೃಥ್ವಿಸಲಿಲ ಪಾವಕ ಪವನ ಅಂಬರ ರವಿ ಶಕ್ತಿ ಆತ್ಮನೆಂಬಷ್ಟತನುವ ಭೇದಿಸಿ, ಶ್ರೋತ್ರ ನೇತ್ರ ಘ್ರಾಣ, ಜಿಹ್ವೆ ತ್ವಕ್ಕುಗಳೆಂಬ ಪಂಚೇಂದ್ರಿಯವನರಿದು, ವಾಕ್ಕು ಪಾಣಿ, ಪಾದ, ಪಾಯು, ಗುಹ್ಯವೆಂಬ ಕರ್ಮೇಂದ್ರಿಯಂಗಳ ತೊರೆದು, ಪ್ರಾಣೋಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯವೆಂಬ ದಶವಾಯುಗಳ ಸಂಚವ ಮುರಿದು, ಮನ ಬುದ್ಧಿ ಚಿತ್ತ ಅಹಂಕಾರವೆಂಬ ಚತುಃಕರಣಂಗಳನೊಂದುಮಾಡಿ, ಜ್ಞಾನವನೆ ಬೆಳಸಿ, ಧ್ಯಾನವ ನೆಲೆಗೊಳಿಸಿ ಚಿತ್ತಸುಯಿಧಾನವಾಗಿ ನಿಜಸಂಧಾನದ ಸಮಾಧಿಯಲ್ಲಿ ನಿಂದು ಲಿಂಗಾರ್ಚನೆಯಂ ಮಾಡುವ ಶಿವಶರಣರ ಪಾದವ ತೋರಯ್ಯಾ. ಸಾಷ್ಟೆ॥ ವ್ಯಾಪಾರಂ ಸಕಲಂ ತ್ಯಕ್ತ್ವಾ ಸ ರುದ್ರೋ ರುದ್ರಮರ್ಚಯೇತ್ ಎಂಬ ಶ್ರುತಿ ನಿಮ್ಮ ಶರಣರಿಗೆ ಸಂದಿತ್ತು ಕೂಡಲಚನ್ನಸಂಗಮದೇವಾ.

ಜಂಗಮ.

ಜಂಗಮದ ಲಕ್ಷಣಗಳು.

೧. ಲಿಂಗ ಗಂಭೀರನಾದ ಶರಣ ಅಂಗ ವಿಕಾರವನರಿಯನಯ್ಯಾ. ಜಂಗಮ ಸನ್ಮತವಾದ ಶರಣ ಇಂದ್ರಿಯ ವಿಕಾರವನರಿಯನಯ್ಯಾ. ಲಿಂಗ ಗಂಭೀರನಾಗಿ ಮನ್ಮನದಲ್ಲಿ ಲೀಯ್ಯವಾಯಿತ್ತು. ಜಂಗಮ ಸಮ್ಮತವಾಗಿ ಅವಧಾನವನರಿಯನಯ್ಯಾ ಕೂಡಲ ಚನ್ನ ಸಂಗಯ್ಯನಲ್ಲಿ ಏಕ್ಯವಾದ ಮಹಾ ಶರಣ.

೨. ಕ್ಷೀರ ಶರಧಿಯೊಳಿರುವ ಹಂಸಂಗೆ ಅನ್ಯಕ್ಷೀರದ ಹಂಗುಂಟೇನಯ್ಯಾ? ಸುಗಂಧಮಯ ಪುಷ್ಪದಲ್ಲಿರುವ ಭೃಂಗಂಗೆ ಅನ್ಯ ಪರಿಮಳದ ಹಂಗುಂಟೇನಯ್ಯಾ? ಸಮುದ್ರದೊಳಿರುವ ಮುಂಡುಕಂಗೆ ಅಂಬುವಿನ ಹಂಗುಂಟೇನಯ್ಯಾ? ಮೊಲೆಯನುಣ್ಣುವ ಶಿಸುವಿಂಗೆ ಅನ್ಯ ಕ್ಷೀರ ನೀರಿನ ಹಂಗುಂಟೇನಯ್ಯಾ? ಸಕಲಪ್ರದಾಯಕ ಲಿಂಗದೊಳಿದ್ದ ಶರಣಂಗೆ ಅನ್ಯ ಪದದಾಸೆಯ ಹಂಗುಂಟೇ ಹೇಳಾ ಕಪಿಲಸಿದ್ಧಮಲ್ಲಿಕಾರ್ಜುನಾ?

೩. ಶರಣಸ್ಥಲ ನೋಡುವರೆ ಬಹು ಸುಲಭ ನೋಡಯ್ಯ. ಶರಣನು ತಿಳಿದು ತಿಳಿದು ಆಚರಿಸನು. ಮರೆದು ಮರೆದು ಆಚರಿಸುವ. ಜ್ಞಾನದಿಂದ ಭೇದವಲ್ಲದೆ ದೇಹದಿಂದ ಭೇದವಿಲ್ಲ ನೋಡಯ್ಯ. ಶರಣ ತನ್ನ ದೇಹವೇ ಹಕಾರ ಪ್ರಣವಮಾಡಿಟ್ಟ. ನರನು ತನ್ನ ದೇಹವೇ ದೇಹವೆಂದು ಜಡವೆಂದು ಪ್ರಳಯಕ್ಕೊಳಗು ಮಾಡಿಟ್ಟ. ಶರಣನ ದೇಹವೆಲ್ಲ ಪಂಚಾಕ್ಷರಮಯ ನೋಡಾ. ನಕಾರವೆ ಆಸ್ತಿ, ವಕಾರವೆ ನಾಡಿ, ಯಕಾರವೆ ರೋಮ, ಮಕಾರವೆ ಮಾಂಸ, ಶಿಕಾರವೆ ತ್ವಕ್ಕು, ಮಕಾರವೆ ರುಧಿರ, ಯಕಾರವೆ ಶ್ಲೇಷ್ಮ, ಶಿಕಾರವೆ ಶುಕ್ಲ, ನಕಾರವೆ ರಸ, ವಕಾರವೆ ಪಿತ್ತ, ಶಿಕಾರವೆ ನಿದ್ರೆ, ನಕಾರವೆ ಕ್ಷುಧೆ, ವಕಾರವೆ ಆಲಸ್ಯ, ಮಕಾರವೆ ತೃಷ್ಣೆ, ಯಕಾರವೆ ಸಂಗ, ಯಶಿನಮ ಎಂಬವು ಮೋಹ ಭಯ ರಾಗ ಲಜ್ಜೆ ಮೇಷಕ್ಕೆ ಸೇರಿಸಿದ ನೋಡಾ! ಕ್ಲಂ ಕ್ಲಿಂ ಎಂಬುದಚ್ಚ ಕಠಿಣ ಮೃದುವಿಗೆ ಇಟ್ಟ ನೋಡಾ. ಕ್ಲಂ ಕ್ಲಿಂ ಎಂಬುದುಷ್ಣ ಚಲನೆಗೆ ಸೇರಿಸಿದ ನೋಡಾ. ಶಿಯ ಮವನ ಎಂಬುದೇ ಸ್ಪರ್ಶ ಗಂಧ ರೂಪು ಶಬ್ದ ರಸಕ್ಕೆ ಸೇರಿಸಿದ ನೋಡಾ.

ಶಿಯಮ ಎಂಬುದೇ ಪಾದವಾ ಗುಹ್ಯ ಪಾಣಿವಾಯುವಿಗೆ ಸಂಬಂಧಿಸಿದ ನೋಡಾ! ಯ ಮ ವ ನ ಶಿ ಎಂಬುದೆ ಶ್ರೋತ್ರ ಜಿಹ್ವೆ ತ್ವಕ್ಕು ನಾಸಿಕ ನೇತ್ರಕ್ಕೆ ಸಂಬಂಧಿಸಿದ ನೋಡಾ! ಯಮವನಶಿ ಎಂಬುದೆ ಪ್ರಾಣೋ ಸಮಾನ ಉಪಾನ ವ್ಯಾನಕ್ಕೆ ಸಂಬಂಧಿಸಿದ ನೋಡಾ! ಮ ಯ ನ ಶ ವ ಯ ಬುದ್ಧಿಮನ ಚಿತ್ತಹಂಕಾರಜ್ಞಾನಕ್ಕೆ ಸಂಬಂಧಿಸಿದ ನೋಡಾ! ಈ ರೀತಿಯಿಂದರಿದು ಶಿವತತ್ವ ತಾನಾಗಿ ನಿಂದ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪. ಪರರಾಣಿಯರ ನೋಡುವಲ್ಲಿ ಅಂಧಕನಾಗಿಪ್ಪ ನೋಡಾ ಜಂಗಮನು. ಪರಧನವ ಕಂಡಲ್ಲಿ ಹುಲಿಯ ಕಂಡ ಹುಲ್ಲೆಯಂತೆ ಭೀತಿಬಡುವ ನೋಡಾ ಜಂಗಮನು. ದುರ್ನರರ ಸಂಭಾಷಣೆಯ ಕೇಳುವಲ್ಲಿ ಅತಿ ಮುಗ್ಧನಾಗಿಪ್ಪ ನೋಡಾ ಜಂಗಮನು. ದುಷ್ಕರ್ಮ ಪಥದೊಳರಸುವಲ್ಲಿ ಕಡು ಜಡ ಪೆಳವ ನೋಡಾ ಜಂಗಮನು. ವಿಷಯಗಳೊಳು ನಿಃಕರುಣೆಯಾಗಿಪ್ಪ ನೋಡಾ ಜಂಗಮನು. ಶಿವನಿಂದಕರ ಸ್ವರಗೇಳುವಲ್ಲಿ ಬಧಿರನಾಗಿಪ್ಪ ನೋಡಾ ಜಂಗಮನು. ದುರಾತ್ಮರಿಗೆ ಜ್ಞಾನ ದ್ರವ್ಯ ಕೊಡುವಲ್ಲಿ ಲೋಭಿಯಾಗಿಪ್ಪ ನೋಡಾ ಜಂಗಮನು ಕಪಿಲಸಿದ್ಧಮಲ್ಲಿಕಾರ್ಜುನನು.

೫. ಸಮತೆ ಎಂಬ ಕಂಥೆ ಧರಿಸಿಪ್ಪ ನೋಡಾ ಜಂಗಮನು. ಅಮಿತವೆಂಬ ಭಸ್ಮ ಧರಿಸಿಪ್ಪ ನೋಡಾ ಜಂಗಮನು. ಲಿಂಗವೆಂಬ ಖರ್ಪರ ಕರಸ್ಥಲದಲ್ಲಿ ಧರಿಸಿಪ್ಪ ನೋಡಾ ಜಂಗಮನು. ಸರ್ವಜೀವ ದಯಾಪಾರಿ ಎಂಬ ವಿಮಲ ರುದ್ರಾಕ್ಷಿ ಧರಿಸಿಪ್ಪ ನೋಡಾ ಜಂಗಮನು. ನಿಸ್ಸಂಗವೆಂಬ ಮೇಖಲಾ ಪರಿಪೂರ್ಣ ನೋಡಾ ಜಂಗಮನು. ಸುಜ್ಞಾನವೇ ಕಿರೀಟವಾಗಿ ಶುದ್ಧ ಜ್ಞಪ್ತಿಯೆ ಮಕುಟವಾಗಿ ನಿರಹಂಕರವೆ ಬಹಿರ್ವಾಸಿಯಾಗಿ ದುರ್ವ್ಯಸನ ದುರ್ಭ್ರಮೆ ಹೃಷೀಕೋತ್ಪಾತ ವಿಜಯ ಶಿವಯೋಗವಾಗಿ ಚರಿಸುವ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನನೆಂಬ ಮಹಾ ಜಂಗಮನು.

೬. ಗೆದ್ದವ ಗರುಡಿಕಾರನಲ್ಲದೆ ಬಿದ್ದು ಗೆದ್ದವ ಗರುಡಿಕಾರನೇ ಅಯ್ಯ? ಎದ್ದವ ಜಂಗಮನಲ್ಲದೆ ಬಿದ್ದು ಎದ್ದವ ಜಂಗಮನೇ ಅಯ್ಯ? ಬೀಳಲಾಗದು ಜಂಗಮ, ಬೀಳಲಾಗದು ಜಗದ ಹಿರಿಯರು, ಅಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೬. ನಿಂದಿಸಿದಲ್ಲಿ ಕುಂದುವನಲ್ಲ ಜಂಗಮನು. ವಂದಿಸಿದಲ್ಲಿ ಆನಂದ ಮಯನಲ್ಲ ಜಂಗಮನು. ಬಂದುಪಚಾರದಲ್ಲಿ ಸಂದುಗೊಳ್ಳುವನಲ್ಲ ಜಂಗಮ. ಜಂಗಮನು ಬಂದಲ್ಲಿ ನೀಡದಿರೆ ಕ್ರೋಧನಲ್ಲ ಜಂಗಮನು. ಇಂದುಧರ ಕಪಿಲಸಿದ್ಧ ಮಲ್ಲನೆಂಬೆ, ಇಂತಪ್ಪ ಜಂಗಮನು.

೮. ಜನನ ಮರಣ ದೇಹ ಧರ್ಮಕ್ಕಲ್ಲದೆ ಜಂಗಮಕ್ಕೆಲ್ಲಿಹದೋ? ಕ್ಷುಧಾ ತೃಷೆ ಪ್ರಾಣಧರ್ಮವಲ್ಲದೆ ಜಂಗಮಕ್ಕೆಲ್ಲಿಹದೋ? ಸುಖ ದುಃಖ ಮನೋಧರ್ಮವಲ್ಲದೆ ಜಂಗಮಕ್ಕೆಲ್ಲಿಹದೋ? ಜ್ಞಾನಾಜ್ಞಾನಂಗಳು ಮುಮುಕ್ಷುವಿಂಗಲ್ಲದೆ ನಿಮ್ಮಲ್ಲಿ ಸಮರಸವಾದ ಸಚ್ಚಿದಾನಂದ ಶಿವಯೋಗಿ ಜಂಗಮಕ್ಕೆಲ್ಲಿಹದೋ ಕಪಿಲಸಿದ್ಧ ಮಲ್ಲಿಕಾರ್ಜುನಾ?

೯. ಗುಣವ ನೋಡದೆ ಹೊಗಳುವ ಜಂಗಮವು ಬ್ರಹ್ಮನ ಸಂತತಿ. ಕಾಡಿಬೇಡುವ ಜಂಗಮವು ನಾರಾಯಣನ ಸಂತತಿ. ವ್ಯಾಪಾರಿಕ ಜಂಗಮ ಈಶ್ವರನ ಸಂತತಿ. ಹೊಗಳದೆ ಕಾಡದೆ ಬೇಡದೆ ಬಲಾತ್ಕಾರದಿಂದುಣ್ಣದೆ ವ್ಯವಹರಿಸುವ ಜಂಗಮವ ನೋಡಿ ಎನ್ನ ಮನ ನೀವೆಂದು ನಂಬಿತ್ತಯ್ಯ ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ.

೧೦. ಭೂಷಣವುಳ್ಳ ಜಂಗಮವ ಭೂಪಾಲ ಪೂಜಿಸುವ. ವೇಷವುಳ್ಳ ಜಂಗಮವ ವೇಶಿ ಪೂಜಿಸುವಳು. ವೇಷಧಾರಿ ಜಂಗಮವ ಲೋಕವೆಲ್ಲ ಪೂಜಿಸುವದು. ಜ್ಞಾನವುಳ್ಳ ಜಂಗಮವನಾರು ಪೂಜಿಸರು ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೧೧. ಕೆರೆ ಹಳ್ಳ ಬಾವಿಗಳು ಮೈದೆಗೆದರೆ, ಗುಳ್ಳೆ, ಗೊರಜೆ, ಚಿಪ್ಪು ಕಾಣಬಹುದು. ವಾರುಧಿ ಮೈದೆಗೆದರೆ, ರತ್ನಂಗಳ ಕಾಣಬಹುದು. ಕೂಡಲ ಸಂಗನ ಶರಣರು ಮನದೆರೆದು ಮಾತನಾಡಿದರೆ, ಲಿಂಗವ ಕಾಣಬಹುದು.

೧೨. ಆವಾವ ಭಾವದಲ್ಲಿ ಶಿವನ ನಂಬಿದ ಶರಣರು ಎಂತಿದ್ದರೇನಯ್ಯ? ಆವಾವ ಭಾವದಲ್ಲಿ ಶಿವನ ನಂಬಿದ ಮಹಿಮರು ಎಂತಿದ್ದರೇನಯ್ಯ? ಸುಚರಿತ್ರರೆಂತಿದ್ದರೇನಯ್ಯ? ಆವಲೋಹದ ಕಳಿವ ಪರುಷವೆಂತಿದ್ದರೇನಯ್ಯ? ಕೂಡಲ ಸಂಗನ ಶರಣರು ರಸದ ವಾರುಧಿಗಳು ಎಂತಿದ್ದರೇನಯ್ಯ?

೧೩. ತೆರಹಿಲ್ಲದ ನಡೆ, ತೆರಹಿಲ್ಲದ ನುಡಿ, ತೆರಹಿಲ್ಲದ ಸಂಭಾಷಣೆಯ ಸುಖವು, ತೆರಹಿಲ್ಲದ ನಂಬುಗೆ, ತೆರಹಿಲ್ಲದ ಸ್ವಾನುಭಾವ ಸುಖ, ತೆರಹಿಲ್ಲದ ಮಹಿಮೆ, ತೆರಹಿಲ್ಲದ ವಿಚಾರ ಕೂಡಲ ಸಂಗಮದೇವಾ ನಿಮ್ಮ ಶರಣಂಗೆ.

ಭಕ್ತ ಜಂಗಮ ಸಂಬಂಧ.

೧೪. ಭವವಿಲ್ಲದ ಭಕ್ತನ ಪರಿಯ ನೋಡಾ. ಮನ ಪ್ರಾಣ ಮುಕ್ತಿ ಭಾವರಹಿತ ಒಡಲಿಲ್ಲದ ಜಂಗಮದ ಪರಿಯ ನೋಡಾ. ಸಿಡಿಲ ಮಿಂಚಿನ ಬೆಳಗನೊಂದೆಡೆಯಲ್ಲಿ ಹಿಡಿಯಲುಂಟೇ? ಈ ಉಭಯ ಒಂದಾದವರ ಕಂಡರೆ ನೀನೆಂಬೆ ಕೂಡಲಚನ್ನಸಂಗಯ್ಯ.

೧೫. ಭಕ್ತನಾದ ಬಳಿಕ ಜಂಗಮ ಮೆಚ್ಚಬೇಕು. ಜಂಗಮನಾದ ಬಳಿಕ ಭಕ್ತ ಮೆಚ್ಚಬೇಕು. ಭಕ್ತನ ಕಾಯವೇ ಜಂಗಮನ ಕಾಯ. ಜಂಗಮನ ಕಾಯವೇ ಭಕ್ತನ ಕಾಯ. ಕಪಿಲಸಿದ್ಧ ಮಲ್ಲೇಶನಲ್ಲಿ ಇದೇ ಉಪಾಯ.

೧೬. ಒಡಲಿಲ್ಲದಾತ ಜಂಗಮ, ಪ್ರಾಣವಿಲ್ಲದಾತ ಭಕ್ತನಯ್ಯ. ಆಚಾರವೇ ಜಂಗಮ ವಿಚಾರವೇ ಭಕ್ತನಯ್ಯ. ಆಚಾರ ವಿಚಾರವೆಂಬುದು ಸ್ವಾನುಭವವು ನೋಡಾ ಕೂಡಲಸಂಗಮದೇವಾ.

೧೭. ಎಲ್ಲರ ಪ್ರಾಣಲಿಂಗ ಒಂದೇ ಕಂಡಯ್ಯ. ಎನ್ನ ಪ್ರಾಣಲಿಂಗ ಬೇರೆ ಕಂಡಯ್ಯ. ಕೂಡಲ ಸಂಗಮದೇವ ಕೇಳಯ್ಯ, ಜಂಗಮವೆನ್ನ ಪ್ರಾಣಲಿಂಗ ಕಂಡಯ್ಯ.

೧೮. ನಿಮ್ಮ ಶಕ್ತಿ ಆತನಲ್ಲಿಪ್ಪುದು ಕಂಡಯ್ಯ. ಆತನ ಪ್ರಾಣ ನಿಮ್ಮಲ್ಲಿಪ್ಪುದು. ನಿಮ್ಮ ತಮ್ಮ ಭೇದವನಾರು ಬಲ್ಲರು ಹೇಳಯ್ಯ. ಕಪಿಲಸಿದ್ಧ ಮಲ್ಲಿನಾಥಯ್ಯ ನಿಮ್ಮ ಶರಣ ಸಂಗನಬಸವಣ್ಣನ ಅನುವ ನೀವೇ ಬಲ್ಲಿರಿ.

೧೯. ಭಕ್ತನು ಭಕ್ತನ ಕಂಡಲ್ಲಿ ಕೈಮುಗಿವುದೇ ಭಕ್ತಿಸ್ಥಲ. ಜಂಗಮನು ಜಂಗಮವ ಕಂಡಲ್ಲಿ ಶರಣೆಂಬುದೇ ಜಂಗಮಸ್ಥಲ. ಭಕ್ತ ಜಂಗ

ಮರೆಂದು ಬೇರುಂಟೀ? ರಸದಂತೆ ಭಕ್ತ, ರುಚಿಯಂತೆ ಜಂಗಮ, ಕಾಣಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೦. ಸ್ಥಾವರ ಭಕ್ತಂಗೆ ಸೀಮೆಯಲ್ಲದೆ ಘನಲಿಂಗಜಂಗಮಕ್ಕೆ ಸೀಮೆಯೆಲ್ಲಿಯದು? ಅಂಬುಧಿಗೆ ಸೀಮೆಯಲ್ಲದೆ, ಹರಿವ ನದಿಗೆ ಸೀಮೆಯಲ್ಲಿಯದು? ಭಕ್ತಂಗೆ ಸೀಮೆಯಲ್ಲದೆ ಜಂಗಮಕ್ಕೆ ಸೀಮೆಯುಂಟೇ ಕೂಡಲಸಂಗಮದೇವಾ?

೨೧. ಶಿವಭಕ್ತರೇ ಅಧಿಕರು ನೋಡಯ್ಯ. ಇದಕ್ಕೆ ಅಧಿಕವಾಗಿ ಜಂಗಮವ ಕಂಡೆ. ಈ ದ್ವಿವಿಧವನೊಂದೇ ಎಂದು ನಂಬಿದೆ ಕೂಡಲ ಸಂಗಮದೇವಾ.

೨೨. ಜಂಗಮವ ಕೂಡಿಕೊಂಡು, ಲಿಂಗಾರ್ಚನೆಯ ಮಾಡುವುದು ಲೇಸಯ್ಯ ಭಕ್ತಂಗೆ. ಆ ಭಕ್ತನ ಕೂಡಿಕೊಂಡು ಲಿಂಗಾರ್ಚನೆಯ ಮಾಡುವುದು ಲೇಸಯ್ಯ ಜಂಗಮಕ್ಕೆ. ಆ ಜಂಗಮದ ಕರ್ತವ್ಯವೇ ಭಕ್ತಂಗೆ ದಾಸೋಹ. ಆ ಭಕ್ತನ ಕಿಂಕರತ್ವವೇ ಜಂಗಮಕ್ಕೆ ದಾಸೋಹ. ಆ ಭಕ್ತನೊಳಗೆ ಜಂಗಮವಡಗಿ, ಆ ಜಂಗಮದೊಳಗೆ ಭಕ್ತನಡಗಿ ಇದ ನೇನೆಂದು ಹವಣಿಸುವೆನಯ್ಯಾ? ಎರಡೊಂದಾದ ಘನವ ಇದನೆಂತು ಪಮಿಸುವೆನಯ್ಯಾ? ತೆರಹಿಲ್ಲದ ಘನವ, ಈ ಎರಡಕ್ಕೆ ಭವವಿಲ್ಲೆಂದು, ಕೂಡಲ ಸಂಗಯ್ಯ, ನಿಮ್ಮ ಶ್ರುತಿಗಳು ಹೇಳಿದವಾಗಿ ನಿಮ್ಮ ಕರುಣವೆನಗಾಯಿತ್ತು.

ಗುರು ಜಂಗಮ ಸಂಬಂಧ.

೨೩. ಆದಿಯಲ್ಲಿ ನಿಮ್ಮ ಜಂಗಮವೇ ಲಿಂಗವೆಂಬುದನಾರು ಬಲ್ಲರಯ್ಯಾ, ಬಸವಣ್ಣನಲ್ಲದೆ? ಲಿಂಗಕ್ಕಾದಡೆಯೂ ಜಂಗಮವೇ ಬೇಕು. ಜಂಗಮವಿಲ್ಲದೆ ಲಿಂಗವುಂಟೇ? ಗುರುವಿಂಗಾದಡೆಯೂ ಜಂಗಮವೇ ಬೇಕು. ಜಂಗಮವಿಲ್ಲದೆ ಗುರುವುಂಟೇ? ಜಂಗಮಕ್ಕಾದಡೆಯೂ ಜಂಗಮವೇ ಬೇಕು. ಇಂತಪ್ಪ ಜಂಗಮವೇ ಪ್ರಾಣಲಿಂಗವೆಂದು ಬಸವಣ್ಣನೆನಗೆ ತೋರಿದನಾಗಿ ಆ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂದು ಬದುಕಿದೆನು ಕಾಣಾ ಕಲಿದೇವರದೇವಾ.

೨೪. ಗುರುಸ್ಥಲ ಘನವೆಂಬೆನೇ? ಗುರುವಿಂಗೆ ಲಿಂಗವುಂಟು. ಲಿಂಗಸ್ಥಲ ಘನವೆಂಬೆನೇ? ಲಿಂಗಕ್ಕೆ ಜಂಗಮವುಂಟು. ಆ ಜಂಗಮವು ಎಲ್ಲಿ ಇದ್ದಡೆ ಅಲ್ಲಿ ಗುರು ಲಿಂಗ ಜಂಗಮ ಪಾದೋದಕ ಪ್ರಸಾದ ಭಕ್ತಿ ಅನುಭಾವ ಸನ್ನಿಹಿತವಾಗಿಹುದು ಕಾಣಾ ಕೂಡಲ ಚನ್ನಸಂಗಮದೇವಾ.

೨೫. ಶ್ರೀಗುರು ಶಿಷ್ಯನ ಭವಿಪೂರ್ವಾಶ್ರಯವ ಕಳೆದು ಭಕ್ತನ ಮಾಡಿದ ಬಳಿಕ, ಆ ಭಕ್ತ ಹೋಗಿ ಜಂಗಮವಾಗಿ ಗುರುವಿನ ಮುತಕ್ಕೆ ಬಂದಡೆ, ಆ ಜಂಗಮವೆನ್ನ ಶಿಷ್ಯನೆಂದು ಗುರುವಿನ ಮನದಲ್ಲಿ ಹೊಳೆದರೆ, ಪಂಚಮಹಾಪಾತಕ. ಈ ಜಂಗಮಕ್ಕೆ ಎನ್ನ ಗುರುವೆಂದು ಮನದಲ್ಲಿ ಭಯಭೀತಿ ಹೊಳೆದರೆ ರೌರವ ನರಕ. ಇಂತೀ ಭೇದವ ಕೂಡಲಚನ್ನಸಂಗಯ್ಯನಲ್ಲಿ ನಿಮ್ಮ ಶರಣರೇ ಬಲ್ಲರು.

೨೬. ಭೂತಪ್ರಾಣಿಯ ಕಳೆದು, ಲಿಂಗಪ್ರಾಣಿಯ ಮಾಡಿದ ಬಳಿಕ ಶಿಷ್ಯನೇ ಜಂಗಮವಾಗಿ ಗುರುವಿನ ಮುತಕ್ಕೆ ನಡೆದು ಬಂದರೆ, ಗುರುವೆಂಬ ಹಮ್ಮಿಲ್ಲದೆ, ಪರಮಗುರುವೆಂದು ಪಾದಾರ್ಚನೆಯಂ ಮಾಡುವುದು ಆಚಾರ. ನಾಚಿ ಮಾಡದಿರ್ದಡೆ ನಾಯಕನರಕ. ಆ ಜಂಗಮ ಶಂಕೆಯಿಲ್ಲದೆ ಪಾದಾರ್ಚನೆಯ ಮಾಡಿಸಿಕೊಂಬುವುದು ಕರ್ತವ್ಯ. ಶಂಕೆಗೊಂಡರೆ ಪಂಚಮಹಾಪಾತಕ. ಹೀಗಲ್ಲದೆ ಗುರುವೆಂಬ ಹಮ್ಮು ಶಿಷ್ಯನೆಂಬ ಶಂಕೆಯುಳ್ಳನ್ನಕ್ಕರ ರೌರವ ನರಕದಲ್ಲಿಕ್ಕುವ ಕೂಡಲ ಚನ್ನಸಂಗಮದೇವಯ್ಯ.

೨೭. ಮೊದಲಲ್ಲಿ ಮೊದಲಲ್ಲಿ ಅಜ್ಞೊತ್ತಿದ ಕಾರಣ ಎಚ್ಚರಿಕೆಯಾಯಿತ್ತು. ಗುರುಕರುಣದಿಂದ ಅರಿವಾಯಿತ್ತು, ಆಚಾರವಾಯಿತ್ತು. ಜಂಗಮದಿಂದ ತಿಳಿದ ತಿಳಿವಿನಲ್ಲಿ ಶಿವಪ್ರಸಾದ ಸಾಧ್ಯವಾಯಿತ್ತು. ಕೂಡಲ ಚನ್ನಸಂಗಯ್ಯನಲ್ಲಿ ಏಕಾರ್ಥವಾಯಿತ್ತು.

ಅರ್ಥ:-ದೇಹಸಂಬಂಧಿಯಾಗಿರ್ದ ಆತನು ಮುನ್ನ ಶಿವಾಂಶಿಕನು. ಅಂತು ಶಿವಾಂಶಿಕನಾದ ಕಾರಣ ಸಮ್ಯಜ್ಞಾನೋದಯವಾಗಿತ್ತೆಂಬುದೀಗ ಮೊದಲಲ್ಲಿ ಮೊದಲಲ್ಲಿ ಅಜ್ಞೊತ್ತಿದ ಕಾರಣ ಎಚ್ಚರಿಕೆಯಾಯಿತ್ತು ಎಂಬ ಶಬ್ದಕ್ಕರ್ಥ. ಅಂತು ಸಮ್ಯಜ್ಞಾನೋದಯದಿಂದ ತನ್ನ ನಿಜವೇ ಪರಬ್ರಹ್ಮವೆಂದರಿವಾತಂಗೆ ಬ್ರಹ್ಮವು ಕಾಣಿಸಿತ್ತೆಂಬ ಮಾತ್ರದಲ್ಲಿ ದೇಹವಾಸನೆಯಳಿದು ಬ್ರಹ್ಮವಾಸನೆ ಆಗಲು ಅದುಕಾರಣ ಜ್ಞಾನೋದಯವಾಗಿ ತನ್ನ ನಿಜವಪ್ಪ ಪರಬ್ರಹ್ಮವ ಕೂಡುವ ಅವಸ್ಥೆಯಿಂದ ಗುರೂಪಾವಸ್ಥೆಯ ಮಾಡಿ ಗುರುಕರುಣವಂ ಪಡೆದು, ಷಟ್‌ಸ್ಥಲಜ್ಞಾನ ಕ್ರಿಯಾಚಾರವಳವಟ್ಟಿತ್ತು ಶರಣರಿಗೆಂಬುದೀಗ ಗುರುಕರುಣದಿಂದ ಅರಿವಾಯಿತ್ತು ಆಚಾರವಾಯಿತ್ತು ಎಂಬ ಶಬ್ದಕ್ಕರ್ಥ. ಅಂತಪ್ಪ ಜ್ಞಾನಾಚಾರವ ತಿಳಿದು ಅರಿದು ಆಚರಿಸುವ ಆಚಾರದಿಂದ ಅಂಗವೆಲ್ಲ ಲಿಂಗವೇಯಾಗಿ ಭಿನ್ನದೋರದೆ ಇದ್ದಿತ್ತೆಂಬುದೀಗ ಜಂಗಮದಿಂದ ತಿಳಿದ ತಿಳಿವಿನಲ್ಲಿ ಪ್ರಸಾದ ಸಾಧ್ಯವಾಯಿತ್ತು ಕೂಡಲಚನ್ನಸಂಗಯ್ಯನಲ್ಲಿ ಏಕಾರ್ಥವಾಯಿತ್ತು ಎಂಬ ಶಬ್ದಕ್ಕರ್ಥ.

೨೮. ಗುರು ಉಪದೇಶ ಮಂತ್ರವೈದ್ಯ. ಜಂಗಮ ಉಪದೇಶ ಶಸ್ತ್ರ ವೈದ್ಯ ನೋಡಾ. ಭವರೋಗವ ಕಳೆವ ಪರಿಯ ನೋಡಾ. ಕೂಡಲ ಸಂಗನ ಶರಣರ ಅನುಭಾವ ಮಡಿವಾಳನ ಕಾಯಕದಂತೆ.

ಲಿಂಗ ಜಂಗಮ ಸಂಬಂಧ.

೨೯. ಲಿಂಗದಲುದಯ ಜಂಗಮದಲನುಭಾವ. ಮತ್ತೊಂದ ಮತ್ತೊಂದನರಿಯನಯ್ಯ ಶರಣನು, ಕೂಡಲ ಚನ್ನ ಸಂಗಯ್ಯನಲ್ಲಿ ದ್ವಿವಿಧಸಂಪನ್ನನಾಗಿ.

೩೦. ಆಚಾರವಿಡಿದು ಲಿಂಗ. ಅನುಭಾವವಿಡಿದು ಜಂಗಮ. ತನುವಿನ ಪ್ರಾಣ ಆಚಾರ. ಮನದ ಪ್ರಾಣ ಅನುಭಾವ. ಇದು ಕಾರಣ ಕೂಡಲಚನ್ನ ಸಂಗಮದೇವಾ ಲಿಂಗವನು ಜಂಗಮವನು ಬೇರರಸಲಿಲ್ಲ.

೩೧. ಆಚಾರವೇ ಲಿಂಗ. ಆ ಆಚಾರದ ಅರಿವೇ ಜಂಗಮ. ಅಂಗವೇ ಲಿಂಗ. ಚೈತನ್ಯವೇ ಜಂಗಮ. ಜಂಗಮ ಸೇವೆಯೇ ಲಿಂಗ. ಕೊಂಬುದೇ ಜಂಗಮ. ಇಂತು ಗುಹೇಶ್ವರನ ಶರಣರ ಆಚರಣೆಯಂತೆ ಆಚರಿಸಾ ಪ್ರಭುವೇ.

೩೨. ಜಂಗಮದನುವನರಿಯದಿರ್ದೊಡೆ ಲಿಂಗತನು ತನಗೆಲ್ಲಿಯದೋ? ಲಿಂಗವಿಪ್ಪ ಸೆಜ್ಜೆಯಲ್ಲಿ ಜಂಗಮ. ಜಂಗಮದ ಪ್ರಾಣವೆಲ್ಲ ಲಿಂಗವು. ರೇಕಣ್ಣಪ್ರಿಯನಾಗಿನಾಥ ಜಂಗಮದ ಕಾಯವ ತೊಟ್ಟು ಸುಳಿವನಾಗಿ.

೩೩. ಶ್ರೀ ಗುರು ಕರುಣವೇ ಲಿಂಗ. ಶ್ರೀ ಲಿಂಗದ ನಿಜವೇ ಜಂಗಮ. ಇಂತು ಇದು ಬಹಿರಂಗದ ವರ್ತನೆ. ಇನ್ನು ಅಂತರಂಗದ ಸುಜ್ಞಾನವೇ ಜಂಗಮ. ಆ ಜಂಗಮದ ನಡೆವ ಶಕ್ತಿಕ್ರಿಯೆಯೇ ಲಿಂಗ. ಆ ಉಭಯದ ಏಕತ್ವದ ಸಿದ್ಧಿಯೇ ಗುರು. ಇದು ಕಾರಣ ಅಂಗತ್ರಯದಲ್ಲಿ ಲಿಂಗತ್ರಯ ಸಂಬಂಧವಾದಲ್ಲಿ ಜಂಗಮ ದಾಸೋಹ ವಿಲ್ಲದಡೆ, ಲಿಂಗ ತೃಪ್ತಿಯಿಲ್ಲ. ಅಂಗದ ಮೇಲೆ ಲಿಂಗವಿಲ್ಲದಿರ್ದೊಡೆ, ಜಂಗಮ ಸೇವೆಯ ಕೈಕೊಳ್ಳ ಅದು ಕಾರಣ ಒಂದ ಬಿಟ್ಟು ಒಂದರಲ್ಲಿ ನಿಂದಡೆ ಅಂಗವಿಲ್ಲದ ಆತ್ಮನಂತೆ, ಶಕ್ತಿ ಇಲ್ಲದ ಶಿವನಂತೆ, ದೀಪವಿಲ್ಲದ ಪ್ರಕಾಶದಂತೆ. ಒಂದಂಗ ಶೂನ್ಯವಾಗಿ ಭಕ್ತಿಯುಂಟೇ? ಅವಯವ ಹೀನನು ರಾಯಪಟ್ಟಕ್ಕೆ ಸಲುವನೇ? ಅದು ದೇವತ್ವಕ್ಕೆ ಸಲ್ಲದು. ನಮ್ಮ ಕೂಡಲ ಚನ್ನ ಸಂಗಯ್ಯನಲ್ಲಿ ತ್ರಿವಿಧ ಸನ್ನುತವೇ ಜರಸೇವೆಯಯ್ಯ. ಮತ್ತಂ, ಜಂಗಮವೇ ಪರವೆಂದರಿದಡೇನು? ಆ ಜಂಗಮದಂಗವಲ್ಲವೇ ಲಿಂಗ? ಆ ಲಿಂಗದ ಚೈತನ್ಯದರಿವೆಲ್ಲವು ಜಂಗಮವಲ್ಲವೇ? ಅಂಗವಿಲ್ಲದ ಜೀವ

ಆತ್ಮ ವಿಲ್ಲದಂಗಕ್ಕೆ ಸರ್ವಯೋಗದ ಸುಖ ಉಂಟೇ? ಮಣ್ಣಿಲ್ಲದ ಮರ ನುಂಟೇ? ಮರವಿಲ್ಲದ ಹಣ್ಣುಂಟೇ? ಹಣ್ಣಿಲ್ಲದ ಸ್ವಾದ ಉಂಟೇ? ಹೀಗಿರುವುದಕ್ಕೆ ಕ್ರಮ, ಅಂಗವೇ ಮಣ್ಣು. ಲಿಂಗವೇ ಮರನು. ಫಲವೇ ಜಂಗಮ ರುಚಿಯೇ ಪ್ರಸಾದ. ಇದು ಕಾರಣ ಕೂಡಲ ಚನ್ನಸಂಗಯ್ಯನಲ್ಲಿ ಸಾಕಾರ ಲಿಂಗವೇ ಜಂಗಮದಂಗವಯ್ಯ ಪ್ರಭುವೇ.

೩೪. ಅಗ್ನಿಯಾಧಾರದಲಿ ಕಬ್ಬಿಣ ನೀರುಂಬುದಯ್ಯಾ. ಭೂಮಿ ಯಾಧಾರದಲಿ ವೃಷ್ಟಿ ನೀರುಂಬುದಯ್ಯಾ. ಜಂಗಮಕ್ಕೆ ಆಪ್ಯಾಯನ ವಾದರೆ. ಲಿಂಗಸಂತುಷ್ಟಿಯಹುದಯ್ಯ. ಇದು ಕಾರಣ ಕೂಡಲ ಸಂಗಮ ದೇವರಲ್ಲಿ ಜಂಗಮಕ್ಕೆ ಆಪ್ಯಾಯನವಾದರೆ ಲಿಂಗ ಸಂತುಷ್ಟಿ.

೩೫. ಶ್ರೀ ಗುರುವಿನ ಹಸ್ತದಲ್ಲಿ ಉಪದೇಶವಡೆದು ಭಕ್ತರಾದುದು ಮೊದಲಾಗಿ ನಿಮ್ಮ ಲಿಂಗವಾರೋಗಣೆ ಮಾಡದ ದಿನ ಉಂಟೇ? ಉಂಟಾದರೆ ತೋರಿ. ಇಲ್ಲದಿದ್ದರೆ ನೀವು ಕೇಳಿ. ನಾನು ನಮ್ಮ ಗುರುವಿನ ಹಸ್ತದಲ್ಲಿ ಉಪದೇಶ ವಡೆದು ಭಕ್ತನಾದುದು ಮೊದಲಾಗಿ ನಮ್ಮ ಲಿಂಗವು ನಿರಂತರ ಆರೋಗಣೆಯ ಮಾಡಿ ಪ್ರಸಾದವ ಕರುಣಿಸುವದು. ಇದು ಕಾರಣ ನಮಗೆ ಲಿಂಗ ಉಂಟು. ನಿಮ್ಮ ಲಿಂಗಕ್ಕೆ ಕರ ಚರಣ ಅವಯವಂಗಳಿಲ್ಲವಾಗಿ ನಿಮ್ಮ ಲಿಂಗವು ಸಕಲ ಭೋಗಂಗಳ ಭೋಗಿಸಲರಿಯದಾಗಿ ನಿಮಗೆ ಪ್ರಸಾದವಿಲ್ಲ. ಪ್ರಸಾದವಿಲ್ಲವಾಗಿ ನಿಮಗೆ ಲಿಂಗವಿಲ್ಲವೆಂದೆನು. ಅದಕ್ಕೆ ನೀವು ಸಂಕಲ್ಪಗೊಳ್ಳದಿರಿ. ಆ ವಿವರವನು ನಾನು ನಿಮಗೆ ಜೆನ್ನಾಗಿ ಕಾಣಿಸಿ ತೋರಿ ಹೇಳುವೆನು. ಅದು ಹೇಗೆಂದಡೆ, ನಿಮ್ಮ ಶ್ರೀಗುರು ನಿಮಗೆ ಪ್ರಾಣಲಿಂಗ ಸಂಬಂಧವ ಮಾಡುವಲ್ಲಿ ಆ ಲಿಂಗವೇ ಜಂಗಮದಂಗವು, ಆ ಜಂಗಮವೇ ಲಿಂಗದ ಪ್ರಾಣ ಚೈತನ್ಯ ಕಳೆಯ ಮಾಡಿ ನಿಮ್ಮ ಶ್ರೀಗುರು ಕರಸ್ಥಲದಲ್ಲಿ ಆ ಲಿಂಗವ ಕೊಟ್ಟ ಕಾರಣ ಇಂತಹ ಜಂಗಮ ಮುಖದಲ್ಲಿ ತೃಪ್ತನಹನಲ್ಲದೆ ಲಿಂಗದ ಮುಖದಲ್ಲಿ ನಾನು ತೃಪ್ತನಹನೆಂದು ಹೇಳಿಕೊಟ್ಟನೇ? ಶ್ರೀಗುರು ಲಿಂಗವನು ಹಾಗೆ ಕೊಟ್ಟುದಿಲ್ಲವಾಗಿ. ಆದೆಂತೆಂದೊಡೆ, ಶಿವರಹಸ್ಯದಲ್ಲಿ ಶಿವನ ವಾಕ್ಯ ಕ್ಲೋ॥ ಸ್ಥಾವರಾರ್ಪಿತ ನೈವೇದ್ಯಂ ನ ಚ ತೃಪ್ತಿರ್ಮಹೇಶ್ವರೀ। ಜಂಗಮಾರ್ಪಿತ ನೈವೇದ್ಯಾದಹಂ ತೃಪ್ತೋ ವರಾನನೇ॥ ಅದಕ್ಕೆ ಉಪದೃಷ್ಟ ವಾಕ್ಯ. ವೃಷ್ಟಿದ ಕೊನೆ ಕೊನೆಗಳಿಗೆ ಉದಕವ ನೀಡಿದರೆ, ವೃಷ್ಟಿಪಲ್ಲವಿಸುವುದೇ, ಬೇರಿಂಗೆ ನೀಡಬೇಕಲ್ಲದೇ? ಅಂದೆಂತೆಂದೊಡೆ, ವೃಷ್ಟಿಸ್ಯವದನಂ

ಭೂಮಿಃ ಸ್ಥಾವರಸ್ಯ ತು ಜಂಗಮಃ, ಅಂತುವೃಷ್ಟಿದ ಕೊನೆಯ ಸ್ಥಾನವೇ ಲಿಂಗವು. ಆ ವೃಷ್ಟಿದ ಬೇರಿನ ಸ್ಥಾನವೇ ಜಂಗಮವು. ಅದಕ್ಕೆ ಮತ್ತೆಯೂ ದೃಷ್ಟ. ಗರ್ಭಿಣೀ ಸ್ತ್ರೀಗೆ ಉಣಲಿಕ್ಕಿದಡೆ ಆ ಗರ್ಭದೊಳಗಣ ಶಿಶು ತೃಪ್ತಿಯಹುದಲ್ಲದೆ ಆ ಸ್ತ್ರೀಯ ಗರ್ಭದ ಮೇಲೆ ಸಕಲ ಪದಾರ್ಥಂಗಳ ನಿಕ್ಕಿದಡೆ, ಆ ಗರ್ಭದೊಳಗಣ ಶಿಶು ತೃಪ್ತಿಯಾಗ ಬಲ್ಲುದೇ? ಅದು ಕಾರಣ ಆ ಗರ್ಭದ ಸ್ತ್ರೀಯ ಸ್ಥಾನವೇ ಜಂಗಮವು. ಆ ಗರ್ಭದೊಳಗಣ ಶಿಶುವಿನ ಸ್ಥಾನವೇ ಲಿಂಗವು ಅದಕ್ಕೆ ಮತ್ತೆಯೂ ದೃಷ್ಟ. ಪೃಥ್ವಿಗೆ ಚೈತನ್ಯವಾದಡೆ ಸಸಿಗಳು ಬೆಳೆವವಲ್ಲದೆ, ಆ ಸಸಿಗಳ ಕೊನೆಯ ಮೇಲೆ ಮಳೆ ಸುರಿದರೆ ಆ ಸಸಿಗಳು ಬೆಳೆಯಬಲ್ಲವೇ? ಬೆಳೆಯಲರಿಯವಾಗಿ. ಅಂತು ಆ ಪೃಥ್ವೀಸ್ಥಾನವೇ ಜಂಗಮ. ಆ ಸಸಿಯ ಕೊನೆಯ ಸ್ಥಾನವೇ ಲಿಂಗವು. ಅದಕ್ಕೆ ಮತ್ತೆಯೂ ದೃಷ್ಟ. ದೇಹದ ಮೇಲೆ ಸಕಲ ಪದಾರ್ಥವ ತಂದಿರಿಸಿದಡೆ, ಆತ್ಮನು ತೃಪ್ತಿಯಾಗಬಲ್ಲುದೇ, ಜಿಹ್ವೆಯ ಮುಖದಲ್ಲಿ ತೃಪ್ತಿಯಹುದಲ್ಲದೆ? ಅಂತು ದೇಹಸ್ಥಾನವೇ ಲಿಂಗವು. ಜಿಹ್ವೆಯ ಸ್ಥಾನವೇ ಜಂಗಮವು. ಇಂತೀ ನಾನಾ ದೃಷ್ಟಂಗಳಲ್ಲಿ ತೋರಿ ಹೇಳಿದ ತೆರನಲ್ಲಿ ನಿಮ್ಮ ಲಿಂಗವು ನಮ್ಮ ಜಂಗಮದ ಸರ್ವಾಂಗದೊಳಗೆ ಹೊಂದಿಹ ಕಾಣಾ ಕೂಡಲ ಚೆನ್ನಸಂಗಮದೇವಾ.

೩೬. ತನು ಮನ ಧನ ತ್ರಿಸ್ಥಾನ ಸಂಗವಾಯಿತ್ತು. ಆಗಿ ಭಕ್ತಿಯು ಮದವೇರಿತ್ತು. ಸದ್ಭಕ್ತಿ ಸಂಭಾಷಣೆ ಕ್ರಿಯೆಯರತು ತೂರ್ಯಾತೂರ್ಯಗೊಂಡಿತ್ತಾಗಿ, ಲಿಂಗದಲ್ಲಿ ಅರಿವು, ಜಂಗಮದಲ್ಲಿ ಮರಹು, ಕೂಡಲಚನ್ನಸಂಗ ತಾನು ತಾನಾಗಿ.

೩೭. ಶ್ರೀಗುರು ಸಾಹಿತ್ಯವ ಸಂಬಂಧವ ಮಾಡುವಲ್ಲಿ, ಈ ಲಿಂಗವೇ ಜಂಗಮ. ಆ ಜಂಗಮವೇ ಈ ಲಿಂಗವೆಂದು ಹೇಳಿಕೊಟ್ಟಂತಹ ವಿವರವನರಿಯದೆ ಮರೆದು, ಈ ಲಿಂಗದೊಳಗೆ ಜಂಗಮ ಉಂಟೆಂದು ಜೊಗಳುತಿರ್ಪ ಮೂಕೊರೆಯರು ನೀವು ಕೇಳಿರೋ. ರಾಶಿಗಿಕ್ಕಿದ ಲಚ್ಚಣ ರಾಶಿಯ ಕೊಳಬಲ್ಲುದೇನೋ ಮೂಢ, ರಾಶಿಯ ಒಡೆಯನಲ್ಲದೆ? ಆ ಪರಿಯಲ್ಲಿ ಈ ಲಿಂಗವು ಜಂಗಮದ ಮುದ್ರೆ ಎಂದು ತಿಳಿ. ಅದಕ್ಕೆ ಜಂಗಮವೇ ಮುದ್ರೆಗೆ ಪತಿಯಾದ ಕಾರಣ, ಆ ಜಂಗಮದೊಳಗೆ ಆ ಲಿಂಗವುಂಟೆಂಬುದು ಸತ್ಯವಲ್ಲದೆ, ಈ ಲಿಂಗದೊಳಗೆ ಜಂಗಮವು ಉಂಟೆಂಬುದು ಸತ್ಯವಲ್ಲ. ವೃಷ್ಟಿದ ಕೊನೆಗಳಿಗೆ ಉದಕವ ನೀಡಿದರೆ

ಸ್ವತಂತ್ರನು ನೀನೇ. ವೃಷ್ಟಲಿಂಗ ಜಂಗಮ ಒಂದೇ ಎಂದಿಪ್ಪೆನು ಪರಮ ಪ್ರಭುವೇ ಕೂಡಲಸಂಗಮದೇವ.

೪೩. ಜಂಗಮ ನಿಂದೆಯ ಮಾಡಿ, ಲಿಂಗವ ಪೂಜಿಸುವ ಭಕ್ತನ ಅಂಗವಣೆ ಎಂತೋ? ಶಿವ ಶಿವ, ನಿಂದಿಸುವ ಪೂಜಿಸುವ ಪಾತಕವಿದ ಕೇಳಲಾಗದು ಗುರುವಿನ ಗುರು ಜಂಗಮ ಇಂತೆಂದುದು ಕೂಡಲ ಸಂಗನ ವಚನ.

೪೪. ಲಿಂಗದರ್ಶನ ಕರ ಮುಟ್ಟಿ, ಜಂಗಮದರ್ಶನ ಶಿರ ಮುಟ್ಟಿ, ಆವುದು ಘನವೆಂಬೆ, ಆವುದು ಕಿರಿದೆಂಬೆ? ತಾಳ ಸಂಪುಟಕ್ಕೆ ಬಾರದ ಘನವ ಅರ್ಪಿಸಹೋದರೆ, ಅರ್ಪಣ ಮುನ್ನಿಲ್ಲ. ಗಮನ ನಿರ್ಗಮನವಾಯಿತ್ತು. ಈ ಉಭಯ ಭೇದವನರಿಯುರಾಗಿ ಜಂಗಮವೇ ಲಿಂಗ ಕೂಡಲ ಸಂಗಮದೇವಾ.

೪೫. ಜಂಗಮ ಒಂದಾಗಿರ್ದ ಲಿಂಗ, ಲಿಂಗ ಒಂದಾಗಿರ್ದ ಜಂಗಮವನುಪಮೆಗೆ ತಂದು ಎರಡೆನ್ನಬಹುದೇ? ಮಹಾಘನ ಜಂಗಮ ಪ್ರಸಾದಿಗೊಯ್ವನು ಕೂಡಲಸಂಗಮದೇವಾ.

೪೬. ಕಾಯವು ಜೀವವು. ಜೀವವು ಕಾಯವು. ಇವು ಎಂತು ಬೆರಿಸಿಪ್ಪಂತೆ ಲಿಂಗದೊಳಗೆ ಜಂಗಮ, ಜಂಗಮದೊಳಗ ಲಿಂಗ ಬೆರಿಸಿಪ್ಪುದು ಭಿನ್ನಭಾವವಿಲ್ಲದೆ. ನ ಶಿವೇನ ವಿನಾ ಶಕ್ತಿರ್ನ ಶಕ್ತಿರಹಿತೋ ಶಿವಃ॥ ಪುಷ್ಪ ಗಂಧ ವಿನಾನ್ಯೈವ ಮರುತಾಂಬರಯೋರಿವ॥ ಎಂದುದಾಗಿ ಭಾವ ಭೇದವಿಲ್ಲದ ಜಂಗಮವೇ ಲಿಂಗ ಕೂಡಲಚನ್ನಸಂಗಮದೇವಾ.

೪೭. ಪಾದೋದಕವು ಲಿಂಗದ ಮೇಲೆ ಎಂದಲ್ಲಿ ಜಂಗಮ ಘನವಾಯಿತ್ತು. ಆ ಲಿಂಗೋದಕ ಸ್ವೀಕರಿಸಿದಲ್ಲಿ ಜಂಗಮಕ್ಕೆ ಲಿಂಗ ಘನವಾಯಿತ್ತು. ಲಿಂಗದ ಕಳೆಯೇ ಜಂಗಮ. ಜಂಗಮದ ಕಳೆಯೇ ಲಿಂಗ. ಆವುದು ಘನವೆಂಬೆ? ಆವುದು ಕಿರಿದೆಂಬೆ? ಲಿಂಗ ಜಂಗಮ ನೇತ್ರದ ಬೆಳ್ಳಿಯ ಪ್ರಕಾಶದಂತೆ ತಿಳಿದೆ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೪೮. ಸಕ್ಕರೆಯ ಬಿಟ್ಟು ರುಚಿಯ ತೆಗೆಯಬಹುದೇ? ಬೆಣ್ಣೆಯ ಬಿಟ್ಟು ಘೃತವ ತೆಗೆಯಬಹುದೇ? ಭೂಮಿಯ ಬಿಟ್ಟು ಜಗವ ಮಾಡಬಹುದೇ? ಜಂಗಮ ವಿರಹಿತ ಲಿಂಗವಿಲ್ಲ, ಲಿಂಗ ವಿರಹಿತ ಜಂಗಮವಿಲ್ಲ ಕೇಳಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

ಫಲವಹುದೆ, ಬೇರಿಂಗೆ ನೀರು ಬೇಕಲ್ಲದೆ? ಶಾಖೆ॥ ವೃಕ್ಷಸ್ಯವದನಂ ಭೂಮಿಃ। ಸ್ಥಾವರಸ್ಯ ಚ ಜಂಗಮಃ। ಸ್ಥಾವರಂ ವೃಕ್ಷ ಶಾಖೇ ಚ ವೃಕ್ಷವೂ ಲಂತು ಜಂಗಮಃ। ಇದು ಕಾರಣವಾಗಿ, ವೃಕ್ಷವ ಆಧಾರವೇ ಪೃಥ್ವಿ, ಆ ಪೃಥ್ವಿಯೇ ಜಂಗಮವು, ಶಾಖೆಯೇ ಲಿಂಗವು. ದೇಹದ ಮೇಲೆ ಸಕಲ ಪದಾರ್ಥವ ತಂದಿರಿಸಿದೊಡೆ ತೃಪ್ತಿಯಾಗುವುದೆ ಮುಖದಿಂದೊಳಿಯಕ್ಕೆ ನೀಡಬೇಕಲ್ಲದೆ? ಅದು ಕಾರಣವಾಗಿ, ಅವಯವಗಳುಳ್ಳ ಕಾಣಲ್ಪಟ್ಟ ಮುಖವನುಳ್ಳುದೇ ಜಂಗಮವು. ದೇಹವೇ ಲಿಂಗವು. ಲಿಂಗವೆಂಬುವುದು ಜಂಗಮವೊಂದಂಗವಯ್ಯಾ ಕೂಡಲಚನ್ನಸಂಗಮದೇವಾ.

೩೮. ಭಕ್ತನ ಹಸ್ತ ಮುಟ್ಟಿ ಪಾವನವಾದೆವೆಂಬರು. ಎಂಬನ್ನಕ್ಕರ ತಾವೇನು ಭವಿಗಳೇ? ಅವನ ಲಿಂಗ ದೇಹಿ ಎಂತೆಂಬೆ? ಲಿಂಗಾಚಾರಿ ಎಂತೆಂಬೆ? ಆತ ಪವಿತ್ರ ಕಾಯನೆಂತೆಂಬೆ? ಇದು ಕಾರಣವನ್ನು ಕೂಡಲ ಚನ್ನಸಂಗಯ್ಯನಲ್ಲಿ ಲಿಂಗವೇ ಕ್ಷೇತ್ರವು, ಜಂಗಮವೇ ಬೀಜವೆಂದರಿಯರಾಗಿ.

೩೯. ಜಗಭರಿತ ಲಿಂಗವೆಲ್ಲಿಡೆಯಲುಂಟು. ಶರಣಭರಿತ ಲಿಂಗವಪೂರ್ವವಯ್ಯಾ. ಗಮನ ಜಂಗಮವೆಲ್ಲಿಡೆಯಲುಂಟು. ನಿರ್ಗಮನ ಜಂಗಮವಪೂರ್ವವಯ್ಯಾ. ಅಜೇತನ ಲಿಂಗಕ್ಕೆ ಚೈತನ್ಯ ಜಂಗಮ ಸಾಹಿತ್ಯ ನೋಡಾ. ಇಂತೀ ಲಿಂಗಾಂಗಸಂಗಸಮರಸವಾದ ಸಕೀಲ ಸಂಬಂಧದಲ್ಲಿ ಪರಿಣಾಮಿಗಳಯ್ಯಾ ಕೂಡಲ ಚನ್ನಸಂಗಮದೇವಾ ನಿಮ್ಮ ಶರಣರು.

೪೦. ಭಿತ್ತಿ ಇಲ್ಲದೆ ಬರೆಯಬಹುದೇ ಚಿತ್ತಾರವ? ಬಿತ್ತಿ ಬೆಳೆಯಬಹುದೇ, ಧರೆ ಇಲ್ಲದೆ? ಜಂಗಮವಿಲ್ಲದೆ ಮಾಡಬಹುದೇ? ರೂಢಿ ಶನ ಭೇದಿಸಬಹುದೇ? ಒಡಲಿಲ್ಲದ ನಿರಾಳ ಕರ್ತೃ ಕೂಡಲ ಸಂಗಮದೇವ ಜಂಗಮ ಮುಖ ಲಿಂಗವಾದನಾಗಿ ಮತ್ತೊಂದನರಿಯೆನಯ್ಯ.

೪೧. ಆತ್ಮ ಲಿಂಗ, ಪರಮಾತ್ಮ ಜಂಗಮ. ತನು ಮಧ್ಯ ಪ್ರಸಾದವಾಯಿತ್ತು. ನಿಶ್ಚಿಂತ ನಿವಾಸವಾಯಿತ್ತು. ಕೂಡಲ ಸಂಗನ ಶರಣರ ಸಂಗದಿಂದ ನಿಶ್ಚಿಂತ ನಿವಾಸವಾಯಿತ್ತು.

೪೨. ಅಷ್ಟದಳ ಕಮಲಾತ್ಮನೊಳಗೆ ನೆಟ್ಟನೆ ಮನಃ ಪ್ರೇರಕ. ನಾ ನಿಮ್ಮ ನಂಬಿದೆ, ಮತ್ತೊಂದನರಿಯದೆ, ಮತ್ತೊಂದ ಕೇಳದೆ. ನಿತ್ಯ

೪೯. ಸಕ್ಕರೆಯು ಆಕಾರ, ರುಚಿಯು ನಿರಾಕಾರ. ಲಿಂಗವು ಕಾರ, ಜಂಗಮ ನಿರಾಕಾರ. ಬೆಣ್ಣೆ ಆಕಾರ, ಘೃತ ನಿರಾಕಾರ. ಆಕಾರ ಬಿಟ್ಟು ನಿರಾಕಾರವಿಲ್ಲ. ನಿರಾಕಾರ ಬಿಟ್ಟು ಆಕಾರವಿಲ್ಲ. ಲಿಂಗ ಜಂಗಮವೆಂಬುಭಯ ಶಬ್ದ ಒಂದೇ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

ಲಿಂಗ ಜಂಗಮ ಭಕ್ತ ಸಂಬಂಧ.

೫೦. ನಿತ್ಯ ನಿರಂಜನ ಪರಶಿವನು ಲಿಂಗ ಜಂಗಮ ಭಕ್ತನೆಂದು ಮೂರು ತೆರನಾದ ನೋಡಿರೇ. ಸದ್ರೂಪು ಲಿಂಗ, ಚಿದ್ರೂಪು ಭಕ್ತ, ಆನಂದಸ್ವರೂಪವೇ ಜಂಗಮ ನೋಡಾ. ಆ ಚಿತ್‌ಸ್ವರೂಪವಪ್ಪ ಭಕ್ತಂಗೆ ಸದ್ರೂಪವಪ್ಪ ಲಿಂಗವೇ ಅಂಗ. ಆನಂದಸ್ವರೂಪವಪ್ಪ ಜಂಗಮವೇ ಪ್ರಾಣ. ಇದುಕಾರಣ ಲಿಂಗವೇ ಅಂಗ, ಜಂಗಮವೇ ಪ್ರಾಣ. ಇದು ಕಾರಣ ಲಿಂಗವೇ ಅಂಗ ಜಂಗಮವೇ ಪ್ರಾಣ ಗ್ರಾಹಕನಾದ ಚಿನ್ಮಯ ನಯ್ಯ. ಭಕ್ತನು ಲಿಂಗ ಜಂಗಮ ಭಕ್ತ ಮೂರೊಂದಾಗಿ ಪರಶಿವತತ್ವ ದಲ್ಲಿ ಅಡಗಿದ ಅದ್ವೈತಪರಬ್ರಹ್ಮವು ತಾನೇ ಪರನುಭಕ್ತನು ನೋಡಾ ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ.

೫೧. ಲಿಂಗಕ್ಕೆ ನಾದವಿಲ್ಲ. ಅದೇನು ಕಾರಣ? ನಿಶ್ಶಬ್ದವಾಯಿತ್ತಾದ ಕಾರಣ. ಜಂಗಮಕ್ಕೆ ಬಿಂದುವಿಲ್ಲ. ಅದೇನು ಕಾರಣ? ಅದು ಶಬ್ದ ಮಂತ್ರೋಪದೇಶವನುಳ್ಳುದಾದ ಕಾರಣ. ಅದುಕಾರಣ ನಾದಸ್ವರೂಪವೇ ಜಂಗಮ. ಬಿಂದು ಸ್ವರೂಪವೇ ಲಿಂಗ. ಇದುಕಾರಣ ಲಿಂಗವೇ ಜಂಗಮವಂಗ. ಆ ಜಂಗಮವೇ ಲಿಂಗಪ್ರಾಣ. ಆ ನಾದ ಬಿಂದು ಸ್ವರೂಪವಪ್ಪ ಲಿಂಗಜಂಗಮಕ್ಕೆ ಆಧಾರವಾಗಿಪ್ಪ ಚಿತ್‌ಕಲಾಸ್ವರೂಪ ಭಕ್ತ. ಈ ನಾದ ಬಿಂದುಕಳೆಗಳ ಕೂಡಿಕೊಂಡಿಪ್ಪ ಶಿವತತ್ವವು ತಾನೇ ಲಿಂಗ ಜಂಗಮ ಭಕ್ತನೆಂದು ಮೂರು ತೆರನಾದನು ನೋಡಾ. ಈ ಮೂರೂ ಒಂದೇ ಎಂದರಿದೆನು ನೋಡಾ. ಎನ್ನ ಶರಣತ್ವದಾದಿಯ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.

೫೨. ಲಿಂಗಲೀಲೆ ಹೇಳುವಡೆನಗಸಾಧ್ಯನೋಡಾ ಅಯ್ಯ! ಭಕ್ತನ ಹಸ್ತದಲ್ಲಿ ಜಂಗಮವಾಗಿ ನೆಲಸಿದನಯ್ಯ ಲಿಂಗಮೂರ್ತಿಯು. ಜಂಗ

ಮನ ಹಸ್ತದಲ್ಲಿ ಭಕ್ತನಾಗಿ ನೆಲಸಿದನಯ್ಯ ಲಿಂಗಮೂರ್ತಿಯು. ಜಂಗಮ ಪೂಜಿಸಿದ ಫಲ ಸಂಪದಾದಿ ಮೋಕ್ಷ ಕೊಟ್ಟಿತ್ತು ಭಕ್ತಂಗೆ. ಭಕ್ತ ಪೂಜಿಸಿದ ಫಲ ಜ್ಞಾನ ಸಂಪದಾದಿ ವೈರಾಗ್ಯ ಕೊಟ್ಟಿತ್ತು ಜಂಗಮಂಗೆ. ಇಂತಪ್ಪ ಲಿಂಗಮೂರ್ತಿಯ ನೋಡಿ ನೋಡಿ ರೋಮಂಗಳೆಲ್ಲ ನಯನಂಗಳಾದವು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೫೩. ಇನಮುಂಡಲದೊಳಗೆ ಕಿರಣವಡಗಿಪ್ಪಂತೆ, ಫಲವಹ ಬೀಜದಲ್ಲಿ ವೃಕ್ಷವಡಗಿಪ್ಪಂತೆ, ಇಂದುಕಾಂತ ರವಿಕಾಂತದಲ್ಲಿ ಜಲಬಿಂದು ಅಗ್ನಿ ಇಪ್ಪಂತೆ, ಸಂದಕ್ಷೀರದಲ್ಲಿ ಹೊಂದಿ ದಧಿ ತಕ್ರಿ ನವನೀತ ಘೃತವಿಪ್ಪಂತೆ ಅಂಗದಮೇಲೆ ಲಿಂಗ ಸಾಹಿತ್ಯವಾಗಿ ತನ್ನೊಳಗೆ ಆ ಲಿಂಗವ ಕಂಡು ಲಿಂಗದೊಳಗೆ ತನ್ನ ಕಂಡು ತನ್ನೊಳಗೆ ಸಮಸ್ತ ವಿಸ್ತಾರವನೆಲ್ಲವ ಕಂಡು ಜಂಗಮ ಮುಖ ಲಿಂಗವೆಂಬ ಭೇದವನು ಲಿಂಗಕ್ಕೆ ಜಂಗಮವೇ ಪ್ರಾಣವಾಗಿಪ್ಪ ಭೇದವನು ಅಂಗದೊಳಗೆ ಲಿಂಗವೇ ಆಚಾರವಾಗಿ ಅಳವಟ್ಟ ವಿವರವನು ಲಿಂಗಾಂಗ ಸ್ಥಲ ಸಂಬಂಧ ಸ್ಥಳ ಕುಳಂಗಳ ವಿವರವಾಗಿ ಇದ್ದಿತೆಂಬುದನು ಕಂಗಳ ನೋಟಕ್ಕೆ ಗುರುವಾದ ಲಿಂಗವೆ ಅಂಗವನೊಳಕೊಂಬ ಭೇದವನು ಸಂಗನಬಸವಣ್ಣ ಚನ್ನಬಸವಣ್ಣನಿಂದೆ ಕೃಪೆ ಮಾಡಿಸಿ ಎನ್ನನುಳುಹು ಪ್ರಭುವೇ ಕಪಿಲಸಿದ್ಧಮಲ್ಲಿಕಾರ್ಜುನದೇವಯ್ಯ.

ಲಿಂಗ ಜಂಗಮ ಪ್ರಸಾದ ಸಂಬಂಧ.

೫೪. ಲಿಂಗ ಮುಖವನರಿದವಂಗೆ ಅಂಗವೆಂಬುದಿಲ್ಲ. ಜಂಗಮ ಮುಖವನರಿದವಂಗೆ ಸಂಸಾರವೆಂಬುದಿಲ್ಲ. ಪ್ರಸಾದ ಮುಖವನರಿದವಂಗೆ ಇಹಪರವೆಂಬುದಿಲ್ಲ. ಈ ತ್ರಿವಿಧವು ಒಂದಾದವಂಗೆ ಮುಂದೇನು ಇಲ್ಲವಯ್ಯಾ. ಈ ತ್ರಿವಿಧದ ನೆಲೆಯ ಶ್ರುತಿ ಸ್ಮೃತಿ ಪುರಾಣಾಗಮ ಇತಿಹಾಸಂಗಳರಿಯವಯ್ಯಾ. ಎಲೆಲೆ ಕೂಡಲಚನ್ನಸಂಗಯ್ಯ ನಿಮ್ಮ ಶರಣರೇ ಬಲ್ಲರಯ್ಯಾ.

೫೫. ಲಿಂಗ ಗ್ರಾಹಕನಾದ ಶರಣ ಅಂಗಗುಣಕ್ಕೆ ವಿರೋಧಿಯಯ್ಯಾ. ಜಂಗಮ ಗ್ರಾಹಕನಾದ ಶರಣ ತೀರ್ಥ ಪ್ರಾಣಾಭಿಮಾನಕ್ಕೆ ವಿರೋಧಿಯಯ್ಯಾ. ಪ್ರಸಾದ ಗ್ರಾಹಕನಾದ ಶರಣ ಜಿಹ್ವೇಂದ್ರಿಯದ

ರುಚಿಗೆ ವಿರೋಧಿಯಯ್ಯ. ಇಂತೀ ತ್ರಿವಿಧ ಗ್ರಾಹಕನಯ್ಯಾ ನಿಮ್ಮ ನಿಜ ಶರಣ ಕೂಡಲಚನ್ನಸಂಗಮದೇವಾ.

೫೬. ಕ್ರಿಯೆಯೆಂಬುದನಾರು ಬಲ್ಲರೋ? ಅಂಗ ಲಿಂಗ ವೆಂಬ ಸಂದು ಳಿದುದು ಕ್ರಿಯೆಯಲ್ಲ. ಅರ್ಪಿತ ಅನರ್ಪಿತವೆಂಬರು. ಅರ್ಪಿತವಾವುದು? ಅನರ್ಪಿತವಾವುದು? ತನುವೆಂಬ ಲಿಂಗವು ಪ್ರಾಣವೆಂಬ ಜಂಗಮಕ್ಕೆ ಮನವ ಸಮರ್ಪಣೆಯ ಮಾಡಿ ಆ ಪ್ರಾಣಲಿಂಗವೆಂಬ ಜಂಗಮಕ್ಕೆ ಮನವ ಸಮರ್ಪಿಸಿದ ನಿಃಕ್ರಿಯ ಪ್ರಸಾದಿಗಳ ತೋರಿಸಿ ಬದುಕಿಸಯ್ಯ ಎನ್ನ ಕೂಡಲ ಚನ್ನಸಂಗಮದೇವಾ.

೫೭. ಲಿಂಗವಾದ ಬಳಿಕ ಪೂಜಿಸಲಿಲ್ಲ. ಜಂಗಮವಾದ ಬಳಿಕ ನೋಡಲಿಲ್ಲ. ಪ್ರಸಾದಿಯಾದ ಬಳಿಕ ರುಚಿಸಲಿಲ್ಲ. ಇಂತೀ ತ್ರಿವಿಧ ಒಂದಾದ ಬಳಿಕ ಕಪಿಲಸಿದ್ಧಮಲ್ಲಯ್ಯ ಬೇರೊಂದು ತಿಳಿಯಲಿಲ್ಲ.

೫೮. ಪೂಜೆಯುಳ್ಳನ್ನಬರ, ಲಿಂಗವ ಹಾಡಿದೆ. ಮಾಟವುಳ್ಳನ್ನ ಬರ, ಜಂಗಮವ ಹಾಡಿದೆ. ಜಿಹ್ವೆಯುಳ್ಳನ್ನಬರ, ಪ್ರಸಾದವ ಹಾಡಿದೆ. ಈ ತ್ರಿವಿಧ ನಾಸ್ತಿಯಾದ ಬಳಿಕ ಎನ್ನ ನಾ ಹಾಡಿಕೊಂಡೆ ಕಾಣಾ ಕೂಡಲ ಸಂಗಮದೇವಾ.

ಗುರು ಲಿಂಗ ಜಂಗಮ ಸಂಬಂಧ.

೫೯. ಗುರುವಾದಡೂ ಮಲತ್ರಯದಾಸೆಯುಳ್ಳನ್ನಕ್ಕ ಮಲ ದೇಹಿ. ಲಿಂಗವಾದಡೂ ಶಕ್ತಿ ಸಂಪುಟವುಳ್ಳನ್ನಕ್ಕ ಭವಕ್ಕೊಳಗು. ಜಂಗಮವಾದಡೂ, ತನ್ನಿರವ ತಾನರಿಯದನ್ನಕ್ಕ ಪ್ರಸಿದ್ಧ ಭಾವವಿಲ್ಲ. ಇಂತಿದನರಿತು ಪೂಜಿಸಬೇಕು, ತನ್ನಯ ಜನ್ಮನಿವೃತ್ತಿಯ ಮಾಡಿಕೊ ಳಬಲ್ಲಡೆ. ಇದೇ ಸದ್ಭಕ್ತನಿರವು ಸದಾಶಿವ ಮೂರ್ತಿಲಿಂಗವನರಿವುದಕ್ಕೆ.

೬೦. ಗುರುವೆಂದಡೂ ಕಾಯವುಳ್ಳನ್ನಕ್ಕ ದೋಷಕ್ಕೆ ಹೊರಗಾ ಗಿರಬೇಕು. ಲಿಂಗವೆಂದಡೂ ಪೀಠಕ್ಕೆ ಸಿಕ್ಕಿಹನ್ನಕ್ಕರ ಜಗದಾಗುಚಾ ಗೆಯನರಿಯಬೇಕು. ಜಂಗಮವೆಂದಡೂ ಸುಖದುಃಖವುಳ್ಳನ್ನಕ್ಕರ ಕಾಯ ವಿಡಿದಿಹ ಕಾರಣ ಪಾತಕಕ್ಕೆ ಹೊರಗಾಗಿರಬೇಕು. ಶೂನ್ಯವಾದಡೂ ಆ

ಕುರುಹುಳ್ಳನ್ನಕ್ಕ ಸುಖ ದುಃಖಕ್ಕೊಳಗು. ಈಶಾನ್ಯಮೂರ್ತಿ ಮಲ್ಲಿಕಾ ರ್ಜುನ ಲಿಂಗವಾದಡೂ ಮರೆದಲ್ಲಿ ಭವಕ್ಕೆ ಬೀಜ.

೬೧. ಗುರುವೆಂಬವನಂಗವ ಧರಿಸಿದಡೇನು? ಚಿತ್ರದ ಕೈದೀಪಕ್ಕೆ ಮೊತ್ತದ ತಮ ಹರಿದುದುಂಟೇ? ನಿಃಕಳೆಯ ಲಿಂಗವ ಧರಿಸಿದಲ್ಲಿ ಫಲವೇನು? ಮೃತ್ತಿಕೆಯ ಬೊಂಬೆಯ ಕಯ್ಯಲ್ಲಿ ನಿಶ್ಚಯದ ಖಂಡೆ ಇರೆ, ಕೊಲಬಲ್ಲುದೇ? ವಿಧಾತೃ ರೂಪು ಲಾಂಛನವ ತೊಟ್ಟು ಭೈರೂ ಪಿಯಾದಲ್ಲಿ ನೆರೆ ಈಶನ ಯುಕ್ತಿಯ ವಿರಕ್ತ ಜಂಗಮವಾಗಬಲ್ಲನೇ? ಇಂತೀ ಮಾತಿನ ಬಳಕೆಯ ವಿಷವ ಬಿಟ್ಟು ನಿಜತತ್ವದ ಸಾಕಾರವೆಯಾದ ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವು ತಾನೆ.

೬೨. ಗುರುವಿಂಗೆ ಗುರುವಿಲ್ಲದೆ ಅರಿವ ಪರಿ ಇನ್ನೆಂತೋ? ಲಿಂಗಕ್ಕೆ ಕಳೆ ಇಲ್ಲದೆ, ಅರಿವ ಪರಿ ಇನ್ನೆಂತೋ? ಜಂಗಮಕ್ಕೆ ಪದ ಫಲ ನಾಸ್ತಿ ಯಾದಲ್ಲದೆ ಪ್ರಸಿದ್ಧವಹ ಪರಿ ಇನ್ನೆಂತೋ? ಇಂತೀ ಅರಿವನರಿದಲ್ಲಿ ಸದಾಶಿವ ಮೂರ್ತಿಲಿಂಗವನರಿದುದು.

೬೩. ಗುರುವು ಭವಕ್ಕೆ ಸಿಕ್ಕಿದಲ್ಲಿ ಶಿಷ್ಯಂಗೆ ನರಕಪ್ರಾಪ್ತಿ. ಲಿಂಗ ಭಜನೆಗೆ ಸಿಕ್ಕದಾಗವೇ ಮರಣಕ್ಕೊಳಗು. ಜಂಗಮ ಜಂಗುಳಿಯಾಗಿ ಕಂಡ ಕಂಡವರ ಅಂಗಣಕ್ಕೆ ಜಂಘೆಯನಿಕ್ಕಲಾಗಿ ನಿರಂಗಕ್ಕೆ ಹೊರಗು. ಇಂತಿವರು ನಿಂದುದಕ್ಕೆ ಬಂಧನವಿಲ್ಲದಿರಬೇಕು ಈಶಾನ್ಯ ಮೂರ್ತಿ ಮಲ್ಲಿ ಕಾರ್ಜುನಲಿಂಗವನರಿವುದಕ್ಕೆ.

೬೪. ಗುರುವಾದಡೆ ಭೃತ್ಯನ ಚಿತ್ತವನರಿಯಬೇಕು. ಲಿಂಗವಾ ದಡೆ ಆರ್ಚಕರ ಚಿತ್ತದಲ್ಲಿ ಅಜ್ಞೊತ್ತಿದಂತಿರಬೇಕು. ಜಂಗಮವಾದಡೆ ಉತ್ಪತ್ತಿ ಸ್ಥಿತಿ ಲಯದ ಗೊತ್ತ ಮೆಟ್ಟದೆ ನಿಶ್ಚಿಂತನಾಗಿರಬೇಕು. ಇಂತೀ ತ್ರಿವಿಧ ಲಿಂಗ ತ್ರಿವಿಧಾರ್ಪಣಕ್ಕೆ ಒಳಗಾಗಿ, ತ್ರಿವಿಧಾಂಗ ತ್ರಿವಿಧ ಮಲಕ್ಕೆ ಹೊರಗಾಗಿ, ತ್ರಿವಿಧಾತ್ಮ ತ್ರಿವಿಧ ಅರಿವಿನಲ್ಲಿ ಕರಿಗೊಂಡು ವಿಶ್ವಾಸಕ್ಕೆಡೆ ದೆರಪಿಲ್ಲದೆ, ತನ್ಮಯ ಮೂರ್ತಿ ತಾನಾದ ನಿಜೈಕ್ಯಂಗೆ ರಾಗ ವಿರಾಗವಿಲ್ಲ, ಪುಣ್ಯ ಪಾಪವಿಲ್ಲ, ಕರ್ಮ ನಿಃಕರ್ಮವಿಲ್ಲ. ಇಂತೀ ಭಿನ್ನ ಭಾವನಲ್ಲ ಬಸ ವಣ್ಣ ಪ್ರಿಯ ನಾಗರೇಶ್ವರ ಲಿಂಗವನರಿತ ಶರಣ.

ಅರ್ಥಃ— ಉಪದೇಶವ ಮಾಡುವುದಕ್ಕೆ ಕರ್ತನಾದ ಗುರುವಾದರೆ ಶಿಷ್ಯರುಗಳ ಹೃದಯವನರಿದು ಭಕ್ತಿಯ ಕೈಕೊಳ್ಳಬೇಕು. ಪೂಜೆಯ

ಕೈಕೊಂಬುದಕ್ಕೆ ಕರ್ತನಾವ ಲಿಂಗವಾದರೆ, ಪೂಜಕನ ಮನದಲ್ಲಿ ಎಸಕ ಪರಿದ ಹಾಗೆ ಕೂಡಿರಬೇಕು. ಪ್ರಾಣ ಲಿಂಗವಾಗಿ ಭಕ್ತರುಗಳಿಂದ ಭಕ್ತಿಯ ಕೈಕೊಂಬುದಕ್ಕೆ ಕರ್ತನಾದ ಜಂಗಮನಾದರೆ ಆವುದಾನೆಂದು ವಸ್ತುವಿನ ಮೇಲಣ ಬಯಕೆ ತನ್ನಲ್ಲಿ ಹುಟ್ಟುವದು. ಆ ವಸ್ತುವ ಸಾಧಿಸುವುದಕ್ಕೆ ಹಲವು ವರ್ತನೆಗಳಲ್ಲಿ ತಾ ಕೂಡಿರುವುದು. ಆ ವಸ್ತುವಿನಲ್ಲಿ ಮನವು ಲಯವ ನೆಯ್ದಿರುವುದು. ಈ ಸೃಷ್ಟಿ ಸ್ಥಿತಿ ಸಂಹಾರಂಗಳ ಉಪಾಧಿಯಲ್ಲಿ ನಿಲ್ಲದೆ, ಬಂದೀತು ಬಾರದೆಂಬ ಮನೋ ವ್ಯಾಕುಲ ವಿಲ್ಲದವನಾಗಿ ಇಂತೀ ಗುರು ಲಿಂಗ ಜಂಗಮವು, ತ್ರಿವಿಧ ಪದಾರ್ಥ ಕೈಕೊಂಬುದಕ್ಕೆ ಯೋಗ್ಯವಾಗಿ, ಆ ಭಕ್ತನ ಮೂರಂಗವು ಆಣವ ಮಾಯಾ ಕಾರ್ಮಿಕವೆಂಬ ಮಲ ಮೂರಕ್ಕೆ ಬೇರಾಗಿ, ತ್ಯಾಗ ಭೋಗ ಯೋಗಾಂಗವಾಗಿ ಇಷ್ಟ ಪ್ರಾಣ ಭಾವ ಲಿಂಗ ಸಂಬಂಧವಾಗಿ ಆತ್ಮತ್ರಯಂಗಳು ಜ್ಞಾನ ಗುರು ಲಿಂಗ ಜಂಗಮದ ಭಕ್ತಿಯಲ್ಲಿ ಇಂಬುಗೊಂಡು ಇಷ್ಟ ಪ್ರಾಣ ಭಾವ ಲಿಂಗದ ಮೇಲಣ, ಗುರುಲಿಂಗ ಜಂಗಮದ ಮೇಲಣ ಪ್ರೀತಿ ಪ್ರೇಮದಲ್ಲಿ ಭಿನ್ನವಿಲ್ಲದೆ ತನುತ್ರಯಂಗಳೆಲ್ಲ ಇಷ್ಟ ಪ್ರಾಣ ಭಾವ ಲಿಂಗ ಸ್ವರೂಪವಾಗಿ, ಆತ್ಮತ್ರಯಂಗಳೆಲ್ಲ ಗುರುಲಿಂಗ ಜಂಗಮ ಸ್ವರೂಪವಾದ ಮಹಾಲಿಂಗದಲ್ಲಿ ಏಕತ್ವವನುಳ್ಳ ಶಿವೈಕ್ಯಂಗೆ ಬಯಕೆ ನಿರ್ಬಯಕೆ ಇಲ್ಲ, ಶುಭಾಶುಭಂಗಳಿಲ್ಲ, ಜ್ಞಾನ ಕ್ರಿಗಳಿಲ್ಲ. ಈ ಖಂಡಿತ ಭಾವವುಳ್ಳಾತನಲ್ಲ ಲಿಂಗವೇ ತಾನೆಂದರಿದ ಶರಣನೆಂಬುದರ್ಥ.

೫೫. ಗುರುಲಿಂಗ ಜಂಗಮದ ಇರವನರಿವಲ್ಲಿ ತನ್ನ ಶ್ರದ್ಧೆಯೋ ಅವರಿಂವೋ ಎಂಬುದನರಿಯಬೇಕು. ಗುರುವಿನಲ್ಲಿ ಗುಣವ ನರಸಲಿಲ್ಲ ಎಂಬುದು, ಲಿಂಗದಲ್ಲಿ ಲಕ್ಷಣವನರಸಲಿಲ್ಲ ಎಂಬುದು, ಜಂಗಮದಲ್ಲಿ ಜಾತಿ ಸೂತಕವ ನರಸಲಿಲ್ಲ ಎಂಬುದು ಇದು ಎಲ್ಲರ ಬಳಕೆಯ ಮಾತು. ಗುರುವಿನಲ್ಲಿ ಗುಣವನರಸದಿರ್ದಡೆ ಶಿಷ್ಯನ ಕೃತಾರ್ಥನ ಮಾಡುವ ಪರಿ ಇನ್ನೆಂತೋ? ಲಿಂಗದಲ್ಲಿ ಲಕ್ಷಣವಿಲ್ಲದಿರ್ದಡೆ ಪಂಚಸೂತ್ರ ಪ್ರವರ್ತನ ವರ್ತುಳ ಗೋಮುಖ ಗೋಳಕಾಕಾರ ಇಷ್ಟಾರ್ಥ ಭಕ್ತರಿಗೆ ಮನೋಹರವಾಹ ಪರಿ ಇನ್ನೆಂತೋ? ಜಂಗಮಕ್ಕೆ ಜಾತಿ ಇಲ್ಲದಿರ್ದಡೆ ಉತ್ತಮ ಮಧ್ಯಮ ಕನಿಷ್ಠ ಈ ಅಂಗದಲ್ಲಿ ವಿಶೇಷವ ಕಂಡು ಜಾತಿಯ ಹಿಂಗುವ ಪರಿ ಇನ್ನೆಂತೋ? ನುಡಿಯಬಾರದು. ದರುಶನಕ್ಕಂಜಿ ಸುಮ್ಮನೆ ಇರಬಾರದು ಜ್ಞಾನಕ್ಕಂಜಿ ಬಿದಿರ ಹೊಟ್ಟೆಯಲ್ಲಿ ಉರಿಯಂತೆ ಬೇವುತ್ತಿದ್ದೇನೆ. ಈ ಬೇಗೆಯ ಬಿಡಿಸು ಆತುರ ವೈರಿ ಮಾರೇಶ್ವರಾ.

೫೬. ಗುರುವಿನಲ್ಲಿ ಗುಣವಿಲ್ಲದಿರ್ದಡೆ ಪೂಜ್ಯನಾಗಿ ಪೊಡಮಡಿಸಿಕೊಳ್ಳಲೇಕೆ? ಲಿಂಗದಲ್ಲಿ ಲಕ್ಷಣವಿಲ್ಲದಿರ್ದಡೆ ತ್ರಿಸಂಧ್ಯಾಕಾಲದಲ್ಲಿ ಪೂಜಿಸಿಕೊಳ್ಳಲೇಕೆ? ಜಂಗಮದಲ್ಲಿ ಜಾತಿ ಇಲ್ಲದಿರ್ದಡೆ, ಹಿಂದು ಕಿಂದೆಂದು ಹೊರಲೇತಕ್ಕೆ? ಇದನೇನ ಹೇಳುವೆ ಆತುರ ವೈರಿ ಮಾರೇಶ್ವರಾ?

೫೭. ಗುರುಲಿಂಗವು ಸಕಲನು, ಶಿವಲಿಂಗವು ನಿಃಕಲನು, ಜಂಗಮು ಲಿಂಗ ಸಕಲ ನಿಃಕಲನು, ಕಾಣಾ ಅಪ್ರಮಾಣ ಕೂಡಲ ಸಂಗನು ದೇವಾ.

೫೮. ಭೂತ ಒಲಿದಾತ್ಮನ ಸೋಂಕಿದ ಬಳಿಕ, ಭೂತದ ಗುಣವಲ್ಲದೆ, ಆತ್ಮನ ಗುಣವುಂಟೇ? ಗುರು ಕಾರುಣ್ಯವಾಗಿ, ಹಸ್ತ ಮಸ್ತಕ ಸಂಯೋಗವಾದ ಬಳಿಕ, ಗುರು ಲಿಂಗ ಜಂಗಮವೇ ಗತಿಯಾಗಿರ್ದೆ ಕೂಡಲ ಸಂಗಮದೇಪ.

೫೯. ಗುರುವಿನಲ್ಲಿ ಸದಾಚಾರ, ಲಿಂಗದಲ್ಲಿ ಶಿವಾಚಾರ, ಜಂಗಮದಲ್ಲಿ ಸಮಯಾಚಾರ, ಇಂತೀ ತ್ರಿವಿಧಾಚಾರ ಸಂಬಂಧವಾದ ಬಳಿಕ ತನ್ನ ಶೀಲಕ್ಕೆ ಶೀಲ ಸಮವಾಗದವರ ಮನೆಯಲ್ಲಿ ಅನುಸರಣೆಯ ಮಾಡಿ ಸಮ್ಮಿಶ್ರವ ಮಾಡಿದೊಡೆ ನಮ್ಮ ಕೂಡಲ ಚನ್ನಸಂಗನ ಶರಣ ಪೂರ್ವಾಚಾರಿಯಾದ ಸಂಗನಬಸವಣ್ಣ ಮೆಚ್ಚನಯ್ಯಾ.

೬೦. ಚರಿಸಿ ಜಂಗಮವೆನಿಸಿತ್ತಯ್ಯ ಲಿಂಗವು. ನೆಲಿಸಿ ಲಿಂಗವೆನಿಸಿತ್ತಯ್ಯ ಲಿಂಗವು ಇದರಿರವ ಅರುಹಿದಲ್ಲಿ ಗುರುವೆನಿಸಿತ್ತಯ್ಯ ಲಿಂಗವು. ಗುರುಲಿಂಗಜಂಗಮಕ್ಕೆ ತಿಲಾಂಶ ಭೇದವಿಲ್ಲ ನೋಡಾ ಎಲೇ ದೇವಾ. ಭೇದಿಸಿದವರಿಗೆ ಭವಬಾಧೆ ತಪ್ಪುವುದೇ ದೇವರದೇವರದೇವ ಕಪಿಲಸಿದ್ಧ ಮಲ್ಲಿಕಾರ್ಜುನ ದೇವಾ?

೬೧. ಲಿಂಗ ನೋಡಿದೊಡೆ ಮೈಗೊಟ್ಟುದಯ್ಯ ಷೋಡಶೋಪಚಾರಗಳಿಗೆ. ಜಂಗಮ ನೋಡುವಡೆ ಮೈಗೊಟ್ಟನಯ್ಯ ನಿರಾಕಾರಕ್ಕೆ. ಗುರು ನೋಡುವಡೆ ಭವದ ಜೇರು ಆಳಿಯಬೇಕೆಂದು ಸಾಕಾರವಾಗಿ ನಿಂದು ನೋಡಿದನಯ್ಯ ಕಪಿಲಸಿದ್ಧಮಲ್ಲಿಕಾರ್ಜುನಯ್ಯ.

ರ್ಥಗಳನ್ನು ಉಪಭೋಗವ್ಯಾಜದಿಂ ಸಂಹರಿಸುತ್ತಿರ್ಪನು. ಸೃಷ್ಟಿ ಕರ್ತೃವೇ ಸ್ಥೂಲವೂ, ಸ್ಥಿತಿ ಕರ್ತೃವೇ ಸೂಕ್ಷ್ಮವೂ, ಸಂಹಾರಕರ್ತೃವೇ ಕಾರಣವೂ ಆದುದರಿಂದ, ಸ್ಥೂಲಕ್ಕೆ ಸೂಕ್ಷ್ಮವೇ ಚೈತನ್ಯವು. ಸೂಕ್ಷ್ಮಕ್ಕೆ ಕಾರಣವೇ ಚೈತನ್ಯವು. ಆ ಕಾರಣವಿದ್ದಂತಿರ್ಪುದು. ಸಕಲ ಶರೀರಕ್ಕೂ ಶಿರಸ್ಸೇ ಕಾರಣವಾಗಿರ್ಪಂತೆ, ಲಿಂಗ ಭಕ್ತರಿಗೆ ಜಂಗಮವೇ ಕಾರಣವಾಗಿ, ಜಂಗಮೋಪಭೋಗದಿಂ ಲಿಂಗವು ತೃಪ್ತಿಗೊಳ್ಳುತ್ತಿರ್ಪುದಾದುದರಿಂದ ಜಂಗಮ ಪೂಜೆಯೇ ಸಕಲಕ್ಕೂ ಕಾರಣವಾಯಿತ್ತು. ಕಾರಣ ಶರೀರವಂ ಹೊಂದುವುದೇ ಸೂಕ್ಷ್ಮವು, ಅದೇ ಸ್ವಸ್ವರೂಪ ಜ್ಞಾನವು, ಅದೇ ಅಭೇದವು. ಅಂತಪ್ಪ ಜಂಗಮನ ಸೇವೆಯೆನಗೆ ಸಾಧ್ಯಮಪ್ಪಂತೆ ಮಾಡಿ ಸಲಹಾ ಮಹಾಘನದೊಡ್ಡ ದೇಶಿಕಾರ್ಯ ಗುರುಪ್ರಭುವೇ.

ಅಷ್ಟಾವರಣಗಳಲ್ಲಿ ಗುರುಲಿಂಗಜಂಗಮವು.

೭೬. ಶ್ರೀಗುರುವಿನ ಪಾದವೇ ಅವಿರಳ ಘನಲಿಂಗ, ತನ್ಮೂರ್ತಿಯೇ ಆರ್ಯನು, ತತ್ಸಂಬಂಧವಾದ ಸುಜ್ಞಾನವೇ ಚರಮೂರ್ತಿ. ಶಿವಲಿಂಗದ ಪೀಠವೇ ಗುರು, ಗೋಮುಖವೇ ಚರಮೂರ್ತಿ, ಗೋಳಕವೇ ಶಿವಲಿಂಗ. ಜಂಗಮದ ಶ್ರೀಪಾದವೇ ಅವಿರಳ ಘನಲಿಂಗ, ತನ್ಮೂರ್ತಿಯೇ ಚರಮೂರ್ತಿ, ತತ್ಸಂಬಂಧ ಸುಜ್ಞಾನವೇ ಶ್ರೀದೇಶಿಕ. ಶೇಷಸ್ವಯವೇ ಮಹಾಘನಲಿಂಗ, ತದ್ರುಚಿಯೇ ಚರಮೂರ್ತಿ, ಪರಿಣಾಮವೇ ಶ್ರೀಗುರು, ಪಾದೋದಕದ ಸ್ವರೂಪವೇ ಶ್ರೀಗುರು, ಸಚ್ಚಿದ್ರಸವೇ ಶಿವಲಿಂಗ, ಶಿವನ ಮುಖಾನಂದವೇ ಚರಮೂರ್ತಿ. ಭಸ್ಮಸ್ವಯವೇ ಶಿವಲಿಂಗ, ತದ್ಗತ ಮಂತ್ರವೇ ಚರಮೂರ್ತಿ, ದ್ವಂದ್ವಗ್ರಸ್ತ ಚೈತನ್ಯವೇ ಶ್ರೀಗುರು. ಅಕ್ಷದ ಮೂಲವೇ ಶ್ರೀಗುರು, ತನ್ನಾಳವೇ ಶಿವಲಿಂಗ, ತನ್ಮುಖವೇ ಚರಮೂರ್ತಿ. ನಮ ವರ್ಣವೇ ಶಿವಲಿಂಗ, ಶಿವಾಕ್ಷರವೇ ಚರಮೂರ್ತಿ, ಆ ಯಕಾರವೇ ಶ್ರೀಗುರು.

---

೭೭. ಗುರುವಿನಿಂದ ಲಿಂಗವ ಕಂಡೆನಲ್ಲದೆ ಲಿಂಗದಿಂದ ಲಿಂಗವ ಕಾಣಲಿಲ್ಲಯ್ಯ. ಲಿಂಗದಿಂದ ಫಲಪದವಿಗಳ ಕಂಡೆನಲ್ಲದೆ ಫಲಪದವಿಂದ ಫಲಪದವಿಗಳ ಕಾಣಲಿಲ್ಲವಯ್ಯ. ಜಂಗಮದಿಂದ ಮೋಕ್ಷವ ಕಂಡೆನಲ್ಲದೆ ಮೋಕ್ಷದಿಂದ ಮೋಕ್ಷವ ಕಾಣಲಿಲ್ಲಯ್ಯ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

೭೮. ಲಿಂಗ ಘನವೆಂಬೆನೆ? ಗುರುವಿಡಿದು ಕಂಡೆ. ಗುರು ಘನವೆಂಬೆನೆ? ಸಾಕಾರವಿಡಿದು ಕಂಡೆ. ಸಾಕಾರ ಘನವೆಂಬೆನೆ? ನಿರಾಕಾರವಿಡಿದು ಕಂಡೆ. ನಿರಾಕಾರ ಘನವೆಂಬೆನೆ? ಜಂಗಮವಿಡಿದು ಕಂಡೆನಯ್ಯ ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ.

೭೯. ಇನ್ನಾಡುವೆ ಇನ್ನಾಡುವೆ ಮನ ಬಂದ ಪರಿಯಲ್ಲಿ. ಅದಕ್ಕೆ ನೀವು ಸಂದೇಹಗೊಳ್ಳದಿರಿ, ಪ್ರಮಥರಿರಾ. ಸಂದೇಹವುಳ್ಳರೆ ಜಂಗಮವಲ್ಲ. ಸಂದೇಹವೇ ಲಿಂಗವಾದ ಬಳಿಕ ಇನ್ನೆಲ್ಲಿಹುದಯ್ಯ, ಇನ್ನೆಲ್ಲಿಹುದಯ್ಯ ಸಂಕಲ್ಪ ವಿಕಲ್ಪವು ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ?

೮೦. ಗುರುವೇ ಪರಬ್ರಹ್ಮವು. ಅದೆಂತೆಂದೊಡೆ, ಲಲಾಟದಲ್ಲಿರ್ಪ ಆತ್ಮನಂ ಭಸ್ಮತೇಜೋಮುಖದಿಂ ಕರಗ್ರಸ್ತವಂ ಮಾಡಿ ಹಸ್ತಮಸ್ತಕ ಸಂಗದಿಂ ಬ್ರಹ್ಮಸ್ಥಾನದಲ್ಲಿ ಭಾವಮಧ್ಯದಲ್ಲಿಂಬಿಟ್ಟು ಆ ವಸ್ತುವೇ ಶಿವನೆಂದು ಕರ್ಣೋಪದೇಶಮಂ ಮಾಡಿ, ಆ ವಸ್ತು ಹೇಗಿರ್ಪುದೆಂದರೆ ಹೀಗಿರ್ಪುದೆಂದು ಸಾಕಾರಮೂರ್ತಿಯಾದ ಲಿಂಗಮಂ ಕರದಲ್ಲಿ ಕೊಟ್ಟು ಒಳಗಿರ್ಪ ಮಂತ್ರವೂ ಹೊರಗಿರ್ಪ ಲಿಂಗವೂ ಭಾವದಲ್ಲೊಂದೆಯಾಗಿ ಪ್ರಕಾಶಿಸುವಂತೆ ಮಾಡಿ, ಅಂತಃಕರ್ಮವು ಮಂತ್ರದಿಂ, ಬಾಹ್ಯಕರ್ಮವು ಲಿಂಗದಿಂ, ಪೂತಮಾಗಿರ್ಪ ವಾಸನೆಯಳಿದು ಲಿಂಗಪ್ರಸಾದೋಪಭೋಗದಿಂ ಕರಣಂಗಳೆಲ್ಲ ಲಿಂಗದ ಕಿರಣಂಗಳಾಗಿ ಲಿಂಗಾನುಭವ ಸುಖದಿಂ ತನ್ನಂ ಮರೆತು, ಲಿಂಗವೇ ತಾನಾಗಿರ್ಪವನೇ ಜಂಗಮವು. ಲಿಂಗಯುಂತ್ರದಲ್ಲಿ ಮಂತ್ರಬೀಜಾಕ್ಷರವನಿಂಬಿಟ್ಟು, ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಿಂ ಪೂಜಿಸುತ್ತಿರ್ಪಾತನೇ ಭಕ್ತನು. ಗುರುವೆಂಬ ಪರಬ್ರಹ್ಮದಲ್ಲಿ ಜಂಗಮ ಲಿಂಗ ಭಕ್ತರೆಂಬ ಮೂರು ಮೂರ್ತಿಗಳುತ್ಪನ್ನರಾಗಿ, ಭಕ್ತನು ಕರ್ಮವಂ ಸೃಷ್ಟಿಸುತ್ತಿರ್ಪನು. ಲಿಂಗವು ತತ್ಕರ್ಮವಂ ರಕ್ಷಿಸುತ್ತಿರ್ಪುದು. ಜಂಗಮವು ಆ ಸತ್ಕರ್ಮಮುಖದಿಂ ಬಂದ ಪದಾ

ತನಗೂ ಗುರುಲಿಂಗ ಜಂಗಮಕ್ಕೂ ಇರುವ ಸಂಬಂಧ.

೭೭. ಕಾಯ ಗುರು, ಪ್ರಾಣ ಲಿಂಗ, ಜ್ಞಾನ ಜಂಗನು. ಕಾಯದಲ್ಲಿ ಶುದ್ಧ ಪ್ರಸಾದ, ಪ್ರಾಣದಲ್ಲಿ ಸಿದ್ಧ ಪ್ರಸಾದ, ಜ್ಞಾನದಲ್ಲಿ ಪ್ರಸಿದ್ಧ ಪ್ರಸಾದ. ಇಂತೀ ತ್ರಿವಿಧ ಪ್ರಸಾದ ನಿರ್ಣಯ ಕೂಡಲ ಚನ್ನ ಸಂಗಾ ನಿಮ್ಮ ಶರಣಂಗೆ.

೭೮. ಗುರುವೆಂದಡೆ ತನು, ಲಿಂಗವೆಂದಡೆ ಆತ್ಮ, ಜಂಗಮವೆಂದಡೆ ಆತ್ಮನ ಅರಿವು. ತ್ರಿವಿಧ ವ್ಯಾಪ್ತಿಯ ಕಳೆದುಳಿದ ಸಮ್ಯಜ್ಞಾನದ ಸಂಬಂಧವನು ನೀನೇ ಅನುಪಮ ಲಿಂಗ ನಿರವಯ ನಿಷ್ಕಳಂಕ ಮಲ್ಲಿಕಾರ್ಜುನಾ.

ಅರ್ಥಃ— ಗುರುವೆಂಬುದರ ಅರ್ಥವೇನಯ್ಯಾ ಎಂದರೆ, ಅಂಗದಲ್ಲಿ ಸಂಬಂಧ ವಾಗಿಪ್ಪದು. ಲಿಂಗವೆಂಬುದರ ಅರ್ಥವೇನಯ್ಯ ಎಂದರೆ, ಮನದಲ್ಲಿ ಸಂಬಂಧವಾಗಿಪ್ಪದು. ಜಂಗಮ ವೆಂಬುದರಥವೇನಯ್ಯಾ ಎಂದರೆ ಚಿದಾತ್ಮನಲ್ಲಿ ಸಂಬಂಧವಾಗಿಪ್ಪದು. ಮಲತ್ರಯಂಗಳ ವ್ಯಾಪ್ತಿಯನು ಪೆರ್ಪಡಿಸಿ, ತನುವೇ ಗುರು, ಮನವೇ ಲಿಂಗ, ಚಿದಾತ್ಮನೇ ಜಂಗಮವಾಗಿ, ಅವಶೇಷವಾಗಿರ್ದ ಸಮ್ಯಜ್ಞಾನದಲ್ಲಿ ಕೂಟಸ್ಥನಾದ ಶರಣನೇ ಶಿವನು ಉಪಮಿಸಬಾರದ ಲಯಗಮನಂಗಳಿಗೆ ಕಾರಣವಾದ ನಿರಾಕಾರವಾದ ಎಲೆ ಶಿವನೇ ಎಂಬುದರ್ಥ.

೭೯. ಕಾಯವಿದ್ದು ಕಾಂಬುವುದು ಗುರುಸ್ಥಲ. ಜೀವವಿದ್ದು ಕಾಂಬುವುದು ಲಿಂಗಸ್ಥಲ. ಭಾವವಿದ್ದು ಕಾಂಬುವುದು ಜಂಗಮಸ್ಥಲ. ತ್ರಿವಿಧವನೊಡಗೂಡಿ ಕಾಂಬುವುದು ಭಕ್ತಸ್ಥಲ. ಭಕ್ತಿ ನಿಶ್ಚಯವಾಗಿ ನಿಂದಲ್ಲಿ ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗ ನಿಶ್ಚಯವಾದ ಸ್ಥಲ.

೮೦. ತನುವಿಡಿದು ಕಾಂಬುವುದು ಗುರುವಿನ ಭೇದ, ಮನವಿಡಿದು ಕಾಂಬುವುದು ಲಿಂಗಭೇದ. ಜ್ಞಾನವಿಡಿದು ಕಾಂಬುವುದು ಜಂಗಮದ ಭೇದ. ಈ ತ್ರಿವಿಧವಿಡಿದು ಕಾಂಬುವುದು ಮಹಾಪ್ರಕಾಶ. ಮಹಾಪ್ರಕಾಶದೊಳಗೆ ಮಹವ ಕಂಡು ಮಹಕ್ಕೆ ಮಹನಾಗಿರ್ದಿನಯ್ಯಾ ಮಹಲಿಂಗ ಗುರುಶಿವಸಿದ್ಧೇಶ್ವರಪ್ರಭುವೇ.

೮೧. ಗುರುವೇ ಅಂಗ, ಲಿಂಗವೇ ಮನ, ಜಂಗಮವೇ ಪ್ರಾಣವಯ್ಯ. ನಾದವೇ ಗುರು, ಬಿಂದುವೇ ಲಿಂಗ, ಕಳೆಯೇ ಜಂಗಮವಯ್ಯ. ಗುರುವೇ ಲಿಂಗ, ಲಿಂಗವೇ ಜಂಗಮ, ಜಂಗಮವೇ ಪ್ರಸಾದ. ಪ್ರಸಾದ ಪರಿಪೂರ್ಣವಾದಡೆ ಸೌರಾಷ್ಟ್ರ ಸೋಮೇಶ್ವರಲಿಂಗವು ತಾನೇ.

೮೨. ಮನ ಘನವಸ್ತುವಾದ ಬಳಿಕ, ಮನ ವಚನ ಕಾಯವೆಂಬ ತ್ರಿಕರಣ ಶುದ್ಧಾತ್ಮನೆಂಬೆ, ನಿತ್ಯ ಮುಕ್ತನೆಂಬೆ, ನಿರಾಲಂಬಿ ಎಂಬೆ. ಆತನ ತನು ಶುದ್ಧವಾಗಿ, ತನುವೇ ಗುರು, ಆತನ ಮನ ಶುದ್ಧವಾಗಿ ಮನವೇ ಲಿಂಗ, ಆತನ ಭಾವ ಶುದ್ಧವಾಗಿ, ಭಾವವೇ ಮಹಾನುಭಾವ ಚರಲಿಂಗ ನೋಡಾ. ಇಂತೀ ಜ್ಞಾನವೆಂಬ ಗುರು, ಅರುಹೆಂಬ ಶಿವಲಿಂಗ, ಮಹಾನುಭಾವವೆಂಬ ಜಂಗಮ, ಇಂತೀ ತ್ರಿವಿಧವು ತನ್ನ ತ್ರಿವಿಧಾತ್ಮ ನೋಡಾ. ಜ್ಞಾನವೆಂಬ ಗುರುವೆಂದಡೆ ಜೀವಾತ್ಮ, ಅರುಹೆಂಬ ಶಿವಲಿಂಗವೆಂದಡೆ ತನ್ನ ಅಂತರಾತ್ಮ, ಮಹಾನುಭಾವ ಜಂಗಮವೆಂದಡೆ ತನ್ನ ಪರಮಾತ್ಮ. ಇಂತೀ ತ್ರಯಾತ್ಮವೇ ಏಕಾತ್ಮವಾದಡೆ ಸಚ್ಚಿದಾನಂದ ನಿರಂಜನ ಪರಾಪರ ವಸ್ತು ನೀನೇ. ಅಲ್ಲಿ ನಾ ನೀ ಎನಲಿಕ್ಕಿಲ್ಲ ಮಹಾಲಿಂಗ ಗುರುಶಿವಶಿದ್ಧೇಶ್ವರಪ್ರಭುವೇ.

೮೩. ಎನ್ನಂಗದಲ್ಲಿ ಆಚಾರವ ತೋರಿದನಯ್ಯ ಬಸವಣ್ಣನು. ಆಚಾರವನೇ ಲಿಂಗವೆಂದರುಹಿದನಯ್ಯ ಬಸವಣ್ಣನು. ಎನ್ನ ಪ್ರಾಣದಲ್ಲಿ ಅರಿವ ತೋರಿದನಯ್ಯ ಬಸವಣ್ಣನು. ಆ ಅರಿವೇ ಜಂಗಮವೆಂದರುಹಿದನಯ್ಯ ಬಸವಣ್ಣನು. ಚನ್ನಮಲ್ಲಿಕಾರ್ಜುನಯ್ಯ ಎನ್ನ ಹೆತ್ತ ತಂದೆ ಸಂಗನಬಸವಣ್ಣನು ಎನಗೀ ಕ್ರಮವನರುಹಿದನಯ್ಯ ಪ್ರಭುವೇ.

೮೪. ಗುರು ಸ್ವರೂಪವಾಗಿ ಮಹಸ್ಥಾನದಲ್ಲಿ ಇರುತಿರ್ದೆ. ಲಿಂಗ ಸ್ವರೂಪವಾಗಿ ಭ್ರೂಮಧ್ಯದಲ್ಲಿ ಇರುತಿರ್ದೆ. ಜಂಗಮ ಸ್ವರೂಪವಾಗಿ ಹೃದಯ ಕಮಲ ಮಧ್ಯದಲ್ಲಿ ಇರುತಿರ್ದೆ. ಈ ಪರಿ ಅಂತರಂಗ ಭರಿತನಾಗಿರ್ದಿನಯ್ಯ. ಬಹಿರಂಗದಲ್ಲಿ ಶ್ರೀ ಗುರು ಲಿಂಗವಾಗಿ ದೀಕ್ಷಿಸಿ ರಕ್ಷಿಸಿದೆ. ಶಿವಲಿಂಗವಾಗಿ ಕರಸ್ಥಲದಲ್ಲಿ ಪೂಜೆಗೊಂಡು ರಕ್ಷಿಸಿದೆ. ಜಂಗಮಲಿಂಗವಾಗಿ ಅವಗುಣಂಗಳೆಲ್ಲವ ಕಳೆದು ಶಿಕ್ಷಿಸಿ ರಕ್ಷಿಸಿದೆ. ಇಂತೀ ತ್ರಿವಿಧವು ಒಂದೇ ರೂಪಾಗಿ ಅಂತರಂಗ ಬಹಿರಂಗ ಭರಿತವಾಗಿ ಪ್ರಸಾದವ ಕರುಣಿಸಿ ಮುಕ್ತನ ಮಾಡಿದೆಯಯ್ಯ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

೮೫. ತ್ರಿವಿಧದ ಅನಿತ್ಯ ತ್ರಿವಿಧದ ನಿತ್ಯವ ಬಲ್ಲವರಾರೋ? ತ್ರಿವಿಧಕ್ಕೆ ತ್ರಿವಿಧವನಿತ್ತು ತ್ರಿವಿಧ ಪ್ರಸಾದವ ಕೊಳಬಲ್ಲಡೆ ಆತನ ತ್ರಿವಿಧಸೆಂಬೆ, ಆತನ ವೀರನೆಂಬೆ, ಆತನ ಧೀರನೆಂಬೆ, ಗುಹೇಶ್ವರ ಲಿಂಗದಲ್ಲಿ ಆತನ ಅಚ್ಚಪ್ರಸಾದಿ ಎಂಬೆ.

೮೬. ಅರುಹು ತಲೆದೋರಿತೆಂದು ಗುರು ಹಿರಿಯರ ಜರಿಯಲಾಗದಯ್ಯ. ಗುರುವನು ಜರಿಯೆ. ಹಿರಿಯರನು ಜರಿಯೆ. ಆದೇನು ಕಾರಣವೆಂದರೆ, ಗುರುವೇ ಸದ್ರೂಪು, ಲಿಂಗವೇ ಚಿದ್ರೂಪು, ಜಂಗಮವೇ ಆನಂದ ಸ್ವರೂಪವು ಅವನು ಜರಿಯಲುಂಟೇ? ನಡುವಣ ಪ್ರಕೃತಿಯ ಜರಿವುತ್ತಿರ್ಪನಯ್ಯ. ಪ್ರಕೃತಿಯ ಜರಿದರೆ ಗುರುಹಿರಿಯರಿಗೆ ನಿಮಗೇಕೆ ದುರ್ಮಾನವಯ್ಯಾ? ಪ್ರಕೃತಿ ಏನು ನಿಮ್ಮ ಸೊಮ್ಮು ಹೇಳಿರಯ್ಯಾ? ಜೀವನೋಪಾಯಕ್ಕೆ ಪರಮಾರ್ಥವನೊಲ್ಲ ಎಂಬ ಪ್ರಪಂಚಿಗಳನು ಮೆಚ್ಚನು ಕಾಣಾ ಮಹಾಲಿಂಗ ಗುರುತಿವಸಿದ್ಧೇಶ್ವರಪ್ರಭುವೇ.

೮೭. ಸರ್ವ ನಿರ್ವಾಣವಾದಲ್ಲಿ ಗುರುಸ್ಥಲ. ಲಯ ನಿರ್ವಾಣವಾದಲ್ಲಿ ಲಿಂಗಸ್ಥಲ. ಇಷ್ಟ, ಕಾಮ್ಯ, ಮೋಕ್ಷಂಗಳು, ಉತ್ಪತ್ತಿ, ಸ್ಥಿತಿ, ಲಯ, ಆಣವ, ಮಾಯಿಕ, ಕಾರ್ಮಿಕ ನವಗುಣಂಗಳು ನಿಂದು ಶಬ್ದಮುಗ್ಧವಾದುದು ಜಂಗಮಸ್ಥಲ. ಇಂತೀ ಸ್ಥಲ ಕುಳಂಗಳ ಭೇದಿಸಿ ಸರ್ವಜ್ಞ ಪರಿಪೂರ್ಣವಾಗಿಪ್ಪ ತ್ರಿವಿಧ ಮೂರ್ತಿಯೇ ನಿಃಕಳಂಕ ಮಲ್ಲಿಕಾರ್ಜುನ ತಾನು ತಾನೇ.

೮೮. ಮೃದು ರುಚಿ ರೂಪು ಕೂಡಿ ಸಕ್ಕರೆಯಾಯಿತ್ತು. ಗುರು ಲಿಂಗ ಜಂಗಮ ಕೂಡಿ ವಸ್ತು ಆಯಿತ್ತು. ಮೃದುವಿನಂತೆ ಗುರುವು, ರುಚಿಯಂತೆ ಲಿಂಗ, ರೂಪಿನಂತೆ ಜಂಗಮ, ಕೇಳಾ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

೮೯. ತನ್ನ ತಾನರಿದಡೆ ತನ್ನರಿವೇ ಗುರು, ತಾನೇ ಲಿಂಗ, ತನ್ನ ನಿಷ್ಪತ್ತಿಯೇ ಜಂಗಮ. ಇಂತೀ ತ್ರಿವಿಧವು ಒಂದಾದಡೆ ರಾಮೇಶ್ವರ ಲಿಂಗವು ತಾನೆ.

೯೦. ಎನ್ನ ಜಿನ್ನಾದದಿರವ ಗುರುವೆಂದೆನಿಸಿದ ಬಸವಣ್ಣ. ಎನ್ನ ಚಿದ್ಬಿಂದುವಿನ ಇರವ ಲಿಂಗವೆಂದೆನಿಸಿದ ಬಸವಣ್ಣ. ಎನ್ನ ಚಿತ್ಕಳೆಯ ಇರವ ಜಂಗಮವೆಂದೆನಿಸಿದ ಬಸವಣ್ಣ. ಗುರುವಿನಲ್ಲಿ ಶುದ್ಧ, ಲಿಂಗದಲ್ಲಿ

ಸಿದ್ಧ, ಜಂಗಮದಲ್ಲಿ ಪ್ರಸಿದ್ಧ, ಇಂತೀ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದದಲ್ಲಿ ಎನ್ನನುಣಕಲಿಸಿದ ಕಲಿದೇವ ನಿಮ್ಮ ಶರಣ ಸಂಗನ ಬಸವಣ್ಣ.

೯೧. ಗರಿಯ ಕಟ್ಟದ ಕೋಲು ಗುರಿಯ ತಾಕಬಲ್ಲುದೇ ಅಯ್ಯ? ಗುರು ಲಿಂಗ ಜಂಗಮದ ಪಾದತೀರ್ಥ ಪ್ರಸಾದವನರಿಯದೆ ಪರವ ಕಂಡೆನೆಂಬ ದುರಾಚಾರಿಗಳ ಮುಖವ ನೋಡಲಾಗದು ಕಾಣಾ ಕಲಿದೇವರದೇವಯ್ಯ.

೯೨. ಗುರುವಾಗಿ ಬಂದು ಎನಗೆ ದೀಕ್ಷೆಯ ಮಾಡಿದಿರಿ. ಲಿಂಗವಾಗಿ ಬಂದೆನ್ನ ಮನದ ಮಲಿನವ ಕಳೆದಿರಿ. ಜಂಗಮವಾಗಿ ಬಂದೆನ್ನ ಪ್ರಪಂಚುಕತನವ ಕಳೆದು ಪರಮ ಸೀಮೆಯ ಮಾಡಿದಿರಿ. ಇಂತಿವೆಲ್ಲವು ಬಸವಣ್ಣನಾಗಿ ಎನಗೆ ಪ್ರಸಾದವ ನೀಡಿ ಸಲಹಿದ ಕಪಿಲಸಿದ್ಧ ಮಲ್ಲಿಕಾರ್ಜುನ. ಇನ್ನೆನಗತಿಶಯವು ಇಲ್ಲ.

೯೩. ಉಪದೇಶವ ಮಾಡಿದಲ್ಲಿ ಗುರುವೆನಿಸಿದನು. ಕಾಮಿತ ಫಲಂಗಳ ಕೊಟ್ಟಲ್ಲಿ ಲಿಂಗಮೂರ್ತಿ ಎನಿಸಿದನು. ನಿತ್ಯ ನಿರ್ವಾಣದ ಸಕೀಲವ ತೋರಿದಲ್ಲಿ ಜಂಗಮ ವೆನಿಸಿದನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ.

೯೪. ಗುರುವಿನಿಂದ ಲಿಂಗವ ಕಂಡೆನಲ್ಲದೆ ಲಿಂಗದಿಂದ ಲಿಂಗವ ಕಾಣಲಿಲ್ಲವಯ್ಯ. ಲಿಂಗದಿಂದ ಫಲ ಪದವಿಗಳ ಕಂಡೆನಲ್ಲದೆ ಫಲ ಪದಂಗಳಿಂದ ಫಲ ಪದವಿಗಳ ಕಾಣಲಿಲ್ಲವಯ್ಯ. ಜಂಗಮದಿಂದ ಮೋಕ್ಷವ ಕಂಡೆನಲ್ಲದೆ, ಮೋಕ್ಷದಿಂದ ಮೋಕ್ಷವ ಕಾಣಲಿಲ್ಲವಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

೯೫. ಚರಿಸಿ ಜಂಗಮವೆನಿಸಿತ್ತಯ್ಯ. ಲಿಂಗವು. ನೆಲಿಸಿ ಲಿಂಗವೆನಿಸಿತ್ತಯ್ಯ ಲಿಂಗವು. ಇದರಿರವ ಅರುಹಿದಲ್ಲಿ ಗುರುವೆನಿಸಿತ್ತಯ್ಯ ಲಿಂಗವು. ಗುರುಲಿಂಗ ಜಂಗಮಕ್ಕೆ ತಿಲಾಂಶ ಭೇದವಿಲ್ಲ ನೋಡಾ ಎಲೆ ದೇವಾ. ಭೇದಿಸಿದವಗೆ ಭವಬಾಧೆ ತಪ್ಪುವುದೇ ದೇವರದೇವ ಕಪಿಲಸಿದ್ಧ ಮಲ್ಲಿಕಾರ್ಜುನ ದೇವಾ.

ಗುರುಲಿಂಗಜಂಗಮದ ಸಾಧನೆ.

೯೭. ಆಚಾರ ಅಂಗಸಂಬಂಧವಾದಲ್ಲಿ ಶ್ರೀಗುರು ಸನ್ನಿಹಿತ.ಅರಿವು ಮನ ಸಂಬಂಧವಾದಲ್ಲಿ ಶಿವಲಿಂಗ ಸನ್ನಿಹಿತ. ಉಭಯ ಲಾಂಛನವು ಸಂಬಂಧವಾದಲ್ಲಿ ಜಂಗಮಲಿಂಗ ಸನ್ನಿಹಿತ. ಇದು ಕಾರಣ ಕೂಡಲ ಚನ್ನಸಂಗಯ್ಯ ನಿಮ್ಮಲ್ಲಿ ತ್ರಿವಿಧಸಂಪನ್ನನಾ ಶರಣನು.

೯೮. ಪೂಜಿಸಿ ಕಾಂಬುವುದು ಗುರುವಿನ ಭೇದ. ಧ್ಯಾನಿಸಿ ಕಾಂಬುವುದು ಲಿಂಗದ ಭೇದ. ಉಭಯದಲ್ಲಿ ನಿಂದು ವಿಚಾರಿಸಿ ಕಾಂಬುವುದು ಜಂಗಮದ ಭೇದ. ಜಾ ಎಂಬಲ್ಲಿ ಜನನ ನಾಸ್ತಿ, ಗಾ ಎಂಬಲ್ಲಿ ಗಮನನಾಸ್ತಿ. ಮಾ ಎಂಬಲ್ಲಿ ಮರಣ ನಾಸ್ತಿ. ಈ ತ್ರಿವಿಧ ನಾಸ್ತಿಯಾಗಿ ನಿಂದುದು ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವು ನಿಂದ ನಿಲವು.

೯೯. ಭಾವ ಶುದ್ಧವಾಗಿಪ್ಪುದೇ ಗುರು ಪೂಜೆ. ಜ್ಞಾನಶುದ್ಧವಾಗಿ ಪ್ಪುದೇ ಲಿಂಗಪೂಜೆ. ತ್ರಿಕರಣ ಶುದ್ಧವಾಗಿ ತ್ರಿವಿಧ ಮಲದಲ್ಲಿ ನಿಶ್ಚಯ ವಾಗಿ ನಿಂದುದೇ ಜಂಗಮಪೂಜೆ. ಇಂತೀ ತ್ರಿವಿಧ ಭೇದದಲ್ಲಿ ತ್ರಿವಿ ಧಾರ್ಪಣವನರ್ಪಿಸಿ ನಿಂದುದೇ ಚಂದೇಶ್ವರ ಲಿಂಗಕ್ಕೆ ಅರ್ಪಿತ.

೧೦೦. ಆತ್ಮತೇಜವ ಬಿಟ್ಟಾಗಳೇ ಗುರುವನಂದವ. ಮನವಿಕಾ ರವ ಬಿಟ್ಟಾಗಳೇ ಲಿಂಗವನರಿವ. ಧನವಿಕಾರವ ಬಿಟ್ಟಾಗಳೇ ಜಂಗಮವ ನರಿದ. ಇಂತು ತ್ರಿವಿಧ ನಾಸ್ತಿಯಾದಂಗಲ್ಲದೆ ನಿಃಕಳಂಕ ಮಲ್ಲಿಕಾರ್ಜು ನನಲ್ಲಿ ಸಹಜಭಕ್ತನಲ್ಲ.

೧೦೧. ಧ್ಯಾನದಿಂದ ವಸ್ತು, ವಿಷಯದಿಂದ ಮೋಹ. ಭಾವ ಶುದ್ಧದಿಂದ ಗುರುಸ್ಥಲ, ದ್ವಂದ್ವವಳಿದು ನಿಂದುದು ಲಿಂಗ, ತ್ರಿವಿಧ ಸಂದನಳಿದು ಸಲೆ ನಿಂದುದು ಜಂಗಮ. ಈ ಸ್ಥಲದಂಗವನರಿದು ಭಯ ಭಂಗವಿಲ್ಲದೆ ಸುಸಂಗದಿಂದ ಮಾಡುವುದು ಭಕ್ತಸ್ಥಲ ನಿಶ್ಚಯವಾಗಿ ನಿಂದುದು. ಕಾಲಾಂತಕ ಭೀಮೇಶ್ವರಲಿಂಗದಲ್ಲಿ ನಿಶ್ಚಯಿಸುವದುಭಯ ಭಾವ.

೧೦೧. ಗುರುಭಕ್ತನಾದಲ್ಲಿ ಗುರುವಳಿದು ತಾನುಳಿದರೆ ಗುರು ಭಕ್ತನಲ್ಲ. ಲಿಂಗಭಕ್ತನಾದಡೆ ಜಾಗ್ರ ಬಾಹ್ಯಗಳಲ್ಲಿ ತಮ್ಮಂಗವ ಬಿಟ್ಟು

ಲಿಂಗ ಹಿಂಗದಲ್ಲಿ ಆತ್ಮನೊಡಗೂಡದಿದ್ದಲ್ಲಿಯೇ ಲಿಂಗಭಕ್ತನಲ್ಲ. ಜಂಗಮ ಭಕ್ತನಾದಡೆ ಕಳವು ಹಾದರ ದುರ್ಗುಣದಿಂದ ಕೆಡಿಯಿಸಿಕೊಂಬಲ್ಲಿ ಅವುಗಳಲಿ ತಾನಡಗಿ ಅಂವೆ ಇಲ್ಲದಿರ್ದಾಗಳೇ ಜಂಗಮಭಕ್ತನಲ್ಲ. ಇಂತೀ ತ್ರಿವಿಧ ಭಾವಂಗಳಲ್ಲ ಘಟಸಂದನಳಿದವಂಗಲ್ಲದೆ ತ್ರಿವಿಧ ಭಕ್ತಿಯಿಲ್ಲ. ಈ ಗುಣ ಸಂಗನ ಬಸವಣ್ಣಂಗಲ್ಲದೆ ಸಾಧ್ಯವಿಲ್ಲ. ಬ್ರಹ್ಮೇಶ್ವರ ಲಿಂಗವ ನರಿದವಂಗೂ ಅಸಾಧ್ಯ ನೋಡಾ.

೧೦೨. ಗುರುವನೇ ಲಿಂಗವೆಂದರಿದ ಕಾರಣ ಗುರುವ ಲಿಂಗ ದಲ್ಲಿ ಕಂಡೆ. ಲಿಂಗವನೇ ಜಂಗಮವೆಂದರಿದ ಕಾರಣ ಲಿಂಗವ ಜಂಗ ಮದಲ್ಲಿ ಕಂಡೆ. ಜಂಗಮವನೇ ತಾನೆಂದರಿದ ಕಾರಣ ಜಂಗಮವ ನನ್ನಲ್ಲಿ ಕಂಡೆ. ನನ್ನ ನಿನ್ನಲ್ಲಿ ಅರಿದ ಕಾರಣ ನನ್ನ ನಿನ್ನಲ್ಲಿ ಕಂಡೆ. ಈ ಪರಿಯಿಂದ ಗುರುಲಿಂಗಜಂಗಮ ಸದಾ ಸನ್ನಿಹಿತನಾಗಿ ನಿನ್ನೊಳಗಾದೆ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.

೧೦೩. ಗುರುವಿಡಿದು ಲಿಂಗವ ಕಂಡೆ. ಲಿಂಗವಿಡಿದು ಜಂಗಮವ ಕಂಡೆ. ಇಂತೀ ಪರವ ತೋರಿದ ಗುರುವಿನಾಜ್ಞೆಯ ಮೀರಿ ನಡೆದ ದುರಾ ಚಾರಿಗಳ ಮುಖವ ನೋಡಲಾಗದು ಕಾಣಾ ಕಲಿದೇವರದೇವಯ್ಯ.

೧೦೪. ಪರಧನವ ಬಿಟ್ಟಾಗಳೇ ಗುರುವಿನ ಇರವು ಸಾಧ್ಯವಾ ಯಿತ್ತು. ಪರಸ್ತ್ರೀಯ ಬಿಟ್ಟಾಗಳೇ ಲಿಂಗ ಅಂಗದ ಮೇಲೆ ಸಲೆ ಸಂದಿತ್ತು. ನಿಂದೆ ಎಂಬುದು ನಿಂದಾಗಳೇ ಜಂಗಮ ಭಕ್ತಿ ಸಾಧ್ಯವಾಯಿತ್ತು. ಇಂತೀ ತ್ರಿವಿಧವ ತಟ್ಟದಿಪ್ಪಾತನು ಈಶಾನ್ಯ ಮೂರ್ತಿ ಮಲ್ಲಿಕಾರ್ಜುನ ಲಿಂಗವ ಮುಟ್ಟಿಪ್ಪನು.

ಶುದ್ಧಾಚಾರದಿಂದ ಗುರುಲಿಂಗಜಂಗಮದ ಸಾಧನೆ.

೧೦೫. ಗುರುವಿನಲ್ಲಿ ಸದಾಚಾರ, ಲಿಂಗದಲ್ಲಿ ಶಿವಾಚಾರ, ಜಂಗಮದಲ್ಲಿ ಸಮಯಾಚಾರ, ಇಲ್ಲದಿದ್ದರೆ ನಮ್ಮ ಕೂಡಲ ಚನ್ನಸಂಗಮದೇವ ನೀಚ್ಚ ಕಾಣಿರೋ.

೧೦೬. ಗುರುವ ನರಿತು ಮಾಡುವಲ್ಲಿ ಅಹಂಕಾರವ ಮರೆದು ಮಾಡಬೇಕು. ಲಿಂಗವನರಿತು ಮನ ಮುಟ್ಟಿದಲ್ಲಿ ಪ್ರಕೃತಿ ತಲೆದೋರದಿರಬೇಕು. ಜಂಗಮವನರಿತು ಮುಟ್ಟಿ ಪೂಜಿಸುವಲ್ಲಿ ಅರ್ಥ ಪ್ರಾಣಾಭಿಮಾನವನಳಿಯಬೇಕು. ಈ ಮೂರರಲ್ಲಿ ನಿಶ್ಚಯವಾಗಿರಬೇಕು, ಸಂಗನಬಸವಣ್ಣಪ್ರಿಯ ಚಂದೇಶ್ವರ ಲಿಂಗವನರಿಯಬಲ್ಲಡೆ.

೧೦೭. ಗುರುವೆಂದು ಅನುಸರಣೆಯ ಮಾಡಿದಲ್ಲಿ ಲಿಂಗವಿಲ್ಲ. ಲಿಂಗವೆಂದು ಅನುಸರಣೆಯ ಮಾಡಿದಲ್ಲ ಜಂಗಮವಿಲ್ಲ. ಜಂಗಮವೆಂದು ಅನುಸರಣೆಯ ಮಾಡಿದಲ್ಲಿ ಪಂಚಾಚಾರ ಶುದ್ಧಕ್ಕೆ ಹೊರಗು. ತಾನು ಮಾಡುವ ಭಕ್ತಿ ತನಗೆ ಹಾನಿಯಾದ ಕಾರಣ ಈ ತ್ರಿವಿಧಕೆ ಅನುಸರಣೆಯ ಮಾಡಲಿಲ್ಲ ಸದಾಶಿವ ಮೂರ್ತಿಲಿಂಗವನರಿವುದಕ್ಕೆ.

೧೦೮. ಶ್ರೀಗುರುವಿನ ಸಂದರ್ಶನಕ್ಕೆ ಹೋದಲ್ಲಿ ಮೂರ್ತಿ ಧ್ಯಾನದಿಂದ ಮಹಪ್ರಸಂಗವ ಮಹಾಪ್ರಸಾದವೆಂದು ಕೈಕೊಂಬುದು ಆ ಗುಣ ಗುರುಭಕ್ತಿ ಸಾಧನೆ. ಶಿವಲಿಂಗ ಪೂಜೆಯ ಮಾಡುವಲ್ಲಿ ಪರಾಕು, ಪರಿಭ್ರಮಣ, ಪ್ರಕೃತಿ ಭಾವ, ಪಗುಡಿ ಪರಿಹಾಸಕರ ವಾಗ್ವಾದಿಗಳ ಕೂಡದೆ, ಕಂಗಳಲ್ಲಿ ಹೆರೆ ಹಿಂಗದೆ, ಭಾವದಲ್ಲಿ ಬೈಚಿಟ್ಟುಕೊಂಡು, ಹಿರೆ ಹಿಂಗದ ಇರವು ಶಿವಲಿಂಗ ಪೂಜಕದ ಭಾವ. ಜಂಗಮಸೇವೆ ಮಾಡುವಲ್ಲಿ, ಇಷ್ಟ, ಕಾಮ್ಯ, ಮೋಕ್ಷಗಳನರಿದು, ಅಶನ ವಿಷಯ ದೋಷಕ್ಕೆ ಅಸರವನರಿತು, ಧರ್ಮಕ್ಕೆ ಮುಕ್ತಿಪದ, ವೈಭವಕ್ಕೆ ಖ್ಯಾತಿ ಲಾಭಂಗಳನಳಿದು ಮಾಡುವುದೇ ಜಂಗಮಭಕ್ತಿ. ಇಂತೀ ತ್ರಿವಿಧ ಭಕ್ತಿಯಲ್ಲಿ ನಿರುತ ಸ್ವಯಸನ್ನದ್ಧನಾಗಿಪ್ಪ ಭಕ್ತನ ಪಾದವೇ ಗೋಪತಿನಾಥ ವಿಶ್ವೇಶ್ವರನಿಪ್ಪ ಸೆಜ್ಜೆಗೃಹ.

೧೦೯. ಗುರುಭಕ್ತನಾದಲ್ಲಿ ಘಟಧರ್ಮವಳಿದು, ಲಿಂಗಭಕ್ತನಾದಲ್ಲಿ ಸಂಚಲ ನಿಂದು, ಜಂಗಮಭಕ್ತನಾದಲ್ಲಿ ತ್ರಿವಿಧಾಂಗ ಸಲೆಸಂದು, ಇಂತೀ

ತ್ರಿವಿಧ ಭಕ್ತಿಯಲ್ಲಿ ತ್ರಿಕರಣ ಶುದ್ಧವಾದಾತ್ಮಂಗೆ ಮರ್ತ್ಯ ಕೈಲಾಸವೆಂಬ ಕಾಳು ಮಾತಿಲ್ಲ. ಆತ ನಿತ್ಯ ಮುಕ್ತ ಎನ್ನಯ್ಯ ಚನ್ನಂಗಾಮನಾಗಿ.

ಅರ್ಪಣದಿಂದ ಗುರುಲಿಂಗಜಂಗಮದ ಸಾಧನೆಯು.

೧೧೦. ಆವಾವ ವ್ರತಕ್ಕು ಗುರುಲಿಂಗಜಂಗಮವೇ ಮೂಲಮಂತ್ರ. ಆವುದನು ತಾ ಕೊಂಬುಕೊಡುವಲ್ಲಿ ಲಿಂಗಜಂಗಮವ ಮುಂದಿಟ್ಟುಕೊಂಬುವುದೇ ಶುದ್ಧಕ್ರಿ. ಹೀಗೆಯಲ್ಲವೆ ಲಿಂಗಜಂಗಮವ ಹೊರತೆಯಾಗಿ ಮತ್ತೊಂದ ಕೊಂಡೆನಾಯಿತ್ತಾದಡೆ, ಎನಗಲ್ಲದ ದ್ರವ್ಯ. ಎನಗಿದೇ ಭಾಷೆ, ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ ಸಾಕ್ಷಿಯಾಗಿ.

೧೧೧ ಶಿವನೇ ನೀನು ಗುರುವಾದೆ, ಲಿಂಗವಾದೆ, ಜಂಗಮವಾದೆ ಭಕ್ತನಾದೆ. ಗುರುವಾಗಿದ್ದು ಭಕ್ತನೊಳಗಡಗಿದೆ. ಅದೇನುಕಾರಣವೆಂದಡೆ, ಗುರುವಿಂಗೆ ಅರ್ಥಪ್ರಾಣಾಭಿಮಾನವನು ಕೊಟ್ಟು ಆತ ಭೋಗಿಸಿದ ಬಳಿಕ ತಾನು ಪ್ರಸಾದ ಮುಖಮುಂತಾಗಿ ಭೋಗಿಸುವನಾಗಿ ಆ ಗುರು ತನ್ನೊಳಗಡಗಿದ, ಲಿಂಗವಾಗಿರ್ದ ಭಕ್ತನೊಳಗಡಗಿದ. ಅದೇನು ಕಾರಣವೆಂದಡೆ, ಅರ್ಥ ಪ್ರಾಣಾಭಿಮಾನವನು ಕೊಟ್ಟು ತಾನಾ ಪ್ರಸಾದ ಮುಂತಾಗಿ ಭೋಗಿಸುವನಾಗಿ, ಆ ಲಿಂಗವು ಭಕ್ತನೊಳಗಡಗಿತು. ಜಂಗಮವಾಗಿ ಭಕ್ತನೊಳಗಡಗಿತು. ಅದೇನು ಕಾರಣವೆಂದಡೆ, ಅರ್ಥ ಪ್ರಾಣಾಭಿಮಾನವನು ಕೊಟ್ಟು ಆ ಜಂಗಮವು ಭೋಗಿಸಿದ ಬಳಿಕ ತಾನಾ ಪ್ರಸಾದ ಮುಂತಾಗಿ ಭೋಗಿಸುವನಾಗಿ ಆ ಜಂಗಮವು ಭಕ್ತನೊಳಗಡಗಿತು. ಇಂತಡಗುವರೇ ಮಹಿಮರು ಮಸಣಯ್ಯ ಪ್ರಿಯ ಗುಹೇಶ್ವರಾ.

೧೧೨. ಅರ್ಥ ಪ್ರಾಣಾಭಿಮಾನವನು ಗುರುಲಿಂಗಜಂಗಮ ಮುಖಕ್ಕೆ ಸಮರ್ಪಿಸಿ, ಆ ಗುರು ಲಿಂಗ ಜಂಗಮವೇ ತನು ಮನ ಪ್ರಾಣವಾಗಿರಬಲ್ಲಡೆ ಪ್ರಸಾದಿಸ್ಥಲವೆಂಬೆನಯ್ಯ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.

೧೧೩. ಗುರುವಿಂಗೆ ತನುವ ಕೊಟ್ಟು, ಲಿಂಗಕ್ಕೆ ಮನವ ಕೊಟ್ಟು, ಜಂಗಮಕ್ಕೆ ಧನವ ಕೊಟ್ಟು, ಇಂತೀ ತ್ರಿವಿಧಕ್ಕೆ ತ್ರಿವಿಧವ ಕೊಟ್ಟು ನಾನು ಶುದ್ಧನಾದೆನು ಕಾಣಾ ಕೂಡಲ ಸಂಗಮದೇವಾ.

೧೧೪. ಗುರುವೆನ್ನ ತನುವ ಬೆರಸಿದ ಕಾರಣ ಗುರು ಶುದ್ಧವಾದೆನಯ್ಯ. ಲಿಂಗವೆನ್ನ ಮನವ ಬೆರಸಿದ ಕಾರಣ, ಲಿಂಗದ ಮನವ ನಾ ಬೆರಸಿದ ಕಾರಣ ಲಿಂಗ ಶುದ್ಧವಾದೆನಯ್ಯ. ಜಂಗಮವೆನ್ನ ಜಿಹ್ವೆ ಬೆರಸಿದ ಕಾರಣ, ಜಂಗಮನ ಜಿಹ್ವೆಯ ನಾ ಬೆರಸಿದ ಕಾರಣ ಜಂಗಮ ಶುದ್ಧವಾದೆನಯ್ಯ. ಈ ಮೂವರು ತಮ್ಮಿಂದ ತಾವು ಶುದ್ಧವಾಗಲರಿಯದೆ, ಎನ್ನ ಮುಟ್ಟಿ ಶುದ್ಧವಾದರು ಕಾಣಾ ಕೂಡಲ ಚೆನ್ನಸಂಗಮದೇವಾ.

೧೧೫. ಶುದ್ಧವ ಗುರುವಿಂಗೆ ಕೊಟ್ಟು ಶುದ್ಧವಾಯಿತ್ತೆಂಬೆನಯ್ಯ. ಸಿದ್ಧವ ಲಿಂಗಕ್ಕೆ ಕೂಟ್ಟು ಸಿದ್ಧವಾಯಿತ್ತೆಂಬೆನಯ್ಯ. ಪ್ರಸಿದ್ಧವ ಜಂಗಮಕ್ಕೆ ಕೊಟ್ಟು ಪ್ರಸಿದ್ಧವಾಯಿತ್ತೆಂಬೆನಯ್ಯ. ಗುರು ಲಿಂಗ ಜಂಗಮವನೇಕತ್ರವಾಗಿ ಕಾಣಲರಿಯದಿನ್ನರೆ, ಶುದ್ಧ ಸಿದ್ಧ ಪ್ರಸಿದ್ಧ ಒಡನೆ ನಗುತ್ತಿದ್ದಾವೆ. ತನು ಮನ ಧನವ ನಿವೇದಿಸಲರಿಯರಾಗಿ, ಕೂಡಲ ಸಂಗಮದೇವ ಒಲಿ ಎಂದೊಡೆಂತೊಲಿವ ?

೧೧೬. ಮುನ್ನಿನ ಜನ್ಮದಲ್ಲಿ ಗುರು ಲಿಂಗ ಜಂಗಮವ ಪೂಜಿಸಲರಿಯದ ಕಾರಣ, ಬಹು ಜನ್ಮಕ್ಕೆ ತಂದಿಕ್ಕಿದೆಯಯ್ಯ ಎನ್ನನು. ಎನಗೆ ಗುರುಪಥವ ತೋರಿದವರಾರು ? ಲಿಂಗಪಥವ ತೋರಿದವರಾರು? ಜಂಗಮಪಥವ ತೋರಿದವರಾರು? ಪಾದೋದಕ ಪ್ರಸಾದವ ತೋರಿದವರಾರು? ತೋರುವ ಮನವೇ ನೀವೆಂದರಿತೆ. ಎನಗಿನ್ನಾವ ಭವವೂ ಇಲ್ಲ ಕೂಡಲಸಂಗಮದೇವಾ.

೧೧೭. ತ್ರಿವಿಧ ಪ್ರಸಾದವೆಂದೆಂಬರು. ಆದೆಂತಹುದೋ? ಶುದ್ಧ ಪ್ರಸಾದ ಲಿಂಗದದು. ಸಿದ್ಧಪ್ರಸಾದ ಜಂಗಮದದು. ಪ್ರಸಿದ್ಧ ಪ್ರಸಾದ ಗುರುವಿನದು. ಇಂತೀ ತ್ರಿವಿಧ ಒಂದಾದವರ ತೋರಾ ಕೂಡಲ ಸಂಗಮದೇವ.

೧೧೮. ಗುರುಲಿಂಗ ಜಂಗಮದಿಂದ ಪಾದೋದಕ ಪ್ರಸಾದವಾಯಿತ್ತು. ಆ ಧಾವವೇ ಮಹಾನುಭಾವವಾಗಿ, ಎನಗೆ ಬೇರೆ ಪ್ರಸಾದವೆಂಬುದಿಲ್ಲ ಕೂಡಲ ಸಂಗಮದೇವ.

೧೧೯. ತನು ಕೊಡುವಡೆ ಗುರುವಿನದು ಮನ ಕೊಡುವಡೆ ಲಿಂಗದದು. ಧನ ಕೊಡುವಡೆ ಜಂಗಮದದು. ಅವರ ಪದಾರ್ಥವ ಅವರಿಗೆ ಕೊಟ್ಟು ಭಕ್ತನಾದೆವೆಂಬವರ ಹಿರಿಯತನದ ಕೇಡು ನೋಡಯ್ಯ ಕಪಿಲಸಿದ್ಧಮಲ್ಲಿಕಾರ್ಜುನಾ.

೧೨೦. ತನು ಕೊಟ್ಟಬಳಿಕ ದೇಹವೆಲ್ಲಿಯದೋ? ಧನ ಕೊಟ್ಟ ಬಳಿಕ ಭೋಗಗಳೆಲ್ಲಿಹವೊ? ಇವೆಲ್ಲ ಬರಿಯ ಭ್ರಮೆ. ಕೊಟ್ಟೆವೆಂಬವರ ಮುಖವ ನೋಡಲಾಗದು. ಕೊಟ್ಟು ಭಕ್ತನಾದೆನೆಂಬ ನುಡಿ ಸಮನಿಸದಯ್ಯ ಗುರುವೇ ನಿಮ್ಮ ಶರಣರ ಬುದ್ಧಿಗೆ ಕಪಿಲಸಿದ್ಧಮಲ್ಲಿಕಾರ್ಜುನಾ.

ಗುರುಲಿಂಗಜಂಗಮದ ಸಾಮರಸ್ಯ.

೧೨೧. ಸಕಲ ಗುರು, ಸಕಲ ನಿಃಕಲ ಲಿಂಗ, ನಿಃಕಲ ಜಂಗಮ ಇಂತೀ ತ್ರಿವಿಧ ಲಿಂಗಕ್ಕೆ ಮಾಡುವ ಭಕ್ತಿಯುಕ್ತಿಆದೆಂತೆಂದೊಡೆ, ಲಿಂಗವು ಜಂಗಮವು ಗುರುವಿನಲ್ಲಿ ಉಂಟೆಂದು ತನು ಮನ ಧನವ ಸವಿದು ಮಾಡುವುದು ಅದು ಗುರುಭಕ್ತಿ. ಗುರುವು ಜಂಗಮವು ಲಿಂಗದಲ್ಲಿ ಉಂಟೆಂದು ತನು ಮನ ಧನವ ಮುಟ್ಟಿ ಮಾಡುವುದು ಲಿಂಗಭಕ್ತಿ. ಗುರುವು ಲಿಂಗವು ಜಂಗಮದಲ್ಲಿ ಉಂಟೆಂದು ತನು ಮನ ಧನವ ಸವಿದು ಮಾಡುವುದು ಜಂಗಮಭಕ್ತಿ. ಈ ತ್ರಿವಿಧಲಿಂಗಕ್ಕೆ ತ್ರಿವಿಧ ಪ್ರಕಾರದಲ್ಲಿ ಮಾಡಿ ಕೂಡಿ ಜೀವಿಸುವಾತನೇ ಶಿವಭಕ್ತನು ಕಾಣಾ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ

೧೨೨. ಗುರುಪೂಜೆಯ ಮಾಡುವಲ್ಲಿ ಗುರುಪೂಜೆಯಲ್ಲಿಯೇ ಮುಕ್ತರು. ಲಿಂಗ ಪೂಜೆಯ ಮಾಡುವಲ್ಲಿ ಲಿಂಗ ಪೂಜೆಯಲ್ಲಿಯೇ ಮುಕ್ತರು. ಜಂಗಮಪೂಜೆಯ ಮಾಡುವಲ್ಲಿ ಜಂಗಮ ಪೂಜೆಯಲ್ಲಿಯೇ ಮುಕ್ತರು. ಈ ಮೂರೊಂದಾದಲ್ಲಿ ಬೇರೊಂದಂಗವಿಲ್ಲ. ಆಗು ಜಾಗು ಮೂರರಲ್ಲಿ ಅಡಗಿತ್ತೇ ಅಮಳೇಶ್ವರ ಲಿಂಗದ ಪೂಜೆ.

೧೫೩. ಲಿಂಗವನು ಪ್ರಾಣವನು ಒಂದು ಮಾಡಿ ತೋರಿದ ಗುರುವಿ
ರ್ದನಲ್ಲಾ, ಲಿಂಗವಿರ್ದನಲ್ಲಾ. ಇದಕ್ಕೆ ಸಾಕ್ಷಿ ಜಂಗಮವಿರ್ದನಲ್ಲಾ. ಈ
ತ್ರಿವಿಧ ದೃಷ್ಟವ ಕಂಡು ಅವು ಬೇರೆಂಬ ಅಜ್ಞಾನಕ್ಕೆ ನಾನು ಬೆರಗಾದೆನು
ಗುಹೇಶ್ವರಾ.

೧೫೪. ಗುರುವನರಿದು ಲಿಂಗವನರಿವರುಂಟು. ಲಿಂಗವನರಿದು
ಪಂಚಾಚಾರವನರಿವರುಂಟು. ಜಂಗಮವನರಿದಲ್ಲಿ ಷಟ್‌ಸ್ಥಲ ಸಂಬಂಧ
ವಾಯಿತ್ತು. ಆ ಸಂಬಂಧ ಸಮಯ ನಿಂದು ಉಭಯವಳಿದು ಏಕವಾದಲ್ಲಿ
ಫಲವು ನೆಲೆ ತನ್ನ ವಿಶ್ವಾಸದ ಹೊಲಬಿನಲ್ಲಿ ಅಡಗಿತ್ತು. ಆ ಹೊಲ
ಬಿನಲ್ಲಿ ನಿಂದವಂಗೆ ಇಹ ಪರವೆಂಬುದು ಇಲ್ಲ ಎನ್ನಯ್ಯ ಪ್ರಿಯ
ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ.

೧೫೫. ತಾನೆಂದೆನಲೊಲ್ಲದೆ ಗುರುವೆಂದು ಪಿಡಿದವನ, ಗುರು
ವೆಂದಲ್ಲಿ ನೀನೆಂದು ನಡೆದವನ, ನೀನೆಂದಲ್ಲಿಯೇ ಲಿಂಗಜಂಗಮದ
ಸಕೀಲಸಂಬಂಧವ ನೆಲೆಗೊಳಿಸಿದವನ, ಲಿಂಗ ಜಂಗಮದಲ್ಲಿ ತನ್ನ ಮರೆದು
ಕರಿಗೊಂಡ ಲಿಂಗೈಕ್ಯನ, ಗುಹೇಶ್ವರ ಲಿಂಗದಲ್ಲಿಪ್ಪ ಚನ್ನಬಸವಣ್ಣನ
ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

೧೫೬. ಗುರುವೆಂಬ ಭಾವ ಬ್ರಹ್ಮಮೂರ್ತಿ. ಲಿಂಗವೆಂಬ ಭಾವ
ವಿಷ್ಣುಮೂರ್ತಿ. ಜಂಗಮವೆಂಬ ಭಾವ ರುದ್ರಮೂರ್ತಿ. ಅದೆಂತೆಂದೊಡೆ,
ಅನಾದಿ ವಸ್ತು ರೂಪಾದ ಕಾರಣ ಅಹಂ ಬ್ರಹ್ಮವೆಂಬಾಕಾರವಿಡಿದು
ಬ್ರಹ್ಮ ಮೂರ್ತಿಯಾದ. ಜ್ಞಾನಪೀಠ ಸಂಬಂಧಿಯಾದ ಕಾರಣ ವಿಷ್ಣು
ಮೂರ್ತಿಯಾದ. ಜಿದ್ಭುನ ರುದ್ರ ಚತುರ್ವಿಧ ಫಲ ಪದಂಗಳೊಳಗಾದ
ಕಾರಣ ಸಂಹಾರ ರುದ್ರನಾದ. ಸಂಹಾರವಡಗಿ ನಿಂದು ಉಮೆಯ ಬಿಟ್ಟು
ಸ್ವಯಂಭುವಾದ. ಆ ಸ್ವಯಂಭು ಜಂಗಮವೆಂಬಲ್ಲಿ ನಿಂದು ನಿಜವ
ಕಂಡಲ್ಲಿ ಲಿಂಗವಾದಲ್ಲಿ ಭಾವರಹಿತನಾಗಬೇಕೆಂದನಂಬಿಗಚೌಡಯ್ಯ.

೧೫೭. ಗುರುವಿಂಗೆ ಗುರುವುಳ್ಳನ್ನಕ್ಕರ, ಲಿಂಗಕ್ಕೆ ಲಿಂಗವುಳ್ಳನ್ನ
ಕ್ಕರ, ಜಂಗಮಕ್ಕೆ ಜಂಗಮವುಳ್ಳನ್ನಕ್ಕರ, ಆತ್ಮಂಗೆ ಅರಿವುಳ್ಳನ್ನಕ್ಕರ,
ಅರಿವುಮರವೆಗೆ ಇದಿರೆಡೆಯುಂಟು. ಗುರುವಿಂಗೆ ಉಭಯವಿಲ್ಲದೆ, ಲಿಂಗಕ್ಕೆ
ಉಭಯವಿಲ್ಲದೆ, ಜಂಗಮಕ್ಕೆ ಉಭಯವಿಲ್ಲದೆ, ಆತ್ಮಂಗೆ ಎರಡಳಿದು ನಿಜ
ವೇಕವಾಹನ್ನಬರ ಒಂದನಹುದು, ಒಂದನಲ್ಲ ಎಂಬ ಸಂದೇಹಕ್ಕೊ

ಡಲಾಗಬಾರದು. ತಾ ನಿಂದ ನಿಂದಲ್ಲಿಯೇ ಸಂದಳಿಯದೇಕು ಬಸ
ವಣ್ಣಪ್ರಿಯನಾಗಲೇಶ್ವರಲಿಂಗವನರಿಯಬಲ್ಲಡೆ.

ಅರ್ಥ:— ಜ್ಞಾನ ಗುರುವಿಂಗೆ ಕ್ರಿಯಾಗುರು ಭಿನ್ನವಾಗಿರುವ
ಪರಿಯಂತರ ಜ್ಞಾನ ಲಿಂಗಕ್ಕೆ ಕ್ರಿಯಾ ಲಿಂಗವು ಭಿನ್ನವಾಗಿರುವ ಪರಿ
ಯಂತರ, ಜ್ಞಾನ ಜಂಗಮಕ್ಕೆ ಕ್ರಿಯಾ ಜಂಗಮವು ಭಿನ್ನವಾಗಿರುವ
ಪರಿಯಂತರ, ಆತ್ಮನಲ್ಲಿ ಭಿನ್ನಜ್ಞಾನ ಉಂಟಾಗಿರುವ ಪರಿಯಂತರ,
ಜ್ಞಾನ ಕ್ರಿಗಳಿಗೆ ಭಿನ್ನ ಭಿನ್ನ ಉಂಟು. ತನುವಿನಲ್ಲಿ ಗುರು ಸಂಬಂಧವ
ಮಾಡಿಕೊಂಡು ಗುರುಭಕ್ತಿ ಮಾಡುವಲ್ಲಿ ಜ್ಞಾನ ಗುರುವು ಕ್ರಿಯಾ
ಗುರುವಿಂಗೆ ಭಿನ್ನವಿಲ್ಲದೆ ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು
ಪೂಜೆಯ ಮಾಡುವಲ್ಲಿ ಜ್ಞಾನ ಲಿಂಗ ಕ್ರಿಯಾ ಲಿಂಗಕ್ಕೆ ಭಿನ್ನವಿಲ್ಲದೆ
ಪ್ರಾಣದಲ್ಲಿ ಜಂಗಮಸಂಬಂಧವ ಮಾಡಿಕೊಂಡು ಜಂಗಮಭಕ್ತಿ ಮಾಡು
ವಲ್ಲಿ ಜ್ಞಾನ ಜಂಗಮ ಕ್ರಿಯಾ ಜಂಗಮಕ್ಕೆ ಭಿನ್ನವಿಲ್ಲದೆ ಜ್ಞಾನ
ಗುರು ಲಿಂಗ ಜಂಗಮ ಬೇರೆ ಕ್ರಿಯಾ ಗುರುಲಿಂಗ ಜಂಗಮ ಬೇರೆ
ಎಂಬ ಆತ್ಮನ ಭಿನ್ನ ಜ್ಞಾನ ನಷ್ಟವಾಗಿ ತನು ಮನ ಪ್ರಾಣಂಗಳು
ಗುರು ಲಿಂಗ ಜಂಗಮದಲ್ಲಿ ಸಮರಸವಾಗುವ ಪರಿಯಂತರ ಜ್ಞಾನ
ಗುರು ಲಿಂಗ ಜಂಗಮವೇ ಮೋಕ್ಷಕ್ಕೆ ಕಾರಣವಹುದು. ಕ್ರಿಯಾ ಗುರು
ಲಿಂಗ ಜಂಗಮವೇ ಮೋಕ್ಷಕ್ಕೆ ಕಾರಣವಲ್ಲ ಎಂದು ಸಂಕಲ್ಪಕ್ಕೆ ಈಡಾಗ
ಬಾರದು. ತನುವಿನಲ್ಲಿ ಗುರುಸಂಬಂಧವ ಮಾಡಿಕೊಂಡು ಗುರುಭಕ್ತಿಯ
ಮಾಡುವಲ್ಲಿ ಮನದಲ್ಲಿ ಲಿಂಗಸಂಬಂಧವ ಮಾಡಿಕೊಂಡು ಲಿಂಗ ಪೂಜೆಯ
ಮಾಡುವಲ್ಲಿ ಪ್ರಾಣದಲ್ಲಿ ಜಂಗಮಸಂಬಂಧವ ಮಾಡಿಕೊಂಡು ಜಂಗಮ
ಭಕ್ತಿಯ ಮಾಡುವಲ್ಲಿ, ತನು ಗುರು, ಮನ ಲಿಂಗ, ಪ್ರಾಣ ಜಂಗಮ
ವೆಂಬ ಭಿನ್ನವಳಯಬೇಕು ಎಂಬುದರ್ಥ.

೧೫೮. ಅಹಂಕಾರವರಿತು ಗುರುವಾಗಿ, ಜಂಗಮವರಿತು ಲಿಂಗ
ವಾಗಿ, ತ್ರಿವಿಧವರಿತು ಜಂಗಮವಾಗಿ, ಸಕಲೇಂದ್ರಿಯದ ಲಂಪಟವನರಿತು
ಭಕ್ತನಾಗಿ, ಸಂಸಾರವೆಂಬ ಗಡಗಡೆಯಲ್ಲಿ ಸಿಲುಕದೆ, ಆವ ಸ್ಥಲದಲ್ಲಿ
ನಿಂದು ನೋಡಿದಡೂ ಭಾವ ಶುದ್ಧವಾಗಿ, ಗುರುವಿಂಗೆ ಗುರುವಾಗಿ,
ಲಿಂಗಕ್ಕೆ ಲಿಂಗವಾಗಿ, ಜಂಗಮಕ್ಕೆ ಜಂಗಮವಾಗಿ ಭಕ್ತರ ಭಕ್ತಿಯ
ಮಾಡಿಕೊಂಡಿಪ್ಪ ಸಚ್ಚಕ್ತ ಕಾಲಾಂತಕ ಭೀಮೇಶ್ವರ ಲಿಂಗವು ತಾನೆ.

೧೯೯. ತ್ರಿವಿಧಕ್ಕೆ ರೀತಿಯಾಗಿ, ತ್ರಿವಿಧವ ನಿಜವ ಸಿಳಿದು, ತ್ರಿವಿಧವನವಗ್ರಹಿಸಿ, ತ್ರಿವಿಧ ಪದವ ಮೀರಿ, ತ್ರಿವಿಧ ನಿರ್ಣಯದಲ್ಲಿ ನಿಷ್ಪತ್ತಿಯಾದ ಕೂಡಲ ಚನ್ನಸಂಗ ನಿಮ್ಮ ಶರಣ.

೨೦೦. ಮೂರಳಿದು ಮೂರಳವಟ್ಟುದೇ ಭಕ್ತಸ್ಥಲ. ಮೂರಳಿದು ಮೂರಳವಟ್ಟುದೇ ಜಂಗಮಸ್ಥಲ. ಅಳಿದು ಎಂದರೆ ಇದ್ದ ಮನ ಲಿಂಗಕ್ಕೆ ಕೊಟ್ಟಾಗಳೇ ಮಣ್ಣಳಿದುದು. ಇದ್ದ ಧನ ಜಂಗಮಕ್ಕೆ ಕೊಟ್ಟಾಗಳೇ ಹೊನ್ನಳಿದುದು. ಇದ್ದ ತನು ಗುರುವಿಗೆ ಕೊಟ್ಟಾಗಳೇ ಹೆಣ್ಣಳಿದುದು. ಅವರವರಾಚಣೆಯ ನೋಡಿ ಕೊಡುವುದಲ್ಲದೆ ಬೇಡಿದ ಪರಿಯಲ್ಲಿ ಕೊಡುವದೇನೋ? ಅಯ್ಯ ಸಿಂಧು ಬಲ್ಲಾಳ ತನ್ನ ವಧುವ ಕೊಟ್ಟನೆಂದು ಹೇಳಿದಲ್ಲಿ ತನ್ನ ಹೆಂಡತಿಯನೇನಾದರೂ ಕೂಟ್ಟನೇ? ಇಲ್ಲಿಲ್ಲ. ಹೆಣ್ಣು ಎಂದರೆ, ತಾನು ಶರಣಸತಿ ಲಿಂಗಪತಿ ಎಂಬ ಭಾವದಿಂದ ಲಿಂಗಕ್ಕೆ ಮನ ಕೊಟ್ಟು ವಧುವಾದನಲ್ಲದೆ ತನ್ನಂಗನೆಯ ಕೊಡಲಿಲ್ಲವು. ಹೆಣ್ಣು ಎಂದರೆ ತನ್ನ ತನುವ ಗುರುವಿಗೆ ಕೊಟ್ಟು ಸ್ವಯಂಭುವಾದನಲ್ಲದೆ ತನ್ನಂಗನೆಯ ಕೊಡಲಿಲ್ಲವು. ಹೆಣ್ಣು ಎಂದರೆ ಜಂಗಮಕ್ಕೆ ಧನವ ಕೊಟ್ಟು ನಿಧಿನಿಧಾನವಲ್ಲನಾದನಲ್ಲದೆ ತನ್ನಂಗನೆಯ ಕೊಡಲಿಲ್ಲವು. ಹೆಣ್ಣು ಸಲ್ಲದು ಜಂಗಮಕ್ಕೆ. ಹೊನ್ನು ಸಲ್ಲದು ಲಿಂಗಕ್ಕೆ. ಮಣ್ಣು ಸಲ್ಲದು ಗುರುವಿಗೆ. ಇದರ ಭೇತವನಂತ ಉಂಟು. ತಿಳಿವಡೆ ಬಹು ದುರ್ಲಭ. ತಿಳಿದು ನೋಡಿದಡೆ ಭಕ್ತಿಗೆ ಬಹು ಸುಲಭ. ತಿಳಿದು ಮಾಡಿ ಮೋಕ್ಷವ ಹಡೆದರಲ್ಲದೆ ತಿಳಿಯದೆ ಮಾಡಲು, ಅವರೇನು ಮರುವಿನೊಳಗಿರುವ ಬಂಗಾರವಾಗಲಿ, ಸಮುದ್ರದೊಳಗಿರುವ ನಿಧಿ ನಿಧಾನಗಳಾಗಲಿ, ತಂದಿಹರೇನೋ? ಕಪಿಲಸಿದ್ಧ ಮಲ್ಲಿಕಾರ್ಜುನ ಇದರಿರವ ಹೇಳಿಕೊಡಯ್ಯ ಎನ್ನ ಪ್ರಾಣಗುರು ಚನ್ನ ಬಸವಣ್ಣನಿಂದ.

೨೦೧. ಗುರುವಿಂಗೆ ಗುರುವಿಲ್ಲ. ಲಿಂಗಕ್ಕೆ ಲಿಂಗವಿಲ್ಲ. ಜಂಗಮಕ್ಕೆ ಜಂಗಮವಿಲ್ಲ. ನನಗೆ ನಾನಿಲ್ಲ. ಕಣ್ಬೆರೆದು ನೋಡುವಡೆ ಆರಿಗೆ ಆರು ಇಲ್ಲ ಕಪಿಲಸಿದ್ಧಮಲ್ಲಿಕಾರ್ಜುನಾ.

೨೦೨. ತನುವಿನೊಳಗಾದಾತ ಗುರುವೇ? ಮನಕ್ಕೊಳಗಾದಾತ ಲಿಂಗವೇ? ಧನಕ್ಕೊಳಗಾದಾತ ಜಂಗಮವೇ? ತನು ಮನ ಧನ ತನ್ನ ಮನಕ್ಕಲ್ಲದೆ ಗುರು ಲಿಂಗ ಜಂಗಮವದಲ್ಲುಂಟೇ ಕಪಿಲಸಿದ್ಧ ಮಲ್ಲಿಕಾರ್ಜುನಾ?

೨೦೩. ಶುದ್ಧ ಗುರು ಬಸವಣ್ಣ, ಸಿದ್ಧಗುರು ಚನ್ನಬಸವಣ್ಣ, ಪ್ರಸಿದ್ಧಗುರು ಪ್ರಭುರಾಯನು. ತನುತ್ರಯ ಮಲತ್ರಯ ಆರನತಿಗಳೆದು ಲಿಂಗತ್ರಯ ಪ್ರಸಾದ ಮೂರನು ಪರಿಭವಿಸಿ ವಶವಮಾಡಿ, ಎನ್ನ ರಕ್ಷಿಸಿದ ಬಸವಪ್ರಭು ಶರಣೆಂದು ಬದುಕಿದೆನಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ.

೨೦೪. ಲಿಂಗ ಬಂದು ಲಿಂಗಗಳಳಿಯಿತ್ತಯ್ಯ. ಲಿಂಗವೇ ಲಿಂಗ ಬಂದು ಲಿಂಗಗಳೇಡಾಡಿತ್ತಯ್ಯ. ಲಿಂಗವೇ ಲಿಂಗ ಬಂದು ಲಿಂಗ ಉಳಿಯಿತ್ತಯ್ಯ. ಲಿಂಗವೇ ಗುರು, ಲಿಂಗವೇ ಜಂಗಮ, ಲಿಂಗವೇ ನಾನು ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

೨೦೫. ಭಕ್ತಿ ಎಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ, ಲಿಂಗವೆಂಬ ಎಲೆಯಾಯಿತ್ತು. ಲಿಂಗವೆಂಬ ಎಲೆಯ ಮೇಲೆ ವಿಚಾರವೆಂಬ ಹುವ್ವಾಯಿತ್ತು. ಆಚಾರವೆಂಬ ಕಾಯಾಯಿತ್ತು. ನಿಷ್ಪತ್ತಿ ಎಂಬ ಹಣ್ಣಾಯಿತ್ತು. ನಿಷ್ಪತ್ತಿ ಎಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ, ಕೂಡಲ ಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ.

೨೦೬. ಲಿಂಗವ ಪೂಜಿಸುವವರನಂತರುಂಟು. ಜಂಗಮವ ಪೂಜಿಸುವವರನಂತರುಂಟು. ತನ್ನ ತಾನರಿದು ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ ಕೂಡುವವರೊಬ್ಬರೂ ಇಲ್ಲ.

೨೦೭. ಲಿಂಗಾಂಗ ಒಂದಾವ ಬಳಿಕ ಭಕ್ತನ ನೋಡಲಿಲ್ಲವು. ಲಿಂಗಾಂಗ ಒಂದಾದ ಬಳಿಕ ಜಂಗಮವ ನೋಡಲಿಲ್ಲವು. ಲಿಂಗಾಂಗ ಒಂದಾವ ಬಳಿಕ ಏನೆಂದರಿಯಲಿಲ್ಲವು ನೋಡಯ್ಯ. ಎಮ್ಮಯ್ಯ ಕಪಿಲಸಿದ್ಧ ಮಲ್ಲಯ್ಯ ಎಲ್ಲರಲ್ಲಿಯೂ.

೨೦೮. ಅಂಗಯ್ಯ ನೋಟದೊಳು ಕಂಗಳ ನೆಟ್ಟು ಕಂಗಳ ತೇಜ ಹಿಂಗದು. ಲಿಂಗ ಪ್ರಭೆಯೊಳಗೆ ಅಂಗವೆಲ್ಲ ಲಿಂಗಲೀಯವಾಗಿ ಸಂಗ ನಿಸ್ಸಂಗವೆಂಬ ದಂದುಗ ಹರಿದು ಹಿಂದು ಮುಂದೆಂಬ ಭಾವವಳಿವುದು. ನಿಂದ ನಿಜದಲ್ಲಿ ನಿರಾಳದಲ್ಲಿ ಪ್ರಾಣಸಮರತಿಯಾಗಿ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ ಪ್ರಭು ದೇವರ ಪಾದಕ್ಕೆ ನಮೋ ನಮೋ ಎಂದು ಬದುಕಿದೆನು ಕಾಣಾ ಎನ್ನ ಗುರು ಚನ್ನ ಬಸವಣ್ಣ.

೨೦೯. ವಾಣಿ ನಾಲ್ಕರ ಮೇಲೆ ಮಾಣದೆ ನುಡಿವ ನಿರ್ವಾಣಿಯ ಸಂಭಾಷಣೆಯ ಮಾಡಬಲ್ಲರೆ ನಿರ್ವಾಣವೇಳರೊಳಗೆ ಪರಿಪೂರ್ಣವಾ

ನಿರ್ಮಲ ಮಹಾವರ್ಣವ ತನ್ಮಯ ಮಾಡ ಬಲ್ಲರೆ ನಿರ್ವಾಣಸ್ಥಾನ ಹತ್ತರಲ್ಲಿ ಆನಂದ ಸಿಂಹಾಸನ ನಾನಾ ಬೆಳಗಿನ ಬೀಜದ ತಿರುಳನನುಭವಿಸಬಲ್ಲರೆ ಲಿಂಗಾನುಭಾವಿ. ಪ್ರಾಣ ಮಹತ್ತರದಲ್ಲಿ ಧ್ಯಾನ ಚತುಷ್ಪಯ ಕೂಡಿದಲ್ಲಿ ಸಕೀಲ ಬಲ್ಲರೆ ಲಿಂಗೈಕ್ಯ. ಇದು ಕಾರಣ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ನಿಮ್ಮ ಶರಣ ಚನ್ನ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

೧೪೦. ನಾ ನಿಮ್ಮ ರೂಪ ವಿಚಾರಿಸುವನಲ್ಲ ಕೇಳಾ. ನಿನ್ನ ಧ್ಯಾನದಲ್ಲಿ ಇಟ್ಟಾತನಲ್ಲ ಕೇಳಾ. ಅತ್ಯತಿಷ್ಠದ್ದಶಾಂಗುಲದಲ್ಲಿ ನಿಮ್ಮನಿರಿಸಿ ನಾನೊಂದೆಡೆಯಲ್ಲಿ ಇಪ್ಪಾತನಲ್ಲ ಕೇಳಾ. ಓಂಕಾರವೆಂಬ ಪೀಠಕ್ಕೆ ನಾನಾಗಿ ನಿಃಶಬ್ದವೆಂಬ ಲಿಂಗವ ನೆಲೆಗೊಳಿಸಿ ಬೆರಿಸಿ ಬೇರಿಲ್ಲದೆ ಇಪ್ಪೆನೋಡಯ್ಯ, ಕಪಿಲಸಿದ್ಧಮಲ್ಲಿನಾಥಯ್ಯನೇ ನೀನು ಪ್ರಣಮರೂಪಾಗಿ.

೧೪೧. ನಾದ ಬಿಂದು ಎಂಬಲ್ಲಿ ಅಂಗ ಸಂಬಂಧವೆಂಬೆನಯ್ಯ. ನಾದ ಪ್ರಾಣ, ಬಿಂದು ಕಾಯವಾದ ಕಾರಣ ನಾದ ಸ್ವರವಲ್ಲ, ಬಿಂದು ಕಾಯವಲ್ಲ. ಉಭಯ ಸೂತಕ ರಹಿತನ ಮಾಡಯ್ಯ. ನಾದ ಬಿಂದುವಿನ ವಡ್ಡ ತೋರಿ ಮನ ಮಗ್ನವಾದ ನಿಲವ ಕಪಿಲಸಿದ್ಧ ಮಲ್ಲಿಕಾರ್ಜುನ ನೀನೆ ಬಲ್ಲೆ.

೧೪೨. ಲಿಂಗವಾದ ಬಳಿಕ ಪಂಚಸೂತ್ರ ಸಹವಾಗಿರಬೇಕು. ಜಂಗಮನಾದ ಬಳಿಕ ಸದ್ಭಾಣ ಸಹಿತವಾಗಿರಬೇಕು. ತನ್ನ ತಾನರಿವಾತನಾದ ಬಳಿಕ ಮರೀಚಿಯ ಜಲದಂತಿರಬೇಕು ಕಪಿಲಸಿದ್ಧ ಮಲ್ಲೀಶನಲ್ಲಿ.

ಶಿವಯೋಗ.

ವಿವರಣೆ:--ಗುರುಲಿಂಗ ಜಂಗಮದ ಸಾಧನೆಯಿಂದ ಶಿವಯೋಗವು ಅಳವಡುವದು. ಈ ಸಾಧನೆಯ ಮೂಲಕ ಅವನ ಎಲ್ಲ ಶರೀರಗಳೂ ಇಂದ್ರಿಯಗಳೂ ಅತ್ಯುಚ್ಚ ಸ್ಥಿತಿಯನ್ನು ಹೊಂದುತ್ತವೆ. ಆಗ ಅವನಲ್ಲಿ ಲಿಂಗದ ಕಳೆಯು ಪ್ರಜ್ವಲಿಸಹತ್ತುವದು. ಈ ಸ್ಥಿತಿಯು ಉಂಟಾದ ಕೂಡಲೆ ಅವನಲ್ಲಿಯ ಚಕ್ರಗಳೂ ಶಕ್ತಿಗಳೂ ಉನ್ನತ ಭಾವವನ್ನು ಹೊಂದುತ್ತವೆ. ಇದರಿಂದ ಅವನು ಸಮಾಧಿ ಅಥವಾ ಸಾಮರಸ್ಯಸ್ಥಿತಿಯನ್ನು ಹೊಂದುತ್ತಾನೆ. ಇದರ ವಿವರಣೆಗಳು ಕೆಳಗಿನ ವಚನಗಳಲ್ಲಿ ಬಂದಿರುತ್ತವೆ.

ಚಕ್ರಗಳಲ್ಲಿ ಲೈಂಗಿಕಶಕ್ತಿಯ ಆವಿರ್ಭಾವ.

೧. ಆಯತವಾಯಿತ್ತು ಅನುಭಾವ. ಸ್ವಾಯತವಾಯಿತ್ತು ಶಿವಜ್ಞಾನ. ಸಮಾಧಾನವಾಯಿತ್ತು ಸದಾಚಾರ. ಇಂತೀ ತ್ರಿವಿಧ ಏಕಾರ್ಥವಾಗಿ, ಅರಿವಿನ ಹೃದಯ ಕಣ್ದೆರೆದು, ಅನಂತ ಲೋಕಾಲೋಕದ ಅಸಂಖ್ಯಾತ ಮಹಾಗಣಂಗಳೆಲ್ಲರು ಲಿಂಗಭಾವದಲ್ಲಿ ಭರಿತರಾಗಿ ಭಕ್ತಿರಾಜ್ಯವನೆ ಹೊಕ್ಕು, ನಿಜಲಿಂಗಸುಕ್ಷೇತ್ರವನೆ ಕಂಡು, ಅಮೃತ ಸರೋವರದೊಳಗೆ ವಿವೇಕವೃಕ್ಷ ಪಲ್ಲವಿಸಲು, ವಿರಕ್ತಿ ಎಂಬ ಪುಷ್ಪ ವಿಕಸಿತವಾಗಿರಲು. ಪರಮಾನಂದ ಮಠದೊಳಗೆ ಪರಿಣಾಮ ಪಶ್ಚಿಮಜ್ಯೋತಿಯ ಬೆಳಗಿನೊಳಗೆ ಹರುಷದ ಸಿಂಹಾಸನವನಿಕ್ಕಿ ಪ್ರಾಣಲಿಂಗ ಮೂರ್ತಿಗೊಂಡಿರಲು, ದಕ್ಷಿಣವ ದಾಂಟಿ, ಉತ್ತರಾಬ್ಧಿಯಲ್ಲಿ ನಿಂದು ಅಖಂಡ ಪರಿಪೂರ್ಣ ಪೂಜೆಯ ಮಾಡುವವರಿಗೆ ನಮೋ ನಮೋ ಎಂಬೆ ಗುಹೇಶ್ವರಾ.

೨. ಎನ್ನ ರೇಚಕ, ಪೂರಕ, ಕುಂಭಕವೆಲ್ಲವು ಶಿವಮಂತ್ರಮಯವಾಗಿ ಸಂಚರಿಸುತಿಪ್ಪವು ನೋಡಾ. ಎನ್ನ ಪೂರಕವೇ 'ಓಂ' ಎಂಬ ಪ್ರಣವಸ್ವರೂಪಾಗಿಪ್ಪದು. ಎನ್ನ ರೇಚಕವೇ 'ನಮಃಶಿವಾಯ ನಮಃ' ಎನುತಿಪ್ಪದು ನೋಡಾ. ಎನ್ನ ಕುಂಭಕವೇ ಪರಶಕ್ತಿಮಯವಾಗಿ ಪರಂಜ್ಯೋತಿ ಸ್ವರೂಪಾಗಿ, ಪರಮ ಚಿದ್ಬ್ರಂಡಸ್ಥಾನವಾಗಿಪ್ಪದು ನೋಡಾ. ಎನ್ನ ರೇಚಕ, ಪೂರಕ, ಕುಂಭಕ ಸ್ವರೂಪವಪ್ಪ ಶಿವಮಂತ್ರವೇ ಶಿವಲಿಂಗಸ್ವರೂಪವಾಗಿ ಎನ್ನ ಕರಸ್ಥಲದಲ್ಲಿ ಕರತಲಾಮಲಕವಾಗಿ ಕಾಣುತ್ತಿ

ರ್ವ್ಯದಯ್ಯ. ಆ ಕರಸ್ಥಲಲಿಂಗವ ಕಂಗಳು ತುಂಬಿ ನೋಡಿ, ಮನಮುಟ್ಟಿ ನೆನೆದು ಸಂದಿಲ್ಲದೆ ಇಷ್ಟಲಿಂಗದಲ್ಲಿ ಭಾವಬಲಿದು, ಲಿಂಗವನಪ್ಪಿ, ಅಗಲದೆ, ಲಿಂಗದಲ್ಲಿ ಸದಾ ಸನ್ನಿಹಿತವಾಗಿರ್ದು, 'ಶಿವ ಶಿವ, ಹರ ಹರ' ಎನುತಿರ್ದೆನಯ್ಯ. ನಿಮ್ಮ ನೆನಹಿಂದೆ ನಿಮ್ಮ ನೆನವುತ್ತಿರ್ದೆನು ಕಾಣಾ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.

೩. ಆರಾಧಾರದ ನಿಚ್ಚಣಿಕೆಯನೇರಿ ನೋಡಲು, ಮಂದರ ಗಿರಿ ಎಂಬ ಮಹಾಪರ್ವತ ಕಾಣಬಹುದು. ಆ ಪರ್ವತದವ ತುಟ್ಟತುದಿಯನೇರಿ ನೋಡಲು ಮಹದಾಕಾಶ ಮಂಟಪ ಉಂಟು. ಆ ಮಂಟಪವ ಹೊಕ್ಕಿಹೆನೆಂದು ವಿಚಾರಿಸಿ ನೋಡಲು ಅಲ್ಲೊಂದು ಸೂಕ್ಷ್ಮ ದ್ವಾರ ಉಂಟು. ಆ ಸೂಕ್ಷ್ಮ ದ್ವಾರಕವಾಟವ ತೆರೆದುನೋಡಲು ಅಲ್ಲಿ ನಿರುಪಾಧಿಕ ಜ್ಯೋತಿ ಬೆಳಗುತ್ತಿಪ್ಪುದು. ಆ ಬೆಳಗಿನೊಳಗೆ ಅಚಲವಾಗಿ ನಿಂದು ಪರಿಪೂರ್ಣಪೂಜೆಯಾಗಿ ತನ್ನನೇ ನಿಂಗಳ ಲಿಂಗಕ್ಕೆ ಪೂಜೆಯ ಮಾಡುವಾತನೇ ಪರಮ ನಿರ್ವಾಣಿಯಯ್ಯ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ.

೪. ತನುವಿನ ಗುಣಂಗಳ ತರಿದೊಟ್ಟಿ, ಮನದ ಮಾಯಾ ವಿಕಾರದ ಬಾಯ ಟೊಣೆದು, ಕಂಗಳ ಕತ್ತಲೆಯ ಕೆಡಿಸಿ, ಎಡ ಬಲಂಗಳ ತಡಹದೆ ನಡುಮಧ್ಯ ಮಾರ್ಗವಿಡಿದು ಸುಷುಮ್ನಗಿರಿಯನಡರಿ ಕಡೆಮೊದಲಿಲ್ಲದ ಬೆಳಗಿನೊಳಡಗಿ ಬೆಳಗುತಿರ್ದೆ ನಾನು ಪರಶಿವ ಯೋಗಿಯಾದೆನಯ್ಯ ಅಖಂಡೇಶ್ವರಾ.

೫. ಅಯ್ಯ ನೀಲಮಣಿ ಮಧ್ಯಸ್ಥಾನದಲ್ಲಿ ಕಾರಪೇಳ್ದೊಳಗಿನ ಮಿಂಚಿನ ಪ್ರಕಾಶದಂದದಿ ಚಿದಾಕಾಶ ಸ್ವರೂಪದಿಂದ ಪೀತವರ್ಣ ಮೊದಲಾಗಿ ಅನಂತವರ್ಣಸ್ವರೂಪವಾಗಿ, ಅತ್ಯಂತವಾದ ಅಣುರೂಪನಾಗಿ, ಬದವಣೆಯ ಮುಳ್ಳಿನ ಹಾಗೆ ಅನಂತ ಪ್ರಕಾರದಿಂದ ಕಾಣಲ್ಪಡುವುದು. ನಿಜ ಶಿವಯೋಗಲಿಂಗಧ್ಯಾನಿಗಳಿಗೆ ಅನಾದಿಮೂಲ ಪ್ರಣಮಸ್ವರೂಪದಿಂದ ಮುಖಕಮಲದ ಮೇಲೆ ಕಾಣಲ್ಪಡುವುದು ನೋಡಾ. ಅದೆಂತೆಂದೊಡೆ ಮುಖಮಧ್ಯದಲ್ಲಿ ನೇತ್ರ, ನೇತ್ರ ಮಧ್ಯದಲ್ಲಿ ಮನಸ್ಸು, ಮನೋಮಧ್ಯದಲ್ಲಿ ತಾನೇ. ತಾನಲ್ಲದೆ ಮತ್ತೊಂದು ಸಾಧಕವಿಲ್ಲದದು ನಿಜ ತಾರಕ ಬ್ರಹ್ಮ ಶಾಂಭವ ಮೂರ್ತಿ ನೋಡಾ. ಅದಕ್ಕೆ ಹರನ ನಿರೂಪು ಉಂಟು. ಸಾಕ್ಷಿ ॥ ರವಿ ಮಧ್ಯಸ್ಥಥಾ ಇಷ್ಟಂ ಚಂದ್ರ ಮಧ್ಯಸ್ಥ ಪ್ರಾಣಕಂ। ಅಗ್ನಿ ಮಧ್ಯಸ್ಥಥಾಭಾವಂ ಇತ್ಯೇತೆ ಶಂಭುರೂಪಕಂ ॥

ಇಂತು ನಿಜ ತಾರಕ ಬ್ರಹ್ಮ ಶಾಂಭವಮೂರ್ತಿಗೆ ಮೂರ್ತಿಗೊಂಡಿರ್ಪುದು ನೋಡಾ ಗುಹೇಶ್ವರಲಿಂಗದ ಹೃತ್ಕಮಲ ಮಧ್ಯದಲ್ಲಿ ಸಿದ್ಧರಾಮಯ್ಯ ಎಂದು ಇಂತು ಪ್ರಭುಸ್ವಾಮಿಗಳು ನಿರೂಪಮಂ ಕೊಡುತಿರ್ಪರು ನೋಡಾ ಸಂಗನಬಸವೇಶ್ವರಾ.

೬. ಆಧಾರ, ಲಿಂಗ, ನಾಭಿ, ಹೃದಯ, ಕಂಠ, ಮುಖದ ಮೇಲೆ ನಿಂದುದು ಅದೇನೋ? ನಿತ್ಯ, ನಿರಂಜನ, ನಿರುಪಾಧಿಕ ರೇಪೆಯಾಗಿರ್ದುದದೇನೋ? ವಿದ್ರುಮಕುಸುಮ ಚಕ್ಷು ಪರಿಮಳದಿಂದತ್ತತ್ತಲೆ ಗುಹೇಶ್ವರನೆಂಬುವುದದೇನೋ?

ಅರ್ಥಃ— ಷಡು ಚಕ್ರದ ಮೇಲೆ ನಿತ್ಯ ನಿರಂಜನವಾಗಿ, ಬ್ರಹ್ಮರಂಧ್ರದೊಳಗೆ ತೊಳಗಿ ಬೆಳಗುವ ಪ್ರಭೆಯಲ್ಲಿ ದೇಹ ಪ್ರಾಣ ಸಂಬಂಧ ಸಮರಸವಡೆದೊಡೆ, ಪ್ರಾಣಲಿಂಗ ಸಂಬಂಧವೆಂಬುದೀ ಸಚನಾರ್ಥ.

೭. ಸಹಸ್ರದಳ ಕಮಲ ಮಧ್ಯದಲ್ಲಿ ಪಂಚ ಪತ್ರ. ಆ ಪತ್ರದ ಮಧ್ಯದಲ್ಲಿ ಮಂಡಲತ್ರಯ. ಆ ಮಂಡಲ ತ್ರಯ ಮಧ್ಯದಲ್ಲಿ ಪ್ರಣಮ ಪೀಠ. ಆ ಪ್ರಣಮ ಪೀಠದ ಮಧ್ಯದಲ್ಲಿ ಮೂರ್ತಗೊಂಡು ಬೆಳಗುವ ನಿಮ್ಮ ದಿವ್ಯ ಶ್ರೀ ಮೂರ್ತಿಯ ಕಂಡು ಹರುಷಿತನಾದೆನಯ್ಯ ಅಖಂಡೇಶ್ವರಾ.

೮. ನಾಲ್ಕುಬಾಗಿಲು ಕೂಡಿದ ಠಾವಿನಲ್ಲಿ ತ್ರಿಮುಂಡಲದ ಮಧ್ಯದ ಚತುರ್ದಳದ ನಡುವಣ ಚತುಃಪೀಠ ಸಿಂಹಾಸನದ ಮೇಲೆ ಮೂರ್ತಿಗೊಂಡು ನೋಡುವ ಬೆಡಗಿನ ಪುರುಷನ ತುಡುಕಿ ಪಿಡಿದು ನೆರೆಯಬಲ್ಲಡೆ, ಆತ ಸರ್ವ ನಿರ್ವಾಣಿ, ಸಕಲ ನಿಃಕಲಾತ್ಮಕನು. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು ತಾನೇ ಬಲ್ಲ.

೯. ಬಿಂದು ನಾದವನೊಂದು ರೂಪವ ಮಾಡಿ, ಮನವ ಸಾಧಿಸಿ, ಬಂಧಿಸಿ, ನಿಲಿಸಿ, ಇಂದ್ರಿಯಂಗಳನೇಕ ಮುಖವ ಮಾಡಿ, ಚಂದ್ರ ಸೂರ್ಯರ ಒಂದು ಮಾರ್ಗದಲಿ ನಡಿಸಿ, ಜೌದಳ ಮಧ್ಯದ ಜ್ಞಾನಪೀಠದಲ್ಲಿರ್ದ ಅಮೃತ ಲಿಂಗವ ಕಂಡು ಕೂಡುವ ಬೆಡಗಿನ ಯೋಗವ ನಿಮ್ಮ ಶರಣರಲ್ಲದೆ ಉಳಿದ ಭವರೋಗಿಗಳೆತ್ತ ಬಲ್ಲರಯ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ?

೧೦. ಸುಷುಮ್ನೆಯ ನಾಲ್ದೆಸೆಯಲ್ಲಿ, ಆತ್ಮಕಲೆ, ವಿದ್ಯಾಕಲೆ, ನಾದಕಲೆ, ಬಿಂದುಕಲೆಗಳನರಿಯಬೇಕು. ಆ ಕಲೆ ನಾಲ್ಕು ಸುತ್ತಿ ಅಗ್ನಿ ಕಲೆಗಳ ಹತ್ತನರಿಯಬೇಕು. ಪಿಂಗಳೆಯಲ್ಲಿ ಭಾನುಕಲೆ ಹನ್ನೆರಡನರಿವುದು. ಈಡೆಯಲ್ಲಿ ಚಂದ್ರಕಲೆಗಳು ಹದಿನಾರು ಕ್ಷಯವೃದ್ಧಿಯಾಗಿ ನಡೆವುದನರಿವುದು. ಈ ಮೂವತ್ತೆಂಟು ಕಲೆಗಳ ಕೂಡಿದ ಚಂದ್ರ ಸೂರ್ಯಾಗ್ನಿಗಳ ಮಧ್ಯದಲ್ಲಿ ತತ್ಪ ಮೂರು ಕೂಡಿ ಬೆಳಗುವ ಪರಂಜ್ಯೋತಿ ಲಿಂಗವನರಿದು ಯೋಗಿ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ ಬಳಿಕ ಕೂಡುವುದು ಕಾಣಿರಣ್ಣಾ.

೧೧. ತನುವೆಂಬ ಭೂವಿಯಲ್ಲಿ ಶೃಂಗಾಟದ ಇಂದ್ರಕೂಟಗಿರಿ ಎಂಬ ಕೈಲಾಸದಲ್ಲಿ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ದಳದ ಆತ್ಮ, ಶಕ್ತಿ, ಬಿಂದು, ನಾದಗಳ ಮಧ್ಯದಲ್ಲಿ ಶೂನ್ಯಸಿಂಹಾಸನವೆಂಬ ಸುಜ್ಞಾನ ಪೀಠದ ಮೇಲೆ ನೀವು ಮೂರ್ತಿಗೊಂಡಿಹಂತಾಗಿ ಕಂಡು ಹರುಷಿತನಾದೆ. ಸೂರ್ಯಮಂಡಲದ ದ್ವಾದಶದಳದ ರುದ್ರರು ರುದ್ರಶಕ್ತಿಯರು ನಿಮ್ಮನೋಲಗಿಸುತ್ತಿಹರು. ಚಂದ್ರಮಂಡಲದ ಷೋಡಶದಳದ ರುದ್ರರು ರುದ್ರಶಕ್ತಿಯರು ನಿಮ್ಮನೋಲಗಿಸುತ್ತಿಹರು. ಅಗ್ನಿಮಂಡಲದ ದಶದಳ ರುದ್ರರು ರುದ್ರಶಕ್ತಿಯರು ನಿಮ್ಮನೋಲಗಿಸುತ್ತಿಹರು. ಈ ಪರಿಯಿಂದ ದೇವರ ದೇವನ ಓಲಗವನೇನೆಂದು ಹೇಳುವೆನು? ಮತ್ತೆ ಬೇರೆ ಮೃದಂಗ, ನಾಗಸರ, ಕೊಳಲು, ವೀಣೆ, ಕಹಳೆ, ಗಂಟೆ, ಶಂಖಾನಾದ, ನಾನಾ ಬಹು ವಿಧದ ಕೇಳಿಕೆಯಲವಸರದಲ್ಲಿ ರಾಜಿಸುವ ರಾಜಯೋಗವ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮ ಶರಣ ರಾಜಯೋಗಿಗಳೇ ಬಲ್ಲರು.

೧೨. ಆಸನ ಬಂಧವ ಮಾಡಿ, ನಾಸಿಕಾಗ್ರದಲ್ಲಿ ದೃಷ್ಟಿಯನಿರಿಸಿ ಸೂಸಲೀಯ್ಯದೆ, ಮನವ ಬೇಸರವೋಗದೆ, ಪವನವ ಓಸರಿಸಲೀಯ್ಯದೆ ಬಿಂದುವನೂರ್ಧ್ವಕ್ಕೊತ್ತಿ ಇಂತೀ ತ್ರಿವಿಧವನೊಂದೆ ಠಾವಿನಲ್ಲಿ ಬಲಿದು ನಿಲಿಸಿ, ಸಾಸಿರದಳ ಕಮಲದ ನಾದಾತ್ಮಕ ಲಿಂಗದಲ್ಲಿ ಮನ ಲೀಯ್ಯವಾದಡೆ ಅದೇ ರಾಜಯೋಗಪಯ್ಯ ನಿಜಗುರುಸ್ವತಂತ್ರ ಸಿದ್ಧಲಿಂಗೇಶ್ವರನ ಪದವನೆಯ್ದುವಡೆ.

೧೩. ಪೃಥ್ವಿ ಅಪ್ಪುಗಳೆರಡನು ಆಧಾರಗೊಳಿಸಿ, ಅಗ್ನಿವಾಯುಗಳೆರಡನು ಅಂಬರಸ್ಥಾನಕ್ಕೊಯ್ದು, ಆತ್ಮಾಕಾಶವನು ಅನುಭಾವ ಮುಖಕ್ಕೆತಂದು, ಮನದಲನುಮಾನವಳಿದು, ನೆನಹು ನಿಶ್ಚಲವಾಗಿ, ಒಳಗೆ

ಜ್ಯೋತಿರ್ಲಿಂಗವ ನೋಡುತ್ತ, ಹೊರಗೆ ಎರಡು ಹುಬ್ಬಿನ ನಡುವೆ ಉಭಯ ಲೋಚನವನಿರಿಸಿ, ಹಿಂದು ಮುಂದಣವನೆಣಿಸದೆ, ಸಹವಿಲ್ಲದೆ ಪೇಚರಿಯನಾಚರಿಸಲು, ಲೋಚನ ಮೂರುಳ್ಳ ಶಿವ ತಾನಹುದು. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ ಆತನೇ ಶಿವಯೋಗಿ.

೧೪. ತಲೆವಾಗಿಲ ತೆರೆದು, ಗಗನ ಗಿರಿಯ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣದ ನಡುವೆ ಉರಿವಗ್ನಿಯ ಕಂಡು, ಆ ಅಗ್ನಿಯ ಮೇಲೆ ಸ್ವರ ನಾಲ್ಕರ ಕೀಲಕೂಟದ ಸಂಜವ ಕಂಡು. ಆ ಸಂಚದಲ್ಲಿ ಅವ್ಯಕ್ತ ಸರವ ಹಿಡಿದು ಕೂಡುವುದೇ ಸಹಜ ಶಿವಯೋಗ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ ಆದೇ ಪರಮನಿರ್ವಾಣ.

೧೫. ದೇಹವಾಸನೆ ಹಿಂದು ಆತ್ಮಭವಬಂಧನದ ಕೀಲ ಮುರಿದು, ಪರಾತ್ಪರವಾದ ಪ್ರಾಣಲಿಂಗವ ಕೂಡುವುದಕ್ಕೆ ಆವುದು ಸಾಧನವೆಂದರೆ, ಎಲ್ಲ ಗುಣಂಗಳು ತಿಳಿವಂತೆ ಹೇಳಿಹೆಕೇಳಿರಯ್ಯ. ಎಂಬತ್ತೆಂಟು ಆಸನಗಳಿಗೆ ಮುಖ್ಯವಾಗಿರ್ಪುದು ಶುದ್ಧಾಸನವು. ಆ ಶುದ್ಧಾಸನದ ವಿವರವೆಂತೆಂದೊಡೆ, ಗುದ ಗುಹ್ಯ ಮಧ್ಯಸ್ಥಾನವಾದ ಯೋನಿಮಂಡಲವೆಂಬ ದ್ವಾರ, ಆ ದ್ವಾರಕ್ಕೆ ಎಡದ ಹಿಮ್ಮಡವನಿಕ್ಕಿ ಬಲ ಹಿಮ್ಮಡವಂ ಮೇಢ್ರ ಸ್ಥಾನದಲ್ಲಿರಿಸಿ, ಅತ್ತಿತ್ತ ಲುಕದೆ. ಬೆನ್ನೆಲುವ ಸೋಂಕಿಸದೆ ನೆಟ್ಟನೆ ಕುಳ್ಳಿರ್ದು ಉಭಯ ಲೋಚನವನೊಂದು ಮಾಡಿ ಉನ್ಮನಿಯ ಸ್ಥಾನದಲ್ಲಿರಿಸಿ, ತ್ವಙ್ನೇತ್ರ ಜಿಹ್ವೆ, ಶ್ರೋತ್ರ, ಘ್ರಾಣ, ಹೃದಯವೆಂಬ ಆರು ದ್ವಾರಂಗಳನ್ನು ಆರಂಗುಲದಿಂದೊತ್ತಲು, ಮೂಲಾಧಾರವಾಗಿರ್ಪ ಮೂಲಾಗ್ನಿ ಪಟುತರವಾಗಿ ಪವನನೊಡಗೂಡಿ ಮನ ಸ್ಥಿರಗೊಂಡು ಊರ್ಧ್ವಕ್ಕೆ ಹೋಗಿ, ಉಭಯ ಲಿಂಗದೊಳಿರ್ಪ ಮಹಾಲಿಂಗದೊಡಗೂಡಿ ಅನಂತಕೋಟಿ ಸೂರ್ಯಾಗ್ನಿ ಚಂದ್ರ ಪ್ರಕಾಶವನೊಳಕೊಂಡು ಅಲ್ಲಿ ಸೂಕ್ಷ್ಮವಾಗಿ ಅಂಗುಲ ಪ್ರಮಾಣವಾಗಿ ಶುದ್ಧ ತಾರೆಯಂತೆ ಕಂಗಳ ನೋಟಕ್ಕೆ ಕಂತಲಾಮಲಕವಾಗಿ ಕಾಣಿಸುತ್ತಿಪ್ಪ ಪ್ರಾಣಲಿಂಗದಲ್ಲಿ ಪ್ರಾಣಸಂಯೋಗವ ಮಾಡಬಲ್ಲಾತನೇ ಪ್ರಾಣಲಿಂಗ ಸಂಬಂಧಿ, ಆತನೇ ಪ್ರಳಯಾದಿರಹಿತನಯ್ಯ ಅಖಂಡೇಶ್ವರಾ.

೧೬. ಶುದ್ಧ ಪದ್ಮಾಸನದಿ ಕುಳ್ಳಿರ್ದು ಊರ್ಧ್ವಲೋಚನನಾಗಿ, ಉಳಿದ ಕರಣಂಗಳನ್ನೆಲ್ಲ ಉನ್ಮನಿಯ ಸ್ಥಾನದಲ್ಲಡಗಿಸಿ, ಮನವ ನೊಮ್ಮನವ ಮಾಡಿ ಅನಾಹತಕರ್ಣದಲ್ಲಿ ಲಾಲಿಸಲು, ಸಹಸ್ರದಳ ಕಮಲ

ಮಧ್ಯದಲ್ಲಿ ಉದ್ಯೋಗಿಸುತ್ತಿರ್ಪ ಸುಯಿಧಾನ ಬ್ರಹ್ಮವು, ಅಂತಪ್ಪ ಸುಯಿಧಾನ ಬ್ರಹ್ಮವಲ್ಲಿ ಮನವಡಗಿ ವೈಮುರೆದಿರ್ಪಾತನೇ ಘನಲಿಂಗ ಯೋಗಿಯಯ್ಯಾ ಅಖಂಡೇಶ್ವರಾ.

೧೭. ಕಮಲಸಾಲೊಳಗೆ ಭ್ರಮರದ ಹಿಂಡು ಝೇಂಕರಿಸುತಿರ್ಪುವು ನೋಡಾ. ನಿರ್ಮಲ ಚಿತ್ತದಿಂದ ಲಾಲಿಸಲು, ಅದು ತನ್ನ ಸುಮನ ಸುಜ್ಞಾನದ ನಿಲವು ನೋಡಾ ಅಖಂಡೇಶ್ವರಾ.

೧೮ ಗಗನ ಮಂಟಪದಲ್ಲಿ ಅಘಹರನ ಪೂಜೆ ಒಗುವಿಗಿಲಾಗುತಿರ್ಪುದು ನೋಡಾ ಇಲ್ಲಿ ಧಿಗಿಧಿಗಿಲೆಂಬ ಶಬ್ದದ ಸೊಗಸು ನೋಡಾ ಅಖಂಡೇಶ್ವರಾ.

೧೯. ಉತ್ತರಗಿರಿಯ ಚಿತ್ರ ಮಂಟಪದೊಳಗೆ ರತ್ನ ತೋರಣ ಪರಿ ಪರಿಯ ನೋಡಾ. ಮುತ್ತಿನ ಗದ್ದುಗೆಯ ಮೇಲೆ ಛತ್ತೀಸಕೋಟಿ ಚಂದ್ರಸೂರ್ಯರ ಬೆಳಗನೊಳಕೊಂಡು ನಿತ್ಯ ಪರಿಪೂರ್ಣ ವಸ್ತುವ ಕೂಡ ಬಲ್ಲಾತನೇ ಕರ್ತೃ ಶಿವ ತಾನೇ ನೋಡಾ ಅಖಂಡೇಶ್ವರಾ.

೨೦. ದೇಹವೆಂಬ ದೇಗುಲದೊಳಗೆ ಭಾವ ಸಿಂಹಾಸನವನ್ನು ಮಾಡಿ, ಜೀವದೊಡೆಯನ ಪೂಜಿಸ ಬಲ್ಲ ದೇವಂಗೆ ದೇವನೆಂಬೆನಯ್ಯ ಅಖಂಡೇಶ್ವರಾ.

೨೧. ಪ್ರಾಣಲಿಂಗ ಸಂಬಂಧಿಗಳೆಂದು ನುಡಿವರು ಅನೇಕರುಂಟು. ಪ್ರಾಣಲಿಂಗದ ಕಳೆಯ ನಾವು ಅರಿಯರಲ್ಲಾ. ಪ್ರಾಣಲಿಂಗದ ಕಳೆ ಎಂದರೆ, ಆಧಾರದಲ್ಲಿ ಎಳೆಯ ಸೂರ್ಯನಂತೆ ಬೆಳಗುತಿರ್ಪುದು ನೋಡಾ. ಸ್ವಾಧಿಷ್ಠಾನದಲ್ಲಿ ಪೌರ್ಣಮೆಯ ಚಂದ್ರನಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು. ಮಣಿಪೂರಕದಲ್ಲಿ ಮಿಂಚಿನ ಲತೆಯಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು. ಅನಾಹತದಲ್ಲಿ ಸ್ಪಟಿಕದ ಶಲಾಕೆಯಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು. ವಿಶುದ್ಧಿಯಲ್ಲಿ ಮೌಕ್ತಿಕದ ಗೊಂಚಲಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು. ಆಜ್ಞೆಯಲ್ಲಿ ರತ್ನ ದೀಪ್ತಿಯಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು. ಬ್ರಹ್ಮರಂಧ್ರದಲ್ಲಿ ಸ್ವಯಂ ಜ್ಯೋತಿಯಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು. ಶಿಖೆಯಲ್ಲಿ ಶುದ್ಧ ತಾರೆಯಂತೆ ಬೆಳಗುತಿರ್ಪುದು ನೋಡಾ. ಪಶ್ಚಿಮದಲ್ಲಿ ಉಳಕ ನಕ್ಷತ್ರದಂತೆ ಬೆಳಗುತಿರ್ಪುದು ನೋಡಾ ಪ್ರಾಣಲಿಂಗವು. ಇಂತಪ್ಪ ಪ್ರಾಣಲಿಂಗದ ಕಳೆಯನರಿದು ಪ್ರಾಣವ ಸಂಯೋಗಿಸಿ ಪ್ರಳಯವ ಗೆಲಲರಿಯದೆ, ಮಾತಿನ ಪೂತು, ನೀತಿಯ ಶಾಸ್ತ್ರ, ಘಾತಕಘೆಗಳ ಕಲಿತು, ಓದು ಇಲ್ಲದವರೊಡನೆ ಹೇಳಿ ಜಾತುರ್ಯನೆನಿಸಿಕೊಂಡು, ಒಡಲ ಹೊರೆವ ಘಾತುಕರ ಪ್ರಾಣಲಿಂಗ ಸಂಬಂಧಿಗಳೆಂತೆಂಬೆನಯ್ಯ ಅಖಂಡೇಶ್ವರಾ ?

೨೨. ಬ್ರಹ್ಮಸ್ಥಾನದ ಬಳಿಯ ಸಹಸ್ರದಳ ಕಮಲ ಮಧ್ಯದಲ್ಲಿ ಸೂಕ್ಷ್ಮರಂಧ್ರವೆಂಬುದೊಂದು ಕೈಲಾಸದ್ವಾರವುಂಟು. ಆ ದ್ವಾರ ಕವಾಟವ ತೆರೆದು ನೋಡಲು ಚಂದ್ರ ಪ್ರಕಾಶದ ದಿವ್ಯ ಪೀಠದ ಮೇಲೆ ಮೂರ್ತಿಗೊಂಡಿರ್ದ ಶಿವನ ಕಂಡು ಆ ನೋಟದ ನೋಟದಲ್ಲಿಯೇ ಸಿಕ್ಕಿ, ಭಾವ ಅಜ್ಞೊತ್ತಿ, ಸರ್ವ ಕರಣಂಗಳು ನಿವೃತ್ತಿಯಾಗಿ, ಮನ ಉನ್ಮನಿಯಲ್ಲಿ ನಿಂದು, ಸಮಾಧಿಯಲ್ಲಿ ಇದ್ದನಯ್ಯ ನಿಮ್ಮ ಶರಣ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

೨೩. ಹೊರಗಣ ಒಂಬತ್ತು ಬಾಗಿಲ ಮುಚ್ಚಿ, ಒಳಗೆ ಅಂಬರ ಬಾಗಿಲ ಬೀಗವ ತೆರೆದು, ಒಳಪೊಕ್ಕು ನೋಡಲು, ಗಂಗೆ, ಸರಸ್ವತಿ, ಯಮುನೆ ಎಂಬ ತ್ರಿನದಿಗಳು ಕೂಡಿದ ಠಾವಿನಲ್ಲಿ ಸಂಗಮ ಕ್ಷೇತ್ರವೆಂಬ ರಂಗ ಮಂಟಪವುಂಟು. ಆ ರಂಗ ಮಂಟಪದೊಳಗೆ ರವಿಕೋಟಿ ಪ್ರಭೆಯಂತೆ ರಾಜಿಸುವ ಮಹಾಲಿಂಗವನು ಕಂಡು, ಆ ಮಹಾ ಲಿಂಗಕ್ಕೆ ತನ್ನಾತ್ಮ ಸಂಬಂಧವಾದ ದ್ರವ್ಯಗಳಿಂದರ್ಚಿಸಿ, ಆ ಮಹಾಲಿಂಗದ ಬೆಳಗನ್ನು ಕಂಗಳು ತುಂಬಿ ನೋಡಿ, ಮನಸ್ಸಂತೋಷಂಗೊಂಡು, ಅಲ್ಲಿಂದತ್ತ ಪಶ್ಚಿಮ ದಿಕ್ಕಿನಲ್ಲಿ ಮಹಾ ಕೈಲಾಸ ವಿರ್ಪುದನು ತನ್ನ ಸ್ವಾತ್ಮಜ್ಞಾನದಿಂದ ತಿಳಿದು ನೋಡಿ, ಎಡ ಬಲದ ಬಟ್ಟೆಯ ಮೆಟ್ಟದೆ, ನಡು ಮಾರ್ಗವಿಡಿದು, ಕೈಲಾಸದ ಪೂರ್ವದಿಕ್ಕಿನ ಹೆಬ್ಬಾಗಿಲು ಉಪ್ಪರ ಗೋಪುರ ಕಂಡು. ಅಲ್ಲಿ ಹೊಡೆವ ಭೇರೀನಾದ, ತುಡುಮುತಾಳ, ಮದ್ದಳೆ, ಗಡಬಡ ಝಲ್ಲೆಂಬ ಸಮ್ಮೇಳ, ಕಾಂಸಾಳದ ನಾದವ ನುಡಿಸುವ, ವೀಣೆ, ಕಿನ್ನರಿ, ಸ್ವರಮಂಡಲ, ತಂಬೂರಿ, ಕಾಮಾಕ್ಷಿಯ ನಾದ, ಭೋರಿಡುವ ಶಂಖ, ಗಂಟೆಯ ನಾದ, ಸ್ವರಗೈವ ನಾಗಸ್ವರ, ಕೋಕಿಲ ಕೂಗಿಡುವ ಕಹಳೆ, ಹೆಗ್ಗಾಳಿ, ಚಿನಿಕಾಳಿ, ಕರ್ನೆಯ ನಾದ, ಇಂತಿವು ಮೊದಲಾದ ನಾನಾ ತರದ ಪ್ರಮಾಣಂಗಳಂ ಕಂಡು, ಅಲ್ಲಿಂದ ಮುಂದಕ್ಕೆ ಹೋಗಿ, ಅನಲವೀದಿಯ ಹೊಕ್ಕು

ಅಲ್ಲಿ ಅಷ್ಟದಿಕ್ಕುಗಳಲ್ಲಿ ನಿಂದು ಓಲಗಂಗೊಡುವ ಭಕ್ತಿ ಸಮ್ಮೇಳವ ಕಂಡು, ಅಲ್ಲಿಂದ ಮುಂದಕ್ಕೆ ಹೋಗಿ, ನಟ್ಟನಡುವಿರ್ದ ಪರತತ್ವವನ ಕಂಡು, ತನು ಉಬ್ಬಿ, ಮನ ಕರಗಿ, ಕರಣಂಗಳಲ್ಲಿ ಪರಿಣಾಮ ಜಲ ಉಕ್ಕಿ ಕಡೆಗೋಡಿವರಿಯುತ್ತ, ಉರಿ ಕರ್ಪುರ ಸಂಯೋಗದಂತೆ, ಆ ನಿಷ್ಕಲ ಪರತತ್ವವನನೊಡವೆರೆದು ಪರಿಪೂರ್ಣವಾದ ಮಹಾ ಶರಣರ ತೋರಿ ಬದುಕಿಸಯ್ಯಾ ಎನ್ನ ಅಖಂಡೇಶ್ವರಾ.

೨೪. ಎನ್ನಂತರಂಗದ ಆರು ಭವನದ ಮೇಲೆ ತೋರುತ್ತಿರ್ಪ ಮಹಾಕೈಲಾಸದ ಮೂರು ಮಂಡಲದಲ್ಲಿ, ಎಂಟು, ಹದಿನಾರು, ಮೂವತ್ತಿರಡು ತಂಡದಲ್ಲಿನಿಂದು, ಓಲಗಂಗೊಡುತಿರ್ಪ ಸಕಲ ಗುಣಂಗಳು ನಿಮಗೆ ಎನ್ನ ಮನ ಬುದ್ಧಿ ಚಿತ್ತಹಂಕಾರಗಳೇ ನಿಮ್ಮ ಮಂತ್ರಂಗಳಾಗಿರ್ಪವು. ಎನ್ನ ದಶವಾಯುಗಳೇ ನಿಮ್ಮ ಮಂತ್ರ ನಾಮಂಗಳ ಕೊಂಡಾಡುತ್ತಿರ್ಪವು. ಎನ್ನ ಚರಣಂಗಳು ನಿಮ್ಮ ಪ್ರದಕ್ಷಿಣೆಯ ಮಾಡುತಿರ್ಪವು. ಎನ್ನ ತ್ವಕ್ಕು ನಿಮಗೆ ಹಾಸಿಗೆಯ ಸುಖವನುಂಟುಮಾಡುವುದು. ಎನ್ನ ಕರ್ಣವು ನಿಮಗೆ ಜ್ಞಾನವ ಕೇಳಿಸುತಿರ್ಪುದು. ಎನ್ನ ಕಂಗಳು ನಿಮಗೆ ವಿಚಿತ್ರರೂಪು ತೋರುತಿರ್ಪವು. ಎನ್ನ ಘ್ರಾಣವು ನಿಮಗೆ ಗಂಧಪರಿಮಳವ ಮಾಡಿಸುತಿರ್ಪವು. ಎನ್ನ ಜಿಹ್ವೆಯು ನಿಮ್ಮ ಭೋಜನಕ್ಕೆ ಷಡುರಸದ ಪ್ರಪಂಚ ಕಜ್ಜಾಯಗಳ ಎಡೆ ಮಾಡುತಿರ್ಪವು. ಎನ್ನ ಸಕಲ ಕರಣಂಗಳು ನಿಮ್ಮ ನಿಜ ಸೇವೆಯನ್ನು ಮಾಡುತಿರ್ಪವು. ಇಂತೀ ನಾನಾ ತೆರದಲ್ಲಿ ಆಗುವ ನಿಮ್ಮ ಓಲಗದ ಅಡ್ಡವಣೆಯುಂ ಕೊಂಡು ಹೋದುದು ಬಂದುದು. ಬರಿದೆ ಸಂಪಿಗೆಯ ಪುಷ್ಪಕ್ಕೆರಗಿದ ಭ್ರಮರನಂತೆ ನಿಮ್ಮೊಳಗೆ ಪರವಶನಾಗಿರ್ದೆನಯ್ಯ ಅಖಂಡೇಶ್ವರಾ.

ನಿಜಸಮಾಧಿ.

೨೫. ಗುರುತತ್ವದಲ್ಲಿ ಹುಟ್ಟಿ ಶಿವತತ್ವದಲ್ಲಿ ಬೆಳೆದು ಪರತತ್ವದಲ್ಲಿ ಮುಗ್ನನಾದ ಶರಣಂಗೆ ಕಾಯವಳಿದು ನಿರ್ವಯಲಾದಡೇನು? ಕಾಯಸಮಾಧಿ, ಕರಣ ಸಮಾಧಿ, ಭಾವ ಸಮಾಧಿಯನೆಯ್ದಿ ಬಲ್ಲಡೆ, ಅದು ನಿಜ ಸಮಾಧಿ ಕೇಳಾ ಗುಹೇಶ್ವರಾ.

೨೬. ಸ್ವಸ್ಥಾನ ಸುಸ್ಥಿರದನುಪಮ ಮಂಟಪದೊಳಗೆ ನಿತ್ಯ ನಿರಂಜನ ಪ್ರಭೆಯ ಬೆಳಗು ಶಿವಯೋಗದನುಭಾವ ಏಕಾರ್ಥವಾಗಿ ಗುಹೇಶ್ವರಾ ನಿಮ್ಮ ಶರಣನುಪಮಾತೀತನಾಗಿರ್ದನು.

೨೭. ಜಗದಗಲ ಮಂಟಪಕ್ಕೆ ಮುಗಿಲಗಲ ಮೇಲುಕಟ್ಟಿನಲ್ಲಿ ವಿಚಿತ್ರವ ನೋಡುತ್ತೆ, ಧ್ಯಾನ ವಿಶ್ರಾಂತಿಯಲ್ಲಿ ದಿಟದಿಟವೆಂಬುದೊಂದು ದರುಶನವ ನೋಡುತ್ತ, ಗಗನ ಗಂಭೀರದಲ್ಲಿ ಉದಯವಾಯಿತ್ತ ಕಂಡೆ ಗುಹೇಶ್ವರಲಿಂಗವು ತಾನಾಗಿ.

೨೮. ಬಂದೂ ಬಾರದು. ಹೊಂದಿಯೂ ಹೊಂದದು. ನಿಂದೂ ನಿಲ್ಲದು. ಈ ಪರಿಯ ನೋಡಾ. ಅಖಂಡಿತ ಚರಿತವನೇನೆಂದುಪಮಿಸುವೆ? ನವಖಂಡ ಪೃಥ್ವಿಯನೊಳಕೊಂಡ ಬಯಲು. ಅಗಮ್ಯ ಸಂಯೋಗ ಸಮಾಧಿಯಲ್ಲಿ ಗುಹೇಶ್ವರಲಿಂಗವನೇನೆಂದುಪಮಿಸುವೆ?

೨೯. ಆಕಾಶವ ಮುಟ್ಟದು. ಎಡೆಯಲ್ಲೊಂದು ರೂಪಿಲ್ಲ. ಭಾವವೆಂಬ ಜ್ಞಾನವೇ ನಿವಾಸ. ನಿಲವೇ ಭಕ್ತಿ. ನಿರಹಂಕಾರವೇ ಶಿಖರ. ಮಹತ್ತೇ ಶೃಂಗಾರ ಕಳಸ. ಸಹಸ್ರಪತ್ರದ ನವ ಕಮಲವೇ ಸಿಂಹಾಸನ. ನಿತ್ಯವೇ ಮಲಗು. ನಿಜವೆಂಬ ವಿಸ್ತಾರದಲ್ಲಿ ನಿತ್ಯನಿರಾಳವೆಂಬ ಮಹಾಘನವು ಬಂದು ಮೂರ್ತಿಗೊಳ್ಳಲು ಕಾಯದ ಕಣ್ಣು ಕಾಣಬಾರದು. ಮನದ ಮುಂದು ಅಳವಡದು. ಭಾವದ ಒಗೆಗೆ ವೈದೋರದು. ಬಸವಪ್ರಿಯ ಕೂಡಲ ಚನ್ನಸಂಗಯ್ಯನಲ್ಲಿ ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋ ಎಂಬೆನು.

೩೦. ಎನ್ನ ಗಂಡ ಬರಬೇಕೆಂದು ಅನು ಎನ್ನಂತರಂಗವೆಂಬ ಮನೆಯ ತೆರಹುಮಾಡಿ, ಅಷ್ಟದಳವೆಂಬ ಓವರಿಯೊಳಗೆ ನಿಜನಿವಾಸವೆಂಬ ಹಾಸಿಗೆಯ ಹಾಸಿ, ಧ್ಯಾನವೆಂಬ ಮೇಲುಕಟ್ಟ ಕಟ್ಟಿ, ಜ್ಞಾನವೆಂಬ ದೀಪವುಂ ಬೆಳಗಿ, ನಿಃಕ್ರಿಯೆ ಎಂಬ ಉಪಚಾರಂಗಳನು ಹರಹಿಕೊಂಡು,

ಪತ್ತಿಮದ್ವಾರವೆಂಬ ಬಾಗಿಲ ತೆರೆದು, ಕಂಗಳೇ ಪ್ರಾಣವಾಗಿ, ಬರವ ಪಾರೈಸುತಿರ್ದೆನಯ್ಯ. ನಾನು ಬಾರನೆಂದು ಉಮ್ಮಳಿಸಿಹಳೆಂದು ತಾನೇ ಬಂದು ಎನ್ನ ಹೃದಯ ಸಿಂಹಾಸನದ ಮೇಲೆ ಮೂರ್ತಿಗೊಂಡಿರಿ. ಎನ್ನ ಮನದ ಬಯಕೆ ಸಯವಾಯಿತ್ತು. ಹಿಂದೆ ಹನ್ನೆರಡು ವರ್ಷದಲ್ಲಿದ್ದ ಚಿಂತೆ ಇಂದು ನಿಶ್ಚಿಂತವಾಯಿತ್ತು. ಕೂಡಲ ಸಂಗಮದೇವರು ಕೃಪಾ ಮೂರ್ತಿಯಾದ ಕಾರಣ ನಾನು ಬದುಕಿದೆನು.

೩೧. ಅಂತರಂಗ ಸನ್ನಿಹಿತ ಪರಂಜ್ಯೋತಿ ಲಿಂಗದಲ್ಲಿ ಧ್ಯಾನ ನಿಷ್ಠನಾದ ಯೋಗಿ ಎಲ್ಲ ಕಡೆಯಲ್ಲಿ ಪರಿಪೂರ್ಣ ಜ್ಞಾನ ದೃಷ್ಟಿಯಿಂದ ನೋಡಲು ಪತ್ತಿವು ಮುಖವಾದ ಪರತತ್ವವೆಂಬ ನಿರ್ಮಲ ದರ್ಪಣದೊ ಳಗೆ ತನ್ನ ಕಂಡು ಕಂಡಿಹೆನೆಂಬ ಚಿದಹಂಭಾವವಳಿದು ನಿಂದ ನಿಲವೇ ನಿಜ ನಿರ್ವಾಣವಯ್ಯ ನಿಜ ಗುರು ಸ್ವತಂತ್ರಸಿದ್ಧಲಿಂಗೇಶ್ವರಾ.

೩೨. ಶಿವಧ್ಯಾನದ ಕಡೆಯಲ್ಲಿ ಒಪ್ಪಿ ತೋರುವ ಸಂವಿತ್ತಿನ ತೃಪ್ತಿ ಯಿಂದ ತನ್ನ ಮರೆದ ಶರಣನು ಪರಮಪ್ರಕಾಶ ರೂಪನಾದ ಶಿವನ ಕೂಡಿ ಸರ್ವ ಜೀವರ ಹೃದಯದಲ್ಲಿದ್ದು ಅವಕ ಅರಿವನರುಹಿಸಿ ಕೊಡುತ್ತ ಎಲ್ಲ ಕಡೆಯಲ್ಲಿ ಸುಖರಾಶಿಯಾದ ಚೈತನ್ಯ ಬಟ್ಟರೂಪ ಪರಬ್ರಹ್ಮವೇ ತಾನಾಗಿಹನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಶರಣನು.

೩೩. ಅಯ್ಯಾ ಲಿಂಗಾಂಗ ಸಮರಸ ಹೇಗುಂಟೆಂದರೆ, ಸುಚಿತ್ತ ಕಮಲ ಮೊದಲಾಗಿ ಆಯಾಯ ಕರಸ್ಥಲದಲ್ಲಿ ಮೂರ್ತಗೊಂಡಿರುವ ಸುಜ್ಞಾನ ಜಂಗಮ ಸ್ವರೂಪನಾದ ಇಷ್ಟ ಮಹಾಲಿಂಗದ ಗರ್ಭದಲ್ಲಿ ತನ್ನಂ ಗವ ಬಿಟ್ಟು ಎರಡು ನೇತ್ರ ಒಂದಾದ ಲಲಾಟ ನೇತ್ರದಲ್ಲಿ ಇಷ್ಟಲಿಂಗವನು ಮುಳುಗಿಸುವದೀಗ ಲಿಂಗಾಂಗಸಂಗ ಸಮರಸವು ನೋಡಾ. ಆ ಇಷ್ಟ ಮಹಾಲಿಂಗ ನೇತ್ರದರ್ಪಣದಲ್ಲಿ ಪ್ರತಿಬಿಂಬವಾಗಿ, ಮನೋನೇತ್ರಕ್ಕೆ ಒಂದೆ ರಡಾಗಿ ಕಾಣಲ್ಪಡುವದೀಗ ಪ್ರಾಣಲಿಂಗವು. ಆ ಪ್ರಾಣಲಿಂಗ ಹಸ್ತಂ ಗಳೆಂಬ ಎರಡರಲ್ಲಿ ನೇತ್ರದ್ವಯವೆಂಬ ಕುಚಂಗಳೆರಡು ಹಿಡಿವುದೀಗ ಲಿಂಗಾಂಗ ಸಂಗಸಮರಸವು. ರೂಪು ರೇಖೆ ವಿಭ್ರಮ ವಿಲಾಸ ಕಳಾ ಲಾವ ಣ್ಯಸ್ವರೂಪವಾದ ಪರಶಿವ ಬ್ರಹ್ಮಮೂರ್ತಿಯ ಮುದ್ದುಮುಖದ ಆಧಾರ ದಲ್ಲಿ ಓಂಕಾರ ಪ್ರಣವ ನಾದಾವೃತವ ತಾ ಚುಂಬನ ಮಾಡಲ್ಕೆ ಚಿತ್ ಶಕ್ತಿ ಸ್ವರೂಪವಪ್ಪ ತನ್ನ ಮುದ್ದುಮುಖದ ಆಧಾರದಲ್ಲಿ ಹುಟ್ಟಿದ ನಕಾ ರಾದಿ ಪಂಚ ಪ್ರಣವುಂಗಳು ಆ ಪಂಚ ಬ್ರಹ್ಮ ಚುಂಬನವ ಮಾಡಲಿಕ್ಕೆ

VIJAY COLLEGE LIBRARY,
BIJAPUR.

ಇದು ಲಿಂಗಾಂಗ ಸಮರಸವು. ಇದು ಶರಣ ಸತಿ, ಲಿಂಗ ಪತಿ ನ್ಯಾಯವು. ಇದು ಶ್ರೀತನುವ ಲಿಂಗಕ್ಕರ್ಪಿಸುವ ಕ್ರಮವು. ತನ್ನಲ್ಲಿ ತನ್ನ ತೋರಿ. ನನ್ನಲ್ಲಿ ನನ್ನ ತೋರಿದನಾಗಿ ನಾನು ನೀನೆಂಬುದು ಇಲ್ಲ, ನೀನು ನಾನೆಂ ಬುದಿಲ್ಲ, ತಾನೇ ತಾನಾದುದು. ಬಯಲು ಬಯಲ ಕೂಡಿದ ಹಾಗೆ, ಮಾತು ಮಾತ ಕಲಿವ ಹಾಗೆ, ಪರಶಿವಲಿಂಗದಲ್ಲಿ ನಿಜ ದೃಷ್ಟಿ ಕರಿಗೊಂಡ ಮೇಲೆ ಗುಹ್ಯಕ್ಕೆ ಗುಹ್ಯ, ಗೋಪ್ಯಕ್ಕೆ ಗೋಪ್ಯ, ರಹಸ್ಯಕ್ಕೆ ರಹಸ್ಯ. ಇದ ಗುಹೇಶ್ವರನೇ ಬಲ್ಲನಲ್ಲದೆ ಕಣ್ಣಗೆಟ್ಟಣ್ಣಗಳಿತ್ತ ಬಲ್ಲರು ನೋಡಾ?

೩೪. ಅಯ್ಯ, ಎರಡು ನೇತ್ರವು ಒಂದಾದ ಭಾಳನೇತ್ರವು ಇಷ್ಟ ಲಿಂಗ ಗೋಳಕಕ್ಕೆ ಕೂಟ. ಒಂದು ಲಿಂಗ ಎರಡಾದ ಪ್ರಾಣಲಿಂಗ ಸ್ಥಳಂ ಗಳಿಗೆ ಎರಡು ನೇತ್ರವು ಕುಚವ ಹಿಡಿಯಲಿಕ್ಕೆ ಈ ಕುಚವೆರಡು ಗುಹ್ಯ ಒಂದು, ಇದು ತ್ರಿಕೂಟವೆಂಬ ಹೆಸರಾಯಿತ್ತು. ಆ ತ್ರಿಕೂಟ ಶಾಂಭವ ಪುರ ಮಧ್ಯದಲ್ಲಿ ಘನ ಮಹಾ ನಿಷ್ಕಳ ಜ್ಯೋತಿರ್ಲಿಂಗವು ತಾನು ಏಕ ಸಮರಸವಾದ ಬಳಿಕ ತನುತ್ರಯವಿಕಾರವ ಹೊದ್ದಲಾಗದು. ಇಂತು ಹರ ಗುರು ವಾಕ್ಯವ ಮೀರಿ ಹೊದ್ದಿದಡೆ, ಮೀಸಲ ಓಗರವ ನಾಯಿ ಮುಟ್ಟಿದಂತೆ ಆಯಿತ್ತು. ಆ ಆತ್ಮ ಪದಾರ್ಥವು ಲಿಂಗಕ್ಕೆ ಸಲ್ಲದು. ಅವರು ಮಾಡುವ ಉಪಚಾರಂಗಳು ಲಿಂಗಕ್ಕೆ ಸಲ್ಲವು. ಅವರ ತೆರನೆಂ ತಾಯಿತ್ತೆಂದಡೆ ಜನ್ಮದರಿದ್ರನು ನಿಕ್ಷೇಪವ ಕಂಡು ಹೋಗಲಾಡಿಸಿ, ದಿಗಿಲುಬಿದ್ದು ಸತ್ತಂತಾಯಿತ್ತು. ಅಂಥ ನಿರ್ಭಾಗ್ಯನ ದುರ್ಮರಣವ ಕಂಡು ನಮ್ಮ ಶರಣರು ಅನಾಚಾರ ಅಕ್ರಿಯೆ ಅಜ್ಞಾನಗಳ ಹೊದ್ದದೆ, ಸರ್ವಾಂಗವ ನಿಜ ಗುರು ಲಿಂಗ ಜಂಗಮದಲ್ಲಿ ನಿಕ್ಷೇಪವ ಮಾಡಿ, ಅವಿ ರಳಾನಂದದಿಂದ ನಿರಾಳರಾಗಿ ಮನ್ಮಥ ರತಿ ಎಂಬ ಜಡಪಾಶದಲ್ಲಿ ಬೀಳದೆ ಅಕ್ಷಯ ಸುಖಿಗಳಾದರು ನೋಡಾ ಗುಹೇಶ್ವರಲಿಂಗದಲ್ಲಿ.

೩೫. ಅಯ್ಯ ಅವಸ್ಥಾತ್ರಯವ ಬಿಟ್ಟು ಇಷ್ಟಲಿಂಗದ ಗರ್ಭದಲ್ಲಿ ಕಾಯವ ನಿಕ್ಷೇಪವ ಮಾಡಿದ ಬಳಿಕ ಕಾಲನ ಭಯವಿಲ್ಲ. ಆ ಏಕಾಂತ ವಾಸ ಜ್ಯೋತಿರ್ಲಿಂಗ ಸಂಧಾನದಿಂದ ಸಮರಸವಾಗಲು ಕರ್ಮದ ಭಯ ವಿಲ್ಲ. ತ್ರಿವಿಧಾಂಗ ತ್ರಿವಿಧ ಲಿಂಗಾರ್ಪಿತದಿಂದ ಸಂದಿಸಿದ ಬಳಿಕ ಕಾಲ ಕಾಮ ಕರ್ಮಂಗಳ ತಾ ಮೆಟ್ಟಿ ನಿಲ್ಲದೆ, ವಿಷಯಸುಖಕ್ಕೆ ಮೆಚ್ಚಿ, ಆ ಮೂವರ ಕಾಲ ಕೆಳಗೆ ತಾವು ಬಿದ್ದು ಮಹಾ ದುಃಖಕ್ಕೆ ಒಳಗಾದರು. ಆ ವಿಷಗಾಳಿ ಮಹಾ ಕೆಟ್ಟದು. ಅದೆಂತೆಂದೊಡೆ, ಆ ವಿಷಗಾಳಿ ಸೋಂಕಲು

ಹರಿ ಹತ್ತು ಭವವನೆತ್ತಿದ. ಅಜನ ಶಿರ ಹೋಯಿತ್ತು. ಇಂದ್ರನ ಪೈ ಕಟ್ಟಿತ್ತು. ಚಂದ್ರನು ಕ್ಷಯರೋಗಿಯಾದನು. ದಿನಕರನ ನೇತ್ರ ಹೋಯಿತ್ತು. ಮುನೀಂದ್ರರು ಮುಳುಗಿ ಹೋದರು. ಮನುಮಾಂಧಾತೃಗಳು ಮುಂದ ಮತಿಗಳಾದರು. ದೇವ ದಾನವ ಮಾನವರು ಮಡಿದು ಹೋದರು. ಅದ ನೋಡಿ, ಕಂಡು, ಕೇಳಿ ನಮ್ಮ ಶರಣರು ವಿಷಗಾಳಿ ತಮ್ಮನ್ನು ಸೋಂಕ ದಂತೆ ಶಾಂಭವಪುರದ ಮಧ್ಯದಲ್ಲಿ ನಿಂದು ನಿರ್ಣಯವೆಂಬ ಶಸ್ತ್ರದಿಂದೆ ವಿಷಗಾಳಿಯ ಛೇದಿಸಿ ನಿಜಾಚರಣೆಯಲ್ಲಿ ನಿಂದು ಅಕ್ಷಯ ಸುಖಿಗಳಾ ದರು ನೋಡಾ ಗುಹೇಶ್ವರಲಿಂಗದಲ್ಲಿ ಸಿದ್ಧರಾಮಯ್ಯ ಎಂದು ಪ್ರಭು ಸ್ವಾಮಿಗಳು ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಬಯಲು.

೩೬. ಜ್ಞಾನದ ಗಮನದ ಸಹಜದ ಉದಯದಲ್ಲಿ ಏನೆಂದರಿಯೆನು. ಲಿಂಗದ ಬೆಳಗು ಒಳಕೊಂಡುದಾಗಿ ಏನೆಂದರಿಯೆನು. ಕೂಡಲ ಸಂಗಮದೇವನ ಧ್ಯಾನದಿಂದ ಏನೆಂದರಿಯೆನು.

೩೭. ಬೆಳಗಿನೊಳಗಣ ಮಹಾಬೆಳಗು. ಶಿವ ಶಿವ ಪರಮಾಶ್ರ ಯನೇ ತಾನಾಗಿ, ಶತ ಪತ್ರ ಕಮಳ ಕರ್ಣಿಕಾ ಮಧ್ಯದಲ್ಲಿ ಸ್ವತಃ ಸಿದ್ಧ ನಾಗಿಪ್ಪ ನಮ್ಮ ಕೂಡಲಸಂಗಮದೇವ.

೩೮. ಆ ಭಸ್ಮ ತಾಗಿ, ಬ್ರಹ್ಮ ತನ್ನ ಕಪಾಲವಿಡಿದನು. ಗಣನಾ ಥನ ಐವತ್ತೆರಡು ಸರ ಹರಿದು ಬಿದ್ದವು. ಆ ಭಸ್ಮ ತಾಗಿ ಅಂಡಜ ಮುನ್ದೆಯ ಮೂರು ಪೊಲೆ ಹರಿದು ಬಿದ್ದವು. ನಾದ ಪ್ರಿಯ ನಂದಿಯ ನೇರಿಕೊಂಡು, ಅತೀತನ ಮೇಲೆ ಆನಂದ ಸಿಂಹಾಸನವನಿಕ್ಕಿ ಕುಳಿತು ಕೂಡಲ ಸಂಗಮದೇವರ ದೇವತ್ವ ಕೆಟ್ಟಿತ್ತು.

೩೯. ಸ್ಥೂಲದೇಹ ತೊಳೆದರೇನು, ಸೂಕ್ಷ್ಮದೇಹ ಶುದ್ಧವಾದ ರೇನು, ಕಾರಣಾತೀತನಾಗದನ್ನಕ್ಕ? ಎಲೆ ಕಪಿಲಸಿದ್ಧಮಲ್ಲಿಕಾರ್ಜುನಾ ನಾ ಯೋಗಿಯಾದರೇನು, ಮನ ಒಲಿದು ಚನ್ನಬಸವಣ್ಣ ಲಿಂಗವ ಕೂಡದನ್ನಕ್ಕ?

೪೦. ನೋಟವೇ ಕೂಟ, ಕೂಟವೇ ಪ್ರಾಣ, ಪ್ರಾಣವೇ ಏಕ, ಏಕವೇ ಸಮರಸ, ಸಮರಸವೇ ಲಿಂಗ, ಲಿಂಗವೇ ಪರಿಪೂರ್ಣ, ಪರಿ ಪೂರ್ಣವೇ ಪರಬ್ರಹ್ಮವು ತಾನೇ ಗುಹೇಶ್ವರಾ.

VIJAY COLLEGE LIBRARY,
BNAPLR.

1048

All rights reserved by the Author.